ಮಂಗಳವಾರ, ನವೆಂಬರ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 313 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ
ಮದ್ಯಸೇವನೆಯ ಕೆಟ್ಟ ಪರಿಣಾಮಗಳ ಬಗ್ಗೆ ನಮಗೆ ಸರಿಯಾದ ಅರಿವಿಲ್ಲ

ಕರ್ನಾಟಕ ಚಿನ್ನದ ಹೊಳಪು

‘ಒಕ್ಕಲಿಗ ನಾಯಕರನ್ನು ಮುಗಿಸಿದ ಗೌಡರು’ 6

ಮಣಿಪುರ: 11 ಶಂಕಿತ ಹಮರ್ ಉಗ್ರರು ಬಲಿ 3B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,496	24,141	₹81,160 (ಬೆಂಗಳೂರು)	₹96,500 (ಬೆಂಗಳೂರು)	84.38

ರಿಯಾಯಿತಿ ಬಡ್ಡಿದರದ ಸಾಲದ ಮೊತ್ತ ಇಳಿಕೆ • ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಕಷ್ಟ

ಕೈಕೊಟ್ಟ ನಬಾರ್ಡ್: ಸಾಲಕ್ಕೆ ಕುತ್ತು

• ರಾಜೇಶ್ ರೈ ಚಟ್ಲ

ಬೆಂಗಳೂರು: ರೈತರಿಗೆ ಸಾಲ ನೀಡುವ ಸಹಕಾರ ಸಂಸ್ಥೆಗಳಿಗೆ ರಿಯಾಯಿತಿ ಬಡ್ಡಿ ದರದಲ್ಲಿ ನೀಡುವ ಸಾಲದ ಮೊತ್ತವನ್ನು ನಬಾರ್ಡ್ ಕಡಿತಗೊಳಿಸಿದ್ದರಿಂದಾಗಿ ರಾಜ್ಯದಲ್ಲಿ ಕೃಷಿ ಸಾಲ ವಿತರಣೆಗೆ ಹಣದ ಕೊರತೆ ಎದುರಾಗಿದೆ.

ನಬಾರ್ಡ್‌ನ ಈ ನಡೆಯಿಂದ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ಸಹಕಾರ ಇಲಾಖೆಯ ಮೂಲಗಳು ತಿಳಿಸಿವೆ.

ರೈತ ವರ್ಗವನ್ನು ಉತ್ಪಾದನಾ ವಲಯಕ್ಕೆ ಸೇರ್ಪಡೆ ಮಾಡುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಮಹತ್ವಾಕಾಂಕ್ಷಿ ಯೋಜನೆಗಳ ಅನುಷ್ಠಾನಕ್ಕೂ ತೊಂದರೆ ಆಗಬಹುದು ಎಂದೂ ಮೂಲಗಳು ಹೇಳಿವೆ.

ರಾಜ್ಯ ಸರ್ಕಾರವು ಎಲ್ಲ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ (ಎಲ್ಲ 31 ಜಿಲ್ಲೆಗಳನ್ನು ಒಳಗೊಂಡು) ಮೂಲಕ ಪ್ರತಿ ಸಾಲಿನಂತೆ 2024–25ನೇ ಸಾಲಿಗೆ 35.10 ಲಕ್ಷ ರೈತರಿಗೆ 25 ಸಾವಿರ ಕೋಟಿ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಗುರಿ ಹೊಂದಿದೆ. ಸಾಲ ನೀಡಲು ₹22,902 ಕೋಟಿಯಷ್ಟಾದರೂ ಬೇಕಾಗಬಹುದು ಎಂದು ಜಿಲ್ಲಾ ಬ್ಯಾಂಕುಗಳು ಅಂದಾಜಿಸಿವೆ.

ರೈತರಿಗೆ ಕೃಷಿ ಸಾಲವನ್ನು ಸಮರ್ಪಕವಾಗಿ ವಿತರಿಸುವ ಉದ್ದೇಶದಿಂದ ಈ ಒಟ್ಟು ಸಾಲದಲ್ಲಿ ಶೇ 60ರಷ್ಟು ಅಂದರೆ ₹13,742 ಕೋಟಿ ಅಲ್ಪಾವಧಿ ಕೃಷಿ ಸಾಲವನ್ನು ಮಂಜೂರು ಮಾಡುವಂತೆ ಕೋರಿ ನಬಾರ್ಡ್‌ಗೆ (ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಏಪ್ರಿಲ್ 22ರಂದು ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಸೆ. 24ರಂದು ಪತ್ರ ಬರೆದ ನಬಾರ್ಡ್ ₹13,742 ಕೋಟಿಯ ಪೈಕಿ ₹4,580 ಕೋಟಿಯನ್ನು ಹೆಚ್ಚುವರಿ ಬಡ್ಡಿ ದರದಲ್ಲಿ (ಶೇ 8) ಸಾಲ ಮಂಜೂರು ಮಾಡಿದೆ.

ಡಿಸಿಸಿ ಬ್ಯಾಂಕು– ಸಾಲದ ಹೊರೆ

‘ರೈತರಿಗೆ 2023–24ನೇ ಸಾಲಿನಲ್ಲಿ ಅಲ್ಪಾವಧಿ ಕೃಷಿ ಸಾಲವಾಗಿ ಒಟ್ಟು ₹22,077.20 ಕೋಟಿ ವಿತರಿಸಲಾಗಿದೆ. ಈ ಸಂಬಂಧ ಡಿಸಿಸಿ ಬ್ಯಾಂಕುಗಳು ನಬಾರ್ಡ್ ಮತ್ತು ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಪ್ರಸಕ್ತ ವರ್ಷದಲ್ಲಿ ₹10,525.48 ಕೋಟಿ ಮರು ಪಾವತಿಸಬೇಕಿದೆ. ಆ ಮೂಲಕ, ರಾಜ್ಯದ ಡಿಸಿಸಿ ಬ್ಯಾಂಕುಗಳು ಸಾಲದ ಹೊರೆ ಹೊತ್ತುಕೊಂಡಿದ್ದು, 2024–25ನೇ ಸಾಲಿನಲ್ಲಿ ನಬಾರ್ಡ್ ಹೆಚ್ಚಿನ ಮೊತ್ತದ ಸಾಲ ನೀಡಿ ನೆರವಿಗೆ ನಿಲ್ಲದೇ ಇದ್ದರೆ ಈ ಬ್ಯಾಂಕುಗಳ ಆರ್ಥಿಕ ಸ್ಥಿತಿ ಇನ್ನಷ್ಟು ಹದಗೆಡಲಿದೆ. ಅಷ್ಟೇ ಅಲ್ಲ, ಕೆಲವು ಜಿಲ್ಲೆಗಳ ಡಿಸಿಸಿ ಬ್ಯಾಂಕುಗಳು ಮುಚ್ಚುವ ಸ್ಥಿತಿ ತಲುಪಬಹುದು’ ಎಂದು ಅಪೆಕ್ಸ್ ಬ್ಯಾಂಕಿನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ನಿರ್ಮಲಾ, ಸಿ.ಎಂ.ಗೆ ಬೆಳ್ಳಿ ಪ್ರಕಾಶ್ ಪತ್ರ

‘2024–25ನೇ ಸಾಲಿನಲ್ಲಿ ಕೃಷಿ ನಿರ್ವಹಣೆಯ ಹಂಗಾಮಿಗೆ ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿ ದರದಲ್ಲಿ ಕೃಷಿ ಸಾಲ ಮಿತಿಯನ್ನು ಗಣನೀಯವಾಗಿ ಕಡಿಮೆ ಹಂಚಿಕೆ ಮಾಡಲಾಗಿದೆ. ಇದರಿಂದಾಗಿ ತೀವ್ರ ಹಣಕಾಸಿನ ಸಮಸ್ಯೆ ಎದುರಾಗಿದೆ’ ಎಂದು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ್ ಅವರು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ಕಡಿತ ಮಾಡಿದ್ದರಿಂದಾಗಿ, ಕೃಷಿ ಸಾಲ ವಿತರಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ರಿಯಾಯಿತಿ ಬಡ್ಡಿ ದರದಲ್ಲಿ ಹೆಚ್ಚಿನ ಪ್ರಮಾಣದ ಸಾಲವನ್ನು ಮಂಜೂರು ಮಾಡುವಂತೆ ನಬಾರ್ಡ್‌ಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದೂ ಕೋರಿದ್ದಾರೆ.

ಅಪೆಕ್ಸ್‌ಗೆ ನಬಾರ್ಡ್ ನೀಡಿದ ಸಾಲದ ವರ್ಷವಾರು ವಿವರ (₹ಕೋಟಿಗಳಲ್ಲಿ)

ವರ್ಷ	ಮೊತ್ತ	ಶೇಕಡಾವಾರು	
		ಇಳಿಕೆ/ಏರಿಕೆ	(ಇಳಿಕೆ/ಏರಿಕೆ)
2017-18	3,450	-	-
2018-19	3,500	50	1
2019-20	4,200	700	15
2020-21	5,500	1300	27
2021-22	5,483	-16.10	-
2022-23	5,550	66.10	1
2023-24	5,600	50	1
2024-25	2,340	-3,260	-58

2023–24ನೇ ಸಾಲಿನಲ್ಲಿ ರೈತರಿಗೆ ಅಲ್ಪಾವಧಿ ಕೃಷಿ ಸಾಲ (₹ಕೋಟಿಗಳಲ್ಲಿ)

ನಬಾರ್ಡ್ (ರಿಯಾಯಿತಿ ಬಡ್ಡಿ ದರ)	5,600
ನಬಾರ್ಡ್ (ಹೆಚ್ಚುವರಿ ಬಡ್ಡಿ ದರ)	3,214
ಅಪೆಕ್ಸ್ ಸ್ವಂತ ಬಂಡವಾಳ	1,711.65
ಡಿಸಿಸಿ ಬ್ಯಾಂಕುಗಳು ಸ್ವಂತ ಬಂಡವಾಳ	11,551.54
ಒಟ್ಟು ಸಾಲ	22,077.20

11ನೇ ಪುಟ ನೋಡಿ



ವಿದ್ಯಾರ್ಥಿಗಳ ಪ್ರತಿಭಟನೆ

ಉತ್ತರ ಪ್ರದೇಶ ನಾಗರಿಕ ಲೋಕಸೇವಾ ಆಯೋಗವು (ಯುಪಿಪಿಎಸ್‌ಸಿ) ಆರ್‌ಒ, ಎಆರ್‌ಒ ಮತ್ತು ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆಗಳನ್ನು ‘ಒಂದು ದಿನ-ಒಂದು ಪಾಳಿ’ ಮಾದರಿಯಲ್ಲಿ ನಡೆಸಬೇಕು ಎಂದು ಆಗ್ರಹಿಸಿ ಪರೀಕ್ಷಾ ಆಕಾಂಕ್ಷಿಗಳು ಸೋಮವಾರ ಪ್ರಯಾಗರಾಜ್‌ನ ಆಯೋಗದ ಕಚೇರಿ ಆವರಣದೊಳಗೆ ನುಗ್ಗಿ ಪ್ರತಿಭಟಿಸಿದರು. ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಹರಸಾಹಸಪಟ್ಟರು – ಪಿಟಿಐ ಚಿತ್ರ

ಸುದ್ದಿ 11

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜಾಮೀನು ನಿರಾಕರಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಜೆಡಿಎಸ್‌ನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ವಿಶೇಷ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಪೀಠವು ಅರ್ಜಿಯನ್ನು ತಿರಸ್ಕರಿಸಿತು ಮತ್ತು ಪ್ರಜ್ವಲ್ ಅತ್ಯಂತ ಪ್ರಭಾವಶಾಲಿ ವ್ಯಕ್ತಿ ಎಂಬುದನ್ನು ಗಣನೆಗೆ ತೆಗೆದುಕೊಂಡಿತು.



ಪ್ರಜ್ವಲ್

‘ಪ್ರಜ್ವಲ್ ವಿರುದ್ಧದ ಆರೋಪಗಳು ಗಂಭೀರವಾದವು. ಹೀಗಾಗಿ, ಜಾಮೀನು ನಿರಾಕರಿಸಿ ಕರ್ನಾಟಕ ಹೈಕೋರ್ಟ್ ಅ.21ರಂದು ನೀಡಿರುವ ತೀರ್ಪಿನಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

5ನೇ ಪುಟ ನೋಡಿ

ಮಲದ ಗುಂಡಿಗೆ ಇಳಿದ ಪರಿಶಿಷ್ಟ ಬಾಲಕ

ಕೊರಟಗೆರೆ: ಗೃಹ ಸಚಿವ ಜಿ. ಪರಮೇಶ್ವರ ಪ್ರತಿನಿಧಿಸುವ ಕೊರಟಗೆರೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಬಾಲಕನೊಬ್ಬನನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಲಾಗಿದೆ. ಅಧಿಕಾರಿಗಳು ಮತ್ತು ಸ್ವಚ್ಛತಾ ಸಂಸ್ಥೆಯ ಪ್ರತಿನಿಧಿಗಳು ಬುಧವಾರ ಬಾಲಕ ಮತ್ತು ವ್ಯಕ್ತಿಯೊಬ್ಬ-ರನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಿದ್ದಾರೆ. 5

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದೆಹಲಿ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ

ಪಟಾಕಿ ಸಂಪೂರ್ಣ ನಿಷೇಧ ತೀರ್ಮಾನಕ್ಕೆ ಗಡುವು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮಾಲಿನ್ಯ ಸೃಷ್ಟಿಗೆ ಕಾರಣವಾಗುವ ಯಾವುದೇ ಚಟುವಟಿಕೆಯನ್ನು ಯಾವ ಧರ್ಮವೂ ಉತ್ತೇಜಿಸುವುದಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ದೆಹಲಿಯಲ್ಲಿ ಪಟಾಕಿ ನಿಷೇಧವನ್ನು ವರ್ಷವಿಡೀ ಮುಂದುವರಿಸುವ ಬಗ್ಗೆ ಹದಿನೈದು ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ದೆಹಲಿ ಸರ್ಕಾರಕ್ಕೆ ಸೋಮವಾರ ಸೂಚನೆ ನೀಡಿದೆ.



ಮಾಲಿನ್ಯದಿಂದ ಮುಕ್ತವಾದ ವಾತಾವರಣದಲ್ಲಿ ಜೀವಿಸುವುದು ಪ್ರತಿ ನಾಗರಿಕನ ಮೂಲಭೂತ ಹಕ್ಕು, ಇದನ್ನು ಸಂವಿಧಾನದ 21ನೆಯ ವಿಧಿಯು ಖಾತರಿಪಡಿಸಿದೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರಿರುವ ವಿಭಾಗೀಯ ಪೀಠ ಹೇಳಿದೆ.

ಪಟಾಕಿಗಳ ತಯಾರಿಕೆ, ಮಾರಾಟ, ದಾಸ್ತಾನು ಮತ್ತು ಅವುಗಳನ್ನು ಸಿಡಿಸುವುದರ ಮೇಲೆ ನಿಷೇಧ ಹೇರುವ ಬಗ್ಗೆ ದೆಹಲಿಗೆ ಹೊಂದಿಕೊಂಡಿರುವ ರಾಜ್ಯ ಸರ್ಕಾರಗಳು ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಪೀಠವು ಸೂಚನೆ ನೀಡಿದೆ.

ಪಟಾಕಿ ಮೇಲಿನ ನಿಷೇಧವನ್ನು ಪೂರ್ತಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ವಿಫಲವಾದ ದೆಹಲಿ ಪೊಲೀಸರನ್ನು ಪೀಠವು ವಿಚಾರಣೆಯ ಸಂದರ್ಭದಲ್ಲಿ ತರಾಟೆಗೆ ತೆಗೆದುಕೊಂಡಿತು. ಪೊಲೀಸರ ಕ್ರಮವು ‘ಕಣ್ಣೊರೆಸುವ ತಂತ್ರವಷ್ಟೇ’ ಎಂದು ಅಸಮಾಧಾನ ವ್ಯಕ್ತಪಡಿಸಿತು.

‘ಸಂವಿಧಾನದ 21ನೆಯ ವಿಧಿಯ ಅಡಿಯಲ್ಲಿ ತಮಗೆ ಪಟಾಕಿ ಸಿಡಿಸುವ ಹಕ್ಕು ಇದೆ ಎಂದು ಯಾರಾದರೂ ಪ್ರತಿಪಾದಿಸುತ್ತಿದ್ದರೆ ಅವರು ತನ್ನೆದುರು ಹಾಜರಾಗಬಹುದು’ ಎಂದು ಪೀಠವು ಮೌಖಿಕವಾಗಿ ಹೇಳಿತು.

ಇದೇ ರೀತಿಯಲ್ಲಿ ಪಟಾಕಿ ಸುಟ್ಟರೆ, ಪ್ರಜೆಗಳ ಆರೋಗ್ಯದ ಮೂಲಭೂತ ಹಕ್ಕಿಗೆ ಧಕ್ಕೆಯಾಗುತ್ತದೆ
ನ್ಯಾಯಪೀಠ

ದೆಹಲಿ ಪೊಲೀಸರಿಗೆ ತರಾಟೆ

‘ದೆಹಲಿ ಪೊಲೀಸರು ನಿಷೇಧ ಆಜ್ಞೆಯನ್ನು ಅನುಷ್ಠಾನಕ್ಕೆ ತರುವುದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಪಟಾಕಿಗಳನ್ನು ತಯಾರಿಸುವವರಿಗೆ, ದಾಸ್ತಾನು ಮಾಡುವವರಿಗೆ ಹಾಗೂ ಮಾರಾಟ ಮಾಡುವವರಿಗೆ ನಿಷೇಧದ ಬಗ್ಗೆ ಮಾಹಿತಿ ನೀಡಲಾಗಿತ್ತು ಎಂಬುದನ್ನು ಹೇಳುವ ಯಾವ ಅಂಶವೂ ಪ್ರಮಾಣಪತ್ರದಲ್ಲಿ ಇಲ್ಲ. ಪಟಾಕಿ ಮಾರಾಟ ಮಾಡುವುದನ್ನು ತಕ್ಷಣದಿಂದಲೇ ನಿಲ್ಲಿಸುವಂತೆ ಪರವಾನಗಿ ಹೊಂದಿದವರಿಗೆ ಹೇಳುವ ಕೆಲಸವನ್ನು ಪೊಲೀಸರು ಮೊದಲು ಮಾಡಬೇಕಿತ್ತು’ ಎಂದು ನ್ಯಾಯಪೀಠವು ಹೇಳಿದೆ.

ನಿಷೇಧದ ಬಗ್ಗೆ ಸಂಬಂಧಪಟ್ಟವರಿಗೆ ತಕ್ಷಣವೇ ಮಾಹಿತಿ ನೀಡಬೇಕು, ಪಟಾಕಿಗಳನ್ನು ಆನ್‌ಲೈನ್ ವೇದಿಕೆಗಳಲ್ಲಿ ಮಾರಾಟ ಮಾಡುವುದನ್ನು, ಅವುಗಳನ್ನು ಗ್ರಾಹಕರಿಗೆ ತಲುಪಿಸುವುದನ್ನು ನಿಲ್ಲಿಸಬೇಕು ಎಂದು ಪೀಠವು ದೆಹಲಿ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದೆ.

ನಾನು ‘ಕರಿಯಣ್ಣ’ ಎಂದರೆ, ಅವರು ‘ಕುಳ್ಳ’ ಅಂತಾರೆ....

ಎಚ್‌ಡಿಕೆಗೆ ‘ಕರಿಯ’ ಎಂದ ಜಮೀರ್

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರ ಶನಿವಾರ ರಾತ್ರಿ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿರುವ ವಾರ್ಡ್‌ಗಳಲ್ಲಿ ನಡೆಸಿದ ಪ್ರಚಾರಸಭೆಯಲ್ಲಿ ಭಾಷಣ ಮಾಡಿದ ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ‘ಕರಿಯ’ ಎಂದು ಕರೆದಿದ್ದಾರೆ.

ಜಮೀರ್ ಬಳಸಿದ ಪದ ಸೋಮವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು ವಿವಾದದ ಸ್ವರೂಪ ಪಡೆದುಕೊಂಡಿದೆ. ವಿರೋಧ ಪಕ್ಷಗಳಾದ ಜೆಡಿಎಸ್ ಮತ್ತು ಬಿಜೆಪಿಯಿಂದ ವ್ಯಾಪಕ ಟೀಕೆ ಹಾಗೂ ಆಕ್ರೋಶ ವ್ಯಕ್ತವಾಗಿದೆ.

ಪಟ್ಟಣದ ಅಲ್ಪಸಂಖ್ಯಾತ ಸಮುದಾಯದವರನ್ನು ಉದ್ದೇಶಿಸಿ ಉರ್ದುವಿನಲ್ಲಿ ಮಾತನಾಡಿದ ಜಮೀರ್ ಅವರು ಕುಮಾರಸ್ವಾಮಿ ಅವರನ್ನು ‘ಕಾಲಿಯಾ’ ಎಂದರು.

‘ಪ್ರೀತಿಯ ಕರಿಯಣ್ಣ...’: ಕುಮಾರಸ್ವಾಮಿ ವಿರುದ್ಧ ತಾವು ಬಳಸಿದ ‘ಕಾಲಿಯಾ’ ಪದ ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಸೋಮವಾರ ರಾಮನಗರದಲ್ಲಿ ಸುದ್ದಿಗೋಷ್ಠಿ ನಡೆಸಿದ ಜಮೀರ್, ‘ಕುಮಾರಸ್ವಾಮಿ ಅವರನ್ನು ನಾನು ಯಾವಾಗಲೂ ಪ್ರೀತಿಯಿಂದ ‘ಕರಿಯಣ್ಣ’ ಎಂದೇ ಕರೆಯುವೆ. ಕುಳ್ಳಗಿರುವ ನನ್ನನ್ನು ಅವರು ಯಾವಾಗಲೂ ‘ಕುಳ್ಳ’ ಎನ್ನುತ್ತಾರೆ’ ಎಂದು ಸ್ಪಷ್ಟನೆ ನೀಡಿದರು.

‘ಭಾನುವಾರ ಭಾಷಣ ಮಾಡುವಾಗ ಕರಿಯಣ್ಣ ಎಂಬ ಪದ ಸಹಜವಾಗಿ ನಾಲಿಗೆ ಮೇಲೆ ಬಂತು. ಅವರನ್ನು ನಿಂದಿಸುವ ಉದ್ದೇಶದಿಂದ ಆ ಪದ ಬಳಸಿಲ್ಲ. ಅವರ ಬಣ್ಣದ ಆಧಾರದ ಮೇಲೆ ನಿಂದಿಸುವ ಯಾವುದೇ ಉದ್ದೇಶವೂ ನನಗಿರಲಿಲ್ಲ. ನಾವಿಬ್ಬರು ಬೇರೆ ಪಕ್ಷದಲ್ಲಿದ್ದರೂ ನಮ್ಮ ಸ್ನೇಹ ಅಳಿಯುವುದಿಲ್ಲ. ಹಳೆಯದ್ದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ನಾನೀಗ ಕಾಂಗ್ರೆಸ್‌ನಲ್ಲಿದ್ದರೂ ಕುಮಾರಸ್ವಾಮಿ ಅವರ ತಂದೆ ಎಚ್.ಡಿ. ದೇವೇಗೌಡರೇ ನನ್ನ ರಾಜಕೀಯ ಗುರು’ ಎಂದರು.

‘ಈಗಾಗಲೇ ಕ್ಷಮೆ ಕೋರಿರುವೆ’



ಜಮೀರ್

‘ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಹೈಕೋರ್ಟ್ ನೀಡಿದ ಆದೇಶದ ಕುರಿತು ಮಾತನಾಡುವಾಗ ಬಾಯ್ತಪ್ಪಿ ರಾಜಕೀಯ ತೀರ್ಪು ಎಂದು ಟೀಕಿಸಿದ್ದೆ. ನಂತರ ಸುದ್ದಿಗೋಷ್ಠಿ ನಡೆಸಿ ಕ್ಷಮೆ ಕೋರಿದ್ದೇನೆ. ಮಾಡಿದ ತಪ್ಪಿಗೆ ಈಗಾಗಲೇ ಕ್ಷಮೆ ಕೇಳಿರುವಾಗ ನನ್ನ ವಿರುದ್ಧ ಕ್ರಮಕ್ಕೆ ರಾಜ್ಯಪಾಲರು ಸರ್ಕಾರಕ್ಕೆ ಸೂಚಿಸುವುದರಲ್ಲಿ ಅರ್ಥವೇನಿದೆ?’ ಎಂದು ಜಮೀರ್ ಪ್ರತಿಕ್ರಿಯಿಸಿದರು.

ರಿಜಿಜು ಖಂಡನೆ



ನವದೆಹಲಿ (ಪಿಟಿಐ): ಸಚಿವ ಜಮೀರ್ ಅಹ್ಮದ್ ಅವರು, ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ‘ಕರಿಯ’ ಎಂದಿರುವುದನ್ನು ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಖಂಡಿಸಿದ್ದಾರೆ.

‘ಇದೊಂದು ಜನಾಂಗೀಯ ನಿಂದನೆ. ಇದೇ ರೀತಿ ರಾಹುಲ್ ಗಾಂಧಿ ಅವರು ಸಹ, ದಕ್ಷಿಣ ಭಾರತೀಯರು ಆಫ್ರಿಕನ್ನರಂತೆ, ಈಶಾನ್ಯದವರು ಚೀನೀಯರಂತೆ ಮತ್ತು ಉತ್ತರ ಭಾರತದವರು ಅರಬ್ಬರಂತೆ ಕಾಣುತ್ತಾರೆ ಎಂದಿದ್ದರು’ ಎಂದು ರಿಜಿಜು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಚಿಕ್ಕಬಾಣವಾರ, ವೈಟ್‌ಫೀಲ್ಡ್, ಚಾಮರಾಜಪೇಟೆ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಘಟನೆಗಳು

ಅಪಘಾತ: ಬಾಲಕ ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣವಾರ, ವೈಟ್‌ಫೀಲ್ಡ್ ಹಾಗೂ ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ, ಸೋಮವಾರ ಮುಂಜಾನೆ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಎಂಟು ವರ್ಷದ ಬಾಲಕ ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ.

ಚಿಕ್ಕಬಾಣವಾರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅತಿವೇಗವಾಗಿ ಬಂದ ದ್ವಿಚಕ್ರ ವಾಹನವೊಂದು ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿ ಬಿದ್ದಿದ್ದರಿಂದ ಸವಾರ, ಎನ್‌ಎಂಎಚ್ ಲೇಔಟ್ ನಿವಾಸಿ ಭರತ್ ಕುಮಾರ್(27) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಪವನ್ ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆಸರಘಟ್ಟ ಮುಖ್ಯರಸ್ತೆಯ ಡಿ–ಮಾರ್ಟ್ ಬಳಿ ಸೋಮವಾರ ಮುಂಜಾನೆ ಈ ಅಪಘಾತ ಸಂಭವಿಸಿದೆ.

'ವಿದ್ಯಾನಗರದಲ್ಲಿ ಬಟ್ಟೆ ಅಂಗಡಿ ನಡೆಸುತ್ತಿರುವ ಭರತ್ ಕುಮಾರ್ ಮತ್ತು ಪವನ್, ಸೋಮವಾರ ಮುಂಜಾನೆ ದ್ವಿಚಕ್ರ ವಾಹನದಲ್ಲಿ ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಸಾಗುತ್ತಿದ್ದರು. ಅದೇ ವೇಳೆ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಕ್ಕದಲ್ಲೇ ಬರುತ್ತಿದ್ದ ಆಟೊಗೆ ಡಿಕ್ಕಿ ಆಗಿದೆ. ಆಗ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳದಲ್ಲಿದ್ದವರು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಭರತ್‌ಕುಮಾರ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಎರಡು ಕಡೆ ಅಪಘಾತ: ವೈಟ್‌ಫೀಲ್ಡ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಸರಕು ಸಾಗಣೆ ಆಟೊ ಚಾಲಕ ಮತ್ತು ಎಂಟು ವರ್ಷದ ಬಾಲಕ ಮೃತಪಟ್ಟಿದ್ದಾರೆ.

ವರ್ತೂರು ಕೆರೆ ರಸ್ತೆಯ ದುಗ್ಗಲಮ್ಮ ದೇವಸ್ಥಾನದ ಬಳಿ ನಿಯಂತ್ರಣ ತಪ್ಪಿ ಆಟೊ ಉರುಳಿ ಬಿದ್ದಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದ ಚಾಲಕ ಮಂಜುನಾಥ್ (35) ಮೃತಪಟ್ಟಿದ್ದಾರೆ. ಅವರ ಪತ್ನಿ ಮಮತಾ ಗಾಯಗೊಂಡಿದ್ದಾರೆ. ದಂಪತಿ ಸರಕು ಸಾಗಣೆ ಆಟೊದಲ್ಲಿ ವರ್ತೂರು ಕಡೆಯಿಂದ ವರ್ತೂರು ಕೋಡಿ ಕಡೆಗೆ ತೆರಳುತ್ತಿದ್ದರು. ದುಗ್ಗಲಮ್ಮ ದೇವಸ್ಥಾನದ ಬಳಿ ಆಟೊ ರಸ್ತೆಗೆ ಉರುಳಿ ಬಿದ್ದು ಅವಘಡ ಸಂಭವಿಸಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ನಲ್ಲೂರಹಳ್ಳಿ ನ್ಯೂ ಟೆಂಪಲ್ ರಸ್ತೆ ದಾಟುವಾಗ ಬುಲೆಟ್ ಬೈಕ್ ಡಿಕ್ಕಿಯಾಗಿ ಕಲಬುರಗಿಯ ಪರಶುರಾಮ್(8) ಮೃತಪಟ್ಟಿದ್ದಾನೆ. ಸಿದ್ದಾಪುರ ಕಡೆಯಿಂದ ನಲ್ಲೂರಹಳ್ಳಿ ಕಡೆಗೆ ಅತಿ ವೇಗವಾಗಿ ಬಂದ ಬುಲೆಟ್ ಬೈಕ್ ರಸ್ತೆ ದಾಟುತ್ತಿದ್ದ ಪರಶುರಾಮ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದ ಪರಶುರಾಮ್‌ನನ್ನು ಸ್ಥಳೀಯರು ಕೂಡಲೇ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಆಸ್ಪತ್ರೆಯಲ್ಲಿ ಬಾಲಕ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದರು.

ಬಿ ಜಿ ಎ ಸ್ ಮೇಲ್ಸೇತುವೆಯಲ್ಲಿ ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸವಾರ, ಆಜಾದ್‌ನಗರ ನಿವಾಸಿ ಪೋತಿ ಭೂನಿಯಾ(23) ಮೃತಪಟ್ಟಿದ್ದಾರೆ. ಸೋಮವಾರ ಮುಂಜಾನೆ ಬಿಜಿಎಸ್ ಮೇಲ್ಸೇತುವೆಯ ಸಿಎಆರ್ ಮೈದಾನದ ಬಳಿ ಈ ಅಪಘಾತ ಸಂಭವಿಸಿದೆ. ಪಶ್ಚಿಮ ಬಂಗಾಳದ ಪೋತಿ ಭೂನಿಯಾ ನಗರದ ಕಬ್ಬನ್‌ಪೇಟೆಯ ಚಿನ್ನಾಭರಣ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಆಜಾದ್ ನಗರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ಮುಂಜಾನೆ 3 ಗಂಟೆ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಸಿಟಿ ಮಾರುಕಟ್ಟೆ ಕಡೆಯಿಂದ ಆಜಾದ್ ನಗರದ ಕಡೆಗೆ ತೆರಳುವಾಗ ಅಪಘಾತ ಸಂಭವಿಸಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು. ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ

ಬೆಂಗಳೂರು: ಜಯನಗರದಿಂದ ವಿಜಯನಗರಕ್ಕೆ ಭಾನುವಾರ ರಾತ್ರಿ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್‌ನ ಚಾಲಕನ ಮೇಲೆ ಹಲ್ಲೆ ನಡೆಸಿದ್ದ ವ್ಯಕ್ತಿಯನ್ನು ಬಸ್ ಪ್ರಯಾಣಿಕರು ಹಾಗೂ ಬಸ್ ಸಿಬ್ಬಂದಿ ಹಿಡಿದು ಬ್ಯಾಟರಾಯನಪುರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಹಳೇಗುಡ್ಡದಹಳ್ಳಿ ಸಿಗ್ನಲ್ ಬಳಿ ಬಸ್ ನಿಲುಗಡೆ ಮಾಡಲಾಗಿತ್ತು. ಆಗ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ಬಸ್ ಎದುರು ಬೈಕ್ ನಿಲುಗಡೆ ಮಾಡಿದ್ದ. ಬಸ್ ಹತ್ತಿ ಚಾಲಕ ಮುರ್ದುಜಾ ಇಮಾಮ್ ಸಾಬ್ ಅವರ ಮೇಲೆ ಹಲ್ಲೆ ನಡೆಸಿದ್ದ. ತಕ್ಷಣವೇ ಬಸ್ ಬಾಗಿಲು ಬಂದ್ ಮಾಡಿ ಹಲ್ಲೆ ಮಾಡಿದ ವ್ಯಕ್ತಿಯನ್ನು ಪ್ರಯಾಣಿಕರ ಸಹಾಯದಿಂದ ಬ್ಯಾಟರಾಯನಪುರ ಪೊಲೀಸ್ ಠಾಣೆಗೆ ಒಪ್ಪಿಸಲಾಯಿತು ಎಂದು ಬಿಎಂಟಿಸಿ ಸಿಬ್ಬಂದಿ ತಿಳಿಸಿದ್ದಾರೆ.

ಚಾಲಕರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಯಿತು. ಅವರು ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ ಎಂದರು.

ಬಟ್ಟೆ ಖರೀದಿಸಿ ಹಣ ಪಾವತಿಸದೇ ವಂಚನೆ

ಬೆಂಗಳೂರು: ಅಂಗಡಿಯಲ್ಲಿ ₹31 ಸಾವಿರ ಮೌಲ್ಯದ ಬಟ್ಟೆ ಖರೀದಿಸಿ, ನಂತರ ಆನ್‌ಲೈನ್ ಮೂಲಕ ಹಣ ಪಾವತಿ ಆಗಿದೆ ಎಂದು ನಕಲಿ ಫೋಟೊ ತೋರಿಸಿ ವಂಚಿಸಿದ್ದ ಯುವತಿಯನ್ನು ಸದಾಶಿವನಗರ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಬಳ್ಳಾಪುರದ ರಶ್ಮಿ(25) ಬಂಧಿತೆ. ಆರೋಪಿಯು ಸದಾಶಿವನಗರದ ಆರ್‌ಎಂವಿ ಬಡಾವಣೆಯ ವಸಿಷ್ಠ ಬುಟಿಕ್ ಎಂಬ ಬಟ್ಟೆ ಅಂಗಡಿಗೆ ಬಂದು ₹31,800 ಮೌಲ್ಯದ ಬಟ್ಟೆ ಖರೀದಿಸಿ, ವಂಚಿಸಿದ್ದರು. ಅಂಗಡಿಯವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. 'ವಿಮಾ ಕಂಪನಿಯೊಂದರಲ್ಲಿ ರಶ್ಮಿ ಕೆಲಸ ಮಾಡುತ್ತಿದ್ದರು. ಅಲ್ಲದೇ ಲೆಕ್ಕ ಪರಿಶೋಧಕ (ಸಿ.ಎ) ಪರೀಕ್ಷೆ ತೆಗೆದುಕೊಂಡಿದ್ದರು. ಅ.29ರಂದು ಮಧ್ಯಾಹ್ನ 1ರ ಸುಮಾರಿಗೆ ಅಂಗಡಿಗೆ ಬಂದಿದ್ದ ಆಕೆ, ವಿನ್ಯಾಸಕಿ ಸಂಪದ ಅವರಿಂದ ಬಟ್ಟೆ ಖರೀದಿಸಿದ್ದರು. ಸ್ನೇಹಾ ಹೆಸರಿನಲ್ಲಿ ಬಿಲ್ ಮಾಡಿಸಿದ್ದರು. ನಂತರ, ಸ್ಕ್ಯಾನರ್ ಮೂಲಕ ಹಣ ಪಾವತಿ ಮಾಡಿರುವುದಾಗಿ ಮೊಬೈಲ್‌ನ ಸ್ಕ್ರೀನ್‌ಶಾಟ್ ತೋರಿಸಿದ್ದರು. ಆದರೆ, ಅಂಗಡಿಯ ಬ್ಯಾಂಕ್ ಖಾತೆಗೆ ಹಣ ಜಮೆ ಆಗಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಸಂಜೆಯಾದರೂ ಬ್ಯಾಂಕ್ ಖಾತೆಗೆ ಹಣ ಸಂದಾಯ ಆಗಿರಲಿಲ್ಲ. ಬಳಿಕ ರಶ್ಮಿ ನೀಡಿದ್ದ ಮೊಬೈಲ್ ಸಂಖ್ಯೆಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದರು. ಪ್ರತಿಕ್ರಿಯೆ ಬಂದಿರಲಿಲ್ಲ. ಮತ್ತೊಮ್ಮೆ ಕರೆ ಮಾಡಿದಾಗ ಪುರುಷರೊಬ್ಬರು ಸ್ವೀಕರಿಸಿ ರಶ್ಮಿ ಅವರ ಹೆಸರಿನವರು ಯಾರೂ ಇಲ್ಲ ಎಂಬುದಾಗಿ ಹೇಳಿದ್ದರು. ನಂತರ ವಂಚನೆ ಗೊತ್ತಾಗಿ ದೂರು ನೀಡಿದ್ದರು' ಎಂದರು.

ಸುದ್ದಿ 2 ನಿಮಿಷ

10 ವಿಮಾನ ಸಂಚಾರ ವ್ಯತ್ಯಯ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ಬೆಳಗ್ಗೆ ದಟ್ಟವಾದ ಮಂಜು ಕವಿದ ಕಾರಣ ಹತ್ತು ವಿಮಾನಗಳ ಹಾರಾಟದಲ್ಲಿ ಅರ್ಧ ತಾಸು ವ್ಯತ್ಯಯವಾಗಿದೆ.

ಚಳಿಗಾಲದ ಆರಂಭದಲ್ಲಿ ರನ್‌ವೇ ಕಾಣದಂತೆ ಮಂಜು ಆವರಿಸುವುದು ಸಾಮಾನ್ಯ. ಯಾವುದೇ ಅವಘಡ ಸಂಭವಿಸದಂತೆ ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಕೆಲಹೊತ್ತು ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಕಾರ್ಯಾಚರಣೆ ನಿಲ್ಲಿಸಲಾಗಿತ್ತು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.



ವಿಮಾನಗಳು ತಡವಾಗಿ ಸಂಚರಿಸಿದ ಕಾರಣ ಸೋಮವಾರ ಬೆಳಗ್ಗೆ ವಿಮಾನ ನಿಲ್ದಾಣಕ್ಕೆ ಬಂದ ಪ್ರಯಾಣಿಕರು ತೊಂದರೆ ಅನುಭವಿಸಿದರು. ಮಂಜು ಆವರಿಸಿದ್ದರಿಂದ ರನ್ ವೇ ಸ್ಪಷ್ಟವಾಗಿ ಕಾಣದ ಕಾರಣ ಕೆಲವು ವಿಮಾನಗಳು ಇಳಿಯುವುದು ವಿಳಂಬವಾಯಿತು.

ಇಎಸ್‌ಐ ಕಾರ್ಡ್ ಸೃಷ್ಟಿ ಜಾಲ ಪತ್ತೆ

ಬೆಂಗಳೂರು: ನಕಲಿ ಕಂಪನಿ ಮೂಲಕ ಇ–ಪೆಹಚಾನ್ ಕಾರ್ಡ್ ಸೃಷ್ಟಿಸಿ ಇಎಸ್‌ಐ ಆಸ್ಪತ್ರೆಯ ಚಿಕಿತ್ಸಾ ಕಾರ್ಡ್ ಮಾಡಿಕೊಡುತ್ತಿದ್ದ ಆರು ಮಂದಿ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀಧರ್, ರಮೇಶ್, ಶಿವಗಂಗಾ, ಶ್ವೇತಾ, ಶಶಿಕಲಾ ಹಾಗೂ ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

'ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಕೆಲವು ವ್ಯಕ್ತಿಗಳು ಬೇರೆ ಬೇರೆ ಹೆಸರಿನಲ್ಲಿ ನಕಲಿ ಕಂಪನಿ ಸೃಷ್ಟಿಸಿದ್ದರು. ಅದರಲ್ಲಿ ಕೆಲಸ ನಿರ್ವಹಿಸದೇ ಇರುವವರಿಗೆ ನಕಲಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವಂತೆ ಈ ಪೆಹಚಾನ್ ಕಾರ್ಡ್ ಸೃಷ್ಟಿಸುತ್ತಿದ್ದರು. ಆ ಕಾರ್ಡ್ ಸಹಾಯದಿಂದ ಆರೋಪಿಗಳು ಇಎಸ್‌ಐ ಆಸ್ಪತ್ರೆ ಚಿಕಿತ್ಸಾ ಕಾರ್ಡ್‌ಗಳನ್ನು ಮಾಡಿಕೊಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಆಸ್ಪತ್ರೆಯ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಪ್ರಕಾಶ್ ನಗರದ ನಿವಾಸಿ ವಿ.ಶ್ರೀಧರ್ ಎಂಬಾತ ರಮೇಶ್, ಶಿವಗಂಗಾ, ಶ್ವೇತಾ, ಶಶಿಕಲಾ (ಲೆಕ್ಕ ಪರಿಶೋಧಕಿ) ಸೇರಿದಂತೆ ಇತರೆ ವ್ಯಕ್ತಿಗಳು ಈ ದಂಧೆಯಲ್ಲಿ ತೊಡಗಿದ್ದರು. ಭೌತಿಕವಾಗಿ ಅಸ್ತಿತ್ವದಲ್ಲಿ ಇಲ್ಲದ ದೇವು ಮಾರ್ಕೆಟಿಂಗ್, ಭಾಸ್ಕರ್ ಎಂಟರ್‌ಪ್ರೈಸಸ್, ವಿಪಿಶ್ರೀ ಎಂಟರ್‌ಪ್ರೈಸಸ್, ಗೌರಿ ಮಾರ್ಕೆಟಿಂಗ್ ಹೆಸರಿನಲ್ಲಿ ನಕಲಿ ಕಂಪನಿ ಸೃಷ್ಟಿಸಿದ್ದರು. ಆ ಕಂಪನಿಗಳಲ್ಲಿ ಸಾರ್ವಜನಿಕರು ಹಾಗೂ ರೋಗಿಗಳು ಕೆಲಸ ಮಾಡಿದಂತೆ ದಾಖಲೆ ಸೃಷ್ಟಿಸಿ ವಂಚನೆ ಮಾಡಿದ್ದರು' ಎಂದು ತನಿಖೆಯಿಂದ ಗೊತ್ತಾಗಿದೆ.

'ಇಎಸ್‌ಐ ಮಾನ್ಯತೆ ಪಡೆದಿರುವ ಆಸ್ಪತ್ರೆಗಳಲ್ಲಿ ಅಧಿಕೃತ ನೌಕರರಿಗೆ ಸಿಗಬೇಕಾದ ಸೌಲಭ್ಯಗಳನ್ನು ತಪ್ಪಿಸಿ ನಕಲಿ ಇಎಸ್‌ಐ ಕಾರ್ಡ್ ಪಡೆದವರಿಗೆ ಚಿಕಿತ್ಸೆ ದೊರೆಯುವಂತೆ ಮಾಡುತ್ತಿದ್ದರು. ನೈಜ ಕಾರ್ಮಿಕರಿಗೆ ಆಸ್ಪತ್ರೆಯ ಹಾಸಿಗೆ, ಚಿಕಿತ್ಸೆ ಹಾಗೂ ಔಷಧೋಪಚಾರ ಸಿಗದಂತೆ ಈ ಜಾಲ ವಂಚಿಸುತ್ತಿತ್ತು' ಎಂದು ಪೊಲೀಸರು ಹೇಳಿದರು.

ಸಮಾನ ವೇತನಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾನ ವೇತನ ಪಾವತಿಯೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರ ಮತ್ತು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸಖಿಯರ ಮಹಾ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಸೆಪ್ಟೆಂಬರ್ 2ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ಹಿಂದಕ್ಕೆ ಪಡೆದು, ಸಮಾನ ವೇತನವನ್ನು ನೀಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರ ಮತ್ತು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸಖಿಯರ ಮಹಾ ಒಕ್ಕೂಟದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

'ಪ್ರತಿ ತಿಂಗಳಿಗೆ ಪುಸ್ತಕ ಬರಹಗಾರರಿಗೆ ₹20 ಸಾವಿರ, ಸಂಪನ್ಮೂಲ ವ್ಯಕ್ತಿಗಳಿಗೆ ₹15 ಸಾವಿರ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಸಖಿಯರಿಗೆ ₹15 ಸಾವಿರ ನಿಗದಿ ಪಡಿಸಬೇಕು. ಸರ್ಕಾರದಿಂದ ನೇರವಾಗಿ ವೇತನ ಜಮೆ ಮಾಡಬೇಕು' ಎಂದು ಒತ್ತಾಯಿಸಿದರು.

'ಕೆಲಸದ ಜತೆಗೆ ಗ್ರಾಮ ಪಂಚಾಯಿತಿಗಳ ಹಲವಾರು ಕೆಲಸಗಳನ್ನು ನಿರ್ವಹಣೆ ಮಾಡುತ್ತಿದ್ದು, ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವ್ಯಾಪ್ತಿಗೆ ತರಬೇಕು' ಎಂದು ಆಗ್ರಹಿಸಿದರು.

'ವೇತನ ಸಹಿತ ಹೆರಿಗೆ ರಜೆ ಮಂಜೂರಾತಿಗೆ ಕ್ರಮ ತೆಗೆದುಕೊಳ್ಳಬೇಕು. ಮಹಿಳಾ ಸಿಬ್ಬಂದಿ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯಬೇಕು. ಇಎಸ್‌ಐ ಹಾಗೂ ಭವಿಷ್ಯ ನಿಧಿ ಸೌಲಭ್ಯ ಒದಗಿಸಬೇಕು' ಎಂದು ಕೋರಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷೆ ರುದ್ರಮ್ಮ, ಪ್ರಧಾನ ಕಾರ್ಯದರ್ಶಿ ಕುಸುಮಾ, ಉಪಾಧ್ಯಕ್ಷೆ ಗುರುಬಸಮ್ಮ, ಖಜಾಂಚಿ ಪುಷ್ಪಾ ಸೇರಿದಂತೆ ಹಲವರು ಇದ್ದರು.

ಪರವಾನಗಿ ಹೊಂದಿಲ್ಲದವರ ವಿರುದ್ಧ ಕ್ರಮಕ್ಕೆ ಮುಂದಾದ ಪೊಲೀಸರು

'ಕುಡಿದು ವಾಹನ ಚಲಾಯಿಸಿದರೆ ಕ್ರಿಮಿನಲ್ ಕೇಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಲನಾ ಪರವಾನಗಿ(ಡಿ.ಎಲ್) ಇಲ್ಲದಿರುವವರು ಮದ್ಯ ಸೇವಿಸಿ ವಾಹನ ಚಾಲನೆ ಮಾಡಿರುವುದು ಪತ್ತೆಯಾದರೆ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ಹೇಳಿದರು.

'ಡಿ.ಎಲ್ ರಹಿತವಾಗಿ ವಾಹನ ಚಾಲನೆ ಮಾಡಿದ್ದ ಸವಾರರೊಬ್ಬರು ಮದ್ಯ ಸೇವಿಸಿದ್ದು ಪತ್ತೆಯಾಗಿದ್ದು, ಅವರ ವಿರುದ್ಧ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

53 ಸಾವಿರ ವಾಹನ ತಪಾಸಣೆ: 'ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಕಳೆದ ವಾರ ಕಾರ್ಯಾಚರಣೆ ನಡೆಸಲಾಗಿತ್ತು. ಒಟ್ಟು 53 ಸಾವಿರಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ನಡೆಸಲಾಗಿದೆ. ಅದರಲ್ಲಿ 794 ಮಂದಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಲ್ಲದೇ ಡಿ.ಎಲ್ ರದ್ದುಗೊಳಿಸಲು ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗಿದೆ' ಎಂದು ಮಾಹಿತಿ ನೀಡಿದರು.

'ನಗರದಲ್ಲಿ ಇ–ಬೈಕ್ ಬಳಸಿಕೊಂಡು ಹಲವರು ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದಾರೆ. ಅವರು ಸಂಚಾರ ನಿಯಮ ಉಲ್ಲಂಘಿಸುತ್ತಿರುವುದು ಪತ್ತೆಯಾಗಿತ್ತು. ಕಳೆದ ವಾರ ಸಂಚಾರ ನಿಯಮ ಪಾಲಿಸುವಂತೆ ಜಾಗೃತಿ ಮೂಡಿಸಲಾಗಿತ್ತು. ಆದರೂ ಇ–ಬೈಕ್ ಸವಾರರು ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವುದು ಕಂಡುಬಂದಿದೆ. ಇದೀಗ ಅವರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ದಂಡ ಸಂಗ್ರಹಿಸಲಾಗುತ್ತಿದೆ. ಇ–ಬೈಕ್‌ಗಳಿಗೆ ಸಂಚಾರ ನಿಯಮ ಅನ್ವಯಿಸುವುದಿಲ್ಲ ಎನ್ನುವ ತಪ್ಪು ತಿಳಿವಳಿಕೆ ಇದೆ. ಇ–ಬೈಕ್ ಸೇರಿದಂತೆ ಎಲ್ಲ ದ್ವಿಚಕ್ರ ವಾಹನಗಳ ಸವಾರರೂ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಹೇಳಿದರು.



ಅನುಚೇತ್

'ನಗರದಲ್ಲಿ ಪಾನಮತ್ತರಾಗಿ ಶಾಲಾ ವಾಹನ ಚಲಾಯಿಸುವವರ ಪತ್ತೆಗಾಗಿ ಸಂಚಾರ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. 10 ತಿಂಗಳಲ್ಲಿ 20 ಸಾವಿರ ಶಾಲಾ ವಾಹನಗಳ ತಪಾಸಣೆ ಮಾಡಿ 120 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪಾನಮತ್ತ ಚಾಲಕರ ಚಾಲನಾ ಪರವಾನಗಿ ರದ್ದುಗೊಳಿಸಲು ಸಾರಿಗೆ ಇಲಾಖೆಗೆ ಶಿಫಾರಸು ಮಾಡಲಾಗಿದೆ' ಎಂದರು.

ಶಾಲಾ ವಾಹನಗಳಲ್ಲಿ ನಿಗದಿಗಿಂತ ಹೆಚ್ಚುವರಿ ಮಕ್ಕಳನ್ನು ಕರೆದೊಯ್ಯುತ್ತಿರುವುದರ ವಿರುದ್ಧವೂ ನಿರಂತರವಾಗಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ಶಾಲಾ ಆಡಳಿತ ಮಂಡಳಿಗಳಿಗೂ ನೋಟಿಸ್ ನೀಡಲಾಗುತ್ತಿದೆ. ಸುರಕ್ಷತೆಯ ದೃಷ್ಟಿಯಿಂದ ಈ ವಿಶೇಷ ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ಹೇಳಿದರು.

ಜೋಡಿ ಕೊಲೆ: ಆರೋಪಿ ಸೆರೆ

ಬೆಂಗಳೂರು: ಸಿಂಗಹಳ್ಳಿಯ ಎಸ್‌ಆರ್‌ಎಸ್ ಕಂಪನಿಯ ವರ್ಕ್‌ಶಾಪ್‌ನಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣದ ಆರೋಪಿಯನ್ನು ಬಾಗಲೂರು ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಸ್ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದ ಸುರೇಶ್ ಬಂಧಿತ.



ಸುರೇಶ್

'ಶುಕ್ರವಾರ ತಡರಾತ್ರಿ ನಡೆದ ಗಲಾಟೆಯಲ್ಲಿ ರಾಮನಗರದ ನಾಗೇಶ್ (52) ಹಾಗೂ ಮಂಡ್ಯದ ಮಂಜೇಗೌಡ (44) ಅವರ ಮೇಲೆ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿ ಆರೋಪಿ ಪರಾರಿ ಆಗಿದ್ದ. ಮೊಬೈಲ್ ಲೊಕೇಶನ್ ಆಧರಿಸಿ, ಆರೋಪಿ ತಲೆಮರೆಸಿಕೊಂಡಿದ್ದ ಸ್ಥಳವನ್ನು ಪತ್ತೆ ಹಚ್ಚಲಾಯಿತು' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ನಾಗೇಶ್ ಅವರ ಪುತ್ರಿ ಕೆ.ಎನ್.ಸಹನಾ ಅವರು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ತಿಳಿಸಿದರು.

'ನಾಗೇಶ್ ಮತ್ತು ಮಂಜೇಗೌಡ ಅವರು ಎರಡು ವರ್ಷಗಳಿಂದ ಸಿಂಗಹಳ್ಳಿಯಲ್ಲಿ ಇರುವ ಎಸ್‌ಆರ್‌ಎಸ್ ಕಂಪನಿಗೆ ಸೇರಿದ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇದೇ ಸ್ಥಳದಲ್ಲಿ ಸುರೇಶ್ ಸಹ ಕೆಲಸ ಮಾಡುತ್ತಿದ್ದ. ಸುರೇಶ್ ನಾಲ್ಕು ತಿಂಗಳ ಹಿಂದಷ್ಟೇ ಕೆಲಸಕ್ಕೆ ಸೇರಿಕೊಂಡಿದ್ದ. ಮೂವರೂ ಸ್ನೇಹಿತರಾಗಿದ್ದರು. ವರ್ಕ್‌ಶಾಪ್‌ನಲ್ಲಿದ್ದ ಶೆಡ್‌ನಲ್ಲಿ ಮೂವರೂ ಆಗಾಗ್ಗೆ ಪಾರ್ಟಿ ನಡೆಸುತ್ತಿದ್ದರು' ಎಂದು ಮೂಲಗಳು ಹೇಳಿವೆ

'ಶುಕ್ರವಾರ ಮೂವರೂ ಸೇರಿ' ಪಾರ್ಟಿ ನಡೆಸುತ್ತಿದ್ದರು. ಅಂದು ತಡರಾತ್ರಿವರೆಗೂ ಮದ್ಯದ ಸೇವಿಸಿದ್ದರು. ಪಾರ್ಟಿ ವೇಳೆ ಕೊಲೆಯಾದ ಇಬ್ಬರೂ ಆರೋಪಿಯನ್ನು ನಿಂದಿಸಿದ್ದರು. ಇದಕ್ಕೆ ಸಿಟ್ಟಿಗೆದ್ದಿದ್ದ ಆರೋಪಿ ಸ್ಥಳದಲ್ಲಿದ್ದ ಕಬ್ಬಿಣದ ರಾಡಿನಿಂದ ಇಬ್ಬರ ತಲೆಗೂ ಹೊಡೆದು ಕೊಲೆ ಮಾಡಿ ಪರಾರಿ ಆಗಿದ್ದ. ಎಸ್‌ಆರ್‌ಎಸ್ ಸಂಸ್ಥೆಯ ಬಸ್ ಚಾಲಕ ಸುನಿಲ್ ಕುಮಾರ್ ಶನಿವಾರ ಬೆಳಿಗ್ಗೆ ಬಸ್ ಶುಚಿ ಮಾಡಿಸಲು ವರ್ಕ್ ಶಾಪ್‌ಗೆ ಬಂದಾಗ ಕೊಲೆ ನಡೆದಿದ್ದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

ಹೀಯಾಳಿಕೆ: 'ನಾಗೇಶ್ ಮತ್ತು ಮಂಜುನಾಥ್ ಅವರು ಮದ್ಯದ ಅಮಲಿನಲ್ಲಿ 'ನೀನೊಬ್ಬ ಕಳ್ಳ, ನಿನ್ನ ಮೇಲೆ ಹಲವು ಪ್ರಕರಣಗಳು ಇವೆ' ಎಂದು ಹೀಯಾಳಿಸುತ್ತಿದ್ದರು. ಇದರಿಂದ ಸಿಟ್ಟಿಗೆದ್ದು ಕೊಲೆ ಮಾಡಿರುವುದಾಗಿ ಆರೋಪಿ ಹೇಳಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಮತ್ತೆ ಜೈಲು ಸೇರಿದ ಆರೋಪಿ: 'ಆರೋಪಿ ಈ ಹಿಂದೆಯೂ ಜೋಡಿ ಕೊಲೆ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಕಾರಾಗೃಹ ಸೇರಿ ಶಿಕ್ಷೆ ಅನುಭವಿಸಿದ್ದ. ಶಿಕ್ಷೆ ಅನುಭವಿಸಿದ್ದ ಸುರೇಶ್‌ಗೆ ಶ್ಯೂರಿಟಿಗೆ ಹಣ ನೀಡಲು ಯಾರೂ ಇರಲಿಲ್ಲ. ಈ ಸಮಯದಲ್ಲಿ ಒಂದಷ್ಟು ಅಪರಾಧಿಗಳಿಗೆ ತಲಾ ₹3 ಲಕ್ಷ ಶ್ಯೂರಿಟಿ ಹಣವನ್ನು ಕನ್ನಡ ಚಿತ್ರರಂಗದ ನಟರೊಬ್ಬರು ಕಟ್ಟಿದ್ದರು. ಆಗ ಸುರೇಶ್ ಪರವಾಗಿ ಹಣ ಕಟ್ಟಿ ಜೈಲಿನಿಂದ ಬಿಡುಗಡೆ ಮಾಡಿಸಿದ್ದರು' ಎಂಬುದು ಗೊತ್ತಾಗಿದೆ.

'ಕಾರಾಗೃಹದಿಂದ ಬಿಡುಗಡೆಯಾದ ಮೇಲೆ ಕೆ.ಆರ್. ಮಾರು ಕಟ್ಟೆಯಲ್ಲಿ ಸೊಪ್ಪು, ತರಕಾರಿ ಮಾರಾಟ ಮಾಡುತ್ತಿದ್ದ. ನಂತರ, ಗುಜರಿ ವ್ಯಾಪಾರಕ್ಕೆ ಸೇರಿಕೊಂಡಿದ್ದ. ಅಲ್ಲಿಯೂ ಗಲಾಟೆ ಮಾಡಿಕೊಂಡಿದ್ದ. ಇದೀಗ ಜೋಡಿ ಕೊಲೆ ಪ್ರಕರಣದ ಆರೋಪದಡಿ ಮತ್ತೆ ಜೈಲು ಸೇರಿದ್ದಾನೆ' ಎಂದು ಮೂಲಗಳು ಹೇಳಿವೆ.

ಸಿಸಿಬಿ ವಿರುದ್ಧ ತನಿಖೆಗೆ ಆದೇಶ

ಬೆಂಗಳೂರು: ಹೆಬ್ಬಗೋಡಿಯಲ್ಲಿ ನಡೆದಿದ್ದ ರೇವ್ ಪಾರ್ಟಿ ಪ್ರಕರಣದ ಸಂಬಂಧ ಸಿಸಿಬಿ ಪೊಲೀಸರ ವಿರುದ್ಧ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮಾನವ ಹಕ್ಕುಗಳ ಆಯೋಗವು ಆದೇಶಿಸಿದೆ.

ಪ್ರಕರಣದ ಆರೋಪಿ ವಿಜಯ್ ಡೆನ್ನಿಸ್ ಎಂಬವರು ಮಾನವ ಹಕ್ಕುಗಳು ಆಯೋಗಕ್ಕೆ ದೂರು ನೀಡಿದ್ದರು. ದೂರು ಆಧರಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಆಯೋಗವು ಸೂಚನೆ ನೀಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ವಿಚಾರಣೆ ನಡೆಸಿ ನ.21ರ ಒಳಗೆ ವರದಿ ಸಲ್ಲಿಸುವಂತೆ ಆಯೋಗ ಸೂಚನೆ ನೀಡಿದೆ. ಹೆಬ್ಬಗೋಡಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿಯನ್ನು ಸಿಸಿಬಿ ಅಧಿಕಾರಿಗಳು ಸಲ್ಲಿಸಿದ್ದರು. ತನಿಖೆ ವೇಳೆ ಪ್ರತಿ ಆರೋಪಿಯಿಂದ ₹10 ಲಕ್ಷ ಪಡೆಯಲಾಗಿದೆ. ಸುಳ್ಳು ವೈದ್ಯಕೀಯ ಸಾಕ್ಷ್ಯ ಸೃಷ್ಟಿಸಿ ಸಹಿ ಹಾಕುವಂತೆ ಸಿಸಿಬಿ ಪೊಲೀಸರು ಒತ್ತಡ ಹೇರಿದ್ದರು. ಮಹಿಳಾ ಆರೋಪಿಗಳನ್ನು ಮಂಚಕ್ಕೆ ಕರೆದಿದ್ದರು ಎಂದು ಆರೋಪಿಸಿ ದೂರು ನೀಡಲಾಗಿತ್ತು.



ನ.30ಕ್ಕೆ ಒಟಿಎಸ್ ಅಂತ್ಯ • ವಿಸ್ತರಣೆಗೆ ಅವಕಾಶ ಇಲ್ಲ: ಬಿಬಿಎಂಪಿ ಮುಖ್ಯ ಆಯುಕ್ತ

ಬಾಕಿ ಆಸ್ತಿ ತೆರಿಗೆ: ದುಪ್ಪಟ್ಟಿಗಿಂತ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆ ನವೆಂಬರ್ ಅಂತ್ಯಕ್ಕೆ ಕೊನೆಯಾಗಲಿದ್ದು, ನಂತರ ಸುಸ್ತಿದಾರರು ದುಪ್ಪಟ್ಟಿಗಿಂತ ಹೆಚ್ಚು ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಒಟಿಎಸ್ ಮೂಲಕ ಬಡ್ಡಿ ಹಾಗೂ ದಂಡಕ್ಕೆ ವಿನಾಯಿತಿ ನೀಡಲಾಗಿದೆ. ಈ ಅವಕಾಶ ಮತ್ತೆ ಸಿಗುವುದಿಲ್ಲ. ಕೊನೆಯ ದಿನಗಳಲ್ಲಿ ಇನ್ನೆರಡು ದಿನ ಸಮಯ ಕೊಡಿ ಎಂದರೆ ಅದಕ್ಕೆ ಅವಕಾಶ ಇರುವುದಿಲ್ಲ' ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

ಬಿಬಿಎಂಪಿ ಸುದ್ದಿ

ಒಟಿಎಸ್ ಯೋಜನೆಯಡಿ ಬಾಕಿ ಆಸ್ತಿ ತೆರಿಗೆ ₹25 ಸಾವಿರ ಇದ್ದರೆ, ಯೋಜನೆ ಅವಧಿ ಮುಗಿದ ಮೇಲೆ ಕನಿಷ್ಠ ₹63 ಸಾವಿರ ಪಾವತಿಸಬೇಕಾಗುತ್ತದೆ. ಬಡ್ಡಿ, ದಂಡಕ್ಕೆಲ್ಲ ಇದೀಗ ವಿನಾಯಿತಿ ಇದ್ದು, ಕೂಡಲೇ ಆಸ್ತಿದಾರರು ತೆರಿಗೆಯನ್ನು ಪಾವತಿಸಿ ಹೆಚ್ಚಿನ ಹೊರೆಯನ್ನು ತಗ್ಗಿಸಿಕೊಳ್ಳಬಹುದು ಎಂದು ಹೇಳಿದರು.

ಬೀಗಮುದ್ರೆ: ಅತಿಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಣಿಜ್ಯ ಕಟ್ಟಡಗಳಿಗೆ ಬೀಗಮುದ್ರೆ ಹಾಕಿ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ಇನ್ನು ವೇಗ ಪಡೆಯಲಿದೆ ಎಂದರು.

ಸ್ವಯಂ ಆಸ್ತಿ ತೆರಿಗೆ ಘೋಷಣೆಯಂತೆ (ಎಸ್ಎಎಸ್) ನಿಗದಿಯಾಗಿರುವ ತೆರಿಗೆಯನ್ನು ಪುನರ್‌ವಿಮರ್ಶೆ ಮಾಡಿದಾಗ, ತಪ್ಪು ಕಂಡು ಬಂದಿದ್ದರೆ ಅದನ್ನು ನಮೂದಿಸಿ ತೆರಿಗೆ ವಸೂಲಿಗೆ ನೋಟಿಸ್ ನೀಡಲಾಗುತ್ತಿದೆ ಎಂದರು.

ಒತ್ತುವರಿ ತೆರವು: 'ನಗರದಲ್ಲಿರುವ ರಾಜಕಾಲುವೆಗಳ ಬಫರ್ ವಲಯ ನಿಗದಿ ಮಾಡಿದ್ದೇವೆ. ಈ ಪ್ರದೇಶಗಳಲ್ಲಿ ಅಕ್ರಮಕ್ಕೆ ಅವಕಾಶ ನೀಡಿದರೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ತುಷಾರ್ ಗಿರಿನಾಥ್ ತಿಳಿಸಿದರು. ಕಂದಾಯ ಇಲಾಖೆಯ ದಾಖಲೆಗಳಂತೆ ಕೆಲವು ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಿದರೆ ಪ್ರಯೋಜನಕ್ಕೆ ಬರುವುದಿಲ್ಲ. ಪರ್ಯಾಯ ರಾಜಕಾಲುವೆಗಳಾಗಿದ್ದು, ಅವುಗಳಲ್ಲಿ ನೀರು ಹರಿಯುತ್ತಿದೆ. ಹೀಗಾಗಿ, ಆ ಸಮಸ್ಯೆಯನ್ನು ಕಂದಾಯ ಇಲಾಖೆಯೇ ನಿವಾರಿಸಿಕೊಳ್ಳಲು ತಿಳಿಸಲಾಗಿದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳಬಹುದು ಎಂದರು.

ಆಸ್ತಿ ತೆರಿಗೆ ಸಂಗ್ರಹ ಅಂಕಿ–ಅಂಶ

ವಲಯ	2024–25ರ ಗುರಿ	ನ.9ರವರೆಗಿನ ಸಂಗ್ರಹ	ಶೇಕಡ
ಪಶ್ಚಿಮ	₹610.39 ಕೋಟಿ	₹377.09 ಕೋಟಿ	61.78
ಬೊಮ್ಮನಹಳ್ಳಿ	₹585.11 ಕೋಟಿ	₹363.76 ಕೋಟಿ	62.17
ಪೂರ್ವ	₹891.89 ಕೋಟಿ	₹637.08 ಕೋಟಿ	71.43
ಆರ್.ಆರ್. ನಗರ	₹434.35 ಕೋಟಿ	₹284.18 ಕೋಟಿ	65.43
ದಾಸರಹಳ್ಳಿ	₹164.95 ಕೋಟಿ	₹110.40 ಕೋಟಿ	66.93
ದಕ್ಷಿಣ	₹769.50 ಕೋಟಿ	₹507.09 ಕೋಟಿ	65.90
ಯಲಹಂಕ	₹445.24 ಕೋಟಿ	₹380.07 ಕೋಟಿ	85.36
ಮಹದೇವಪುರ	₹1,309.04 ಕೋಟಿ	₹974.12 ಕೋಟಿ	74.41
ಒಟ್ಟು	₹5,210.48 ಕೋಟಿ	₹3,633.78 ಕೋಟಿ	69.74

ದಾಖಲೆ ಸಂಗ್ರಹವಾಗಿದ್ದರೂ ಕಡಿಮೆಯಾಗದ ಬಾಕಿ

ಬಿಬಿಎಂಪಿಯ 2024–25ನೇ ಸಾಲಿನ ಆಸ್ತಿ ತೆರಿಗೆ ಗುರಿಯಲ್ಲಿ ಶೇ 69.74ರಷ್ಟು ಸಾಧನೆ ಮಾಡಿ, ₹3,633 ಕೋಟಿ ಸಂಗ್ರಹಿಸಿದ್ದರೂ ಸುಸ್ತಿದಾರರಿಂದ ಇನ್ನೂ ₹397.29 ಕೋಟಿ ಸಂಗ್ರಹವಾಗಬೇಕಿದೆ.

2.34 ಲಕ್ಷ ಆಸ್ತಿಗಳ ಮಾಲೀಕರು ಸುಸ್ತಿದಾರರಾಗಿದ್ದಾರೆ. 2024ರ ಏಪ್ರಿಲ್ 1ರಂತೆ 3.95 ಲಕ್ಷ ಸುಸ್ತಿದಾರರು ₹733.61 ಕೋಟಿ ಆಸ್ತಿ ತೆರಿಗೆ ಪಾವತಿಸಬೇಕಾಗಿತ್ತು. ಈ ಆರ್ಥಿಕ ವರ್ಷದಲ್ಲಿ 1.60 ಲಕ್ಷ ಸುಸ್ತಿದಾರರು ₹336 ಕೋಟಿಯನ್ನು ಪಾವತಿಸಿದ್ದಾರೆ.

82 ಸಾವಿರ ಆಸ್ತಿ ಮುಟ್ಟುಗೋಲು: ಆಸ್ತಿ ತೆರಿಗೆ ಸುಸ್ತಿದಾರರಿಗೆ ಹಲವು ಬಾರಿ ನೋಟಿಸ್ ಜಾರಿ ಮಾಡಲಾಗಿದ್ದರೂ, ತೆರಿಗೆ ಪಾವತಿಸಿಲ್ಲ. ಹೀಗಾಗಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈವರೆಗೆ 82,602 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಆಸ್ತಿ ತೆರಿಗೆ ಪಾವತಿಸದ 6,069 ವಾಣಿಜ್ಯ ಕಟ್ಟಡಗಳಿಗೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬೀಗಮುದ್ರೆ ಹಾಕಲಾಗಿದೆ. ಒಂದು ವಾರದಲ್ಲಿ 175 ಕಟ್ಟಡಗಳಿಗೆ ಬೀಗ ಹಾಕಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

ಆಸ್ತಿ ತೆರಿಗೆಯನ್ನು ತಪ್ಪಾಗಿ ಪಾವತಿಸುತ್ತಿದ್ದ 15,731 ಸ್ವತ್ತುಗಳ ತೆರಿಗೆಯನ್ನು ಪುನರ್ ವಿಮರ್ಶೆ ಮಡಲಾಗಿದ್ದು, ₹398.49 ಕೋಟಿ ವ್ಯತ್ಯಾಸ ಮೊತ್ತ ಪಾವತಿಯಾಗಬೇಕಿದೆ. 7,145 ಆಸ್ತಿಗಳಿಂದ ₹101.94 ಕೋಟಿ ಸಂಗ್ರಹವಾಗಿದೆ. ಇನ್ನೂ 10,641 ಆಸ್ತಿಗಳಿಂದ ₹192.66 ಕೋಟಿ ಪಾವತಿಯಾಗಬೇಕಿದೆ ಎಂದರು.

ಬೆಂಗಳೂರು ಒನ್‌ನಲ್ಲಿ ಇ–ಖಾತಾ

ಆಸ್ತಿ ಮಾಲೀಕರು ಇ–ಖಾತಾ ಪಡೆಯುವ ವ್ಯವಸ್ಥೆಯನ್ನು ಇನ್ನಷ್ಟು ಸರಳೀಕರಣ ಮಾಡಲಾಗಿದೆ. 'ಬೆಂಗಳೂರು ಒನ್' ಕೇಂದ್ರಗಳಲ್ಲೂ ಇ–ಖಾತಾ ಪಡೆಯಬಹುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಇ–ಖಾತಾ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಹಲವರು ಸುಮಾರು ₹5 ಸಾವಿರ ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಇ–ಖಾತಾಗೆ ಅಗತ್ಯವಿರುವ ಅರ್ಜಿ, ದಾಖಲೆಗಳನ್ನು ಆನ್‌ಲೈನ್‌ನಲ್ಲಿ 'ಬೆಂಗಳೂರು ಒನ್ ಕೇಂದ್ರದಲ್ಲಿ' ಅಪ್‌ಲೋಡ್ ಮಾಡಲಾಗುತ್ತದೆ. ಈ ಸೇವೆಗೆ ₹45 ವೆಚ್ಚ ನಿಗದಿಪಡಿಸಲಾಗಿದೆ ಎಂದರು.

ಇ-ಖಾತಾ ಪಡೆಯಲು ಅರ್ಜಿ ಹಾಕುವ ಹಾಗೂ ದಾಖಲೆಗಳನ್ನು ಅಪ್‌ಲೋಡ್ ಪ್ರಕ್ರಿಯೆಯನ್ನು ಪಾಲಿಕೆಯ ಯುಟ್ಯೂಬ್ ಲಿಂಕ್ https://youtube.com/@bbmpcares?si=YStwr7xLhX5aRxFT ನಲ್ಲಿ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ವಿಡಿಯೊ ಮೂಲಕ ವಿವರಿಸಲಾಗಿದೆ ಎಂದರು.

ಇ-ಖಾತಾ ಪಡೆಯಲು ತಾಂತ್ರಿಕ ಸಮಸ್ಯೆಯಿದ್ದರೆ ಅದನ್ನು ಬಗೆಹರಿಸಲು ವಲಯವಾರು 13 ಸಹಾಯ ತಂಡಗಳನ್ನು ರಚಿಸಲಾಗಿದೆ. ಸಹಾಯ ತಂಡಗಳ ಸಂಪರ್ಕಕ್ಕೆ ಮೊಬೈಲ್ ಸಂಖ್ಯೆಗಳ ವಿವರ ಹೀಗಿದೆ... **ಬೊಮ್ಮನಹಳ್ಳಿ ವಲಯ:** 9480683182 /9480683712, **ದಾಸರಹಳ್ಳಿ ವಲಯ:** 9480683710, **ಮಹಾದೇವಪುರ ವಲಯ:** 9480683718 / 9480683720, **ಪೂರ್ವ ವಲಯ:** 9480683203, **ಪಶ್ಚಿಮ ವಲಯ:** 9480683653 / 9480683204, **ದಕ್ಷಿಣ ವಲಯ:** 9480683638 / 9480683179, **ರಾಜರಾಜೇಶ್ವರಿ ನಗರ ವಲಯ:** 9480683576, **ಯಲಹಂಕ ವಲಯ:** 9480683645 / 9480683516.



ಮಲ್ಲೇಶ್ವರದಲ್ಲಿ ಕಾಡುಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ ಮಾರಾಟಕ್ಕಿದ್ದ ಕಡಲೆಕಾಯಿಗಳನ್ನು ಮಹಿಳೆಯರು ಖರೀದಿಸಿದರು ಪ್ರಜಾವಾಣಿ ಚಿತ್ರ

ಮಲ್ಲೇಶ್ವರ: ಕಡಲೆಕಾಯಿ ಪರಿಷೆ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಮರಾಂಭ ಸಮೇತ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಹಾಗೂ ಕಾಡು ಮಲ್ಲೇಶ್ವರ ಬಳಗದಿಂದ ನವೆಂಬರ್ 15ರಿಂದ 18ರವರೆಗೆ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ 200ನೇ ಹುಣ್ಣಿಮೆ ಹಾಡು ಹಾಗೂ ಎಂಟನೇ ವರ್ಷದ ಕಡಲೆಕಾಯಿ ಪರಿಷೆ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ, 'ನಗರದ ಜನರಿಗೆ ಗ್ರಾಮೀಣ ಸಂಸ್ಕೃತಿ, ಜೀವನ ಪದ್ಧತಿಯನ್ನು ಪರಿಚಯಿಸಲು ಕಾರ್ತಿಕ ಮಾಸದಲ್ಲಿ ನಾಲ್ಕು ದಿನ ಕಡಲೆಕಾಯಿ ಪರಿಷೆ ಹಮ್ಮಿಕೊಳ್ಳಲಾಗುತ್ತಿದೆ. ಕಡಲೆಕಾಯಿ ಪರಿಷೆಯಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಿಂದ ರೈತರು ಕಡಲೆಕಾಯಿ ತಂದು ಮಾರಾಟ ಮಾಡಲಿದ್ದಾರೆ. 400ಕ್ಕೂ ಹೆಚ್ಚು ಮಳಿಗೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. 8 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿದರು.

ನ. 15ರಂದು ಸಂಜೆ 4.30ಕ್ಕೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರು ಕಡಲೆಕಾಯಿ ಪರಿಷೆಗೆ ಚಾಲನೆ ನೀಡಿಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ. ಸಂಜೆ 6.30ಕ್ಕೆ ಹುಣ್ಣಿಮೆ ಹಾಡು–200 ಕಾರ್ಯಕ್ರಮದಲ್ಲಿ 'ಹರಿದಾಸ–ಶಿವಶರಣ ಸಂಗಮ ಸಂಗೀತ' ಕಾರ್ಯಕ್ರಮದಲ್ಲಿ ಗಾಯಕರಾದ ರವೀಂದ್ರ ಸೊರಗಾಂವಿ, ಸಾಯಿತೇಜಸ್ ಚಂದ್ರಶೇಖರ್ ಅವರು ವಚನ ಗಾಯನ–ದಾಸರ ಪದಗಳ ಗಾಯನ ಪ್ರಸ್ತುತಿಪಡಿಸಲಿದ್ದಾರೆ' ಎಂದರು.

'ನ. 16ರಂದು ಸಂಜೆ 6.30ಕ್ಕೆ ಸಂಗೀತ ನಿರ್ದೇಶಕ ಹಂಸಲೇಖ ಮತ್ತು ತಂಡದಿಂದ 'ಹಾಡು ಮಲ್ಲೇಶ್ವರ' ಸಂಗೀತ ಕಾರ್ಯಕ್ರಮ ನಡೆಯಲಿದೆ. ನ. 17ರಂದು ಬೆಳಿಗ್ಗೆ 11ಕ್ಕೆ ಮಧು ಮನೋಹರನ್ ಮತ್ತು ಕಾರ್ತೀಕ್ ಪಾಂಡವಪುರ ತಂಡದಿಂದ 'ಅಪರೂಪದ ಭಾವಗೀತೆಗಳ' ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಂಜೆ 6.30ಕ್ಕೆ ಸೃಷ್ಟಿ ನಿರಂತರ ಮತ್ತು ತಂಡದವರು ಡಾ.ರಾಜ್ ನೆನಪಿನಲ್ಲಿ' ವಿಶೇಷ ಸಂಗೀತ ಕಛೇರಿ ನೀಡಲಿದ್ದಾರೆ. ನ. 18ರಂದು ಸಂಜೆ 4.30ಕ್ಕೆ ಕಾಡು ಮಲ್ಲಿಕಾರ್ಜುನ ಸ್ವಾಮಿಗೆ ಕಡಲೆಕಾಯಿಯಿಂದ ಅಭಿಷೇಕ ನಡೆಯಲಿದ್ದು, ಸಂಜೆ 6ಕ್ಕೆ ಫಯಾಜ್‌ಖಾನ್ ಅವರಿಂದ ಸಾರಂಗಿ ವಾದನ ನಡೆಯಲಿದೆ' ಎಂದರು.

ಕಾಡು ಮಲ್ಲೇಶ್ವರ ಬಳಗದ ಅನೂಪ್ ಅಯ್ಯಂಗಾರ್ ಉಪಸ್ಥಿತರಿದ್ದರು.

ಇ–ಖಾತಾ: ಸಚಿವರ ಸಭೆ ನಾಳೆ

ಬೆಂಗಳೂರು: ರಾಜ್ಯದಲ್ಲಿ ಇ–ಖಾತೆ ಕಡ್ಡಾಯಗೊಳಿಸಿದ ಬೆನ್ನಲ್ಲೇ ಉಂಟಾಗಿರುವ ಗೊಂದಲ ಮತ್ತು ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸುವ ಉದ್ದೇಶದಿಂದ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಬುಧವಾರ ಸಂಬಂಧಪಟ್ಟ ಇಲಾಖೆ ಸಚಿವರು ಮತ್ತು ಅಧಿಕಾರಿಗಳ ಸಭೆ ಕರೆದಿದ್ದಾರೆ.

ಈ ಸಭೆಯಲ್ಲಿ ನಗರಾಭಿವೃದ್ಧಿ ಸಚಿವರು ಬೈರತಿ ಸುರೇಶ್ ಮತ್ತು ಮತ್ತು ಪೌರಾಡಳಿತ ಸಚಿವ ರಹೀಂಖಾನ್ ಅವರು ಭಾಗವಹಿಸಲಿದ್ದಾರೆ. ಸ್ಥಿರಾಸ್ತಿ ದಸ್ತಾವೇಜುಗಳ ನೋಂದಣಿಗಾಗಿ ಇ–ಖಾತಾ ತುರ್ತಾಗಿ ವಿತರಿಸುವ ಕುರಿತು ಚರ್ಚೆ ನಡೆಯಲಿದೆ. ಮಂಗಳೂರು ಮತ್ತು ಇತರ ಕೆಲವು ಕಡೆಗಳಲ್ಲಿ ವಿತರಿಸುತ್ತಿರುವ ಇ–ಆಸ್ತಿ ಖಾತೆಗಳಲ್ಲಿ ಸ್ಥಿರಾಸ್ತಿ ಅಳತೆಯ ವಿವರಗಳು ನಮೂದಾಗದೇ ಇರುವುದರಿಂದ ನೋಂದಣಿಗೆ ಸಮಸ್ಯೆ ಆಗುತ್ತಿರುವ ಬಗ್ಗೆಯೂ ಸಮಾಲೋಚನೆ ನಡೆಯಲಿದೆ.

ಕೃಷಿ ಜಮೀನು ಭೂಪರಿವರ್ತನೆ ಆದ ನಂತರ ನಿವೇಶನ ಬಿಡುಗಡೆಗೊಳಿಸುವ ಮುನ್ನ ಉದ್ಯಾನವನ, ಸಿಎ ನಿವೇಶನ ಮತ್ತು ರಸ್ತೆ ಜಮೀನುಗಳ ಪರಿತ್ಯಾಜನ ಪತ್ರ ನೀಡಲು ಅನುಕೂಲವಾಗುವಂತೆ ಇರುವ ಇ–ಖಾತಾ ಮಂಜೂರು ಮಾಡುವ ಕುರಿತು ಚರ್ಚಿಸಲಾಗುತ್ತದೆ.

ಮಹಾನಗರ ಪಾಲಿಕೆಗಳಲ್ಲಿ ನೀಡುತ್ತಿರುವ ಟಿಡಿಆರ್‌ಗಳನ್ನು ಪುನರ್ ಉಪಯೋಗಿಸದಂತೆ ತಡೆಯಲು ಟಿಡಿಆರ್‌ಗಳಿಗೂ ಇ– ಖಾತೆಯನ್ನು ವಿತರಿಸುವ ಕುರಿತು, ಭೂಪರಿವರ್ತನೆ ನಂತರ ಸಂಬಂಧಿಸಿದ ಯೋಜನಾ ಪ್ರಾಧಿಕಾರದಿಂದ ಲೇಔಟ್ ಪ್ಲಾನ್‌ಗೆ ಅನುಮತಿ ಪಡೆಯದೇ ಜಮೀನನ್ನು ಮಾರಾಟ ಮಾಡಬೇಕಾಗಿದ್ದಲ್ಲಿ ಅಂತಹ ಆಸ್ತಿಗಳಿಗೆ ಉಂಡೆ ಖಾತೆ ಮಾಡುವುದು ಹಾಗೂ ಇಂತಹ ಜಮೀನುಗಳನ್ನು ಮಾಡುವಾಗ ಮಾರ್ಗಸೂಚಿ ದರ ನಿಗದಿಪಡಿಸುವ ವಿಚಾರವೂ ಚರ್ಚೆಯಾಗಲಿದೆ.

'ಅನಂತ ಸ್ಮೃತಿ ನಡಿಗೆ' ಇಂದು

ಬೆಂಗಳೂರು: ಕೇಂದ್ರದ ಮಾಜಿ ಸಚಿವ ಅನಂತಕುಮಾರ್ ಅವರ ಪುಣ್ಯಸ್ಮರಣೆಯ ಅಂಗವಾಗಿ ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನದ ವತಿಯಿಂದ ಇದೇ 12ರಂದು 'ಅನಂತ ಸ್ಮೃತಿ ನಡಿಗೆ' ಪಂಜಿನ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಸಂಜೆ 5ಗಂಟೆಗೆ ಸೌತ್‌ಎಂಡ್ ವೃತ್ತದಲ್ಲಿರುವ ಅನಂತಕುಮಾರ್ ಪ್ರೇರಣಾ ಕೇಂದ್ರ ಅನಂತ್ ಸ್ಮೃತಿ ವನ, ಲಾಲ್‌ಬಾಗ್ ಪಶ್ಚಿಮ ದ್ವಾರ, ಗಾಂಧಿ ಬಜಾರ್, ಪ್ರೇರಣಾ ಕೇಂದ್ರದ ಮಾರ್ಗಗಳಲ್ಲಿ ಪಂಜಿನ ಮೆರವಣಿಗೆ ನಡೆಯಲಿದೆ.

'ಬಲ್ಕ್ ಜನರೇಟರ್'ಗಳಲ್ಲಿ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಕೊರತೆ

ತ್ಯಾಜ್ಯ: ಅಪಾರ್ಟ್‌ಮೆಂಟ್‌ಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯನ್ನು ಹೊಂದಿರದ ಅಪಾರ್ಟ್‌ಮೆಂಟ್‌ಗಳಿಗೆ ದುಪ್ಪಟ್ಟು ದಂಡ ವಿಧಿಸಲು ಬಿಬಿಎಂಪಿ ನಿರ್ಧರಿಸಿದೆ.

'ಘನತ್ಯಾಜ್ಯ ನಿರ್ವಹಣೆ ನಿಯಮದ ಪ್ರಕಾರ, 100 ಕೆ.ಜಿಗಿಂತಲೂ ಹೆಚ್ಚು ತ್ಯಾಜ್ಯ ಉತ್ಪಾದನೆಯಾಗುವ (ಬಲ್ಕ್ ಜನರೇಟರ್) ಅಪಾರ್ಟ್‌ಮೆಂಟ್‌ಗಳಲ್ಲಿ, ಅದರ ನಿರ್ವಹಣೆ ವ್ಯವಸ್ಥೆ ಇರಬೇಕು. ಆದರೆ, 'ಯಾರಿಗೋ ತ್ಯಾಜ್ಯ ಕೊಡುತ್ತಿದ್ದೇವೆ' ಎಂದು ತಪ್ಪು ಮಾಹಿತಿ ನೀಡಲಾಗುತ್ತಿದೆ. ಇವೆಲ್ಲವನ್ನೂ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

'ನಮ್ಮ ಸಿಬ್ಬಂದಿ ತಪಾಸಣೆ ಮಾಡಿದ ಸಂದರ್ಭದಲ್ಲಿ, ಹಲವು ಬಲ್ಕ್ ಜನರೇಟರ್‌ಗಳು ಎಂಎಸ್‌ಜಿಪಿ ಇನ್‌ಫ್ರಾಟೆಕ್ ಸಂಸ್ಥೆಗೆ ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ, ಎಂಎಸ್‌ಜಿಪಿಯ ಸಾಮರ್ಥ್ಯ 750 ಟನ್. ಬಿಬಿಎಂಪಿ ವತಿಯಿಂದಲೇ ನಿತ್ಯವೂ 500 ಟನ್ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಇನ್ನುಳಿದ 250 ಟನ್ ಸಾಮರ್ಥ್ಯದಲ್ಲಿ ನಗರದ ಇಷ್ಟೊಂದು ಬಲ್ಕ್ ಜನರೇಟರ್‌ಗಳು ಹೇಗೆ ಅಲ್ಲಿ ವಿಲೇವಾರಿ ಮಾಡುತ್ತಿದ್ದಾರೆ. ಅಷ್ಟೊಂದು ಟಿಪ್ಪರ್‌ಗಳು ಅಲ್ಲಿಗೆ ಹೋಗುತ್ತಿವೆಯೇ ಎಂಬ ಪ್ರಶ್ನೆಗಳು ಎದುರಾಗಿವೆ. ಹೀಗಾಗಿ, ತಪಾಸಣೆ ಮಾಡಲಾಗುತ್ತಿದೆ' ಎಂದು ಹೇಳಿದರು.

'ಬಲ್ಕ್ ಜನರೇಟರ್‌ಗಳು ನಮ್ಮ ವ್ಯವಸ್ಥೆಗೆ ಬಾರದೆ ಅನೌಪಚಾರಿಕವಾಗಿ, ಘನತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದಾರೆ. ಕೆಲವರಿಗೆ ಹಣ ನೀಡುತ್ತಿದ್ದಾರೆ. ನಮ್ಮ ವಾಹನಗಳಲ್ಲೇ ಕಸ ಹಾಕುತ್ತಿದ್ದಾರೆ. ಅದು ಭೂಭರ್ತಿ ಪ್ರದೇಶಗಳಿಗೆ ಹೋಗುತ್ತಿದೆ' ಎಂದರು.

'ಅಪಾರ್ಟ್‌ಮೆಂಟ್‌ಗಳು ಘನತ್ಯಾಜ್ಯ ವಿಲೇವಾರಿ ವ್ಯವಸ್ಥೆಯನ್ನು ಹೊಂದಲೇಬೇಕು. ಯಾರು ಈ ವ್ಯವಸ್ಥೆಯನ್ನು ಹೊಂದಿಲ್ಲವೋ ಅವರಿಗೆ ಸಮಯ ನಿಗದಿ ಮಾಡಿ, ಅನುಷ್ಠಾನಕ್ಕೆ ಸೂಚಿಸಲಾಗುತ್ತದೆ. ಅಲ್ಲಿಯವರೆಗೆ ಅವರಿಂದ ದಂಡದ ರೂಪದಲ್ಲಿ ದುಪ್ಪಟ್ಟು ವೆಚ್ಚ ಪಡೆದುಕೊಂಡು ಬಿಬಿಎಂಪಿಯೇ ಕಸ ಸಂಗ್ರಹ ಮಾಡಲಿದೆ. ಘನತ್ಯಾಜ್ಯ ನಿರ್ವಹಣೆ ಕಂಪನಿಯಿಂದ ತ್ಯಾಜ್ಯ ವಿಲೇವಾರಿಗೆ ಎಷ್ಟು ಹಣ ನಿಗದಿಯಾಗಿದೆಯೋ ಅದಕ್ಕಿಂತ ಎರಡುಪಟ್ಟು ಹೆಚ್ಚು ಹಣ ಸಂಗ್ರಹಿಸಲಾಗುತ್ತದೆ' ಎಂದರು.

ಖಾಸಗಿ ಸಂಸ್ಥೆಗಳು ಘನತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪಿಸಲು ಅನುವು ಮಾಡಿಕೊಡಲು ಬಿಬಿಎಂಪಿ ನಿರ್ಧರಿಸಿದೆ. ಸಂಸ್ಥೆಗಳು ತಮ್ಮದೇ ಜಾಗ ಹಾಗೂ ಯಂತ್ರಗಳನ್ನು ಬಳಸಿಕೊಂಡು ಸಂಸ್ಕರಣೆ ಕಾರ್ಯ ಕೈಗೊಳ್ಳಬಹುದು. ಬಲ್ಕ್ ಜನರೇಟರ್‌ಗಳಿಂದ ತ್ಯಾಜ್ಯ ಪಡೆದುಕೊಳ್ಳಬಹುದು ಎಂದರು.



ದಕ್ಷಿಣದಲ್ಲಿ ದೂರು ಸ್ವೀಕಾರ ಇಂದು

ಜಯನಗರದಲ್ಲಿರುವ ಬಿಬಿಎಂಪಿ ದಕ್ಷಿಣ ವಲಯ ಆಯುಕ್ತರ ಕಚೇರಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮ ಮಂಗಳವಾರ ನಡೆಯಲಿದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಮುಖ್ಯ ಆಯುಕ್ತ ತುಷಾರ್ ಗಿರನಾಥ್ ಅವರು ಸಾರ್ವಜನಿಕರ ಕುಂದುಕೊರತೆ ಆಲಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ರೈಲ್ವೆ ಇಲಾಖೆಯಿಂದ ತೊಂದರೆ'

'ಓಕಳಿಪುರ ಮೇಲ್ಸೇತುವೆಯ ಪ್ರದೇಶದಲ್ಲಿ ರೈಲ್ವೆ ಇಲಾಖೆಯವರು ಕಾಮಗಾರಿ ಪೂರ್ಣಗೊಳಿಸುವವರೆಗೂ ಅಲ್ಲಿ ನೀರು ನಿಲ್ಲುವ ಸಮಸ್ಯೆ ಉಂಟಾಗುತ್ತದೆ. ಕಾಮಗಾರಿ ನಡೆಸಲು ₹40 ಕೋಟಿಯನ್ನು ಪಾವತಿಸಿದ್ದೇವೆ. ವೆಚ್ಚ ಹೆಚ್ಚಾಗಿದೆ ಎಂದು ಇನ್ನಷ್ಟು ಹಣ ಕೇಳುತ್ತಿದ್ದಾರೆ. ಅವರೊಂದಿಗೆ ಮತ್ತೊಮ್ಮೆ ಮಾತುಕತೆ ನಡೆಸಿ, ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಮನವೊಲಿಸಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಹೆಣ್ಣೂರು: ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ರೋಡ್ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಯುತ್ತಿರುವ ಕಾರಣದಿಂದ ಬುಧವಾರ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 3.30ರವರೆಗೆ ಈ ಕೇಂದ್ರದ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣ ಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ. ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿ.ಎಸ್.ಐ ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್, ಕನಕ ಶ್ರೀ ಲೇಔಟ್, ಗೆದ್ದಲಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿ.ಎಚ್.ಕೆ. ಇಂಡಸ್ಟ್ರೀಸ್, ಜಾನಕೀರಾಮ್ ಲೇಔಟ್, ವಡ್ಡರಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮ ವಿದ್ಯಾನಗರ, ಕೆ.ಆರ್.ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಮ್ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಆಂಧ್ರ ಕಾಲೊನಿ, ಮಂಜುನಾಥ್ ನಗರ, ಹೊರಮಾವು, ಅಗರ ಗ್ರಾಮ, ಪಟಾಲಮ್ಮ ದೇವಸ್ಥಾನ, ಎ.ಕೆ.ಆರ್ ಸ್ಕೂಲ್, ಹೊಸ ಮಿಲೇನಿಯಮ್ ಸ್ಕೂಲ್, ಲಕ್ಕಮ್ಮ ಲೇಔಟ್, ಪ್ರಕಾಶ್ ಗಾರ್ಡನ್, ಕ್ರಿಶ್ಚಿಯನ್ ಕಾಲೇಜು ರಸ್ತೆ, ಸುತ್ತಮುತ್ತಲಿನ ಪ್ರದೇಶಗಳು.

ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ವೃಷಭಾವತಿ 220 ಕೆ.ವಿ ವಿದ್ಯುತ್ ಸ್ಥಾವರ ಮತ್ತು ತಾತಗುಣಿ ವಿದ್ಯುತ್ ಸ್ಥಾವರಗಳ ನಡುವೆ ಪರಿಕರಗಳ ಬದಲಾವಣೆ ನಡೆಯುತ್ತಿರುವ ಕಾರಣ ಇದೇ 14ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30ವರೆಗೆ ಎಲ್ಲ ಹಂತಗಳ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಂಗಳೂರು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಎರಡು ವಿದ್ಯುತ್ ಸ್ಥಾವರಗಳ ನಡುವೆ ಹೈ ಲೆವೆಲ್ ಬಸ್ ಜಿಐಎಸ್ ಮತ್ತು ಇತರೆ ಪರಿಕರಗಳನ್ನು ತುರ್ತಾಗಿ ಬದಲಿಸುವ ಕಾರ್ಯ ನಡೆಯುತ್ತಿದೆ. ಈ ಕಾಮಗಾರಿ ಕೈಗೊಳ್ಳಲು ತಾತಗುಣಿ 220 ಕೆ.ವಿ ವಿದ್ಯುತ್ ಸ್ಥಾವರವನ್ನು 2 ಗಂಟೆ ಸ್ಥಗಿತಗೊಳಿಸಲಾಗುತ್ತದೆ. ಹೀಗಾಗಿ ಆ ಸಮಯದಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ ಎಲ್ಲ ಹಂತಗಳ ಜಲರೇಚಕ ಯಂತ್ರಾಗಾರಗಳು ಕಾರ್ಯನಿರ್ವಹಿಸುವುದಿಲ್ಲ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ದಯಾನಂದ ಸಾಗರ್ ಕಾಲೇಜು: ಉಳಿಕೆ ಸೀಟು 11

'ಸೀಟ್ ಬ್ಲಾಕಿಂಗ್' ಆರೋಪ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿ ಮೂಲಕ ಹಂಚಿಕೆ ಮಾಡಿದ್ದ ಎಂಜಿನಿಯರಿಂಗ್ ಸೀಟುಗಳಲ್ಲಿ ಉಳಿಕೆಯಾಗಿರುವುದು 11 ಮಾತ್ರ ಎಂದು ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿ ಹೇಳಿದೆ.

'ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟ್ ಬ್ಲಾಕಿಂಗ್ ಪ್ರಕರಣ ಕುರಿತು ಈಚೆಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ನೀಡಿದ್ದ ಹೇಳಿಕೆಯಲ್ಲಿ, 2024ನೇ ಸಾಲಿನ ಸೀಟು ಹಂಚಿಕೆಯ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಸೀಟು ಉಳಿಕೆಯಾದ ಕಾಲೇಜುಗಳ ಪಟ್ಟಿಯಲ್ಲಿ ದಯಾನಂದ ಸಾಗರ್ ಕಾಲೇಜು ಹೆಸರಿದೆ. ಆದರೆ, ಪತ್ರಿಕೆಗಳಲ್ಲಿ ಪ್ರಕಟವಾದಂತೆ ಕಾಲೇಜಿನಲ್ಲಿ ಉಳಿಕೆಯಾದ ಸೀಟುಗಳು 34 ಅಲ್ಲ, 11 ಅಷ್ಟೆ. ಕಂಪ್ಯೂಟರ್ ಹಾಗೂ ಆ ಸಂಬಂಧಿತ ಕೋರ್ಸ್‌ಗಳಲ್ಲಿ ಉಳಿಕೆಯಾಗಿರುವುದು 9 ಮಾತ್ರ. ಅವುಗಳಲ್ಲಿ ಇಬ್ಬರು ವಿದ್ಯಾರ್ಥಿಗಳು ಬೇರೆ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದಾರೆ' ಎಂದು ಕಾಲೇಜಿನ ಪ್ರಾಂಶುಪಾಲರಾದ ಬಿ.ಜಿ. ಪ್ರಸಾದ್ ಸ್ಪಷ್ಟನೆ ನೀಡಿದ್ದಾರೆ.

'ಬೇಡಿಕೆ ಇರುವ ಕೋರ್ಸ್‌ಗಳಿಗೆ ವಿದ್ಯಾರ್ಥಿ ಗಳು ಪ್ರವೇಶ ಪಡೆಯದೇ ಇರುವುದು, ಪ್ರವೇಶವನ್ನು ರದ್ದು ಮಾಡಿಕೊಂಡಿರುವುದಕ್ಕೂ, ಕಾಲೇಜಿಗೂ ಸಂಬಂಧ ಇಲ್ಲ. ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ಪಾತ್ರವೂ ಇರುವುದಿಲ್ಲ. ಅಂತಹ ಯಾವುದೇ ನಡೆಯನ್ನು ಪ್ರೋತ್ಸಾಹಿಸುವುದಿಲ್ಲ' ಎಂದು ಹೇಳಿದ್ದಾರೆ.

ಪಿಜಿ ಆಯುಷ್ ತಾತ್ಕಾಲಿಕ ಫಲಿತಾಂಶ ಪ್ರಕಟ

ಬೆಂಗಳೂರು: ಪಿಜಿ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ನೋಡಿಕೊಂಡು ನ.12ರ ಮಧ್ಯಾಹ್ನ 2ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಅಭ್ಯರ್ಥಿಗಳು, ಪೋಷಕರ ಜತೆ ಚರ್ಚಿಸಿ, ಚಾಯ್ಸ್ ದಾಖಲಿಸಬೇಕು.

ನಂತರ ಶುಲ್ಕ ಪಾವತಿಸಿ, ಕಾಲೇಜಿಗೆ ವರದಿ ಮಾಡಿಕೊಳ್ಳಲು ನ.14ರವರೆಗೆ ಅವಕಾಶ ಇರುತ್ತದೆ ಎಂದು ಪ್ರಾಧಿಕಾರ ಹೇಳಿದೆ.

ಸಂಪಗೋಡು ವಿಘ್ನರಾಜಗೆ 'ಗಾನ ವಾರಿಧಿ' ಪ್ರಶಸ್ತಿ

ಬೆಂಗಳೂರು: ವಿದ್ವಾನ್ ಎಂ.ಎ. ನರಸಿಂಹಾಚಾರ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ 'ಗಾನ ವಾರಿಧಿ' ಪ್ರಶಸ್ತಿಗೆ ಗಾಯಕ ಸಂಪಗೋಡು ವಿಘ್ನರಾಜ, ಶತಮಾನೋತ್ಸವ ವಿಶೇಷ ಪ್ರಶಸ್ತಿಗೆ ಗಾಯಕಿಯರಾದ ರಂಜನಿ ಮತ್ತು ಗಾಯತ್ರಿ ಅವರನ್ನು ಆಯ್ಕೆ ಮಾಡಲಾಗಿದೆ.

ಎಂ.ಎ. ನರಸಿಂಹಾಚಾರ್ ಮ್ಯೂಸಿಕ್ ಫೌಂಡೇಶನ್ ವತಿಯಿಂದ ನವೆಂಬರ್ 15ರಿಂದ 18ರ ವರೆಗೆ ಸಂಗೀತ ಉತ್ಸವ ಕಾರ್ಯಕ್ರಮ ನಡೆಯಲಿದೆ. ಯದುಗಿರಿ ಯತಿರಾಜ ಮಠದ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ನ. 15ರಂದು ಮಧುರೈ ಟಿ.ಎನ್. ಶೇಷಗೋಪಾಲನ್ ಅತಿಥಿಯಾಗಿರುವರು. ಎಂ.ಎ. ನರಸಿಂಹಾಚಾರ್ ಬಗೆಗಿನ ಸಾಕ್ಷ್ಯಚಿತ್ರ ಪ್ರದರ್ಶನಗೊಳ್ಳಲಿದೆ. ಗಾಯಕಿಯರಾದ ರಂಜನಿ ಮತ್ತು ಗಾಯತ್ರಿ ಅವರಿಗೆ ಶತಮಾನೋತ್ಸವ ವಿಶೇಷ ಪ್ರಶಸ್ತಿ ಪ್ರದಾನ ನಡೆಯಲಿದೆ. ಬಳಿಕ ಅವರಿಂದ ಸಂಗೀತ ಕಛೇರಿ ನಡೆಯಲಿದೆ.

ನ.16ರಂದು ಸಂಪಗೋಡು ವಿಘ್ನರಾಜ ಅವರಿಗೆ 'ಗಾನ ವಾರಿಧಿ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಸಮಾಜ ಸೇವಕರಾದ ರೇವತಿ ಕಾಮತ್ ಅತಿಥಿಗಳಾಗಿರುವರು. ಬಳಿಕ ವಿಘ್ನರಾಜ ಮತ್ತು ಸಹ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ನ.17ರಂದು ವಿದ್ಯಾನ್ ಶ್ರೀಕೃಷ್ಣ ಮೋಹನ್ ಮತ್ತು ರಾಮಕುಮಾರ್ ಮೋಹನ್ ಅವರಿಂದ ದ್ವಂದ್ವಗಾಯನ, ನ.18ರಂದು ಎಂ. ನಾಗರಾಜ್ ಮತ್ತು ಎಂ. ಮಂಜುನಾಥ್ ಅವರಿಂದ ದ್ವಂದ್ವಗಾಯನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನ್ಯಾಯಮೂರ್ತಿ ಮೈಕಲ್ ಡಿಕುನ್ಹ ಅವರನ್ನು ನಿಂದಿಸಿದ ಆರೋಪ

ಪ್ರಲ್ಹಾದ ಜೋಶಿ ವಿರುದ್ಧ ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ಅವರನ್ನು ಕಾಂಗ್ರೆಸ್ ಏಜೆಂಟ್ ಎಂದು ಕರೆದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಸಚಿವರಾದ ದಿನೇಶ್ ಗುಂಡೂರಾವ್ ಮತ್ತು ಕೃಷ್ಣ ಬೈರೇಗೌಡ ಅವರು ಸೋಮವಾರ ದೂರು ಸಲ್ಲಿಸಿದ್ದಾರೆ.

ರಾಜ್ಯಪಾಲರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ದಿನೇಶ್ ಗುಂಡೂರಾವ್, ಡಿಕುನ್ಹ ಅವರು ಅತ್ಯಂತ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದವರು. ಅವರ ಬಗ್ಗೆ ಪ್ರಲ್ಹಾದ ಜೋಶಿ ವೈಯಕ್ತಿಕ ನಿಂದನೆ ಮಾಡಿದ್ದಾರೆ. ಬೇಜವಾಬ್ದಾರಿ ಹೇಳಿಕೆ ನೀಡಿರುವ ಜೋಶಿ ಅವರು ಹೇಳಿಕೆ ಹಿಂದಕ್ಕೆ ಪಡೆದು, ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಸಚಿವರಾದ ದಿನೇಶ್ ಗುಂಡೂರಾವ್ ಮತ್ತು ಕೃಷ್ಣಬೈರೇಗೌಡ ದೂರು ಸಲ್ಲಿಸಿದರು.

'ಕೇಂದ್ರ ಸಚಿವರು ಎಂದಾಕ್ಷಣ ಏನು ಬೇಕಾದರೂ ಮಾತನಾಡಬಹುದು ಎಂಬ ಅಹಂಕಾರ ಪ್ರವೃತ್ತಿ ಜೋಶಿಯವರದು. ನ್ಯಾಯಮೂರ್ತಿ ಆಗಿದ್ದವರನ್ನು ಕಾಂಗ್ರೆಸ್ ಏಜೆಂಟ್ ಎಂದರೆ ಏನರ್ಥ? ರಾಜಕಾರಣಿಗಳ ಬಗ್ಗೆ ಮಾತನಾಡಲಿ. ಆದರೆ, ನ್ಯಾಯಮೂರ್ತಿಗಳ ವಿರುದ್ಧ ವೈಯಕ್ತಿಕ ನಿಂದನೆ ಸರಿಯಲ್ಲ' ಎಂದರು.

'ಡಿಕುನ್ಹ ಅವರ ಆಯೋಗ ಅಂತಿಮ ವರದಿ ಸಲ್ಲಿಸುವ ಮುನ್ನ ಅವರ ಮೇಲೆ ಒತ್ತಡ ತರುವ ಪ್ರಯತ್ನ ನಡೆಸಿದ್ದಾರೆ. ಕಾಂಗ್ರೆಸ್ ಏಜೆಂಟ್ ಎಂದು ಕರೆದಿರುವುದು ಒತ್ತಡ ತಂತ್ರದ ಒಂದು ಭಾಗ. ಈ ರೀತಿ ನಿಂದನೆ ಮಾಡಿದರೆ ಮುಂದೆ ಯಾರೂ ಕೂಡ ತನಿಖೆ ನಡೆಸುವ ಜವಾಬ್ದಾರಿ ತೆಗೆದುಕೊಳ್ಳಲು ಮುಂದೆ ಬರದಿರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ' ಎಂದು ದಿನೇಶ್ ಹೇಳಿದರು.

'ತನಿಖಾ ಆಯೋಗ ಕಾಯ್ದೆ 1952ರ ಪ್ರಕಾರ ಪ್ರಲ್ಹಾದ ಜೋಶಿ ಅವರ ಹೇಳಿಕೆ ಕಾನೂನು ಬಾಹಿರ. ಆರು ತಿಂಗಳವರೆಗೆ ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ ಈ ವಿಚಾರವನ್ನು ರಾಷ್ಟ್ರಪತಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲು ರಾಜ್ಯಪಾಲರಿಗೆ ದೂರು ಸಲ್ಲಿಸಲಾಗಿದೆ' ಎಂದರು.

'ರಾಜ್ಯಪಾಲರು ನಮ್ಮ ಅಹವಾಲುಗಳನ್ನು ತಾಳ್ಮೆಯಿಂದ ಆಲಿಸಿದ್ದು, ಈ ರೀತಿಯ ವೈಯಕ್ತಿಕ ಹೇಳಿಕೆಗಳನ್ನು ನೀಡುವುದು ಸರಿಯಲ್ಲ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು' ಎಂದು ದಿನೇಶ್ ವಿವರಿಸಿದರು.

ಬಿಜೆಪಿಯಿಂದ ದ್ವೇಷ ರಾಜಕಾರಣ: ಡಿಕೆಶಿ

'ನ್ಯಾಯಮೂರ್ತಿ ಡಿಕುನ್ಹ ಆಯೋಗ ಸರ್ಕಾರದ ಏಜೆಂಟ್ ನಂತೆ ನಡೆದುಕೊಳ್ಳುತ್ತಿದೆ' ಎಂಬ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, 'ಅವರ (ಬಿಜೆಪಿ) ಪರವಾಗಿ ವರದಿ ಕೊಟ್ಟರೆ ಎಲ್ಲವೂ ನ್ಯಾಯ ಬದ್ಧವಾಗಿರುತ್ತವೆ. ಅವರ ವಿರುದ್ಧವಾಗಿ ನೀಡುವ ವರದಿ ಬಗ್ಗೆ ಹೀಗೆ ಆರೋಪ ಮಾಡುತ್ತಾರೆ. ದ್ವೇಷ ರಾಜಕಾರಣ ಮಾಡುತ್ತಿರುವವರು ಬಿಜೆಪಿಯವರು' ಎಂದು ಕಿಡಿಕಾರಿದರು.

ಅತ್ಯಂತ ಬೇಜವಾಬ್ದಾರಿ ಜನ: ಬೆಸ್ಕಾಂ ಅಧಿಕಾರಿಗಳಿಗೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ತರಾಟೆ

ಇನ್ನೆಷ್ಟು ಜೀವ ತೆಗೆಯುತ್ತೀರಿ?: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಸ್ಕಾಂ (ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ) ಅಧಿಕಾರಿಗಳು ಅತ್ಯಂತ ಬೇಜವಾಬ್ದಾರಿ ಜನ' ಎಂದು ಕಿಡಿ ಕಾರಿರುವ ಹೈಕೋರ್ಟ್, 'ಇವರಿಲ್ಲಿ ಪಾದಚಾರಿಗಳ ಜೀವವನ್ನು ಸುಲಭವಾಗಿ ತೆಗೆಯುತ್ತಲೇ ಇದ್ದಾರೆ. ಇಂಥವರಿಗೆ ಕಠಿಣ ಶಿಕ್ಷೆಯ ಅಗತ್ಯವಿದೆ' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

'ನನ್ನ ವಿರುದ್ಧ ದಾವಣಗೆರೆ ಜಿಲ್ಲೆ ಜಗಳೂರು ಪಟ್ಟಣದಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ಜಗಳೂರು ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ಜಿ.ಎಂ.ಪ್ರವೀಣ್ (46), ವಿಭಾಗೀಯ ಅಧಿಕಾರಿ ಎಸ್.ಗಂಗಾಧರ ತಿಲಕ್ (56) ಮತ್ತು ಪಟ್ಟಣದ ಲೈನ್‌ಮನ್ ಅಹ್ಮದ್ ಸೋಮಲಾಪುರ (33) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿಯನ್ನು ವಿಚಾರಣೆಗೆ ಕೂಗುತ್ತಿದ್ದಂತೆಯೇ ನ್ಯಾಯಮೂರ್ತಿಗಳು 'ಅರ್ಜಿದಾರರು ಬೆಸ್ಕಾಂ ಉದ್ಯೋಗಿಗಳಲ್ಲವೇ' ಎಂದು ಅವರ ಪರ ವಕೀಲರನ್ನು ಪ್ರಶ್ನಿಸಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು ಹೌದೆಂದು ತಮ್ಮ ವಾದಾಂಶ ವಿವರಿಸಲು ಮುಂದಾದರು.

ಇದನ್ನು ಅರ್ಧಕ್ಕೇ ತಡೆದ ನ್ಯಾಯಮೂರ್ತಿಯವರು, 'ಈ ಬೆಸ್ಕಾಂ ಅಧಿಕಾರಿಗಳು ದೂರು ಬಂದ ಕಡೆ ತಕ್ಷಣ ಹೋಗಿ ಸ್ಥಳ ಪರಿಶೀಲನೆ ಮಾಡುವುದಿಲ್ಲ. ಪಾದಚಾರಿಗಳ ಜೀವವನ್ನು ಸುಲಭವಾಗಿ ತೆಗೆದು ಬಿಡುತ್ತಾರೆ. ಇವರ ನಿರ್ಲಕ್ಷ್ಯದಿಂದ ಇನ್ನೆಷ್ಟು ಸಾವು ಸಂಭವಿಸಬೇಕು. ಪುಣ್ಯ ಎಂದರೆ ಈ ಪ್ರಕರಣದಲ್ಲಿ ಸಾವು ಸಂಭವಿಸಿಲ್ಲ. ಪ್ರಕರಣ ರದ್ದು ಕೋರಿರುವ ಈ ಅರ್ಜಿಗಳನ್ನು ನಾನು ಪರಿಗಣಿಸುವುದೇ ಇಲ್ಲ. ನನಗೇನಾದರೂ ಅವಕಾಶ ಸಿಕ್ಕರೆ ಅರ್ಜಿದಾರರಿಗೆ ಶಿಕ್ಷೆ ವಿಧಿಸುತ್ತೇನೆ' ಎಂದು ಮೌಖಿಕ ಎಚ್ಚರಿಕೆ ನೀಡಿದರು.

ಅರ್ಜಿದಾರರ ವಿರುದ್ಧದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಲು ನಿರಾಕರಿಸಿದ ನ್ಯಾಯಮೂರ್ತಿಗಳು ವಿಚಾರಣೆಯನ್ನು 2025ರ ಜನವರಿ ಮೊದಲ ವಾರಕ್ಕೆ ಮುಂದೂಡಿದರು.

ಪ್ರಕರಣವೇನು?: ಜಗಳೂರು ತಾಲ್ಲೂಕಿನ ಮೂಡಲ ಮಾಚಿಕೆರೆ ನಿವಾಸಿ 15 ವರ್ಷದ ಬಾಲಕ ಪಾಂಡುರಂಗ 2020ರ ಅಕ್ಟೋಬರ್ 27ರಂದು ಬೆಳಿಗ್ಗೆ ಹೊಲಕ್ಕೆ ಹೋಗುವಾಗ ಹಸುವೊಂದು ಹೊಲಕ್ಕೆ ನುಗ್ಗುತ್ತಿದ್ದುದನ್ನು ತಡೆಯಲು ಮುಂದಾಗಿದ್ದ. ಈ ವೇಳೆ ಆತನ ಕಾಲು ರಸ್ತೆ ಬದಿಯಲ್ಲಿನ ವಿದ್ಯುತ್ ಕಂಬದ ತಂತಿಗೆ ತಾಗಿ, ವಿದ್ಯುತ್ ಪ್ರವಹಿಸಿದೆ. ಇದರಿಂದ ಆತನ ಎರಡೂ ಕಾಲುಗಳು ಮತ್ತು ಕೈಗಳಿಗೆ ತೀವ್ರ ಗಾಯವಾಗಿದೆ' ಎಂದು ಆರೋಪಿಸಿ ಆತನ ತಂದೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.



ಮುಖ್ಯಾಂಶಗಳು

- ಅಧಿಕಾರಿಗಳ ಕಾರ್ಯವೈಖರಿಗೆ ನ್ಯಾಯಪೀಠ ಅಸಮಾಧಾನ
- ವಿಚಾರಣೆಗೆ ತಡೆ ನೀಡಲು ನಕಾರ

'ಅಧಿಕಾರಿಗಳು ಕ್ಯಾರೇ ಎನ್ನಲ್ಲ'



ವಿದ್ಯುತ್ ಪ್ರವಹಿಸುವ ತಂತಿಯು ತುಂಡಾಗಿ ರಸ್ತೆಯಲ್ಲಿ ಬಿದ್ದಿದೆ ಎಂದು ಸಾರ್ವಜನಿಕರು ದೂರು ನೀಡಿದರೂ ಅಧಿಕಾರಿಗಳು ಕ್ಯಾರೇ ಎನ್ನುವುದಿಲ್ಲ. ಇವರಿಗೇನಾಗಿದೆ? ಹಣವಿಲ್ಲವೇ? ಕಚೇರಿಯಲ್ಲೇ ಕುಳಿತು ಎಲ್ಲಾ ಕೆಲಸ ಮಾಡುತ್ತಾರೆ

ಎಂ. ನಾಗಪ್ರಸನ್ನ, ನ್ಯಾಯಮೂರ್ತಿ

459 ಅರ್ಜಿಗಳ ವಿಚಾರಣೆ

ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಸೋಮವಾರ (ನವೆಂಬರ್ 11) ತಮ್ಮ ಎಂದಿನ ಶೈಲಿಯಲ್ಲೇ 459 ಅರ್ಜಿಗಳ ವಿಚಾರಣೆಯನ್ನು ಮಧ್ಯಾಹ್ನದ ನಿಗದಿತ ಕಲಾಪದ ಅವಧಿಯೊಳಗೆ ಮುಗಿಸಿದರು.

ಕೋರ್ಟ್ ಹಾಲ್ 18ರ ನ್ಯಾಯಪೀಠದಲ್ಲಿದ್ದ ಅವರು 100ಕ್ಕೂ ಹೆಚ್ಚು ಪ್ರಕರಣಗಳಲ್ಲಿ ತಡೆ ಆದೇಶ ನೀಡಿದರೆ, 87 ಅರ್ಜಿಗಳನ್ನು ವಿಲೇವಾರಿ ಮಾಡಿದರು. ಫ್ರೆಶ್ ಮ್ಯಾಟರ್ ಲಿಸ್ಟ್‌ನಲ್ಲಿದ್ದ 182 ಅರ್ಜಿಗಳನ್ನು ಕ್ಷಿಪ್ರಗತಿಯಲ್ಲಿ ವಿಚಾರಣೆ ನಡೆಸಿದರು.

ಸುದ್ದಿ 2 ನಿಮಿಷ

'ಕಾರಾಗೃಹದಲ್ಲಿ ಧೂಮಪಾನ; ಜೈಲು ಅಧಿಕಾರಿಗಳು ಶಾಮೀಲು'

ಬೆಂಗಳೂರು: 'ಜೈಲು ಅಧಿಕಾರಿಗಳ ಸಹಕಾರವಿಲ್ಲದೆ ಕಾನೂನು ಬಾಹಿರ ವಸ್ತುಗಳು ಜೈಲಿನ ಒಳಗೆ ಹೋಗಲು ಸಾಧ್ಯವೇ ಇಲ್ಲ' ಎಂದು ಹೈಕೋರ್ಟ್ ಮೌಖಿಕವಾಗಿ ನುಡಿದಿದೆ.

'ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾ ಬಂದಿಯಾಗಿರುವ ವಿಲ್ಸನ್ ಗಾರ್ಡನ್ ನಾಗ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಜೈಲಿನ ಅಧಿಕಾರಿಗಳು ಶಾಮೀಲಾಗದಿದ್ದರೆ ಇಂತಹ ಘಟನೆಗಳು ನಡೆಯುವುದೇ ಇಲ್ಲ. ಆರೋಪಿಗಳಿಗೆ ಆ ಕುರ್ಚಿಗಳನ್ನು ಸರ್ಕಾರಿ ಅಧಿಕಾರಿಗಳೇ ಕೊಟ್ಟಿದ್ದಾರೆ. ಅದಕ್ಕೆ ಜೈಲಿನ ಅಧಿಕಾರಿಗಳ ಮೇಲೆ ವಿಚಾರಣೆ ನಡೆಸಲಿ. ಅರ್ಜಿದಾರರು ಕಾಫಿ ಕುಡಿಯುವುದು ತಪ್ಪೇ? ಅವರ ವಿರುದ್ಧ ಬಲವಂತದ ಕ್ರಮವನ್ನು ಏಕೆ ತೆಗೆದುಕೊಳ್ಳುತ್ತೀರಿ' ಎಂದು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರನ್ನು ಪ್ರಶ್ನಿಸಿದರು.

ಅಂತಿಮವಾಗಿ, 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದು' ಎಂದು ತನಿಖಾಧಿಕಾರಿಗಳಿಗೆ ನಿರ್ದೇಶಿಸಿ ವಿಚಾರಣೆಯನ್ನು ಡಿಸೆಂಬರ್ 13ಕ್ಕೆ ಮುಂದೂಡಿದರು.

ಇತ್ತೀಚೆಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಒಳಾವರಣದಲ್ಲಿ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಧೂಮಪಾನ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಜೊತೆ ಕುಳಿತಿದ್ದವರಲ್ಲಿ ವಿಲ್ಸನ್ ಗಾರ್ಡನ್ ನಾಗ ಕೂಡಾ ಇದ್ದರು. ಈ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸರು 2024ರ ಆಗಸ್ಟ್ 26ರಂದು ಕರ್ನಾಟಕ ಕಾರಾಗೃಹಗಳ ತಿದ್ದುಪಡಿ ಕಾಯ್ದೆ-2022ರ ಅಡಿ ದೂರು ದಾಖಲಿಸಿದ್ದರು.



ಐಬಿಸ್ ಹೋಟೆಲ್‌ಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಸಂಪಂಗಿರಾಮನಗರದ ಐಬಿಸ್ ಹೋಟೆಲ್‌ಗೆ ಸೋಮವಾರ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಬಂದಿದ್ದು, ಕೆಲ ಕಾಲ ಹೋಟೆಲ್‌ನಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಸೋಮವಾರ ರಾತ್ರಿ ಹೋಟೆಲ್‌ನ ಇ-ಮೇಲ್ ವಿಳಾಸಕ್ಕೆ ಹುಸಿ ಬೆದರಿಕೆ ಸಂದೇಶ ಬಂದಿತ್ತು.

'ಹೋಟೆಲ್ ಆವರಣದಲ್ಲಿ ಬಾಂಬ್ ಇಟ್ಟಿದ್ದೇವೆ. ಕೆಲ ಗಂಟೆಗಳಲ್ಲೇ ಸ್ಫೋಟವಾಗಲಿದೆ' ಎಂದು ಬರೆಯಲಾಗಿತ್ತು. ಸಂದೇಶ ಗಮನಿಸಿದ್ದ ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದರು.

ತಕ್ಷಣವೇ ಸ್ಥಳಕ್ಕೆ ತೆರಳಿದ ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಹೋಟೆಲ್ ಆವರಣದಲ್ಲಿ ಪರಿಶೀಲನೆ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢವಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಪಿಟಿಸಿಎಲ್: ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಆಗ್ರಹ

ಬೆಂಗಳೂರು: ಕೆಪಿಟಿಸಿಎಲ್ ಮತ್ತು ರಾಜ್ಯದ ವಿವಿಧ ಸರಬರಾಜು ಕಂಪನಿಗಳಲ್ಲಿ ಖಾಲಿ ಇರುವ 2,975 ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್ ಮ್ಯಾನ್ ಹುದ್ದೆಗಳ ಭರ್ತಿಗೆ ಎಸ್ಸೆಸ್ಸೆಲ್ಸಿ ಅಂಕಗಳು ಮತ್ತು ದೈಹಿಕ ಪರೀಕ್ಷೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬದಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸಬೇಕು ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆ ಆಗ್ರಹಿಸಿದೆ.

ಈ ಸಂಬಂಧ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರಿಗೆ ಮನವಿ ಸಲ್ಲಿಸಿರುವ ಸಂಘಟನೆ ಅಧ್ಯಕ್ಷ ಆರ್.ಕಾಂತಕುಮಾರ್, 'ರಾಜ್ಯದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ನ್ಯಾಯ ಸಮ್ಮತವಲ್ಲದ ನೇಮಕಾತಿ ಪ್ರಕ್ರಿಯೆಯು ನಿರುದ್ಯೋಗಿಗಳಲ್ಲಿ ಮತ್ತಷ್ಟು ಆಕ್ರೋಶ ಹೆಚ್ಚಿಸುತ್ತದೆ. ಎಸ್ಸೆಸ್ಸೆಲ್ಸಿ ಅಂಕಗಳ ಆಧಾರದ ಮೇಲಿನ ನೇಮಕಾತಿ ಪ್ರಕ್ರಿಯೆಯಿಂದ ಕೋವಿಡ್ ನಂತರದ ವರ್ಷಗಳಲ್ಲಿನ ಅಭ್ಯರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ' ಎಂದು ಹೇಳಿದ್ದಾರೆ.

'ಕೋವಿಡ್ ನಂತರದ ವರ್ಷಗಳಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿಗಳೇ ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಈಗಾಗಲೇ ಇದೇ ಹುದ್ದೆಗಳಿಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ. ಜೊತೆಗೆ ನೆರೆಹೊರೆ ರಾಜ್ಯಗಳಲ್ಲಿಯೂ ಇದೇ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ನೇಮಕಾತಿ ಮಾಡಲಾಗುತ್ತಿದೆ. ರಾಜ್ಯದಲ್ಲಿಯೂ ಇದೇ ನಿಯಮ ಅಳವಡಿಸಿಕೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

'ಕಲ್ಯಾಣ' ಅಕ್ರಮ: ತನಿಖೆಗೆ ಅಧಿಕಾರಿ ನೇಮಕ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಮತ್ತು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ಸಮಗ್ರ ತನಿಖೆಗೆ ನಿವೃತ್ತ ಐಎಎಸ್ ಅಧಿಕಾರಿ ಸುಧೀರ್ ಕುಮಾರ್ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

6 ತಿಂಗಳ ಒಳಗೆ ತನಿಖೆ ನಡೆಸಿದ ವರದಿ ಸಲ್ಲಿಸಬೇಕು. ತನಿಖೆಗೆ ಅಗತ್ಯ ಇರುವ ಮಾನವ ಸಂಪನ್ಮೂಲ, ಕಚೇರಿ, ವಾಹನ ಇತ್ಯಾದಿ ವ್ಯವಸ್ಥೆಗಳನ್ನು ಕೆಕೆಆರ್‌ಡಿಬಿ ಮತ್ತು ಕಲಬುರಗಿ ಜಿಲ್ಲಾಧಿಕಾರಿ ಒದಗಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಕೆಕೆಆರ್‌ಡಿಬಿ ಮತ್ತು ಕಲ್ಯಾಣ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದಲ್ಲಿ ಅಕ್ರಮಗಳು ನಡೆದಿದೆ ಎಂದು ಬಂದಿದ್ದ ದೂರಿನ ಕುರಿತು ವಿಚಾರಣೆ ನಡೆಸಿದ್ದ, ಅಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿದ್ದ ಇ.ವಿ. ರಮಣ ರೆಡ್ಡಿ (ಈಗ ನಿವೃತ್ತ) ಅವರು ವರದಿ ನೀಡಿದ್ದರು. ಆ ವರದಿ ಪರಿಶೀಲಿಸಿ, ಹೆಚ್ಚಿನ ತನಿಖೆ ನಡೆಸಲು ಸುಧೀರ್ ಕುಮಾರ್ ಅವರನ್ನು ನೇಮಿಸಲಾಗಿದೆ.

ಸರ್ಕಾರ ₹45 ಕೋಟಿಯಲ್ಲಿ 315 ಹೊಸ ಬಸ್ ಖರೀದಿಸಲು ಅನುಮೋದನೆ ನೀಡಿದ್ದರೂ ಆ ಅನುದಾನವನ್ನು ಬೇರೆ ಕಾಮಗಾರಿಗಳಿಗೆ ಬಳಸಿಕೊಂಡಿರುವುದು, 47 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದರೂ 37 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಡಳಿ ಮಂಜೂರಾತಿ ನೀಡಿರುವುದು ಸೇರಿ ಒಟ್ಟು ಎಂಟು ಆರೋಪಗಳನ್ನು ಮಾಡಲಾಗಿತ್ತು. ನಿಯಮ ಉಲ್ಲಂಘಿಸಿ ಅನುದಾನ ಮಂಜೂರು ಮತ್ತು ದುರ್ಬಳಕೆಯ ಆರೋಪಗಳನ್ನು ಸಂಘದ ಮೇಲೆ ಮಾಡಲಾಗಿತ್ತು. ಈ ಆರೋಪಗಳ ಕುರಿತು ರಮಣ ರೆಡ್ಡಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ಈ ಅಕ್ರಮ ಆರೋಪಗಳ ಕುರಿತು 'ಪ್ರಜಾವಾಣಿ' 2023ರ ಜೂನ್ 12, ಜುಲೈ 12ರಂದೇ ವರದಿ ಮಾಡಿತ್ತು.







ಮಗನ ಸಾಯಿಸಲು ಅನುಮತಿ ಕೋರಿದ ತಾಯಿ

ದುಶ್ಚಟಗಳ ದಾಸನಾಗಿರುವ 20 ವರ್ಷದ ಪುತ್ರನನ್ನು ಜೈಲಿಗೆ ಹಾಕಲು ಮನವಿ

ತುರುವೇಕೆರೆ: ಮಾದಕ ವ್ಯಸನ ಸೇರಿದಂತೆ ಹಲವಾರು ದುಶ್ಚಟಗಳ ದಾಸನಾಗಿರುವ 20 ವರ್ಷದ ಮಗನನ್ನು ಸರಿ ದಾರಿಗೆ ತರಲು ಸಾಧ್ಯವಾಗದೆ ಬೇಸತ್ತ ತಾಯಿಯೊಬ್ಬಳು ಮಗನನ್ನು ಸಾಯಿಸಲು ಅನುಮತಿ ಕೋರಿ ಭಾನುವಾರ ತುರುವೇಕೆರೆ ಪೊಲೀಸರ ಮೊರೆ ಹೋಗಿದ್ದಾರೆ.

'ಗಾಂಜಾ ಹಾಗೂ ಇತರ ಮಾದಕ ವಸ್ತುಗಳ ವ್ಯಸನಿಯಾಗಿರುವ ಮಗ ಅಭಿ ನನ್ನ ಗೌರವ ಹಾಳು ಮಾಡುತ್ತಿದ್ದಾನೆ. ಮನೆಯಲ್ಲಿ ಕಿರುಕುಳ ಕೊಡುತ್ತಿದ್ದಾನೆ. ದಯಮಾಡಿ ಆತನನ್ನು ಜೈಲಿಗೆ ಹಾಕಿ ಸರಿ ದಾರಿಗೆ ತನ್ನಿ. ಇಲ್ಲವೇ ಆತನನ್ನು ಸಾಯಿಸಲು ಅನುಮತಿ ಕೊಡಿ. ಅವನನ್ನು ಕೊಂದು, ನಾನೂ ಸಾಯುತ್ತೇನೆ' ಎಂದು ಪಟ್ಟಣದ ನಿವಾಸಿ ರೇಣುಕಮ್ಮ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ.

ತುರುವೇಕೆರೆಯಲ್ಲಿ ಸಣ್ಣದೊಂದು ಹೋಟೆಲ್ ಇಟ್ಟುಕೊಂಡು ಜೀವನ ನಡೆಸುತ್ತಿರುವ ರೇಣುಕಮ್ಮ ಮಗನನ್ನು ಪೊಲೀಸ್ ಠಾಣೆಗೆ ಕರೆ ತಂದಿದ್ದರು.

ಕೆಟ್ಟ ಸ್ನೇಹಿತರ ಸಹವಾಸಕ್ಕೆ ಬಿದ್ದ ಮಗ ದುಶ್ಚಟಗಳ ದಾಸನಾಗಿದ್ದಾನೆ. ಆತನನ್ನು ಸರಿ ದಾರಿಗೆ ತರಲು ಹಲವು ಬಾರಿ ಯತ್ನಿಸಿ ಸೋತಿದ್ದೇನೆ ಎಂದು ಅವರು ಪೊಲೀಸರ ಮುಂದೆ ಕಣ್ಣೀರಿಟ್ಟರು.

'ತುರುವೇಕೆರೆಯಲ್ಲಿ ಗಾಂಜಾ ಸೇರಿದಂತೆ ಹಲವಾರು ಮಾದಕ ವಸ್ತುಗಳು ರಾಜಾರೋಷವಾಗಿ ಮಾರಾಟವಾಗುತ್ತಿವೆ. ಅನೇಕ ಯುವಕರು ಮಾದಕ ವ್ಯಸನಕ್ಕೆ ಬಿದ್ದು ಹಾಳಾಗುತ್ತಿದ್ದಾರೆ. ನನ್ನ ಮಗನೂ ಇಂತಹ ಜಾಲಕ್ಕೆ ಬಿದ್ದು ತನ್ನ ಜೀವನ ಹಾಳು ಮಾಡಿಕೊಂಡಿದ್ದಾನೆ' ಎಂದು ದೂರಿದರು.

'ನಿಮ್ಮ ಮಗ ಸ್ನೇಹಿತರ ಸಹವಾಸದಿಂದ ಹಾಳಾಗಿದ್ದಾನೆ. ಅವನನ್ನು ಸರಿ ದಾರಿಗೆ ತರುವ ಪ್ರಯತ್ನಕ್ಕೆ ನಾವೂ ಕೈ ಜೋಡಿಸುತ್ತೇವೆ' ಎಂದು ರೇಣುಕಮ್ಮ ಅವರಿಗೆ ಪೊಲೀಸರು ಧೈರ್ಯ ತುಂಬಿದರು.

ಸದ್ಯ ಪೊಲೀಸರ ವಶದಲ್ಲಿರುವ ರೇಣುಕಮ್ಮ ಅವರ ಮಗ ಅಭಿಗೆ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಕೊಡಿಸಲು ನೆರವು ನೀಡುವುದಾಗಿ ಪೊಲೀಸರು ಭರವಸೆ ನೀಡಿದ್ದಾರೆ.

ನಗರದಲ್ಲಿ ಇಂದು

'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಎಸ್. ಸೋಮನಾಥ್ ಅವರೊಂದಿಗೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಂವಾದ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಎಚ್.ಡಿ. ದೇವೇಗೌಡ, ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಶಿವರಾಜ ತಂಗಡಗಿ, ಎನ್.ಎಸ್. ಬೋಸರಾಜು, ಅಧ್ಯಕ್ಷತೆ: ಮುನಿರತ್ನ, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ಡಾ.ಬಾಬು ಜಗಜೀವನರಾಮ್ ಸಂಶೋಧನಾ ಸಂಸ್ಥೆ, ನಿರಾಶ್ರಿತರ ಪರಿಹಾರ ಕೇಂದ್ರದ ಆವರಣ, ಸುಮನಹಳ್ಳಿ ವೃತ್ತ, ಬೆಳಿಗ್ಗೆ 11

ಸರ್ ಸಿ.ವಿ. ರಾಮನ್ ಅವರ ಜನ್ಮ ದಿನಾಚರಣೆ, ಉಪನ್ಯಾಸ: ಎಚ್.ಎಸ್. ಗಣೇಶ ಭಟ್ಟ, ಅಧ್ಯಕ್ಷತೆ: ವಿಜಯಲಕ್ಷ್ಮಿ ಸತ್ಯಮೂರ್ತಿ, ಅತಿಥಿಗಳು: ನಾ. ಶ್ರೀಧರ್, ಚಂದ್ರಕಲಾ ಎಂ.ಜಿ., ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುರುಬರಹಳ್ಳಿ, 3ನೇ ಕ್ರಾಸ್, ದೊಡ್ಡಮ್ಮದೇವಿಯ ದೇವಸ್ಥಾನದ ಹತ್ತಿರ, ಮಧ್ಯಾಹ್ನ 12

ಕನ್ನಡ ರಾಜ್ಯೋತ್ಸವ, ನಾಟಕೋತ್ಸವ: 'ಸಾಲದ ಮಗು' ನಾಟಕ ಪ್ರದರ್ಶನ: ಕಥೆ: ಕುವೆಂಪು, ರಂಗರೂಪ ಮತ್ತು ನಿರ್ದೇಶನ: ಗಣಪತಿಗೌಡ, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಆಕ್ಸ್‌ಫರ್ಡ್ ಕಾಲೇಜು, ಆರನೇ ಬ್ಲಾಕ್, ಉಲ್ಲಾಳ್ ಮುಖ್ಯರಸ್ತೆ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, ಸಂಜೆ 4

'ಸಂಗೊಳ್ಳಿ ರಾಯಣ್ಣ' ನಾಟಕ ಪ್ರದರ್ಶನ: ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ಬಿ.ವಿ. ವೇಣುಗೋಪಾಲ್, ಉದ್ಘಾಟನೆ: ವಿಠಲ್ ಕೊಪ್ಪದ್, ಅಧ್ಯಕ್ಷತೆ: ಟಿ. ತಿಮ್ಮೇಶ್, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.30



ಪಿ. ಲಂಕೇಶ್

'ಲಂಕೇಶ್ ಬಹುತ್ವಗಳ ಶೋಧ-ಅಧ್ಯಯನ ಶಿಬಿರ': ಗೋಷ್ಠಿಗಳು: 'ಕಲ್ಲು ಕರಗುವ ಸಮಯ' ಸಣ್ಣ ಕತೆಗಳು: ನಟರಾಜ್ ಹುಳಿಯಾರ್, 'ಎಲ್ಲಿದ್ದೆ ಇಲ್ಲಿತಂಕ' ಸಾಂಗತ್ಯದ ನೆನಪುಗಳು: ಎನ್.ಎಸ್. ಶಂಕರ್, ಪ್ರತಿಭಾ ನಂದಕುಮಾರ್, ಸುಬ್ಬು ಹೊಲೆಯಾರ್, ಬಸವರಾಜ ಮೇಗಲಕೇರಿ, ಎಂ.ಎಸ್. ಮೂರ್ತಿ, ಮೂಡಲಗಿರಿಯಪ್ಪ, 'ಹೊಸತಿನ ದಾರಿ' ಸಿನಿಮಾ: ಕೃಷ್ಣ ಮಾಸಡಿ, ಪತ್ರಿಕೋದ್ಯಮ: ಎನ್.ಆರ್. ವಿಶುಕುಮಾರ್, 'ಇಟ್ಟಿಗೆ ಪವಿತ್ರವಲ್ಲ-ಜೀವ ಪವಿತ್ರ' ನಾಟಕ ಸಿ. ಬಸವಲಿಂಗಯ್ಯ, ಟೀಕೆ-ಟಿಪ್ಪಣಿ: ದಿನೇಶ್ ಅಮೀನ್ ಮಟ್ಟು, ಸಾರ್ವಜನಿಕ ಉಪನ್ಯಾಸ: ಸಿ.ಎಸ್. ದ್ವಾರಕಾನಾಥ್, ನಾಗತಿಹಳ್ಳಿ ಚಂದ್ರಶೇಖರ್, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 9.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಎಎನ್‌ಎಫ್ ಕೂಂಬಿಂಗ್: ಇಬ್ಬರ ವಿಚಾರಣೆ?

ಚಿಕ್ಕಮಗಳೂರು: ಶೃಂಗೇರಿ ಬಳಿಯ ಪ್ರದೇಶಗಳಿಗೆ ನಕ್ಸಲರು ಭೇಟಿ ನೀಡಿರುವ ಮಾಹಿತಿ ಆಧರಿಸಿ ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಸಿಬ್ಬಂದಿ ಶೋಧ ಕಾರ್ಯಾಚರಣೆ (ಕೂಂಬಿಂಗ್) ಆರಂಭಿಸಿದ್ದು, ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕಿನಲ್ಲಿ ನಕ್ಸಲರು ಓಡಾಡಿರುವ ಮಾಹಿತಿ ಆಧರಿಸಿ, ಎರಡೂ ತಾಲ್ಲೂಕಿನ ಹಲವೆಡೆ ಶೋಧ ಕಾರ್ಯಾಚರಣೆ ಆರಂಭವಾಗಿದೆ. ನಕ್ಸಲ್ ನಿಗ್ರಹ ಪಡೆಯ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ ನೇತೃತ್ವದಲ್ಲಿ ಕಾರ್ಯಾಚರಣೆ ಆರಂಭವಾಗಿದೆ. ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್, ಎಸ್‌ಪಿ ವಿಕ್ರಮ ಅಮಟೆ ಕೂಡ ಶೃಂಗೇರಿಯಲ್ಲಿ ಮೊಕ್ಕಾಂ ಹೂಡಿದ್ದಾರೆ.

ಎಚ್‌ಎಂಟಿ ಭೂಮಿ ಡಿನೋಟಿಫಿಕೇಷನ್‌ಗೆ ಅನುಮತಿ ಕೋರಿಕೆ

ಐಎಫ್‌ಎಸ್ ಅಧಿಕಾರಿಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿಯು ಅರಣ್ಯ ಸ್ವರೂಪ ಕಳೆದುಕೊಂಡಿದೆ' ಎಂಬ ಕಾರಣ ನೀಡಿ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿ, ಡಿನೋಟಿಫಿಕೇಷನ್‌ಗೆ ಅನುಮತಿ ಕೋರಿದ್ದ ನಾಲ್ವರು ಐಎಫ್‌ಎಸ್ ಅಧಿಕಾರಿಗಳಿಗೆ ಅರಣ್ಯ ಇಲಾಖೆ ನೋಟಿಸ್ ನೀಡಿದೆ.

ಎಚ್‌ಎಂಟಿ ವಶದಲ್ಲಿರುವ ಪೀಣ್ಯ ಸರ್ವೆ ನಂಬರ್ 1 ಮತ್ತು 2ರ ಬೆಲೆ ಬಾಳುವ ಭೂಮಿ ಅರಣ್ಯ ಸ್ವರೂಪ ಕಳೆದುಕೊಂಡಿದೆ ಎಂದು ಅಧಿಕಾರಿಗಳ ಮಟ್ಟದಲ್ಲೇ ನಿರ್ಧಾರ ಕೈಗೊಳ್ಳಲಾಗಿದೆ. ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆದಿರಲಿಲ್ಲ. ಹಾಗಾಗಿ, ಅಂದು ನಿರ್ಧಾರ ತೆಗೆದುಕೊಂಡಿದ್ದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದರು.

ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಸಂದೀಪ್ ದವೆ, ಪ್ರಧಾನ ಕಾರ್ಯದರ್ಶಿಯಾಗಿದ್ದ ವಿಜಯಕುಮಾರ್ ಗೋಗಿ (ಇಬ್ಬರೂ ಈಗ ನಿವೃತ್ತಿ) ಹಾಗೂ ಐಟಿಸಿ ವಿಭಾಗದ ಈಗಿನ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸ್ಮಿತಾ ಬಿಜ್ಜೂರ್, ತಾಂತ್ರಿಕ ಕೋಶದ ಅಧಿಕಾರಿ ಆರ್. ಗೋಕುಲ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

'ಸುಪ್ರೀಂಕೋರ್ಟ್ ನಿರ್ದೇಶನದಂತೆ ಅನ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಆಗದ ಹೊರತು ಒಮ್ಮೆ ಅರಣ್ಯ ಎಂದು ನಮೂದಾದ ಭೂಮಿ ಅರಣ್ಯವೇ ಆಗಿರುತ್ತದೆ. ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿ ಅರಣ್ಯ ಭೂಮಿಯನ್ನು ಅರಣ್ಯೇತರ ಬಳಕೆಗೆ ಪರಿಹಾರ ಭೂಮಿ ಒದಗಿಸುವಾಗ ಮೊತ್ತ ಪಾವತಿಸಿ ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗುತ್ತದೆ. ಅನುಮತಿ ನೀಡಿದರೂ, ಅರಣ್ಯ ಭೂಮಿಯನ್ನು ಗುತ್ತಿಗೆ ಮಾತ್ರ ನೀಡಬೇಕು. ಗುತ್ತಿಗೆ ಅವಧಿ ಮುಗಿದ ಬಳಿಕ ಅರಣ್ಯ ಇಲಾಖೆಗೆ ಮರಳಿ ಪಡೆಯಬೇಕಾಗುತ್ತದೆ. ಆದರೂ, ನಾಲ್ವರು ಅಧಿಕಾರಿಗಳು ನಿಯಮವನ್ನು ಅಂದು ಏಕೆ ಪಾಲಿಸಲಿಲ್ಲ' ಎಂದು ನೋಟಿಸ್ ಮೂಲಕ ಪ್ರಶ್ನಿಸಲಾಗಿದೆ.

'ಮುಖ್ಯಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2020ರಲ್ಲಿ ನಡೆದ ಸಭೆಯಲ್ಲಿ 1980ರ ಪೂರ್ವದಲ್ಲಿ ವಿವಿಧ ಸರ್ಕಾರಿ ಸಂಸ್ಥೆಗಳಿಗೆ ನೀಡಿದ್ದ ಜಮೀನು ಮಂಜೂರಾತಿಗಳ ಬಗ್ಗೆ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯಪಡೆದು, ಅಂತಹ ಅರಣ್ಯಪ್ರದೇಶಗಳ ಡಿನೋಟಿಫಿಕೇಶನ್ ಪ್ರಸ್ತಾವವನ್ನು ಸಚಿವ ಸಂಪುಟದ ನಿರ್ಧಾರಕ್ಕಾಗಿ ಸಲ್ಲಿಸಲು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿತ್ತು. ಆದರೆ, ಸಂಪುಟದ ಗಮನಕ್ಕೆ ತಾರದೇ ಡಿನೋಟಿಫಿಕೇಷನ್‌ಗೆ ಅನುಮತಿ ಕೋರಿ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ. ಇದು ಕರ್ನಾಟಕ ಸರ್ಕಾರದ ಕಾರ್ಯ ಕಲಾಪಗಳ ನಿರ್ವಹಣಾ ನಿಯಮಾವಳಿ 1977ರ ಉಲ್ಲಂಘನೆಯೂ ಅಲ್ಲವೇ' ಎಂದು ನೋಟಿಸ್‌ನಲ್ಲಿ ಪ್ರಶ್ನಿಸಲಾಗಿದೆ.

ಮುಖ್ಯಾಂಶಗಳು

- ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ನಾಲ್ವರು ಅಧಿಕಾರಿಗಳು
- ಪೂರ್ವಾನುಮತಿ ಪಡೆಯದೆ ಅಧಿಕಾರಿಗಳ ಮಟ್ಟದಲ್ಲೇ ನಿರ್ಧಾರ: ಆರೋಪ

ಜನವರಿಯಲ್ಲಿ ಆರಂಭವಾಗಲಿದೆ ರಾಷ್ಟ್ರೀಯ ವಿದ್ಯಾಲಯ–ಬೊಮ್ಮಸಂದ್ರ 'ನಮ್ಮ ಮೆಟ್ರೊ' • 18.82 ಕಿ.ಮೀ. ಉದ್ದದ ಮಾರ್ಗ


'ಹಳದಿ' ಮಾರ್ಗ: 3.5 ಲಕ್ಷ ಪ್ರಯಾಣಿಕರಿಗೆ ಅನುಕೂಲ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯ ಐಟಿ–ಬಿಟಿ ಉದ್ಯೋಗಿಗಳೂ ಒಳಗೊಂಡಂತೆ ಲಕ್ಷಾಂತರ ಜನರು ವಾಹನ ಸಂದಣಿಯಲ್ಲಿ ಸಿಲುಕೊಂಡು ಸಮಯಕ್ಕೆ ಸರಿಯಾಗಿ ಗಮ್ಯ ತಲುಪಲಾರದೇ ಒದ್ದಾಡುವುದು ಇನ್ನೆರಡು ತಿಂಗಳಲ್ಲಿ ತಪ್ಪಲಿದೆ. 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರಕ್ಕೆ ದಿನಗಣನೆ ಆರಂಭವಾಗಿದ್ದು, 3.5 ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗುವ ನಿರೀಕ್ಷೆ ಇದೆ.

ರಾಷ್ಟ್ರೀಯ ವಿದ್ಯಾಲಯದಿಂದ ಬೊಮ್ಮಸಂದ್ರವರೆಗೆ 18.82 ಕಿ.ಮೀ. ಉದ್ದವಿದ್ದು, ಎಲ್ಲಿಯೂ ಸುರಂಗವಿಲ್ಲದೇ ಎತ್ತರಿಸಿದ ಮಾರ್ಗದಲ್ಲಿಯೇ ನಿರ್ಮಿಸಲಾಗಿದೆ. ಬಸವನಗುಡಿಯ ಹತ್ತಿರದಿಂದ ಆರಂಭಗೊಳ್ಳುವುದರಿಂದ ಲಾಲ್‌ಬಾಗ್ ಸಸ್ಯಕಾಶಿ ಮತ್ತು ದೊಡ್ಡ ಬಸವಣ್ಣ ದೇವಸ್ಥಾನದಂತಹ (ಬುಲ್ ಟೆಂಪಲ್) ಪ್ರಮುಖ ಸ್ಥಳಗಳಿಗೆ ಸಂಪರ್ಕವನ್ನು ಒದಗಿಸುತ್ತದೆ. ಜಯದೇವ ಆಸ್ಪತ್ರೆ, ಬಿಟಿಎಂ ಲೇಔಟ್, ಎಚ್‌ಎಸ್‌ಆರ್ ಲೇಔಟ್, ಆಕ್ಸ್‌ಫರ್ಡ್ ಕಾಲೇಜು ನಿಲ್ದಾಣಗಳು ವಾಣಿಜ್ಯ ಮತ್ತು ವಸತಿ ಪ್ರದೇಶಗಳಿಗೆ ಸಮೀಪದಲ್ಲಿವೆ. ಇದರಿಂದಾಗಿ ಉದ್ಯೋಗದ ಸ್ಥಳಗಳಿಗೆ, ಮಾರುಕಟ್ಟೆಗಳಿಗೆ ಸುಲಭವಾದ ಸಂಪರ್ಕವನ್ನು ಏರ್ಪಡಿಸಲಿದೆ.

ಪ್ರಮುಖ ಐಟಿ ಕೇಂದ್ರವಾದ ಎಲೆಕ್ಟ್ರಾನಿಕ್ಸ್ ಸಿಟಿ ಮೂಲಕ ಹಳದಿ ಮಾರ್ಗವು ಹಾದು ಹೋಗುತ್ತದೆ. ಎಲೆಕ್ಟ್ರಾನಿಕ್ಸ್ ಸಿಟಿ 1 (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ಸ್ ಸಿಟಿ 2, ಹುಸ್ಕೂರು ರಸ್ತೆ, ಹೆಬ್ಬಗೋಡಿ ನಿಲ್ದಾಣಗಳು ಐಟಿ ಹಬ್‌ಗಳನ್ನು ಸುಲಭವಾಗಿ ಸಂಪರ್ಕಿಸುವಂತೆ ಮಾಡಿವೆ. ಇನ್ಫೊಸಿಸ್, ವಿಪ್ರೊ, ಟೆಕ್ ಮಹೀಂದ್ರಾ ಮುಂತಾದ ಪ್ರಮುಖ ಐಟಿ ಕಂಪನಿಗಳು ಇಲ್ಲಿರುವುದರಿಂದ ಸಾವಿರಾರು ಐಟಿ ಉದ್ಯೋಗಿಗಳಿಗೆ ಉಪಯೋಗವಾಗಲಿದೆ. ಬೊಮ್ಮಸಂದ್ರದವರೆಗೆ ಮೆಟ್ರೊ ರೈಲು ಬರುವುದರಿಂದ ಸುತ್ತಲಿನ ಕೈಗಾರಿಕಾ ಪ್ರದೇಶಗಳಿಗೆ ಮಾತ್ರವಲ್ಲ, ಆನೇಕಲ್ ಕೈಗಾರಿಕಾ ಪ್ರದೇಶದ ಉದ್ಯೋಗಿಗಳಿಗೂ ಅನುಕೂಲವಾಗಲಿದೆ.




ಹಳದಿ ಮಾರ್ಗದಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡ್ (ಇಂಟರ್ ಚೇಂಜ್ ಸ್ಟೇಷನ್) ಬಳಿ ರೈಲು ಪರೀಕ್ಷಾರ್ಥ ಸಂಚಾರ ನಡೆಸುತ್ತಿದ್ದ ದೃಶ್ಯ ಸೋಮವಾರ ಕಂಡುಬಂತು ಪ್ರಜಾವಾಣಿ ಚಿತ್ರ: ರಂಜು ಪಿ.

ಡಿಸೆಂಬರ್‌ನಲ್ಲಿ ಸುರಕ್ಷತಾ ಆಯುಕ್ತರ ಪರೀಕ್ಷೆ: ಜೂನ್‌ನಿಂದ ಸುಮಾರು ಮೂರು ತಿಂಗಳು ವಿವಿಧ ತಂತ್ರಜ್ಞರು ಹಳದಿ ಮಾರ್ಗದಲ್ಲಿ ಹಲವು ಪರೀಕ್ಷೆಗಳನ್ನು ನಡೆಸಿದ್ದಾರೆ. ಚಾಲಕ ರಹಿತ ಎಂಜಿನ್ ಕೋಚ್‌ನಲ್ಲಿ ಸಂಚರಿಸಿ ಟ್ರ್ಯಾಕ್ಷನ್ ಮತ್ತು ಬ್ರೇಕಿಂಗ್ ಪರೀಕ್ಷೆ ಕೂಡಾ ಮಾಡಿದ್ದಾರೆ.

ಈ ಪರೀಕ್ಷೆಗಳು ಯಶಸ್ವಿಯಾದ ಬಳಿಕ ಸೆಪ್ಟೆಂಬರ್‌ನಲ್ಲಿ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆಗಳನ್ನು ನಡೆಸಿತ್ತು. ರೋಲಿಂಗ್ ಸ್ಟಾಕ್ (ರೈಲು) ತಜ್ಞರು, ಹಳಿ ತಂತ್ರಜ್ಞರು, ಬ್ರೇಕ್ ತಂತ್ರಜ್ಞರು, ವಿವಿಧ ತಾಂತ್ರಿಕ ಪರಿಣಿತರ ತಂಡದ ಸದಸ್ಯರು ಈ ಪರೀಕ್ಷೆಗಳಲ್ಲಿ ಭಾಗವಹಿಸಿದ್ದರು.

ಕೊನೆಯದಾಗಿ ರೈಲ್ವೆ ಸುರಕ್ಷತಾ ಆಯುಕ್ತರು ಪರೀಕ್ಷೆ ನಡೆಸಬೇಕಿದೆ. ಡಿಸೆಂಬರ್‌ನಲ್ಲಿ ರೈಲ್ವೆ ಸುರಕ್ಷತೆ ದಕ್ಷಿಣ ವೃತ್ತದ ಆಯುಕ್ತ ಅನಂತ್ ಮಧುಕರ್ ಚೌಧರಿ ಮತ್ತು ತಂಡ ಬಂದು ಪರೀಕ್ಷೆ ನಡೆಸಲಿದೆ. ಅವರು ಒಪ್ಪಿಗೆ ನೀಡಿದ ನಂತರ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ರೈಲು ಸಂಚಾರಕ್ಕೆ ದಿನ ನಿಗದಿ ಮಾಡಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬರಬೇಕಿದೆ ರೈಲು: ಕಾಮಗಾರಿ ಪೂರ್ಣಗೊಂಡು ಪರೀಕ್ಷೆಗಳು ಮುಗಿದಿದ್ದರೂ ರೈಲುಗಳ ಪೂರೈಕೆ ತಡವಾಗಿರುವುದರಿಂದ ರೈಲು ಸಂಚಾರ ಮುಂದಕ್ಕೆ ಹೋಗಿದೆ. ಸದ್ಯ ಒಂದು ಕೋಚ್ (6 ಬೋಗಿಗಳ ಒಂದು ಸೆಟ್) ಇದ್ದು, ಡಿಸೆಂಬರ್ ಅಂತ್ಯಕ್ಕೆ ಮತ್ತೆರಡು ಕೋಚ್‌ಗಳು ಬರಲಿವೆ. ಮೂರು ಕೋಚ್‌ಗಳಲ್ಲಿ ಅರ್ಧಗಂಟೆಗೆ ಒಂದು ಟ್ರಿಪ್‌ನಂತೆ ಜನವರಿಯಲ್ಲಿ ಸಂಚಾರ ಆರಂಭವಾಗಲಿದೆ. ಒಟ್ಟು 14 ಕೋಚ್‌ಗಳು ಬೇಕಿದ್ದು, 15 ನಿಮಿಷಕ್ಕೊಂದು ಟ್ರಿಪ್ ನಡೆಸಲು 8 ಕೋಚ್‌ಗಳ ಅವಶ್ಯಕತೆ ಇದೆ. ಮತ್ತೆ ಮೂರು ತಿಂಗಳಲ್ಲಿ ಎಲ್ಲ ಕೋಚ್‌ಗಳು ಪೂರೈಕೆಯಾಗಲಿವೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.



ನಮ್ಮ ಮೆಟ್ರೊ ರಾಷ್ಟ್ರೀಯ ವಿದ್ಯಾಲಯ –ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ನಿರ್ಮಾಣಗೊಂಡಿರುವ ಬಿಟಿಎಂ ನಿಲ್ದಾಣ

ನಾಲ್ಕು ವಿಶೇಷಗಳು

1 ಹಳದಿ ಮಾರ್ಗವನ್ನು ಚಾಲಕರಹಿತ ಎಂಜಿನ್ ಹೊಂದಿರುವ ರೈಲು ಸಂಚಾರಕ್ಕೆ ಪೂರಕವಾಗುವಂತೆ ರೂಪಿಸಲಾಗಿದೆ. ಇತರ ಮಾರ್ಗಗಳಲ್ಲಿ 'ಡಿಸ್ಟೆನ್ಸ್ ಟು ಗೊ' (ಡಿಟಿಜಿ) ವ್ಯವಸ್ಥೆಯ ಲೋಕೊ ಪೈಲಟ್ ಮೆಟ್ರೊಗಳು ಸಂಚರಿಸುತ್ತಿವೆ. ಹಳದಿ ಮಾರ್ಗದಲ್ಲಿ ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆ (ಸಿಬಿಟಿಸಿ) ಮೂಲಕ ರೈಲುಗಳು ಚಲಿಸಲಿವೆ. ಮೊದಲ ಮೂರು ವರ್ಷ ಲೋಕೊ ಪೈಲೆಟ್ ಇರುತ್ತಾರೆ. ಯಾವುದೇ ತಾಂತ್ರಿಕ ತೊಂದರೆ ಇಲ್ಲದಿರುವುದು ಖಚಿತವಾದ ಮೇಲೆ ಲೋಕೊ ಪೈಲೆಟ್ ಇಲ್ಲದೇ ರೈಲು ಸಂಚರಿಸಲಿದೆ.

2 ನಗರದ ಅತಿ ಎತ್ತರದ ಇಂಟರ್‌ಚೇಂಜ್ ಮೆಟ್ರೊ ನಿಲ್ದಾಣ ಜಯದೇವದಲ್ಲಿ ನಿರ್ಮಾಣವಾಗುತ್ತಿದೆ. ಬನ್ನೇರುಘಟ್ಟ ಮತ್ತು ಡೇರಿ ವೃತ್ತವನ್ನು ಸಂಪರ್ಕಿಸುವ ಅಂಡರ್‌ಪಾಸ್, ರಾಗಿಗುಡ್ಡ ಮತ್ತು ಬಿಟಿಎಂ ಲೇಔಟ್ ಸಂಪರ್ಕಿಸುವ ನೆಲಮಟ್ಟದ ರಸ್ತೆ, ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ಗೆ ಸಾಗುವ ಡಬಲ್ ಡೆಕರ್ ರಸ್ತೆ, ಅದರ ಮೇಲೆ ಹಳದಿ ಮೆಟ್ರೊ ಮಾರ್ಗ, ಅದರ ಮೇಲೆ ಮೆಟ್ರೊ ಕಾನ್ಕೋರ್ಸ್, ಅದರ ಮೇಲೆ ಗುಲಾಬಿ ಮೆಟ್ರೊ ಮಾರ್ಗ ಇರಲಿದೆ. ಮುಂಬೈ, ಜೈಪುರ, ನಾಗಪುರದಲ್ಲಿ ಈ ರೀತಿಯ ನಿಲ್ದಾಣಗಳಿದ್ದು, ದಕ್ಷಿಣ ಭಾರತದಲ್ಲಿ ಇದೇ ಮೊದಲನೇಯದ್ದಾಗಿದೆ.

3 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಇರುವಂತೆ ಇದೇ ಮೊದಲ ಬಾರಿಗೆ ಮೆಟ್ರೊ ನಿಲ್ದಾಣಗಳ ನಡುವೆ ಎತ್ತರಿಸಿದ ಸ್ವಯಂಚಾಲಿತ ಪಾದಚಾರಿ ಮಾರ್ಗ (ಸ್ಕೈವಾಕ್ ಟ್ರಾವೆಲೇಟರ್) ನಿರ್ಮಿಸಲಾಗುತ್ತಿದೆ. ಕೇಂದ್ರ ರೇಷ್ಮೆ ಮಂಡಳಿ (ಸಿಎಸ್‌ಬಿ) ಜಂಕ್ಷನ್‌ನಲ್ಲಿರುವ 'ನಮ್ಮ ಮೆಟ್ರೊ' ಹಳದಿ ಮಾರ್ಗದ ನಿಲ್ದಾಣ ಮತ್ತು ನಿರ್ಮಾಣಗೊಳ್ಳುತ್ತಿರುವ ನೀಲಿ ಮಾರ್ಗದ ನಿಲ್ದಾಣಗಳ ನಡುವೆ ಟ್ರಾವೆಲೇಟರ್ ನಿರ್ಮಿಸಲಾಗುತ್ತಿದೆ.


4 ಹಳದಿ ಮಾರ್ಗದಲ್ಲಿ ರಾಗಿಗುಡ್ಡದಿಂದ ಕೇಂದ್ರ ರೇಷ್ಮೆ ಮಂಡಳಿವರೆಗೆ 3.36 ಕಿ.ಮೀ. ಉದ್ದ ರೋಡ್ ಕಂ ರೈಲ್ (ಡಬಲ್ ಡೆಕರ್) ಮೇಲ್ಸೇತುವೆ ನಿರ್ಮಾಣವಾಗಿದೆ. ರಾಗಿಗುಡ್ಡದಿಂದ ಕೇಂದ್ರ ರೇಷ್ಮೆ ಮಂಡಳಿವರೆಗೆ ಕಾಮಗಾರಿ ಪೂರ್ಣಗೊಂಡು ವಾಹನಗಳ ಸಂಚಾರ ಆರಂಭವಾಗಿದೆ. ರೇಷ್ಮೆ ಮಂಡಳಿಯಿಂದ ರಾಗಿಗುಡ್ಡ ಕಡೆಗೆ ಕಾಮಗಾರಿ ನಡೆಯುತ್ತಿದ್ದು, 2025ರ ಜೂನ್ ವೇಳೆಗೆ ಆ ಕಡೆಯಿಂದಲೂ ವಾಹನ ಸಂಚಾರ ಶುರುವಾಗಲಿದೆ.

ಪ್ರಯಾಣಿಕರ ಸಮಯ ಉಳಿತಾಯ



ಬೆಂಗಳೂರಿನ ಜನನಿಬಿಡ, ವಾಹನ ನಿಬಿಡ ರಸ್ತೆಗಳಲ್ಲಿ ಎಲೆಕ್ಟ್ರಾನಿಕ್ ಸಿಟಿ ಸಂಪರ್ಕಿಸುವ ರಸ್ತೆಯೂ ಒಂದಾಗಿದೆ. ಉದ್ಯೋಗಿಗಳು, ಉದ್ಯಮಿಗಳು, ಜನಸಾಮಾನ್ಯರ ಸಮಯ ಸಂಚಾರದಲ್ಲೇ ಹೆಚ್ಚು ವ್ಯಯವಾಗುತ್ತಿತ್ತು. ಆರ್.ವಿ. ರಸ್ತೆ–ಬೊಮ್ಮಸಂದ್ರ ನಡುವಿನ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಜನವರಿ ಎರಡನೇ ವಾರದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಿಸುವ ಗುರಿ ಇಟ್ಟುಕೊಂಡಿದ್ದೇವೆ. ಮೆಟ್ರೊ ಸಂಚಾರವು ಪ್ರಯಾಣಿಕರ ಸಮಯ ಉಳಿಸಲಿದೆ. ವಾಹನದಟ್ಟಣೆಯೂ ಕಡಿಮೆಯಾಗಲಿದೆ. ಆರಂಭದಲ್ಲಿ ಅರ್ಧಗಂಟೆಗೆ ಒಮ್ಮೆ ರೈಲು ಚಲಿಸುವುದರಿಂದ ದಿನಕ್ಕೆ 50 ಸಾವಿರ ಜನರು ಪ್ರಯಾಣಿಸುವ ನಿರೀಕ್ಷೆ ಇದೆ. ಮುಂದೆ ಟ್ರಿಪ್ ಜಾಸ್ತಿಯಾದಂತೆ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಳವಾಗಲಿದ್ದು, ಪೂರ್ಣಪ್ರಮಾಣದಲ್ಲಿ ಆರಂಭವಾದಾಗ ಪ್ರಯಾಣಿಸುವವರ ಪ್ರಮಾಣ 3.5 ಲಕ್ಷ ದಾಟುವ ನಿರೀಕ್ಷೆ ಇದೆ.

ಎಂ. ಮಹೇಶ್ವರರಾವ್
ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ



ಜನ ಏನಂತಾರೆ?

ರಸ್ತೆಯಲ್ಲಿ ಸಾಗುವುದೇ ಹರಸಾಹಸ



ನಾನು ಎಲೆಕ್ಟ್ರಾನಿಕ್ ಸಿಟಿಯಲ್ಲಿ ಉದ್ಯೋಗಿಯಾಗಿದ್ದೇನೆ. ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿಗೆ ವಾಹನ ದಟ್ಟಣೆ ವಿಪರೀತವಾಗಿರುವುದರಿಂದ ಕಚೇರಿಗೆ ಬರುವುದು ಮತ್ತು ಮನೆಗೆ ತೆರಳುವುದೇ ಹರಸಾಹಸವಾಗಿದೆ. ನಮ್ಮ ಸ್ವಂತ ವಾಹನವಿರಲಿ, ಬಸ್ ಇರಲಿ ದಟ್ಟಣೆ ಅವಧಿಯಲ್ಲಿ ಆಮೆಗತಿಯಲ್ಲಿ ಸಾಗಬೇಕು. ಮೆಟ್ರೊ ರೈಲು ಸಂಚಾರ ಆರಂಭವಾದರೆ ಈ ಹಿಂಸೆಯಿಂದ ಪಾರಾಗಬಹುದು.

ಶುಭಾ ಬಿ.ಎಸ್.
ಇನ್ಫೊಸಿಸ್ ಉದ್ಯೋಗಿ

ಮೆಟ್ರೊಗಾಗಿ ಕಾಯುತ್ತಿರುವೆ




ಮೆಟ್ರೊ ಮಾರ್ಗ ನಿರ್ಮಾಣವಾಗಿ ಬಹಳ ಸಮಯ ವಾಯಿತು. ಯಾವಾಗ ಮೆಟ್ರೊ ಸಂಚಾರ ಆರಂಭಿಸುತ್ತಾರೆ ಎಂದು ಕಾಯುತ್ತಿದ್ದೇನೆ. ಕೆಂಗೇರಿಯಲ್ಲಿರುವ ನಮ್ಮ ಮನೆಯಿಂದ ಎಲೆಕ್ಟ್ರಾನಿಕ್ ಸಿಟಿಗೆ ಹೋಗಬೇಕಿದ್ದರೆ ಎರಡು ಗಂಟೆ ಮೊದಲು ಹೊರಡಬೇಕಿತ್ತು. ಈ ಮಾರ್ಗದಲ್ಲಿ ಮೆಟ್ರೊ ಆರಂಭವಾದರೆ ಎರಡೆರಡು ಮೆಟ್ರೊ ಬದಲಾಯಿಸಬೇಕಿದ್ದರೂ ಒತ್ತಡವಿಲ್ಲದೇ ಪ್ರಯಾಣಿಸಬಹುದು. ನಿಗದಿತ ಸಮಯದಲ್ಲಿ ತಲುಪಬಹುದು.

ಪವಿತ್ರಾ ಪಿ., ಇನ್ಫೊಸಿಸ್ ಉದ್ಯೋಗಿ

ಮೂರು ಕ್ಷೇತ್ರ ಚುನಾವಣೆ ಬಹಿರಂಗ ಪ್ರಚಾರಕ್ಕೆ ತೆರೆ

ಪ್ರಜಾವಾಣಿ ವಾರ್ತೆ



ಪ್ರಜಾ ಮತ
ಜನತಂತ್ರದ ಹಬ್ಬ

ಬೆಂಗಳೂರು: ಸಂಡೂರು, ಶಿಗ್ಗಾವಿ ಮತ್ತು ಚನ್ನಪಟ್ಟಣ ಈ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯಲಿರುವ ಉಪ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಸೋಮವಾರ ಸಂಜೆ ತೆರೆ ಬಿದ್ದಿದೆ. ಮನೆ ಮನೆಗೆ ತೆರಳಿ ಮತ ಯಾಚಿಸಲು ಮಂಗಳವಾರ ಅವಕಾಶವಿದ್ದು, ಬುಧವಾರ (ನ.13) ಮತದಾನ ನಡೆಯಲಿದೆ.

ಬಹಿರಂಗ ಪ್ರಚಾರದ ಕೊನೆಯ ದಿನ ಕೂಡಾ ಕಾಂಗ್ರೆಸ್ ಮತ್ತು ಜೆಡಿಎಸ್–ಬಿಜೆಪಿ ಮೈತ್ರಿಕೂಟದ ನಾಯಕರು, ಈ ಮೂರೂ ಕ್ಷೇತ್ರಗಳಲ್ಲಿ ಬೃಹತ್ ಸಮಾವೇಶ, ರ್‍ಯಾಲಿಗಳನ್ನು ಆಯೋಜಿಸುವ ಮೂಲಕ ಮತದಾರರ ಮನಸ್ಸು ಗೆಲ್ಲಲು ಕಸರತ್ತು ನಡೆಸಿದರು.

ಕೊನೆಯ ದಿನ ಈ ಕ್ಷೇತ್ರಗಳಲ್ಲಿ ರಾಜಕೀಯ ಜಾತ್ರೆಯ ವಾತಾವರಣವೇ ನಿರ್ಮಾಣವಾಗಿತ್ತು. ಕ್ಷೇತ್ರದ ತುಂಬಾ ಪಕ್ಷದ ಬಾವುಟಗಳು ರಾರಾಜಿಸಿದವು.

ಈ ಮೂರೂ ಕ್ಷೇತ್ರಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ- ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ನಡುವೆ ನೇರ ಪೈಪೋಟಿಯಿದೆ. ಸಂಡೂರು (ಕಾಂಗ್ರೆಸ್), ಶಿಗ್ಗಾವಿ (ಬಿಜೆಪಿ), ಚನ್ನಪಟ್ಟಣ (ಜೆಡಿಎಸ್) ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಮೂರೂ ಪಕ್ಷಗಳು ಅಬ್ಬರದ ಪ್ರಚಾರ ನಡೆಸಿವೆ.

ಕಾಂಗ್ರೆಸ್ ಅಭ್ಯರ್ಥಿಗಳ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು ಭರ್ಜರಿ ಪ್ರಚಾರ ನಡೆಸಿದರು. ಶಿಗ್ಗಾವಿ ಮತ್ತು ಸಂಡೂರಿನಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಲ್ಹಾದ ಜೋಷಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಪ್ರಮುಖರು ಮತ ಯಾಚನೆ ನಡೆಸಿದರು. ಜೆಡಿಎಸ್ ನಾಯಕರು ಈ ಕ್ಷೇತ್ರದತ್ತ ಸುಳಿಯಲಿಲ್ಲ.

ಚನ್ನಪಟ್ಟಣದಲ್ಲಿ ಪ್ರಚಾರದ ಅಬ್ಬರ ಜೋರಾಗಿತ್ತು. ಡಿ.ಕೆ. ಶಿವಕುಮಾರ್ ಮತ್ತು ಎಚ್.ಡಿ. ಕುಮಾರಸ್ವಾಮಿ ನಡುವಿನ ಕದನ ಎಂಬಂತೆ ಈ ಕ್ಷೇತ್ರದ ಉಪ ಚುನಾವಣೆ ಬಿಂಬಿತಗೊಂಡಿದ್ದರಿಂದ ವಾಕ್ಸಮರಕ್ಕೆ ದಾರಿ ಮಾಡಿಕೊಟ್ಟಿತ್ತು. ಕ್ಷೇತ್ರದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಜತೆಗೆ ಬಿಜೆಪಿ ನಾಯಕರು ಪ್ರಚಾರದಲ್ಲಿ ಭಾಗಿಯಾದರು. ಶಿವಕುಮಾರ್ ಜತೆಗೆ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್ ನಾಯಕರು ಪ್ರಚಾರ ನಡೆಸಿದರು.

ಮತ ಎಣಿಕೆ ಇದೇ 23ರಂದು ನಡೆಯಲಿದೆ.


15ರಿಂದ ವೀರಲೋಕ ಪುಸ್ತಕ ಸಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಪ್ರಕಾಶನದಿಂದ ಎರಡನೇ ವರ್ಷದ 'ವೀರಲೋಕ ಪುಸ್ತಕ ಸಂತೆ' ನವೆಂಬರ್ 15ರಿಂದ 17ರವರೆಗೆ ಜಯನಗರ ಶಾಲಿನಿ ಮೈದಾನದಲ್ಲಿ ನಡೆಯಲಿದೆ.

ಒಂದೇ ಸೂರಿನಡಿ ನೂರಕ್ಕೂ ಅಧಿಕ ಲೇಖಕರು, ಪ್ರಕಾಶಕರು ಭೇಟಿಯಾಗಲಿದ್ದಾರೆ. ಎಲ್ಲರೂ ಪ್ರತ್ಯೇಕ ಮಳಿಗೆಗಳಲ್ಲಿ ಪುಸ್ತಕಗಳೊಂದಿಗೆ ಓದುಗರನ್ನು ಭೇಟಿ ಮಾಡಲಿದ್ದಾರೆ. ಮಕ್ಕಳಿಗಾಗಿ ವಿಶೇಷ ಆಟ ಮತ್ತು ಮನೋರಂಜನಾ ವಿಭಾಗಗಳಿರಲಿವೆ. ಆಹಾರ, ಆರೋಗ್ಯ, ವಸ್ತ್ರ, ಚಿತ್ರಕಲೆ, ಸಣ್ಣ ಕೈಗಾರಿಕಾ ಮಳಿಗೆಗಳು ಕನ್ನಡಿಗರನ್ನು ಸೆಳೆಯಲಿವೆ. ಉದ್ಘಾಟನೆಯ ಬಳಿಕ ಜನಪದ ಸಂಜೆ, ಭಾವಗೀತೆ, ಚಲನಚಿತ್ರಗೀತೆಗಳ ಕಾರ್ಯಕ್ರಮ ನಡೆಯಲಿವೆ. ಇದೇ ಸಂದರ್ಭದಲ್ಲಿ ವೀರಲೋಕ ಪ್ರಕಟಣೆಯ 20 ಪುಸ್ತಕಗಳು ಲೋಕಾರ್ಪಣೆಗೊಳ್ಳಲಿವೆ ಎಂದು ವೀರಕಪುತ್ರ ಶ್ರೀನಿವಾಸ್ ತಿಳಿಸಿದ್ದಾರೆ.

ಶಾಲಿನಿ ಮೈದಾನದಲ್ಲಿ 20 ಸಾವಿರ ಅಡಿ ವಿಸ್ತೀರ್ಣದಲ್ಲಿ ಸುಸಜ್ಜಿತ ಟೆಂಟ್‌ನಲ್ಲಿ ಪುಸ್ತಕ ಪ್ರದರ್ಶನ, ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಪುಸ್ತಕ ಸಂತೆ ಕುರಿತು ಪ್ರಚಾರ ಅಭಿಯಾನಕ್ಕೆ ಒಂದು ಸಾವಿರಕ್ಕೂ ಹೆಚ್ಚು ಆಟೊ ಚಾಲಕರು ಕೈಜೋಡಿಸಿದ್ದಾರೆ ಎಂದು ಹೇಳಿದ್ದಾರೆ.



ನ.15ರಂದು ಬೆಳಿಗ್ಗೆ 10ಕ್ಕೆ ಸಾಂಸ್ಕೃತಿಕ ಮೆರವಣಿಗೆ ಮತ್ತು ಉದ್ಘಾಟನೆ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಕನ್ನಡ ಧ್ವಜಾರೋಹಣ ಮಾಡಲಿದ್ದಾರೆ. ಶಾಸಕ ಸಿ.ಕೆ. ರಾಮಮೂರ್ತಿ ಅಧ್ಯಕ್ಷತೆ ವಹಿಸುವರು. ಪುಸ್ತಕ ಪರಿಚಾರಕ ಅಂಕೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಪುಸ್ತಕ ಮಳಿಗೆಯನ್ನು ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ಉದ್ಘಾಟಿಸಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ. ಮಕ್ಕಳ ಮೇಳ ಉದ್ಘಾಟಿಸುವರು. ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆಹಾರ ಮೇಳ ಉದ್ಘಾಟಿಸುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅತಿಥಿಗಳಾಗಿರುವರು.

ಮಧ್ಯಾಹ್ನ 3ಕ್ಕೆ ಓದುಗ–ಲೇಖಕರ 'ಓಲೆ' ವಿಭಾಗದ ಕಾರ್ಯಕ್ರಮ ನಡೆಯಲಿದೆ. 'ಪುಸ್ತಕ ಪ್ರಕಟಣೆ ಹೇಗೆ' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸಂಜೆ 5.30ಕ್ಕೆ 6 ಕೃತಿಗಳು ಲೋಕಾರ್ಪಣೆಗೊಳ್ಳಲಿವೆ. ಸಂಜೆ 6.30ರಿಂದ 'ಜಾನಪದ ವೈಭವ' ನಡೆಯಲಿದೆ. ನ.16ರಂದು ಮಧ್ಯಾಹ್ನ 3ಕ್ಕೆ ಓದುಗ–ಲೇಖಕರ 'ಓಲೆ' ವಿಭಾಗದ ಕಾರ್ಯಕ್ರಮ ಇರಲಿದೆ. 'ಕಥೆ ಕಟ್ಟೋಣ ಬನ್ನಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಜೆ 5.30ಕ್ಕೆ 6 ಕೃತಿಗಳು ಲೋಕಾರ್ಪಣೆಗೊಳ್ಳಲಿವೆ. ಸಂಜೆ 6.30ಕ್ಕೆ 'ಭಾವ ಸಂಜೆ' ನಡೆಯಲಿದೆ.

ನ.17ರಂದು ಬೆಳಿಗ್ಗೆ 11ರಿಂದ ನಾಲ್ಕು ಕೃತಿಗಳು ಬಿಡುಗಡೆಗೊಳ್ಳಲಿವೆ. ಮಧ್ಯಾಹ್ನ 3ಕ್ಕೆ ಮೂರನೇ ದಿನದ ಓದುಗ–ಲೇಖಕರ 'ಓಲೆ' ವಿಭಾಗದ ಕಾರ್ಯಕ್ರಮ ನಡೆಯಲಿದೆ. 'ಕವಿತೆ ಹುಟ್ಟುವ ಸಮಯ' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸಂಜೆ 5.30ಕ್ಕೆ 6 ಕೃತಿಗಳ ಲೋಕಾರ್ಪಣೆಗೊಳ್ಳಲಿವೆ. 6.30ರಿಂದ 'ಸಿನಿಮಾ ಸಂಜೆ' ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಇಬ್ಬರು ಅಧಿಕಾರಿಗಳ ಅಮಾನತು

ತಿರುವನಂತಪುರ (ಪಿಟಿಐ): ಶಿಸ್ತು ಉಲ್ಲಂಘನೆ ಆರೋಪದ ಮೇರೆಗೆ ಐಎಎಸ್ ಅಧಿಕಾರಿಗಳಾದ ಕೆ. ಗೋಪಾಲಕೃಷ್ಣನ್ ಮತ್ತು ಎನ್. ಪ್ರಶಾಂತ್ ಅವರನ್ನು ಕೇರಳ ಸರ್ಕಾರ ಸೋಮವಾರ ಅಮಾನತುಗೊಳಿಸಿದೆ.

ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡು ಧರ್ಮ ಆಧಾರಿತ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿದ ಆರೋಪದ ಮೇರೆಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕ ಗೋಪಾಲಕೃಷ್ಣನ್ ಮತ್ತು ಹಿರಿಯ ಐಎಎಸ್ ಅಧಿಕಾರಿಯನ್ನು ಸಾಮಾಜಿಕ ಮಾಧ್ಯಮದಲ್ಲಿ ಟೀಕಿಸಿದ್ದಕ್ಕಾಗಿ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ವಿಶೇಷ ಕಾರ್ಯದರ್ಶಿ ಪ್ರಶಾಂತ್ ಅವರನ್ನು ಅಮಾತು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಗ್ರಾಮಸಭೆಯಿಂದ ಹೊರ ನಡೆದ ಶಾಸಕ ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: 'ಹೆಸರಘಟ್ಟ ಹುಲ್ಲುಗಾವಲು ಮೀಸಲು ಸಂರಕ್ಷಿತ ಪ್ರದೇಶ ಘೋಷಣೆ ಕುರಿತು ಇಲ್ಲಿನ ಗ್ರಾಮ ಪಂಚಾಯಿತಿಯ ಗ್ರಾಮಸಭೆಯಲ್ಲಿ ತಾವು ಮಾತನಾಡುತ್ತಿದ್ದ ದೃಶ್ಯವನ್ನು ವೇದಿಕೆಯಲ್ಲಿದ್ದ ಸದಸ್ಯೆಯೊಬ್ಬರು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡುತ್ತಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್, ಅರ್ಧದಲ್ಲೇ ಸಭೆಯಿಂದ ಹೊರ ನಡೆದರು.

ಸಭೆಯಲ್ಲಿ ಮಾತನಾಡುತ್ತಿದ್ದ ವಿಶ್ವನಾಥ್, 'ಹೆಸರಘಟ್ಟ ಹುಲ್ಲುಗಾವಲನ್ನು ರಾಜ್ಯ ವನ್ಯಜೀವಿ ಮಂಡಳಿಯು ಸಂರಕ್ಷಿತ ಮೀಸಲು ಪ್ರದೇಶ ಎಂದು ಘೋಷಿಸಿರುವುದರಿಂದ ಸುತ್ತಮುತ್ತಲಿನ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಬಿಡುವುದಿಲ್ಲ. ರೈತರು ತಮ್ಮ ಹಸುಗಳನ್ನು ಮೇಯಿಸಲು ಹುಲ್ಲುಗಾವಲಿಗೆ ಬಿಡುವಂತಿಲ್ಲ. ಪಕ್ಷಿ ಗೂಡಿನಲ್ಲಿ ಮೊಟ್ಟೆ ಇಟ್ಟಾಗ, ಅದನ್ನು ಕೆಳ ಬೀಳಿಸಿದರೆ ಅವರನ್ನೂ ಜೈಲಿಗೆ ಕಳಿಸುತ್ತಾರೆ' ಎಂದು ಹೇಳಿದರು.

ಈ ವೇಳೆ ಕಾಂಗ್ರೆಸ್ ಸದಸ್ಯೆಯೊಬ್ಬರು ಶಾಸಕರು ಮಾತನಾಡುತ್ತಿದ್ದ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದರು. ಇದನ್ನು ಗಮನಿಸಿದ ಶಾಸಕರು, ರೆಕಾರ್ಡ್ ಮಾಡುವುದನ್ನು ಸದಸ್ಯೆಗೆ ನಿಲ್ಲಿಸುವಂತೆ ಸೂಚಿಸಿ, ಆಕ್ರೋಶದಿಂದಲೇ ಸಭೆಯಿಂದ ಹೊರ ನಡೆದರು.

ನಂತರ ಆರೋಪ- ಪ್ರತ್ಯಾರೋಪ ಗಲಾಟೆ ಗದ್ದಲಗಳಿಂದಲೇ ಗ್ರಾಮ ಸಭೆ ಮುಕ್ತಾಯಗೊಂಡಿತು.

ಶಾಸಕರು ಹೆಸರಘಟ್ಟ ಹುಲ್ಲುಗಾವಲು ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತಿ ವೇದಿಕೆಯಲ್ಲೂ ದ್ವಂದ್ವವಾಗಿ ಮಾತನಾಡುತ್ತಾರೆ. ಆದ್ದರಿಂದ ಅವರ ಮಾತುಗಳನ್ನು ವಿಡಿಯೊ ಮಾಡಿಕೊಳ್ಳಲು ಮುಂದಾದೆ. ಆಗ ನನಗೆ ವಿಡಿಯೊ ಮಾಡದಂತೆ ಧಮಕಿ ಹಾಕಿ ಹೊರ ನಡೆದರು

ಸುಧಾ ದೇವರಾಜು, ಗ್ರಾಮ ಪಂಚಾಯಿತಿ ಸದಸ್ಯೆ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಬೇಕಾದರೂ ಸುಧಾ ದೇವರಾಜು ಅವರು ಅಡ್ಡಗಾಲು ಹಾಕುತ್ತಾರೆ. ಎಲ್ಲ ವಿಷಯದಲ್ಲೂ ಹಸ್ತಕ್ಷೇಪ ಮಾಡುತ್ತಾರೆ. ವೇದಿಕೆಯಲ್ಲಿದ್ದುಕೊಂಡು ವಿಡಿಯೊ ಮಾಡುವಂತಹ ಅನಿವಾರ್ಯ ಏನಿತ್ತು. ಇವರ ವರ್ತನೆಯಿಂದಾಗಿ ಶಾಸಕರು ಸಭೆಯಿಂದ ಹೊರ ನಡೆಯಬೇಕಾಯಿತು.

ಪುಷ್ಪಲತಾ, ಅಧ್ಯಕ್ಷೆ, ಹೆಸರಘಟ್ಟ ಗ್ರಾಮ ಪಂಚಾಯಿತಿ

ಅಧ್ಯಯನ ಶಿಬಿರದಲ್ಲಿ ವಕೀಲ ಸಿ.ಎಚ್. ಹನುಮಂತರಾಯ

ಸಿದ್ಧಾಂತಗಳಿಗೆ ಕಟ್ಟು ಬೀಳದ ಲಂಕೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಕೇಶ್ ಅವರ ಬರವಣಿಗೆಗೆ ಸರ್ಕಾರ ಬದಲಿಸುವ ಶಕ್ತಿ ಇತ್ತು. ಅವರು ಯಾವುದೇ ಸಿದ್ಧಾಂತಗಳಿಗೆ ಕಟ್ಟು ಬಿದ್ದು ಕೆಲಸ ಮಾಡುತ್ತಿರಲಿಲ್ಲ ಎಂದು ವಕೀಲ ಸಿ.ಎಚ್. ಹನುಮಂತರಾಯ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸೋಮವಾರ ಆಯೋಜಿಸಿದ್ದ 'ಲಂಕೇಶ್ ಬಹುತ್ವಗಳ ಶೋಧ: ಅಧ್ಯಯನ ಶಿಬಿರ' ಉದ್ಘಾಟಿಸಿ ಮಾತನಾಡಿದ ಅವರು, 'ಬರವಣಿಗೆಯಲ್ಲಿ ಅಸಾಮಾನ್ಯ ನೋಟ ಮತ್ತು ಶಕ್ತಿ ಇತ್ತು. ಅವರು ಯಾವತ್ತೂ ಪ್ರಶಸ್ತಿಗಳ ಬೆನ್ನು ಹತ್ತಲಿಲ್ಲ. ಹಾಗಾಗಿಯೇ ಅವರು ಬರವಣಿಗೆಯಲ್ಲಿ ಗುಣಮಟ್ಟ, ಶಕ್ತಿ ಉಳಿಸಿಕೊಂಡಿದ್ದರು' ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಮಾತನಾಡಿ, 'ನನ್ನ ಒಳಗಿನ ಬದಲಾವಣೆಗೆ ಅರಿವು ತುಂಬಿದವರು ಲಂಕೇಶ್ ಗುರುಗಳು. ವಯಸ್ಸಿನ ತಾರತಮ್ಯ ಇಲ್ಲದೇ ಅವರ ತಪ್ಪು ಅನ್ನು ಗುರುತಿಸಿ, ಹೇಳಿದರೆ ತಿದ್ದಿಕೊಳ್ಳುವ ಗುಣ ಇತ್ತು. ಉತ್ತಮ ಲೇಖನಗಳು ಪ್ರಕಟವಾಗುತ್ತಿದ್ದವು' ಎಂದರು.



ಕರ್ನಾಟಕ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ಶಿಬಿರದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ, ವಕೀಲ ಸಿ.ಎಚ್. ಹನುಮಂತರಾಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಶಿಬಿರದ ನಿರ್ದೇಶಕಿ ಎಂ.ಎಸ್. ಆಶಾದೇವಿ ಮತ್ತು ಸಂಚಾಲಕಿ ಎಚ್.ಆರ್. ಸುಜಾತಾ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಸಾಹಿತಿ ಬಿ.ಟಿ. ಲಲಿತಾ ನಾಯಕ್ ಮಾತನಾಡಿ, 'ಪತ್ರಿಕೆಯಲ್ಲಿ ನನಗೆ ಮೊದಲು ಬರೆಯುವ ಅವಕಾಶ ನೀಡಿದವರು ಲಂಕೇಶ್. ಬರವಣಿಗೆ ಆರಂಭಿಸುತ್ತಿದ್ದಂತೆ ನನಗೆ ಹೋರಾಟದ ಮನೋಭಾವ ಬಂತು. ಗುಣಮಟ್ಟದ ಹಾಗೂ ಅರ್ಥಪೂರ್ಣ ಲೇಖನಗಳನ್ನು ಬರೆಯುವಂತೆ ಅವರು ಪ್ರೋತ್ಸಾಹಿಸುತ್ತಿದ್ದರು. ಅವರ ಪತ್ರಿಕೆಯಲ್ಲಿ ಲೇಖನ ಬರೆದವರಿಗೆ ಯಾರಾದರೂ ಬೆದರಿಕೆ ಹಾಕಿದರೆ, ಲಂಕೇಶ್ ಹೆಸರು ಹೇಳುವಂತೆ ಧೈರ್ಯ ತುಂಬುತ್ತಿದ್ದರು' ಎಂದು ನೆನಪಿಸಿಕೊಂಡರು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ ಮಾತನಾಡಿದರು.

ನಂತರ ನಡೆದ ಗೋಷ್ಠಿಯಲ್ಲಿ 'ಲಂಕೇಶರ ಬದುಕು–ಬರಹ' ಕುರಿತು ಅಗ್ರಹಾರ ಕೃಷ್ಣಮೂರ್ತಿ, 'ನನ್ನವ್ವ ಫಲವತ್ತಾದ ಕಪ್ಪು ನೆಲ' ಕುರಿತು ಎಂ.ಎಸ್.ಆಶಾದೇವಿ ಹಾಗೂ 'ಮುಸ್ಸಂಜೆಯ ಪ್ರಸಂಗಗಳಲ್ಲಿ' ಬಗ್ಗೆ ಅಮರೇಶ ನುಗಡೋಣಿ ಅವರು ಮಾತನಾಡಿದರು.

ಮಣಿಪುರ: 11 ಶಂಕಿತ ಹಮರ್ ಉಗ್ರರು ಬಲಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳ ಜತೆಗಿನ ಗುಂಡಿನ ಚಕಮಕಿಯಲ್ಲಿ ಹಮರ್ ಸಮುದಾಯಕ್ಕೆ ಸೇರಿದ 11 ಮಂದಿ ಶಂಕಿತ ಉಗ್ರರು ಬಲಿಯಾಗಿದ್ದು, ಸಿಆರ್‌ಪಿಎಫ್‌ನ ಒಬ್ಬ ಯೋಧ ಗಾಯೊಂಡಿದ್ದಾರೆ. ಈ ಘಟನೆಯಿಂದ ಸಂಘರ್ಷಪೀಡಿತ ರಾಜ್ಯದಲ್ಲಿ ಹಿಂಸಾಚಾರ ಉಲ್ಬಣಗೊಳ್ಳುವ ಆತಂಕ ಮೂಡಿದೆ.

ಜಕುರಾಧೋರ್‌ನಲ್ಲಿ ನಿಯೋಜಿಸಿರುವ ಸಿಆರ್‌ಪಿಎಫ್ ಸಿಬ್ಬಂದಿ ಮತ್ತು ಸಮೀಪದ ಬೋರೊಬೆಕ್ರಾ ಪೊಲೀಸ್ ಠಾಣೆಯ ಮೇಲೆ ಶಸ್ತ್ರಸಜ್ಜಿತ ಉಗ್ರರು ಮಧ್ಯಾಹ್ನ 3ರ ವೇಳೆಗೆ ದಾಳಿ ಮಾಡಿದಾಗ ಈ ಘಟನೆ ನಡೆದಿದೆ ಎಂದು ಮಣಿಪುರ ಸರ್ಕಾರದ ಪ್ರಕಟಣೆ ತಿಳಿಸಿದೆ.

'ಗುಂಡಿನ ಚಕಮಕಿಯಲ್ಲಿ ಸಿಆರ್‌ಪಿಎಫ್ ಕಾನ್‌ಸ್ಟೆಬಲ್ ಸಂಜೀವ್ ಕುಮಾರ್ ಅವರು ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಅವರನ್ನು ಸಿಲ್ಚಾರ್ ವೈದ್ಯಕೀಯ ಕಾಲೇಜಿಗೆ ದಾಖಲಿಸಲಾಗಿದೆ' ಎಂದು ಸರ್ಕಾರ ಹೇಳಿದೆ.

'ಸಿಆರ್‌ಪಿಎಫ್ ಸಿಬ್ಬಂದಿ ಮತ್ತು ಪೊಲೀಸರು ಪ್ರತಿದಾಳಿ ನಡೆಸಿದ್ದಾರೆ. ಸುಮಾರು 45 ನಿಮಿಷ ಗುಂಡಿನ ಚಕಮಕಿ ನಡೆದಿದೆ. ಆ ಬಳಿಕ ಭದ್ರತಾ ಸಿಬ್ಬಂದಿ ಸ್ಥಳದಲ್ಲಿ ಶೋಧ ನಡೆಸಿದಾಗ 11 ಮೃತದೇಹಗಳು ಹಾಗೂ ಎಕೆ ರೈಫಲ್ ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ದೊರೆತಿವೆ' ಎಂದಿದೆ.



ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಯ ಸಿಬ್ಬಂದಿ ಶೋಧ ಕಾರ್ಯ ನಡೆಸಿದರು –ಪಿಟಿಐ ಚಿತ್ರ

ಸಿಆರ್‌ಪಿಎಫ್ ಮತ್ತು ಅಸ್ಸಾಂ ರೈಫಲ್ಸ್ ಯೋಧರು ಹಾಗೂ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ. ಹಿಂಸಾಚಾರ ಉಲ್ಬಣಗೊಳ್ಳುವುದನ್ನು ತಡೆಯಲು ಜಿರೀಬಾಮ್ ಜಿಲ್ಲಾಡಳಿತವು ಕರ್ಫ್ಯೂ ಘೋಷಿಸಿದೆ.

ಬಂದ್‌ಗೆ ಕರೆ

ಕುಕಿ–ಜೊ ಸಮುದಾಯಕ್ಕೆ ಸೇರಿದ ಸಂಘಟನೆಗಳ ಒಕ್ಕೂಟ 'ಕುಕಿ ಜೊ ಕೌನ್ಸಿಲ್' ಈ ಘಟನೆಯನ್ನು ಖಂಡಿಸಿದ್ದು, ಮಂಗಳವಾರ ಬೆಳಿಗ್ಗೆ 5ರಿಂದ ಸಂಜೆ 6ರ ವರೆಗೆ ಬಂದ್‌ಗೆ ಕರೆ ನೀಡಿದೆ. ಸಿಆರ್‌ಪಿಎಫ್ ಸಿಬ್ಬಂದಿಯು 'ಗ್ರಾಮದ ಸ್ವಯಂ ಸೇವಕ'ರನ್ನು ಹತ್ಯೆ ಮಾಡಿದೆ ಎಂದು ಕೌನ್ಸಿಲ್ ಆರೋಪಿಸಿದೆ.

ಮೈತೇಯಿ ಸಮುದಾಯಕ್ಕೆ ಸೇರಿದವರು ಎನ್ನಲಾದ ಶಸ್ತ್ರಸಜ್ಜಿತ ಗುಂಪೊಂದು ಕಳೆದ ಶುಕ್ರವಾರ ಹಮರ್ ಸಮುದಾಯದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿ ಬೆಂಕಿ ಹಚ್ಚಿ ಹತ್ಯೆ ಮಾಡಿತ್ತು. ಆ ಬಳಿಕ ಜಿರೀಬಾಮ್ ಜಿಲ್ಲೆಯಲ್ಲಿ ಉದ್ವಿಗ್ನ ಪರಿಸ್ಥಿತಿ ನೆಲೆಸಿದೆ.

ಕ್ಷೇಮ ಕುಶಲ





ಅಲರ್ಜಿಯೇ? ದೂರ ಇರಿ!

ಡಾ. ವೀಣಾ ಎನ್. ಸುಳ್ಯ

> ಯಾವ ವಸ್ತುವಿನಿಂದ ಅಲರ್ಜಿ ಎಂದು ಗೊತ್ತಾದಮೇಲೆ ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು; ಆಪ್ತರಿಗೆ ತಿಳಿಸಿರುವುದೂ ಮುಖ್ಯ.

ನಮ್ಮ ಶರೀರದಲ್ಲಿ ರೋಗಗಳನ್ನು ನಿಯಂತ್ರಿಸುವ ಕ್ರಿಯೆಯಲ್ಲಿ ಉತ್ಪತ್ತಿಯಾಗುವ ಆ್ಯಂಟಿಬಾಡಿ(ಪ್ರತಿರೋಧಕ)ಗಳ ಸಹಾಯದಿಂದ ಸೂಕ್ಷ್ಮಾಣುಜೀವಿಗಳಾದ ಬ್ಯಾಕ್ಟೀರಿಯಾ/ವೈರಸ್‌ಗಳನ್ನೂ ನಾಶಮಾಡುತ್ತವೆ. ಆದರೆ ವ್ಯತಿರಿಕ್ತವಾಗಿ, ರೋಗನಿಯಂತ್ರಣ ವ್ಯವಸ್ಥೆಯಲ್ಲಿ ಶರೀರಕ್ಕೆ ತೊಂದರೆ ಕೊಡದ ವಸ್ತುಗಳನ್ನು ಅಪಾಯಕಾರಿ ಎಂದು ಭಾವಿಸಿ ಪ್ರತಿರೋಧ ವ್ಯಕ್ತಪಡಿಸಿದಾಗ ಪ್ರತಿರೋಧಕಗಳು ಉತ್ಪತ್ತಿಯಾಗಿ, ಪ್ರಚೋದಕಗಳನ್ನು ಅನಗತ್ಯವಾಗಿ ಸ್ರವಿಸುವಂತೆ ಮಾಡಿ, ದೇಹದ ಆರೋಗ್ಯದಲ್ಲಿ ವ್ಯತ್ಯಾಸ ತರುವುದನ್ನೇ 'ಅಲರ್ಜಿ' ಅನ್ನುತ್ತಾರೆ. ಸಾಮಾನ್ಯ ನೆಗಡಿ, ಚರ್ಮದ ತುರಿಕೆಯಿಂದ ಹಿಡಿದು, ಪ್ರಾಣಾಪಾಯವನ್ನು ತರುವಷ್ಟವರೆಗೂ ಈ ಅಲರ್ಜಿಗಳು ಸಮಸ್ಯೆಯನ್ನು ಉಂಟುಮಾಡಬಹುದು.

ಯಾವ ವಸ್ತುಗಳು ಕಾರಣ?

- ಗಾಳಿಯಲ್ಲಿರುವ ದೂಳು, ಹೂವಿನ ಪರಾಗ, ವಾಸನೆ/ಪರಿಮಳ ಸೂಸುವ ರಾಸಾಯನಿಕಗಳು, ಪ್ರಾಣಿಗಳ ಕೂದಲು, ವಾತಾವರಣದಲ್ಲಿ ಉಷ್ಣತೆಯಲ್ಲಿ ಆಗುವ ವ್ಯತ್ಯಾಸ, ತಂಪುಗಾಳಿ, ಮುಂತಾದವು.
- **ಆಹಾರ:** ಮೊಟ್ಟೆ, ಹಾಲು, ಕಡಲೆಕಾಯಿ, ಮರದ ಕಾಯಿಗಳು, (ಬಾದಾಮಿ, ಗೋಡಂಬಿ) ಮೀನು, ಸಿಗಡಿ, ಏಡಿ, ಗೋಧಿ
- **ಕೀಟಗಳು:** ಉದಾಹರಣೆಗೆ, ಜೇನುನೊಣ ಕಡಿತ
- **ಔಷಧಗಳು:** ಪೆನ್ಸಿಲಿನ್, ಬ್ರೂಫೆನ್, ಡಿಕ್ಲೋಫೆ ನಾಕ್ (ನೋವುನಿವಾರಕ ಗುಳಿಗೆಗಳು), ಆ್ಯಂಟಿಬಯೋಟಿಕ್‌ಗಳು
- ಲಾಟೆಕ್ಸ್, ಚರ್ಮದ ವಸ್ತುಗಳು, ಮುಂತಾದವು.

ದೇಹದಲ್ಲಿ ವ್ಯತ್ಯಾಸಗಳು

- ಕಣ್ಣು ಉರಿಯುವುದು, ತುರಿಸುವುದು, ಕೆಂಪಾಗುವುದು, ನೀರು ಸುರಿಯುವುದು, ಊದಿಕೊಳ್ಳುವುದು, ಕಣ್ಣರೆಪ್ಪೆಗಳು ಊದಿಕೊಳ್ಳುವುದು.
- ಮೂಗಿನ ಹೊಳ್ಳೆಗಳಲ್ಲಿ ಕಿರಿಕಿರಿ, ಸೀನುವುದು, ಮೂಗು ಕಟ್ಟುವುದು, ನೀರು ಸುರಿಯುವುದು.
- ಶ್ವಾಸಕೋಶದಲ್ಲಿ, ಶ್ವಾಸನಾಳಗಳು ಸಂಕುಚಿತಗೊಂಡು ಉಸಿರಾಡಲು ಕಷ್ಟವಾಗುವುದು, ಉಬ್ಬಸ, ಆಸ್ತಮಾ ತೊಂದರೆ.
- ಬಾಯಿಯಲ್ಲಿ ಸ್ಪರ್ಶಜ್ಞಾನ ಇಲ್ಲವಾಗುವುದು, ಬಾಯಿಯ ಒಳಪದರ, ತುಟಿ ದಪ್ಪವಾಗುವುದು ನಾಲಗೆ ದಪ್ಪವಾಗುವುದು, ಗಂಟಲಿನ ಒಳಭಾಗ ಊದಿಕೊಂಡು ಎಂಜಲು ನುಂಗಲು ಕಷ್ಟವಾಗಬಹುದು.
- ಚರ್ಮದಲ್ಲಿ ತುರಿಕೆ, ಕೆಂಪು ಕೆಂಪಾದ ಕಲೆಗಳು ಕಾಣಿಸಿಕೊಳ್ಳುವುದು, ಒಂದೆರಡು ದದ್ದೆಗಳು(ದಡಿಕೆ) ಕಾಣಿಸಿಕೊಂಡು, ಕೆಲವು ನಿಮಿಷಗಳಲ್ಲಿ ದೇಹವನ್ನೆಲ್ಲ ವ್ಯಾಪಿಸುವುದು; ಅಂಗೈಯಲ್ಲಿ ಊತ, ಬೆರಳುಗಳು ದಪ್ಪಗಾಗುವುದು, ಮುಖದಲ್ಲಿಯೂ ಊತ.
- ತಲೆ ತಿರುಗುವುದು, ತಲೆನೋವು , ವಾಕರಿಕೆ, ವಾಂತಿ, ಹೃದಯಬಡಿತ ಹೆಚ್ಚಾಗುವುದು, ಪ್ರಜ್ಞೆ ತಪ್ಪಿ ಬೀಳುವುದು; ರಕ್ತದೊತ್ತಡ ಕಡಿಮೆಯಾಗುವುದು; ಹೃದಯಬಡಿತ ನಿಲ್ಲಲೂಬಹುದು.
- ಅಲರ್ಜಿಯನ್ನು ಉಂಟುಮಾಡುವ ವಸ್ತುವಿಗೆ 'ಅಲರ್ಜನ್' ಎಂದು ಕರೆಯಬಹುದು. ಇದು ದೇಹವನ್ನು ಪ್ರವೇಶಿಸಿದಾಗ, ಅದನ್ನು ವಿಷ ಅಥವಾ ಪರಕೀಯ ಎಂದು ಭಾವಿಸಿ, ಅದಕ್ಕೆ ಬಿಳಿಯ ರಕ್ತಕಣಗಳು ದೇಹದಲ್ಲಿ ಪ್ರತಿಕ್ರಿಯಿಸುವ ರೀತಿಯಿಂದ ಅಲರ್ಜಿಯಲ್ಲಿ ನಾಲ್ಕು ವಿಧಾನಗಳೆಂದು ವಿಭಾಗಿಸಬಹುದು.

ಪತ್ತೆ ಹೇಗೆ?

ಅಲರ್ಜಿಯ ಸಮಸ್ಯೆಗೆ ಒಳಾಗದ ಮೇಲೆಯೇ ಯಾವ ವಸ್ತು, ಔಷಧ, ಆಹಾರ ತನ್ನ ದೇಹಕ್ಕೆ ಒಗ್ಗುವುದಿಲ್ಲ ಎಂದು ಗೊತ್ತಾಗುವುದು. ಸಾಮಾನ್ಯವಾಗಿ ನಮಗೆ ಒಂದು ವಸ್ತುವಿಗೆ ಅಲರ್ಜಿ ಇದೆ ಎಂದಾದಲ್ಲಿ, ಅಲರ್ಜಿಯ ಸಮಸ್ಯೆಗಳು ಬೇರೆ ಬೇರೆ ವಸ್ತುಗಳಿಗೂ ಇರುವ ಸಾಧ್ಯತೆ ಹೆಚ್ಚು.

ಯಾವ ವಸ್ತುವಿನಿಂದ ಅಲರ್ಜಿ ಎಂದು ಗೊತ್ತಾದಮೇಲೆ ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು; ಆಪ್ತರಿಗೆ ತಿಳಿಸಿರುವುದೂ ಮುಖ್ಯ. ಉದಾಹರಣೆಗೆ, ಒಂದು ಆಹಾರ ತನಗೆ ಅಲರ್ಜಿ ಎಂದಾಗ ಅದನ್ನು ಮತ್ತೆ ಉಪಯೋಗಿಸದೆ ಇರುವುದು ಉತ್ತಮ. ಔಷಧಸೇವನೆಯಿಂದ ಅಲರ್ಜಿ ಉಂಟಾದಾಗ ಅದನ್ನು ಬರೆದಿಟ್ಟುಕೊಂಡು, ಅಥವಾ ಆ ಔಷಧವನ್ನು ವೈದ್ಯರಿಗೆ ತೋರಿಸಿ ಹೇಳುವುದೂ ಒಳ್ಳೆಯದು.

ನಮಗೆ ಯಾವುದಕ್ಕೆ ಅಲರ್ಜಿ ಎಂದು ಗೊತ್ತಾಗದೆ ಇದ್ದಾಗ, 'ಪ್ಯಾಚ್ ಟೆಸ್ಟ್' ಮಾಡಿಸಬಹುದು. ಬೇರೆ ಬೇರೆ ಪ್ರತಿಜನಕಗಳನ್ನು (ಹೂ ದೂಳಿನ ಕಣ, ಹುಲ್ಲು, ಕೀಟದ ಪ್ರೋಟೀನ್, ಬಟಾಣಿಯ ತಿರುಳು) ಚರ್ಮದ ಕೆಳಗೆ ಚುಚ್ಚಿ ಪ್ರತಿಕ್ರಿಯೆಯನ್ನು ಗಮನಿಸಿ, ಅಲರ್ಜಿಯ ಸಾಧ್ಯತೆಯನ್ನು ಕಂಡುಹಿಡಿಯುತ್ತಾರೆ. ದೇಹಭಾಗದಲ್ಲಿ ಸಣ್ಣದಾಗಿ ಕೆಂಪಾಗುವಿಕೆಯಿಂದ ಹಿಡಿದು ಊತದ ಗುಳ್ಳೆಯಾಗುವ ಸಾಧ್ಯತೆಗಳು ಇವೆ. ರಕ್ತಪರೀಕ್ಷೆಯಲ್ಲಿ ಹೆಚ್ಚಿದ ಬಿಳಿರಕ್ತ ಕಣಗಳು, 'ಇಯೋಸಿನೊಫೈಲ್ಸ್' ಹೆಚ್ಚು ಇರುವುದನ್ನು ಗುರುತಿಸಬಹುದು. IgE ಮಟ್ಟವನ್ನೂ ಗುರುತಿಸಲಾಗುತ್ತದೆ.

ಚಿಕಿತ್ಸೆ

ಸಾಮಾನ್ಯ ಅಲರ್ಜಿಗಳಿಗೆ ಸಂದರ್ಭದಲ್ಲಿ ತೀವ್ರತೆಯನ್ನು ಗಮನಿಸಿ 'ಆ್ಯಂಟಿ ಈಸ್ಟಮಿನ್' ಮಾತ್ರೆಗಳು ಮತ್ತು ಚುಚ್ಚುಮದ್ದುಗಳ ಮೂಲಕ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಸ್ಟಿರಾಯ್ಡ್‌ಗಳ ಬಳಕೆಯು ಅನೇಕ ಸಲ ರೋಗಿಗಳ ಜೀವವನ್ನು ಉಳಿಸುವಲ್ಲಿ ಕೆಲಸ ಮಾಡಿದೆ ಎನ್ನುವುದು ಸತ್ಯ. ಮೂಗಿನ ಅಲರ್ಜಿ ಮತ್ತು ಅಸ್ತಮಾದಂತಹ ಕಾಯಿಲೆಗಳಿಗೆ ಸ್ಟಿರಾಯ್ಡ್ ಅನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ 'ಇನ್‌ಹೇಲರ್'ಗಳ ಮೂಲಕ ಬಳಸಬಹುದು. ಪ್ರತಿರೋಧವನ್ನು ಕಡಿಮೆ ಮಾಡುವಂತಹ ಮಾತ್ರೆಗಳನ್ನು ಬಳಸಬಹುದು (ಮೌಂಟೆಲೋ ಕಾಸ್ಟ್). ತೀವ್ರ ಪ್ರಮಾಣದಲ್ಲಿ ಅಲರ್ಜಿ ಉಂಟಾದಾಗ ತುರ್ತುಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆಯನ್ನು ಕೊಡಬೇಕಾಗುತ್ತದೆ.

ತಡೆ ಹೇಗೆ?

- ಯಾವ ವಸ್ತುವಿನಿಂದ ಅಲರ್ಜಿ ಎಂದು ತಿಳಿದುಕೊಂಡು ಆ ವಸ್ತುವಿನಿಂದ ದೂರವಿರುವುದು.
- ಅಲರ್ಜಿ ಉಂಟುಮಾಡುವ ಆಹಾರವನ್ನು ಸೇವಿಸದಿರುವುದು.
- ಪ್ರಾಣಿಗಳಿಂದ ಅಲರ್ಜಿಯಾದರೆ ಅವುಗಳಿಂದ ದೂರವಿರುವುದು.
- ಜೀವನಶೈಲಿಯಲ್ಲಿ ಬದಲಾವಣೆ.
- ಶೀತದ ಅಲರ್ಜಿ ಇರುವವರು ತಂಪು ವಾತಾವರಣವನ್ನು ಪ್ರವೇಶಿಸುವಾಗ ಬೆಚ್ಚಗಿನ ಉಡುಗೆಯನ್ನು ಧರಿಸಬೇಕು.
- ಸಿಟ್ರಸ್ ಹಣ್ಣು, ವಿಟಮಿನ್ ಸಿ ಭರಿತ ಆಹಾರ, ಕಡಿಮೆ ಪ್ರಮಾಣದ ಕಾರ್ಬೋಹೈಡ್ರೇಟ್ಸ್ ಇರುವ ಆಹಾರದ ಸೇವನೆ.
- ಇಮ್ಯೂನೋಥೆರಪಿ ಮೂಲಕ ದೊಡ್ಡ ಪ್ರಮಾಣದ ಅಲರ್ಜಿಯನ್ನು ನಿಯಂತ್ರಿಸಬಹುದು.

❖

ಕುಡಿತಕ್ಕೆ ಬೇಕು ಕಡಿತ



ಡಾ. ಕುಶ್ವಂತ್ ಕೋಳಿಬೈಲು

ಜನರು ನಿತ್ಯ ಬಳಸುವ ಯಾವುದೇ ಉತ್ಪನ್ನವಿರಲಿ, ಅದಕ್ಕೆ ಪ್ರಪಂಚದಲ್ಲಿ ಬಹಳ ದೊಡ್ಡ ಮಾರುಕಟ್ಟೆಯಿರುವುದು ಸಹಜ. ಒಮ್ಮೆ ಒಂದು ಉತ್ಪನ್ನಕ್ಕೆ ಮಾರುಕಟ್ಟೆ ಸೃಷ್ಟಿಯಾಗಿ ಅದೊಂದು ದೊಡ್ಡ ಉದ್ಯಮವಾಗಿ ಬೆಳೆದಾಗ, ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ಅಬ್ಬರದ ಪ್ರಚಾರ ಮತ್ತು ಸುಳ್ಳು ಮಾಹಿತಿಗಳ ಮೂಲಕ ಜನರಿಗೆ ತಲುಪಿಸಲು ತೊಡಗುತ್ತವೆ. ಆಹಾರ ಮತ್ತು ಔಷಧಗಳ ಕ್ಷೇತ್ರವೂ ಇದಕ್ಕೆ ಹೊರತಲ್ಲ.

ಒಂದನೆಯ ಮತ್ತು ಎರಡನೆಯ ಮಹಾಯುದ್ಧದ ಸಮಯದಲ್ಲಿ ಧೂಮಪಾನದ ಅಭ್ಯಾಸವು ಸಾಮಾಜಿಕವಾಗಿ ಒಪ್ಪಿಕೊಂಡ ಪದ್ಧತಿಯಾಯಿತು. ಈ ಕಾರಣದಿಂದಾಗಿ ಜಗತ್ತಿನಾದ್ಯಂತ ಆಗಿನ ಹಲವರು ಮಹಾನಾಯಕರು ಕೈಯಲ್ಲಿ ಸಿಗರೇಟು ಹಿಡಿದಿರುವ ಚಿತ್ರಗಳೇ ಕಾಣಿಸಿಕೊಂಡವು. ಸಿಗರೇಟಿನಿಂದ ಆರೋಗ್ಯ ಮತ್ತು ಏಕಾಗ್ರತೆಗಳು ವೃದ್ಧಿಸುತ್ತವೆ ಎಂಬ ಜಾಹೀರಾತುಗಳು ಕೂಡ ಚಾಲ್ತಿಯಲ್ಲಿದ್ದವು. ಸಿಗರೇಟಿನ ಸೇವನೆಗೂ, ಶ್ವಾಸಕೋಶದ ಕ್ಯಾನ್ಸರ್ ಹಾಗೂ ಇನ್ನಿತರೆ ಕ್ಯಾನ್ಸರ್ ಕಾಯಿಲೆಗಳಿಗೂ ನೇರವಾದ ಸಂಬಂಧವಿರುವ ಬಗ್ಗೆ ಹಲವು ವೈಜ್ಞಾನಿಕ ವರದಿಗಳು ಆಗಲೇ ಪ್ರಕಟವಾಗಿದ್ದವು. ಹೀಗಿದ್ದೂ ಸಿಗರೇಟು ಕಂಪೆನಿಗಳು ಲಾಬಿ ನಡೆಸಿ, ಸಿಗರೇಟಿಗೂ ಕ್ಯಾನ್ಸರ್‌ಗೂ ಯಾವುದೇ ಸಂಬಂಧವಿಲ್ಲವೆಂಬ ಸುಳ್ಳು ಮಾಹಿತಿಯನ್ನು ಹರಡಿದವು.

ಕೆಲವು ದಶಕಗಳಿಂದೀಚೆಗೆ ಸರ್ಕಾರಗಳು ಸಿಗರೇಟಿನ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಶಾಲಾವಲಯದ ಸುತ್ತಮುತ್ತ ಸಿಗರೇಟ್‌ಗಳು ಲಭ್ಯವಾಗದಂತೆ ನೀತಿ-ನಿಯಮಗಳನ್ನು ಜಾರಿಗೆ ತಂದಿವೆ. ಈಗ ಸಿಗರೇಟಿನ ಜಾಹೀರಾತುಗಳನ್ನು ಕಾಣಲಾರೆವು. ಆದರೆ ವಿವಿಧ ಮದ್ಯಕಂಪನಿಗಳ ಜಾಹೀರಾತುಗಳನ್ನು ಹೇರಳವಾಗಿ ನೋಡಬಹುದು.

ಮದ್ಯತಯಾರಿಕೆ ಹಾಗೂ ಮಾರಾಟ ದೊಡ್ಡ ಉದ್ಯಮವಾಗಿರುವ ಕಾರಣ, ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ನಿಖರವಾದ ಮಾಹಿತಿ ಜನರನ್ನು ತಲುಪುತ್ತಿಲ್ಲ. ಸ್ವಲ್ಪ ಕುಡಿದರೆ ಹೃದಯದ ಕಾಯಿಲೆಗಳಿಗೆ ಒಳ್ಳೆಯದು, ಶೀತವಾದರೆ ಸ್ವಲ್ಪ ಬ್ರಾಂದಿ ಕುಡಿಯಬಹುದು – ಹೀಗೆ ಅಸ್ಪಷ್ಟ ಮಾಹಿತಿಗಳನ್ನು ತೇಲಿಬಿಟ್ಟು ಜನರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ದೇವಲೋಕದಲ್ಲಿಯೂ ಸುರಪಾನ ಮಾಡುವ ಅಭ್ಯಾಸವಿತ್ತು ಎಂಬ ನೆಪವೊಡ್ಡಿ ಮದ್ಯಪಾನವನ್ನು ಸಮರ್ಥಿಸಿಕೊಳ್ಳಲಾಗುತ್ತದೆ!

ಆದರೆ, ನೆನಪಿರಲಿ ಕಡಿಮೆ ಪ್ರಮಾಣದಲ್ಲಿ ಮದ್ಯಪಾನ ಮಾಡಿದರೂ, ಆ ಅಭ್ಯಾಸ ಹಲವು ಅನಾರೋಗ್ಯಗಳಿಗೆ ಕಾರಣವಾಗುತ್ತದೆ. ಇಪ್ಪತ್ತೊಂದು ಬಗೆಯ ಕ್ಯಾನ್ಸರ್ ಕಾಯಿಲೆಗಳಿಗೆ ಮದ್ಯಪಾನ ಸೇವನೆಯೇ ಕಾರಣ ಎಂಬುದರ ಬಗ್ಗೆ ನಮಗೆ ಅರಿವಿಲ್ಲ. ಅತಿ ಹೆಚ್ಚು ಮದ್ಯಪಾನದ ಸೇವನೆಯಿಂದ ಯಕೃತ್ತಿನ (ಲಿವರ್) ವೈಫಲ್ಯ ಉಂಟಾಗಿ ಕಾಮಾಲೆ ಕಾಯಿಲೆ ಬರಬಹುದು.


ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಮದ್ಯಪಾನ ಸೇವನೆಯ ಅಭ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಮದ್ಯವನ್ನು ಜೀರ್ಣಿಸಿಕೊಳ್ಳಬಲ್ಲ ಸಾಮರ್ಥ್ಯದಲ್ಲಿ ಪುರುಷರ ಯಕೃತ್ತಿನ ಸಾಮರ್ಥ್ಯದಲ್ಲಿ ಶೇಕಡ ಹತ್ತರಷ್ಟು ಮಾತ್ರ ಮಹಿಳೆಯರ ಯಕೃತ್ತು ನಿಭಾಯಿಸಬಲ್ಲದು. ಈ ಕಾರಣದಿಂದ ಮದ್ಯಸೇವನೆಯ ಅಭ್ಯಾಸ ಇರುವ ಮಹಿಳೆಯರಲ್ಲಿ ಯಕೃತ್ತಿನ ಸಮಸ್ಯೆಗಳು ತೀವ್ರವಾಗುತ್ತವೆ. ಮುಂದುವರಿದ ದೇಶಗಳಲ್ಲಿ ಈಗ ಯಕೃತ್ತಿನ ಕಸಿಗಾಗಿ ಕಾದಿರುವವರ ಸಾಲಿನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಮನುಷ್ಯನು ಸೇವಿಸುವ ಆಹಾರವು ಸಣ್ಣ ಮತ್ತು ದೊಡ್ಡ ಕರುಳಿನ ಮೂಲಕ ರಕ್ತವನ್ನು ಸೇರಿದರೆ, ಮದ್ಯವು ಹೊಟ್ಟೆಯಿಂದ ನೇರವಾಗಿ ಯಕೃತ್ತಿನ ಮೂಲಕ ರಕ್ತವನ್ನು ಸೇರಿಕೊಂಡು ಮಿದುಳನ್ನು ಪ್ರವೇಶಿಸುತ್ತದೆ. ಮಿದುಳಿನ ಮೇಲೆ ಬೀರುವ ಪ್ರಭಾವದ ಕಾರಣದಿಂದ ಕುಡಿದವರಲ್ಲಿ ಆತ್ಮವಿಶ್ವಾಸ ಹೆಚ್ಚಾದಂತೆ ಕಾಣುತ್ತದೆ. ಮನುಷ್ಯನ ಮಿದುಳಿನ ಮುಂಭಾಗದಲ್ಲಿರುವ 'ಕಾರ್ಟೆಕ್ಸ್' ಭಾಗದಲ್ಲಿ ಮದ್ಯವು ಬೀರುವ ಪ್ರಭಾವದ ಕಾರಣದಿಂದ ಆತನ ವಿವೇಚನಾಶಕ್ತಿ ಮಂಕಾಗುವುದರ ಜತೆಗೆ ಹುಸಿ ಆತ್ಮವಿಶ್ವಾಸವೂ ಹೆಚ್ಚಾಗುತ್ತದೆ. ಈ ಕಾರಣದಿಂದಾಗಿ ಪಾನಮತ್ತರು ಅಸಂಬದ್ಧವಾಗಿ ಮತ್ತು ಅನಗತ್ಯವಾಗಿ ಮಾತನಾಡುತ್ತಾರೆ. ಕುಡಿದ ಬಳಿಕ ಕ್ರಿಯಾಶೀಲರಾದಂತೆ ಕಂಡುಬರುವ ಕಾರಣದಿಂದಾಗಿ ಮದ್ಯವು ಮಿದುಳನ್ನು ಉತ್ತೇಜಿಸುತ್ತದೆ ಎಂಬ ತಪ್ಪು ಕಲ್ಪನೆ ಸಮಾಜದಲ್ಲಿದೆ. ಅಸಲಿಗೆ ನಿಯಮಿತ ಮದ್ಯಸೇವನೆಯಿಂದ ಮಿದುಳು ಮಂಕಾಗುತ್ತದೆ. ಮದ್ಯಪಾನಿಗಳು ಜ್ಞಾಪಕಶಕ್ತಿ ಮತ್ತು ಸೃಜನಶೀಲಶಕ್ತಿಯನ್ನು ಕಳೆದುಕೊಳ್ಳುತ್ತಾರೆ ಎಂಬ ಅಂಶವನ್ನು ವಿವಿಧ ವೈಜ್ಞಾನಿಕ ವರದಿಗಳು ಈಗಾಗಲೇ ದೃಢಪಡಿಸಿವೆ. ಗರ್ಭಿಣಿಯರು ಮದ್ಯಪಾನ ಮಾಡಿದರೆ, ಹುಟ್ಟುವ ಮಗುವಿನ ತೂಕ ಮತ್ತು ಮಿದುಳಿನ ಗಾತ್ರವು ಕಡಿಮೆಯಾಗುವ ಅಂಶವೂ ಸಂಶೋಧನೆಗಳ ಮೂಲಕ ಸಾಬೀತಾಗಿದೆ. ಬಾಯಿಯಿಂದ ಹಿಡಿದು ಅನ್ನನಾಳ, ಹೊಟ್ಟೆ, ಕರುಳು, ಯಕೃತ್ತು ಮತ್ತು ದೇಹದ ವಿವಿಧ ಭಾಗಗಳಲ್ಲಿ ಕ್ಯಾನ್ಸರ್ ಕಾಯಿಲೆ ಬರುವ ಸಾಧ್ಯತೆಯೂ ಹೆಚ್ಚು. ಕುಡಿತದ ಕಾರಣದಿಂದಾಗಿ ಸರಿಯಾದ ಪೌಷ್ಟಿಕಾಹಾರವನ್ನು ಸೇವಿಸದ ಕಾರಣ ಅಗತ್ಯ ವಿಟಮಿನ್‌ಗಳ ಕೊರತೆಯೂ ಮದ್ಯಪಾನಿಗಳಲ್ಲಿ ಉಂಟಾಗಬಹುದು. ಮದ್ಯಪಾನ ಮಾಡುವವರಲ್ಲಿ 'ಪ್ಯಾಂಕ್ರಿಯಾಸ್' ಗ್ರಂಥಿಯಲ್ಲಿ ಸಮಸ್ಯೆ ಕಂಡುಬಂದು, ಮಧುಮೇಹವು ಉಲ್ಬಣಗೊಳ್ಳಬಹುದು. ಪುರುಷರಲ್ಲಿ ಮದ್ಯಪಾನದಿಂದ 'ಟೆಸ್ಟೊಸ್ಟಿರೋನ್' ಹಾರ್ಮೋನ್ ಪ್ರಮಾಣ ಕಡಿಮೆಯಾಗಿ, ವೀರ್ಯದ ಗುಣಮಟ್ಟ ಹಾಗೂ ಪ್ರಮಾಣ ಕಡಿಮೆಯಾಗಬಹುದು. ಮದ್ಯವನ್ನು ಸೇವಿಸಿದರೆ ಒಳ್ಳೆಯ ನಿದ್ರೆ ಬರುತ್ತದೆ ಎಂಬ ತಪ್ಪು ಕಲ್ಪನೆಯೂ ನಮ್ಮಲ್ಲಿದೆ. ಮದ್ಯಪಾನ ಮಾಡಿದರೆ ನಿದ್ರೆಯ ಗುಣಮಟ್ಟವು ಕಳಪೆಯಾಗುತ್ತದೆ. ಈ ಕಾರಣದಿಂದಾಗಿ ಮಿದುಳಿನ ಜ್ಞಾಪಕಶಕ್ತಿಯೂ ಕುಗ್ಗುತ್ತದೆ. ಅಂಥವರು ಎಷ್ಟೇ ನಿದ್ರೆ ಮಾಡಿದರೂ ಮರುದಿನ ನಿರುತ್ಸಾಹಿಗಳಾಗಿಯೇ ಉಳಿಯುತ್ತಾರೆ. ಯಕೃತ್ತು ಅಂಗಾಂಗದ ವೈಫಲ್ಯದ ಹೊರತಾಗಿ ಮದ್ಯಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಸರಿಯಾದ ಮಾಹಿತಿ ಇಲ್ಲ. ಹೆಚ್ಚು ಕುಡಿದರೆ ಯಕೃತ್ತಿನ ವೈಫಲ್ಯವಾಗುತ್ತದೆ. ಆದರೆ ಇತಿಮಿತಿಯಲ್ಲಿ ಕುಡಿದರೆ ಏನೂ ಆಗುವುದಿಲ್ಲವೆಂಬ ಭ್ರಮೆಯಲ್ಲಿರುವವರಿಗೆ ಹೆಚ್ಚಿನ ಅರಿವನ್ನು ಮೂಡಿಸುವ ಅಗತ್ಯವಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–10 ವೃತ್ತಗಳು

3) 5 cm ತ್ರಿಜ್ಯವಿರುವ ಒಂದು ವೃತ್ತದಲ್ಲಿ ಜ್ಯಾ PQ ಉದ್ದವು 8cm ಆಗಿದೆ. P ಮತ್ತು Q ಬಿಂದುವಿನಲ್ಲಿನ ಸ್ಪರ್ಶಕಗಳು T ಬಿಂದುವನಲ್ಲಿ ಸಂಧಿಸುತ್ತವೆ. (ಚಿತ್ರ ನೋಡಿ). TP ಯ ಉದ್ದವನ್ನು ಕಂಡುಹಿಡಿಯಿರಿ.



ಪರಿಹಾರ: OT ಸೇರಿಸಿ. ಅದು PQ ರೇಖೆಯನ್ನು ಬಿಂದು R ನಲ್ಲಿ ಸಂಧಿಸಲಿ. ಆಗ Δ TPQ ಒಂದು ಸಮದ್ವಿಬಾಹು ತ್ರಿಭುಜ ಮತ್ತು TO ರೇಖೆಯು∠PTQದ ಕೋನಾರ್ಧಕ ರೇಖೆಯಾಗಿದೆ ಆದ್ದರಿಂದ OT ⊥ PQ ಮತ್ತು ಆದ್ದರಿಂದ OT ರೇಖೆಯು PQ ಅನ್ನು ಅರ್ಧಿಸುತ್ತದೆ. ಇದರಿಂದ,PR = RQ = 4 cm.

ಹಾಗೆಯೇ,

$$OR = \sqrt{OP^2 - PR^2} = \sqrt{5^2 - 4^2}\ cm = 3\ cm$$

ಈಗ, ∠TPR +∠RPO = 90⁰ = ∠TPR + ∠PTR

ಆದ್ದರಿಂದ, ∠RPO =∠PTR

ಆದ್ದರಿಂದ, ಲಂಬಕೋನ ತ್ರಿಭುಜ TRP ಯು ಲಂಬಕೋನ ತ್ರಿಭುಜ PRO ಗೆ ಸಮರೂಪವಾಗಿದೆ. (ಕೋನ – ಕೋನ ನಿರ್ಧಾರಕ ಗುಣ).

ಇದರಿಂದ, $\frac{TP}{PO} = \frac{RP}{RO}$, ಅಂದರೆ, $\frac{TP}{5} = \frac{4}{3}$ ಅಥವಾ $TP = \frac{20}{3}$ cm.

ಗಮನಿಸಿ: TP ಯನ್ನು ಪೈಥಾಗೊರಸ್‌ನ ಪ್ರಮೇಯದ ಮೂಲಕ ಈ ಕೆಳಗಿನಂತೆ ಕಂಡುಹಿಡಿಯಬಹುದು.

TP = x ಮತ್ತು TR = y ಎಂದಿರಲಿ.

ಆಗ, $x^2 = y^2 + 16$ [Δ PRT ದಿಂದ] (1)

$x^2 + 5^2 = (y + 3)2$ [Δ OPT ದಿಂದ] (2)

ಸಮೀಕರಣ (1) ಅನ್ನು (2) ರಿಂದ ಕಳೆದಾಗ,

ಆದ್ದರಿಂದ, $x^2 = \left(\frac{16}{3}\right)^2 + 16 = \frac{16}{9}(16 + 9) = \frac{16 \times 25}{9}$ [(1) ರಿಂದ]

ಅಥವಾ $x = \frac{20}{3}$ cm


ಅಭ್ಯಾಸ 4.2

ಪ್ರಶ್ನೆ 1 ರಿಂದ 3 ರವರೆಗೆ ಸರಿಯಾದ ಆಯ್ಕೆಯನ್ನು ಆರಿಸಿ ಮತ್ತು ಉತ್ತರವನ್ನು ಸಮರ್ಥಿಸಿರಿ.

1. ಒಂದು ಬಿಂದು Q ದಿಂದ, ವೃತ್ತಕ್ಕೆ ಎಳೆದ ಸ್ಪರ್ಶಕದ ಉದ್ದವು 24 cm ಮತ್ತು ವೃತ್ತಕೇಂದ್ರ ಹಾಗೂ Q ಬಿಂದು ನಡುವಿನ ದೂರ 25 cm ಆದರೆ ವೃತ್ತದ ತ್ರಿಜ್ಯವು ....

A) 7 cm B) 12 cm
C) 15 cm D) 24.5 cm

ಉತ್ತರ: (ಸಿ) 7 ಸೆಂ.ಮೀ



O ಮತ್ತು P ಸೇರಿಸುವಂತೆ ರೇಖೆಯನ್ನು ಎಳೆಯಿರಿ ಆಗ OPQ ಲಂಭ ಕೋನ ತ್ರಿಭುಜವಾಗುತ್ತದೆ ಅದರಲ್ಲಿ OP ⊥ PQ

OQ = 25 cm ಮತ್ತು PQ = 24 cm

ಮತ್ತು ಪೈಥಾಗೋರಸ್ ಪ್ರಮೇಯದ ಪ್ರಕಾರ

ΔOPQ,

$OQ^2 = OP^2 + PQ^2$

$(25)^2 = OP^2 + (24)^2$


$OP^2 = 625 - 576$

$OP^2 = 49$

OP = 7 cm

ಹೀಗಾಗಿ ವೃತ್ತದ ತ್ರಿಜ್ಯವು=7 cm

2. ಚಿತ್ರ 10.11 ರಲ್ಲಿ, ∠POQ = 110^0 ಆಗಿರುವಂತೆ, O ಕೇಂದ್ರವುಳ್ಳ ವೃತ್ತಕ್ಕೆ TP ಮತ್ತು TQ ಸ್ಪರ್ಶಕಗಳಾಗಿವೆ. ಹಾಗಾದರೆ ∠PTQ ದ ಅಳತೆಯು ....



A) 60° B) 70°
C) 80° D) 90 °

ಉತ್ತರ: ಬಿ) 70^0

ವಿವರಣೆ:– ಚಿತ್ರವನ್ನು ಗಮನಿಸಿದರೆ OP ಮತ್ತು OQ ತ್ರಿಜ್ಯಗಳಾಗಿವೆ PT ಮತ್ತು TQ.ಸ್ಪರ್ಶಕವಾಗಿವೆ. ಹೀಗಾಗಿ

OP ⊥ PT ಮತ್ತು TQ ⊥ OQ

∴ ∠OPT = ∠OQT = 90°

quadrilateral POQTನ ಆಂತರಿಕ ಕೋನಗಳ ಮೊತ್ತ 360^0

ಹೀಗಾಗಿ ∠PTQ+∠POQ+∠OPT+∠OQT = 360°


∠PTQ +90°+110°+90° = 360°

∠PTQ = 70°

3. 'O' ವೃತ್ತಕೇಂದ್ರವಿರುವ ಒಂದು ವೃತ್ತಕ್ಕೆ P ಬಿಂದುವಿನಿಂದ ಎಳೆದ ಸ್ಪರ್ಶಕಗಳಾದ PA ಮತ್ತು PB ಗಳ ನಡುವಿನ ಕೋನ 80₀ಆದರೆ POA ದ ಅಳತೆಯು

A) 50^0 B) 60^0
C) 70^0 D) 80^0

ಉತ್ತರ:– ಎ) 50^0



(ಮುಂದುವರಿಯುವುದು).

II PUC: PHYSICS

MOVING CHARGES AND MAGNETISM

13. What are the advantages of a moving coil galvanometer?

Ans:- The advantages of a moving coil galvanometer are –

a) It can be made extremely sensitive, so that even as minute current in the electric circuit can be detected.

b) Since the deflection of the coil of the galvanometer is directly proportional to the current, a linear scale can be used.

c) As the magnetic field (B) is very strong, so the external magnetic fields cannot change the deflection of the coil of the galvanometer. Thus, it can be set in any position.

d) It is a dead beat type galvanometer.

e) Moving coil galvanometer can be made ballistic by using a non-conducting frame instead of a metallic frame.

14. Two wires carrying current in the same direction attract each other. But two beams of electrons travelling in the same direction repel each other. Explain why?

Ans:- The two wires carrying current in the same direction attract each other due to magnetic interaction. Net charge on the current carrying wire is zero and hence there is no electrostatic interaction between the wires.

In case of two beams of electrons, electrostatic interaction (repulsive) is much more than the magnetic interaction (attractive). Hence the two beams of electrons repel each other.

15. During solar flare charged particles collide with atoms & molecules of atmosphere. Name the excited atoms responsible for green & pink lights.

Ans:- Green light is produced by excited oxygen atoms. Pink light is produced by excited nitrogen atoms.

16. What is an Ammeter?

Ans:- An ammeter is an instrument used to measure electric current in an electric circuit. It is a modified form of galvanometer.

17. Mention the draw backs that may happen while using a galvanometer to measure the amount of electric current flowing in the circuit.

Ans:- When a galvanometer is used to measure the amount of electric current flowing in the circuit, the following two things may happen -

a) The large resistance of the galvanometer will change the electric current in the circuit.

b) The large amount of current in the circuit may damage or burn the galvanometer.

18. What should be the characteristic of the instrument used to measure the current in a circuit?

Ans:- The device or instrument used to measure the current in a circuit should be of very low of practically zero resistance.

19. What is the resistance of an ideal ammeter?

Ans:- The resistance of an ideal ammeter is zero.

20. How should the ammeter be connected in the circuit?

Ans:- An ammeter is always connected in series in the circuit in which current is to be measured. If the ammeter is connected ion parallel to the circuit, it will draw large amount of current because of its small resistance. Hence, it may get damaged.

21. How is a galvanometer converted into an ammeter?

Ans:- A galvanometer can be converted into an ammeter by connecting a low resistance called shunt parallel to the galvanometer.

22. What is the shunt resistance equal to?

Ans:- The shunt resistance is equal to –

$$r_S = \left(\frac{I_g}{I - I_g}\right) R_G$$

where, r_s is the shunt resistance,

R_G is the resistance of a galvanometer,

I_g is the current flowing through the galvanometer corresponding to which galvanometer gives the full scale deflection.

I is the total current to be measured by an ammeter in the circuit.

23. A galvanometer of resistance 10 Ω gives full scale deflection for a current of 4 mA. How can it be converted into ammeter of range 0 to 5 A?

Soln:- Galvanometer is converted to ammeter by selecting a Shunt is given by,

$$r_S = \left(\frac{I_g}{I - I_g}\right) R_G$$

Given that – I_g = 4 mA = 4 x 10-3 A

I = 5 A, R_G = 10 Ω

$$r_S = \frac{(4 \times 10^{-3}) \times 10}{5 - (4 \times 10^{-3})} = 0.008\,\Omega$$

24. What is a Voltmeter?

Ans:- A voltmeter is an instrument used to measure the potential difference across the two ends of a circuit element.

25. What is the resistance of an ideal voltmeter?

Ans:- The resistance of an ideal voltmeter is infinite.

26. How is a galvanometer converted into a voltmeter?

Ans:- A galvanometer can be converted into a voltmeter by connecting a large resistance in series to the galvanometer.

(Contd……)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ನಿರ್ದೇಶಕ ಹೊಸಮನಿ ಸೇರಿ ಮೂವರ ವಿರುದ್ಧ ಆರೋಪ ದೃಢಪಡಿಸಿದ ಆಂತರಿಕ ಸಮಿತಿ ವಿಚಾರಣಾ ವರದಿ

‘ಗ್ರಂಥಾಲಯ ಅಧಿಕಾರಿಗಳಿಂದ ಲೈಂಗಿಕ ದೌರ್ಜನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ್‌ಕುಮಾರ್ ಹೊಸಮನಿ ಸೇರಿದಂತೆ ಮೂವರು ಅಧಿಕಾರಿಗಳು ತಮ್ಮದೇ ಇಲಾಖೆಯ ಮಹಿಳಾ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನೀಡಿರುವುದು ನಿಜ’ ಎಂದು ಈ ಬಗ್ಗೆ ರಚಿಸಲಾಗಿದ್ದ ಆಂತರಿಕ ದೂರು ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಸಂತ್ರಸ್ತೆಯೊಬ್ಬರು ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿದ್ದ ಶಾಲಾ ಶಿಕ್ಷಣ ಮತ್ತು ಗ್ರಂಥಾಲಯ ಇಲಾಖೆ ರಚಿಸಿದ್ದ ಆಂತರಿಕ ದೂರು ಸಮಿತಿ, ಈ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿತ್ತು. ವಿಚಾರಣೆಯ ವಿವರಗಳನ್ನು ಒಳಗೊಂಡ 70 ಪುಟಗಳ ವರದಿ ಇಲಾಖೆಗೆ ಸಲ್ಲಿಕೆಯಾಗಿತ್ತು. ವರದಿಯನ್ನು ಇಲಾಖೆ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರ ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

‘ಹೊಸಮನಿ ಹಾಗೂ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕ ಎಚ್. ಚಂದ್ರಶೇಖರ್ ಹಾಗೂ ಗ್ರಂಥಾಲಯ ಸಹಾಯಕ ಎಚ್.ಜಿ. ನಾರಾಯಣಮೂರ್ತಿ ಅವರು ತಮ್ಮ ಸ್ಥಾನ ದುರುಪಯೋಗ ಪಡಿಸಿಕೊಂಡು, ಕಚೇರಿ ಕೆಲಸದ ಅನುಕೂಲ ಮಾಡಿಕೊಡುವುದಾಗಿ ಆಮಿಷ ಒಡ್ಡುವ, ಶಿಸ್ತುಕ್ರಮ ಕೈಗೊಳ್ಳುವಾಗಿ ಬೆದರಿಸುವ ಮೂಲಕ ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಮಹಿಳಾ ಸಿಬ್ಬಂದಿ ಆರೋಪಿಸಿದ್ದರು.

ಕಿರುಕುಳಕ್ಕೆ ರಸೀದಿ ಕಳವು ನೆಪ: ‘2022–23 ಅವಧಿಯಲ್ಲಿ ಹೊಸ ಕಚೇರಿಗೆ ಸ್ಥಳಾಂತರವಾಗುವಾಗ ಕಳೆದುಹೋಗಿದ್ದ ರಸೀದಿ ಪುಸ್ತಕದ ಪ್ರಕರಣವನ್ನೇ ನೆಪವಾಗಿಟ್ಟುಕೊಂಡ ಆರೋಪಿಗಳು ಒಬ್ಬರಾದ ಮೇಲೆ ಒಬ್ಬರು ಲೈಂಗಿಕ ಕಿರುಕುಳ ನೀಡಿದ್ದಾರೆ. ಕಳೆದುಹೋಗಿರುವ ರಸೀದಿ ಪುಸ್ತಕಕ್ಕೆ ಪರ್ಯಾಯವಾಗಿ ₹20 ಸಾವಿರ ದಂಡ ಪಾವತಿಸಬೇಕು ಎಂದು ಒತ್ತಡ ಹಾಕಿದ್ದಾರೆ. ದಂಡದ ಹಣ ಪಾವತಿಸಲು ಸಾಧ್ಯವಾಗದಿದ್ದರೆ ತಾವು ಹೇಳಿದಂತೆ ಕೇಳಬೇಕು. ಖಾಸಗಿಯಾಗಿ ಸಹಕರಿಸಬೇಕು. ರಾತ್ರಿ ಊಟದ ವ್ಯವಸ್ಥೆ ಮಾಡಬೇಕು. ಖಾಸಗಿ ಕೊಠಡಿಗೆ ಬರಬೇಕು ಎಂಬ ಬೇಡಿಕೆ ಮಂಡಿಸಿದ್ದಾರೆ ಎನ್ನುವುದು ದೂರುದಾರ ಮಹಿಳೆಯ ನೀಡಿದ ವಿವರಗಳು, ಸಾಕ್ಷಿದಾರರ ಹೇಳಿಕೆಗಳಿಂದಲೂ ಸಾಬೀತಾಗಿದೆ’ ಎಂದು ಸಮಿತಿ ತನ್ನ 70 ಪುಟಗಳ ವಿಚಾರಣಾ ವರದಿಯಲ್ಲಿ ವಿವರಿಸಿದೆ.

‘ಮಹಿಳೆ ಜತೆ ಪದೇಪದೇ ಅಸಭ್ಯವಾಗಿ ವರ್ತಿಸುವುದು, ಮುಟ್ಟುವುದು, ಮಾತು ಹಾಗೂ ಹಾವಭಾವಗಳ ಮೂಲಕ ಲೈಂಗಿಕ ಚೇಷ್ಟೆ ನಡೆಸಿದ್ದಾರೆ. ರಾಜಕೀಯ ಪ್ರಭಾವ ಬಳಸಿಕೊಂಡು ಅನನುಕೂಲ ಮಾಡುವ ಬೆದರಿಕೆ ಹಾಕಿದ್ದಾರೆ. ಸ್ಪಂದಿಸದೇ ಇದ್ದಾಗ ವೇತನ ಬಡ್ತಿ, ಸೌಲಭ್ಯಗಳಿಗೆ ತಡೆ ಹಾಕಿದ್ದಾರೆ’ ಎನ್ನುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ದೂರುದಾರರು ಮಾಡಿರುವ ಆರೋಪ ಸತ್ಯಕ್ಕೆ ದೂರ. ವಹಿಸಿದ ಕೆಲಸವನ್ನು ಸರಿಯಾಗಿ ನಿರ್ವಹಿಸದ ಕಾರಣಕ್ಕೆ ಅವರಿಗೆ ದಂಡ ವಿಧಿಸಲಾಗಿತ್ತು. ವೇತನಬಡ್ತಿಗೆ ತಡೆ ಹಾಕಲಾಗಿತ್ತು. ಅದಕ್ಕಾಗಿ ಆರ್‌ಟಿಐ ಕಾರ್ಯಕರ್ತ-ರೊಬ್ಬರ ಕುಮ್ಮಕ್ಕಿನಂತೆ ಲೈಂಗಿಕ ಕಿರುಕುಳದ ದೂರು ನೀಡಿದ್ದಾರೆ ಎಂದು ಮೂವರು ಅಧಿಕಾರಿಗಳೂ ಲಿಖಿತ ಹೇಳಿಕೆ ನೀಡಿದ್ದಾರೆ ಎಂದು’ ವರದಿಯಲ್ಲಿ ಮಾಹಿತಿ ನೀಡಲಾಗಿದೆ.

ಮೂವರು ಅಧಿಕಾರಿಗಳ ವಿರುದ್ಧ ಲೈಂಗಿಕ ಕಿರುಕುಳದ ದೂರು ಕುರಿತು ಪರಿಶೀಲಿಸಲು ಶಾಲಾ ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಬಿ.ಬಿ. ಕಾವೇರಿ ಅಧ್ಯಕ್ಷತೆಯಲ್ಲಿ ನಾಲ್ವರನ್ನು ಒಳಗೊಂಡ ಸಮಿತಿಯನ್ನು ನವೆಂಬರ್ 2023ರಲ್ಲಿ ರಚಿಸಲಾಗಿತ್ತು. ಮೂವರ ವಿರುದ್ಧ ನಡೆಸಿದ ವಿಚಾರಣಾ ವರದಿಯನ್ನು ಸಮಿತಿ ಸರ್ಕಾರಕ್ಕೆ ಸಲ್ಲಿಸಿದೆ.

‘ಆರೋಪಿಗಳ ಮಧ್ಯೆ ಹೊಂದಾಣಿಕೆ’

‘ದೂರು ನೀಡಿರುವ ಸಂತ್ರಸ್ತೆಗಷ್ಟೇ ಅಲ್ಲ, ಕಚೇರಿಯ ಹಲವು ಮಹಿಳಾ ಸಿಬ್ಬಂದಿಗೂ ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಹಲವರು ಸಮಿತಿಯ ಮುಂದೆ ಸಾಕ್ಷಿ ಹೇಳಿದ್ದಾರೆ.

‘ಮೂವರು ಅಧಿಕಾರಿಗಳ ಮಧ್ಯೆ ಪರಸ್ಪರ ಹೊಂದಾಣಿಕೆ ಇದೆ. ಲಾಭದ ಉದ್ದೇಶಗಳಿಂದ ಒಗ್ಗಟ್ಟಾಗಿರುತ್ತಾರೆ. ಅಧಿಕಾರಿ ಹಂತದಿಂದ ಕೆಳ ಹಂತದ ಮಹಿಳಾ ಸಿಬ್ಬಂದಿಯನ್ನೂ ಬಿಡದೇ ಶೋಷಿಸಿದ್ದಾರೆ. ಸಹೋದ್ಯೋಗಿಗಳ ಜತೆ ಅನಪೇಕ್ಷಿತ ನಡವಳಿಕೆ ತೋರಿದ್ದಾರೆ. ಪ್ರಾಣಿಗಿಂತ ಕಡೆಯಾಗಿ ನಡೆಸಿಕೊಂಡಿದ್ದಾರೆ. ವೈವಾಹಿಕ ಸ್ಥಿತಿಗತಿಗಳ ಬಗ್ಗೆ ಅವಹೇಳನ ಮಾಡಿದ್ದಾರೆ. ಹಲವರ ಜೀವನವನ್ನು ಹಾಳುಮಾಡಿದ್ದಾರೆ. ವಿವಾಹಿತ ಒಂಟಿ ಮಹಿಳೆಯರು, ಅವಿವಾಹಿತೆಯರನ್ನೇ ಗುರಿಯಾಗಿಸಿಕೊಂಡಿದ್ದಾರೆ. ಅವರ ಬೇಡಿಕೆಗಳಿಗೆ ಸಹಕರಿಸಿದ ಮಹಿಳಾ ಸಿಬ್ಬಂದಿಗೆ ಹೆಚ್ಚುವರಿ ಹುದ್ದೆಗಳ ಹೊಣೆಗಾರಿಕೆ ವಹಿಸಿ, ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಹಲವರು ಸಮಿತಿಯ ಮುಂದೆ ನೋವು ತೋಡಿಕೊಂಡಿದ್ದಾರೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಹೊರಗೆ ಮಳೆ–ಒಳಗೆ ಕಿರುಕುಳ

‘ಹೊಸ ಕಚೇರಿಗೆ ಗ್ರಂಥಾಲಯ ಇಲಾಖೆ ಸ್ಥಳಾಂತರವಾದ ನಂತರ ವೀಕ್ಷಣೆಗೆ ಬರುವುದಾಗಿ ಉಪ ನಿರ್ದೇಶಕ ಎಚ್. ಚಂದ್ರಶೇಖರ್ ಸಂತ್ರಸ್ತ ಮಹಿಳೆಗೆ ಸೂಚನೆ ನೀಡಿದ್ದರು. ಕೆಲಸದ ಅವಧಿ ಮುಗಿದರೂ ಅವರನ್ನು ಹೊರಡಲು ಹೇಳಿಲ್ಲ. ಸಂಜೆ 7ರ ನಂತರ ಕಚೇರಿಗೆ ಬಂದಿದ್ದಾರೆ. ಆಗ ಹೊರಗೆ ಜೋರು ಮಳೆ ಬರುತ್ತಿತ್ತು, ಆ ಸಮಯದಲ್ಲಿ ಮಹಿಳೆ ದಾಖಲೆಗಳನ್ನು ತೆಗೆಯುತ್ತಿದ್ದಾಗ ಹಿಂದಿನಿಂದ ಬಂದ ಅಧಿಕಾರಿ ಅವರನ್ನು ಬಿಗಿದಪ್ಪಿ, ಸೊಂಟ ಚಿವುಟಿದ್ದಾರೆ. ಗಾಬರಿಗೊಂಡ ಮಹಿಳೆ ಅವರನ್ನು ಬಲವಾಗಿ ನೂಕಿದ್ದಾರೆ. ಇದರಿಂದ ಕುಪಿತಗೊಂಡ ಅಧಿಕಾರಿ ಅವರನ್ನು ನಿಂದಿಸಿದ್ದಾರೆ. ನಂತರದ ದಿನಗಳಲ್ಲಿ ಕಿರುಕುಳ ನೀಡುವುದನ್ನು ಇನ್ನಷ್ಟು ಹೆಚ್ಚು ಮಾಡಿದ್ದಾರೆ. ಸಾಕ್ಷಿದಾರರೂ ಇಂತಹ ನಡವಳಿಕೆಗಳನ್ನು ದೃಢೀಕರಿಸಿದ್ದಾರೆ’ ಎಂಬ ವಿವರಗಳೂ ವರದಿಯಲ್ಲಿವೆ.

ಗುಂಡಿನ ದಾಳಿಗೆ ಯುವಕ ಸಾವು

ಪ್ರಜಾವಾಣಿ ವಾರ್ತೆ



ಅಲ್ತಾಫ್ ಗೌಸ್ ಮಕಾನದಾರ

ಖಾನಾಪುರ (ಬೆಳಗಾವಿ ಜಿಲ್ಲೆ): ನವಿಲಿನ ಬೇಟೆಗೆ ಹಾರಿಸಿದ ಗುಂಡು ತಗುಲಿ ತಾಲ್ಲೂಕಿನ ಹಲಸಿ ಗ್ರಾಮದ ನಿವಾಸಿ ಅಲ್ತಾಫ್ ಗೌಸ್ ಮಕಾನದಾರ (30) ಎಂಬುವರು ಸೋಮವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಹಲಸಿ ಗ್ರಾಮದ ಮಕ್ತುಮ್ (ಬುಡ್ಡೆಲಿ) ಮೆಹಬೂಬ ಸುಬಾನಿ ತಹಸೀಲ್ದಾರ್, ಉಸ್ಮಾನಸಾಬ್ ತಹಸೀಲ್ದಾರ್, ಮಲೀಕ (ಇಸ್ಮಾಯಿಲ್) ಖತಾಲಸಾಬ ಶಾಹಿವಾಲೆ ಎಂಬುವರನ್ನು ವಶಕ್ಕೆ ಪಡೆದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ’ ಎಂದು ನಂದಘಡ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಅಲ್ತಾಫ್ ಸೇರಿ ನಾಲ್ವರು ಕಾಡುಹಂದಿ ಮತ್ತು ನವಿಲು ಬೇಟೆಗಾಗಿ ಭಾನುವಾರ ತಡರಾತ್ರಿ ಕಾಡಿಗೆ ತೆರಳಿ, ಗ್ರಾಮದಿಂದ 2 ಕಿ.ಮೀ ದೂರದ ಹಲಸಿ–ಬೇಕವಾಡ ರಸ್ತೆಯ ನರಸೇವಾಡಿ ಸೇತುವೆ ಬಳಿ ಬೇಟೆಗಾಗಿ ಕಾಯುತ್ತಿದ್ದರು. ಸೋಮವಾರ ನಸುಕಿನ 3ರ ಸುಮಾರಿಗೆ ಗುಂಪಿನಲ್ಲಿದ್ದ ಒಬ್ಬಾತ ನಾಡ ಬಂದೂಕಿನಿಂದ ಒಂದು ನವಿಲಿಗೆ ಗುಂಡು ಹಾರಿಸಿ, ಸಾಯಿಸಿದ. ಮತ್ತೊಂದು ನವಿಲಿಗೆ ಗುರಿಯಿಟ್ಟಾಗ, ಗುಂಡು ಗುರಿ ತಪ್ಪಿ ಅಲ್ತಾಫ್‌ಗೆ ತಗುಲಿತು’ ಎಂದು ಅವರು ತಿಳಿಸಿದ್ದಾರೆ. ಅಲ್ತಾಫ್‌ಗೌಸ್ ಶವವನ್ನು ಹೊತ್ತು ತಂದ ಸ್ನೇಹಿತರು ತರಾತುರಿಯಲ್ಲಿ ಅಂತ್ಯಕ್ರಿಯೆಗೆ ಸಿದ್ಧತೆ ನಡೆಸಿದ್ದರಿಂದ ಅನುಮಾನಗೊಂಡ ಕುಟುಂಬದವರು, ಪೊಲೀಸರಿಗೆ ವಿಷಯ ತಿಳಿಸಿದರು. ಉತ್ತರ ವಲಯ ಐಜಿಪಿ ವಿಕಾಶಕುಮಾರ್ ವಿಕಾಶ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

‘ನವಿಲು ಬೇಟೆ ವೇಳೆ ದುರ್ಘಟನೆ ನಡೆದಿದೆ. ಬಂದೂಕು ಮತ್ತು ನವಿಲಿನ ಮಾಂಸವನ್ನು ವಶಕ್ಕೆ ಪಡೆಯಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ‘ಪ್ರಜಾವಾಣಿ’ಗೆ ತಿಳಿಸಿದರು.

‘24 ಗಂಟೆ ಗಣಿಗಾರಿಕೆ: ಪ್ರಸ್ತಾವವೇ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಅರಣ್ಯಪ್ರದೇಶದಲ್ಲಿ 24x7 ಗಣಿಗಾರಿಕೆ ನಡೆಸುವ ಕುರಿತು ಮುಖ್ಯಮಂತ್ರಿಯವರಿಗೆ ಯಾವುದೇ ಪ್ರಸ್ತಾವ ಸಲ್ಲಿಸಿಲ್ಲ’ ಎಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ) ಕಾರ್ಯದರ್ಶಿ ಮಂಜುನಾಥ್ ಎಚ್.ಎಂ ತಿಳಿಸಿದ್ದಾರೆ.

‘ಪರಿಸರ ಸೂಕ್ಷ್ಮವಲಯ ಮತ್ತು ವನ್ಯಜೀವಿ ಧಾಮಗಳ ವ್ಯಾಪ್ತಿಯನ್ನು ಬಿಟ್ಟು ಉಳಿದ ಕಡೆಗಳಲ್ಲಿ 24x7 ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲು ಅರಣ್ಯ ಇಲಾಖೆಗೆ ಕೋರಲಾಗಿದೆ. ಈ ನಿಟ್ಟಿನಲ್ಲಿ, ಸುಪ್ರೀಂ ಕೋರ್ಟ್ ಕಾಲ ಕಾಲಕ್ಕೆ ಹೊರಡಿಸಿರುವ ಆದೇಶ ಮತ್ತು ನಿಯಮಗಳಲ್ಲಿ ಕಲ್ಪಿಸಲಾದ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಇಲಾಖೆ ಪರಿಶೀಲನೆ ನಡೆಸಲಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಭಾರತ ಸರ್ಕಾರದ ಅರಣ್ಯ ಕಾಯ್ದೆಯಲ್ಲಿ ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನವೆಂದು ಪರಿಗಣಿಸಿಲ್ಲ. ಬೇರೆ ರಾಜ್ಯಗಳಲ್ಲೂ ಕಬ್ಬಿಣ ಅದಿರು ಅರಣ್ಯ ಉತ್ಪನ್ನವಲ್ಲವೆಂದು ಪರಿಗಣಿಸಿರುವ ಕುರಿತು ಹಾಗೂ ವನ್ಯಜೀವಿಧಾಮ ಮತ್ತು ಪರಿಸರ ಸೂಕ್ಷ್ಮ ವಲಯವನ್ನು ಗಮನ-ದಲ್ಲಿಟ್ಟುಕೊಂಡು ಈ ವಿಷಯವನ್ನು ಪರಿಶೀಲಿಸಲು ಅರಣ್ಯ ಇಲಾಖೆಯನ್ನು ಕೋರಲಾಗಿದೆ’ ಎಂದೂ ಹೇಳಿದ್ದಾರೆ.

‘ಯಾವುದೇ ರಾಜ್ಯದಲ್ಲಿಯೂ ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆಯ ಅವಧಿಗೆ ನಿರ್ಬಂಧ ವಿಧಿಸಿರುವುದಿಲ್ಲ. ಈಗ ಜಾರಿಯಲ್ಲಿರುವ ಕೇಂದ್ರ ಸರ್ಕಾರದ ಕಾಯ್ದೆ ಹಾಗೂ ನಿಯಮಗಳಲ್ಲೂ ನಿರ್ಬಂಧ ಇರುವುದಿಲ್ಲ. ಆದರೆ, ಕರ್ನಾಟಕ ರಾಜ್ಯದಲ್ಲಿ ಮಾತ್ರ ಅರಣ್ಯ ಪ್ರದೇಶಗಳಲ್ಲಿ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮಾತ್ರ ಅರಣ್ಯ ಪ್ರದೇಶಗಳಲ್ಲಿ ನಿರ್ಬಂಧ ವಿಧಿಸಲಾಗಿದೆ. ಇದರಿಂದ ನಿಗದಿಪಡಿಸಿದ ಪ್ರಮಾಣವನ್ನು ಉತ್ಪಾದನೆ ಮತ್ತು ಸಾಗಣೆ ಮಾಡುವುದು ಕಷ್ಟವಾಗಿದೆ ಎಂದು ಗುತ್ತಿಗೆದಾರರು ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ ಹೇಳಿದ್ದರು’ ಎಂದು ಮಂಜುನಾಥ್ ವಿವರಿಸಿದ್ದಾರೆ.

‘ಸರ್ಕಾರಕ್ಕೆ ಸಾರ್ವಜನಿಕರಿಂದ ಅಥವಾ ಗಣಿ ಗುತ್ತಿಗೆದಾರರಿಂದ ಮನವಿಗಳು ಸ್ವೀಕೃತವಾದಲ್ಲಿ ಅಂತಹ ಮನವಿಗಳನ್ನು ಸರ್ಕಾರದ ವ್ಯವಸ್ಥೆಯಡಿ ವಿವಿಧ ಹಂತಗಳಲ್ಲಿ ಕಾಯ್ದೆ ಮತ್ತು ನಿಯಮಗಳಲ್ಲಿನ ಅವಕಾಶದ ಅನ್ವಯ ಹಾಗೂ ನ್ಯಾಯಾಲಯಗಳ ನೀಡಿರುವ ನಿರ್ದೇಶನಗಳ ಅನುಸಾರ ಪರಿಶೀಲಿಸುವ ವ್ಯವಸ್ಥೆ ಇದೆ. ಪರಿಶೀಲಿಸುವ ಕ್ರಮವನ್ನು ಸರ್ಕಾರದ ಮುಂದಿರುವ ಪ್ರಸ್ತಾವಗಳೆಂದು ಪರಿಗಣಿಸಲು ಬರುವುದಿಲ್ಲ’ ಎಂದಿದ್ದಾರೆ.

‘ಓಬವ್ವನ ಹೆಸರಲ್ಲಿ ವಸತಿ ಶಾಲೆ ಆರಂಭಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಓಬವ್ವನ ವಿಚಾರ ಚರಿತ್ರೆ, ದಾಖಲೆಗಳಲ್ಲಿವೆ. ಅದು ನಾಡಿಗೆ ಪರಿಚಯವಾಗಬೇಕು. ಸರ್ಕಾರ ಈ ವೀರವನಿತೆಯ ಹೆಸರಿನಲ್ಲಿ ವಸತಿ ಶಾಲೆಗಳನ್ನು ಆರಂಭಿಸಬೇಕು’ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ನಗರದ ನಯನ ಸಭಾಂಗಣದಲ್ಲಿ ಆಯೋಜಿಸಿದ್ದ ‘ವೀರವನಿತೆ ಒನಕೆ ಓಬವ್ವ ಜಯಂತಿ’ಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳಿರುವಂತೆ, ಒನಕೆ ಓಬವ್ವನ ಹೆಸರಲ್ಲೂ ಹೆಣ್ಣುಮಕ್ಕಳ ಶಾಲೆಗಳನ್ನು ತೆರೆದು, ಮಕ್ಕಳಿಗೆ ಆಕೆಯ ಶೌರ್ಯ, ಪರಾಕ್ರಮದ ಜೀವನ ಚರಿತ್ರೆಯನ್ನು ತಿಳಿಸಬೇಕು. ಏತಕ್ಕಾಗಿ ಆಕೆ ಚರಿತ್ರೆಯಲ್ಲಿ ದಾಖಲಾಗಿದ್ದಾಳೆ ಎಂಬುದನ್ನು ಮನವರಿಕೆ ಮಾಡಬೇಕು. ಹಿಂದೆ ಈ ವಿಷಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಪ್ರಸ್ತಾಪಿಸಿದ್ದೆ. ಈಗ ಜಯಂತಿಯ ಸಮಯವಾದ್ದರಿಂದ ಮತ್ತೊಮ್ಮೆ ನೆನಪಿಸಿದ್ದೇನೆ’ ಎಂದು ಹೇಳಿದರು.



ವೀರವನಿತೆ ಒನಕೆ ಓಬವ್ವ ಜಯಂತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುಳ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರು ಒನಕೆ ಓಬವ್ವನ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

‘ಸಾಧಕರು, ಮಹನೀಯರನ್ನು ಜಾತಿಯ ಚೌಕಟ್ಟಿನಲ್ಲಿ ನೋಡಬಾರದು. ಹಾಗೆಯೇ ಓಬವ್ವಳನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸಬಾರದು. ಆಕೆ ಈ ನಾಡಿನ ಸ್ತ್ರೀಕುಲದ ಧ್ರುವತಾರೆ. ಸರ್ವ ಜನಾಂಗಕ್ಕೂ ಸೇರಿದವರು’ ಎಂದು ಪ್ರತಿಪಾದಿಸಿದರು.

ಓಬವ್ವ ಕುರಿತು ಉಪನ್ಯಾಸ ನೀಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ‘ನಾಡಿನ ಇತಿಹಾಸದಲ್ಲಿ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮ, ಚೆನ್ನಭೈರಾದೇವಿ, ಬೆಳವಡಿ ಮಲ್ಲಮ್ಮನಂತಹ ವೀರ ರಾಣಿಯರ ಹೆಸರಿನೊಂದಿಗೆ ಓಬವ್ವನ ಹೆಸರು ದಾಖಲಾಗಿದೆ. ವೀರ ರಾಣಿಯರ ನಡುವೆ, ಕೋಟೆಯ ರಕ್ಷಣೆಗಾಗಿ ಶತ್ರುಗಳ ವಿರುದ್ಧ ಹೋರಾಡಿದ ಓಬವ್ವ ವೀರ ವನಿತೆಯಾಗಿ, ಅಸಾಮಾನ್ಯ ಮಹಿಳೆಯಾಗಿ ಕಾಣುತ್ತಾರೆ’ ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಛಲವಾದಿ, ಸಹಾಯಕ ನಿರ್ದೇಶಕ ಬಲವಂತರಾವ್ ಪಾಟೀಲ್, ಬಂಜಾರ ಅಕಾಡೆಮಿ ಅಧ್ಯಕ್ಷ ಗೋವಿಂದಸ್ವಾಮಿ, ಬನಶಂಕರಿ ಅಂಗಡಿ ಇದ್ದರು.

ಸಭಿಕರ ಕೊರತೆ: ಜಯಂತಿ ಮುಂದಕ್ಕೆ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಒನಕೆ ಓಬವ್ವ ಜಯಂತಿಯನ್ನು ಸಭಿಕರ ಕೊರತೆಯಿಂದಾಗಿ ಮುಂದೂಡಲಾಯಿತು.

ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿದ್ದ ಅತಿಥಿಗಳು, ಗಣ್ಯರು ಹಾಗೂ ಸಾರ್ವಜನಿಕರ ಕೊರತೆ ಎದುರಾಯಿತು. ‘ಜನರಿಲ್ಲದೇ ಕಾರ್ಯಕ್ರಮ ಮಾಡುವುದು ಸರಿಯಲ್ಲ, ಕಾರ್ಯಕ್ರಮ ರದ್ದು ಮಾಡಬೇಕು’ ಎಂದು ವಿವಿಧ ಸಂಘಟನೆಗಳ ಸದಸ್ಯರು ಒತ್ತಾಯಿಸಿದರು. ವೇದಿಕೆಗೆ ಬಂದ ಇಲಾಖೆಯ ಸಹಾಯಕ ನಿರ್ದೇಶಕ ತಾರಾನಾಥ್, ‘ಓಬವ್ವ ಜಯಂತಿಯನ್ನು ಮುಂದೂಡಲಾಗಿದ್ದು, ಶೀಘ್ರ ಮುಂದಿನ ದಿನಾಂಕ ತಿಳಿಸಲಾಗುವುದು’ ಎಂದರು.

ಮಲದ ಗುಂಡಿಗೆ ಇಳಿದ ಪರಿಶಿಷ್ಟ ಬಾಲಕ

ಪ್ರಜಾವಾಣಿ ವಾರ್ತೆ

ಕೊರಟಗೆರೆ (ತುಮಕೂರು): ಗೃಹ ಸಚಿವ ಜಿ. ಪರಮೇಶ್ವರ ಪ್ರತಿನಿಧಿಸುವ ಕೊರಟಗೆರೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 14 ವರ್ಷದ ಬಾಲಕನೊಬ್ಬನನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಲಾಗಿದೆ.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿರುವ ಹಳೆ ಮಲದ ಗುಂಡಿ ತುಂಬಿ ಅದರ ನೀರು ಬಸ್ ನಿಲ್ದಾಣದ ಆವರಣದಲ್ಲಿ ಹರಿಯುತ್ತಿತ್ತು. ಅಧಿಕಾರಿಗಳು ಮತ್ತು ಸ್ವಚ್ಛತಾ ಸಂಸ್ಥೆಯ ಪ್ರತಿನಿಧಿಗಳು ಬುಧವಾರ ಬಾಲಕ ಮತ್ತು ವ್ಯಕ್ತಿಯೊಬ್ಬರನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛತಾ ಕಾರ್ಯಕ್ಕೆ ಬಳಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಪಡೆದ ಏಜೆನ್ಸಿ ಮತ್ತು ಸಂಚಾರ ನಿಯಂತ್ರಕ ಸೇರಿ ನಾಲ್ವರ ವಿರುದ್ಧ ತಹಶೀಲ್ದಾರ್ ದೂರಿನ ಅನ್ವಯ ಕೊರಟಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕ ಮತ್ತು ವ್ಯಕ್ತಿ ಬರಿಗೈಯಲ್ಲಿ ಮಲದ ಗುಂಡಿ ಸ್ವಚ್ಛಗೊಳಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರ ಶನಿವಾರ ರಾತ್ರಿ ಜಿಲ್ಲಾಧಿಕಾರಿ ಶುಭಕಲ್ಯಾಣ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೃಷ್ಣಪ್ಪ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ದೃಶ್ಯ

ಘಟನೆಯ ಸತ್ಯಾಸತ್ಯತೆ ಪರಿಶೀಲನೆಗೆ ಮಧುಗಿರಿ ಉಪವಿಭಾಗಾಧಿಕಾರಿ ಹಾಗೂ ಕೊರಟಗೆರೆ ತಹಶೀಲ್ದಾರ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು.

ಈ ಪ್ರಕರಣದ ನಡೆದಿರುವುದು ದೃಢಪಟ್ಟ ನಂತರ ಕೊರಟಗೆರೆ ಸಾರಿಗೆ ಸಂಚಾರ ನಿಯಂತ್ರಕ ಸತ್ಯನಾರಾಯಣ ರೆಡ್ಡಿ, ಮಂಡ್ಯದ ಗುತ್ತಿಗೆದಾರ ಕಂಪನಿ ಶ್ರೀನಿಮಿಷಾಂಬಾ ಎಂಟರ್‌ಪ್ರೈಸಸ್‌ನ ಮಾಲೀಕರಾದ ಶ್ವೇತಾ ಎಂ.ಸಿ., ಸಂಸ್ಥೆಯ ಸೂಪರವೈಸರ್ ರಿತೇಶ್ ಮತ್ತು ತುಮಕೂರಿನ ಕೋತಿತೋಪು ನಿವಾಸಿ ಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಜಾ

ಒಂದನೇ ಪುಟದಿಂದ...

ಆರೋಪಿ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪ ಪಟ್ಟಿ ಈಗಾಗಲೇ ಸಲ್ಲಿಕೆಯಾಗಿದೆ. ಆರಂಭಿಕ ದೂರಿನಲ್ಲಿ ಐಪಿಸಿ ಸೆಕ್ಷನ್ 376 (ಅತ್ಯಾಚಾರ) ಬಗ್ಗೆ ನಿರ್ದಿಷ್ಟವಾಗಿ ಹೇಳಿರಲಿಲ್ಲ’ ಎಂದು ಗಮನ ಸೆಳೆದರು.

‘ಕಕ್ಷಿದಾರರ ವಿರುದ್ಧ ದೂರು ಸಲ್ಲಿಕೆ ಆಗಿದ್ದು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ. ಆಗ ಅವರು ವಿದೇಶ ದಲ್ಲಿದ್ದರು. ಬಳಿಕ ಪೊಲೀಸರಿಗೆ ಶರಣಾದರು. ಸಂಸದರಾಗಿದ್ದ ಅವರು ಲೋಕಸಭಾ ಚುನಾವಣೆಯಲ್ಲಿ ಸೋತಿದ್ದಾರೆ’ ಎಂದು ಅವರು ಪೀಠದ ಗಮನಕ್ಕೆ ತಂದರು.

ಆರು ತಿಂಗಳ ನಂತರ ಅರ್ಜಿಯನ್ನು ನವೀಕರಿಸಲು ಅರ್ಜಿದಾರರಿಗೆ ಅವಕಾಶ ನೀಡುವಂತೆ ವಕೀಲರು ನ್ಯಾಯಾಲಯವನ್ನು ಕೋರಿದರು. ‘ನಾವು ಏನನ್ನೂ ಹೇಳುವುದಿಲ್ಲ’ ಎಂದು ಪೀಠ ಹೇಳಿತು.

ಅಕ್ಟೋಬರ್ 21ರಂದು ಜಾಮೀನು ಅರ್ಜಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ್ದ ಹೈಕೋರ್ಟ್, ‘ಮೇಲ್ನೋಟಕ್ಕೆ ಪ್ರಜ್ವಲ್ ಒಬ್ಬ ಲಂಪಟ. ಆತ ತನ್ನ ಇಂದ್ರಿಯಗಳ ಮೇಲಿನ ನಿಯಂತ್ರಣ ಕಳೆದುಕೊಂಡು, ಕಾಮಾತುರನಾಗಿ ವರ್ತಿಸಿದ್ದಾನೆ. ಆರೋಪಿಯ ನೀಚತನದ ಕೃತ್ಯಗಳು ಸ್ವಸ್ಥ ಸಮಾಜದ ಬೆನ್ನುಹುರಿಯಲ್ಲಿ ಚಳಿ ಹುಟ್ಟಿಸುವಂತಿವೆ’ ಎಂದು ಆತಂಕ ವ್ಯಕ್ತಪಡಿಸಿತ್ತು.

ವಕ್ಫ್ ವಿರುದ್ಧ ಯತ್ನಾಳ ಭಾಷಣ: ಬೇಡ ಎಂದ ಭಕ್ತರು

ತೇರದಾಳ (ಬಾಗಲಕೋಟೆ ಜಿಲ್ಲೆ): ಇಲ್ಲಿ ಸೋಮವಾರ ನಡೆದ ಧಾರ್ಮಿಕ ಸಭೆಯಲ್ಲಿ ವಕ್ಫ್ ವಿರುದ್ಧ ಮಾತನಾಡಿದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಭಕ್ತರು ತಡೆಯೊಡ್ಡಿದರು. ಭಾಷಣ ಮೊಟಕುಗೊಳಿಸಿ, ಅವರು ನಿರ್ಗಮಿಸಿದರು.

ಅಲ್ಲಮಪ್ರಭು ದೇವರ ನೂತನ ದೇವಾಲಯದ ಲೋಕಾರ್ಪಣೆ ಬಳಿಕ ನಡೆದ ಧರ್ಮಸಭೆಯಲ್ಲಿ ಯತ್ನಾಳ, ‘ಹಿಂದೂ ದೇವಸ್ಥಾನಗಳು ವಕ್ಫ್ ಆಸ್ತಿಗಳಾಗುತ್ತಿವೆ. ವಕ್ಫ್ ಕಾಯ್ದೆ ಬ್ರಿಟಿಷರಿಗಿಂತ ಅಪಾಯಕಾರಿ ಆಗಿದೆ. ಈ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಈ ದೇಶದಲ್ಲಿ ಮಿನಿ ಪಾಕಿಸ್ತಾನ ತಯಾರು ಆಗುತ್ತಿರುವಂತಿದೆ’ ಎಂದರು.

ಧರ್ಮಸಭೆಯಲ್ಲಿ ಪಾಲ್ಗೊಂಡ ಭಕ್ತರು, ‘ಇದು ಧರ್ಮಸಭೆ. ಆದ್ದರಿಂದ ಅನ್ಯ ಧರ್ಮೀಯರ ವಿರುದ್ಧ ಇಲ್ಲಿ ಮಾತನಾಡಬೇಡಿ. ಈಗಷ್ಟೇ ಅನ್ನಪ್ರಸಾದ ಸೇವೆಗೆ ₹6 ಲಕ್ಷ ದೇಣಿಗೆ ನೀಡಿದ ಮುಸ್ಲಿಮರನ್ನು ಸತ್ಕರಿಸಲಾಗಿದೆ. ಇಲ್ಲಿ ಯಾವುದೇ ಧರ್ಮ, ಜಾತಿಯಿಲ್ಲ. ರಾಜಕೀಯ ಭಾಷಣ ಇಲ್ಲಿ ಬೇಡ’ ಎಂದರು.

‘ಇದು ರಾಜಕೀಯ ಭಾಷಣವಲ್ಲ’ ಎಂದು ಯತ್ನಾಳ ಹೇಳಲು ಮುಂದಾದರು. ಆಗ, ಅಲ್ಲಿದ್ದವರು ಆಕ್ಷೇಪ ವ್ಯಕ್ತಪಡಿಸಿದರು. ಆಗ ‘ಸರಿ ಆಯಿತು’ ಎಂದು ಯತ್ನಾಳ ವೇದಿಕೆಯಿಂದ ನಿರ್ಗಮಿಸಿದರು

ಸ್ಮಶಾನ ಭೂಮಿ ದಾಖಲೆಗಳಲ್ಲೂ ವಕ್ಫ್ ಆಸ್ತಿ ನಮೂದು: (ಬೆಳಗಾವಿ ವರದಿ) ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ರಾಯಣ್ಣನ ಸಂಗೊಳ್ಳಿ ಗ್ರಾಮದ ಸ್ಮಶಾನ ಭೂಮಿಯ ದಾಖಲೆಗಳಲ್ಲೂ ವಕ್ಫ್ ಆಸ್ತಿ ಎಂದು ನಮೂದಾಗಿದೆ.

ಗ್ರಾಮ ಪಂಚಾಯಿತಿಗೆ ಸೇರಿದ 128ರ ಸರ್ವೆ ನಂಬರ್‌ನಲ್ಲಿ ಇರುವ 8 ಎಕರೆ 27 ಗುಂಟೆ ಜಮೀನಿನ ಪಹಣಿಯಲ್ಲಿ ವಕ್ಫ್ ಮಂಡಳಿ ಎಂದು ಕಾಣಿಸಿಕೊಂಡಿದೆ.

‘ಅಧಿಕಾರಿಗಳು ತಕ್ಷಣ ಕ್ರಮ ವಹಿಸಿ, ಈ ಸಮಸ್ಯೆ ಬಗೆಹರಿಸಬೇಕು’ ಎಂದು ಗ್ರಾಮಸ್ಥರು ಕೋರಿದ್ದಾರೆ.

ಪಾಳೇಗಾರಿಕೆ ಪ್ರವೃತ್ತಿ ಬಿಡದ ಜೆಡಿಎಸ್ ವರಿಷ್ಠ: ಚನ್ನಪಟ್ಟಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಒಕ್ಕಲಿಗ ನಾಯಕರನ್ನು ಮುಗಿಸಿದ ಗೌಡರು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ದೇಶದ ರಾಜಕಾರಣದಲ್ಲಿ ಎಚ್.ಡಿ. ದೇವೇಗೌಡರು ನಂಬರ್ ಒನ್. ತಮ್ಮ ಮಕ್ಕಳ ಬೆಳವಣಿಗೆಗೆ ಅಡ್ಡಿಯಾಗುತ್ತಾರೆಂದು ತಮ್ಮದೇ ಒಕ್ಕಲಿಗ ಸಮುದಾಯದ ಬುದ್ಧಿವಂತ ಮತ್ತು ರಾಜಕೀಯ ಪ್ರಜ್ಞೆ ಇರುವ ಒಬ್ಬನೇ ಒಬ್ಬ ನಾಯಕನನ್ನು ಅವರು ಬೆಳೆಸಲಿಲ್ಲ. ನಮ್ಮ ಸರ್ಕಾರ ಕಿತ್ತೊಗೆಯುವೆ ಎನ್ನುವ ಅವರು ಇಂದಿಗೂ ತಮ್ಮ ಪಾಳೇಗಾರಿಕೆ ಪ್ರವೃತ್ತಿ ಬಿಟ್ಟಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಉಪ ಚುನಾವಣೆಯ ಬಹಿರಂಗ ಪ್ರಚಾರದ ಕೊನೆಯ ದಿನವಾದ ಸೋಮವಾರ ಪಟ್ಟಣದ ಹೊರವಲಯದ ದೊಡ್ಡಮಳೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಹಮ್ಮಿಕೊಂಡಿದ್ದ ಪ್ರಚಾರ ಸಮಾವೇಶದಲ್ಲಿ ಅವರು ಮಾತನಾಡಿದರು.

'ದೇವೇಗೌಡರ ಮನೆ ಮಗನಂತಿದ್ದ ಬಿ.ಎಲ್. ಶಂಕರ್ ಸೇರಿದಂತೆ ವೈ.ಕೆ. ರಾಮಯ್ಯ, ನಾಗೇಗೌಡ, ಬಿ.ಎಸ್. ಬಚ್ಚೇಗೌಡ, ವರದೇಗೌಡ, ಭೈರೇಗೌಡ ಸೇರಿದಂತೆ ಹಲವು ಒಕ್ಕಲಿಗ ನಾಯಕರನ್ನು ವ್ಯವಸ್ಥಿತವಾಗಿ ಮುಗಿಸಿದರು.



ಚನ್ನಪಟ್ಟಣ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರವಾಗಿ ದೊಡ್ಡಮಳೂರಿನಲ್ಲಿ ಸೋಮವಾರ ನಡೆದ ಪ್ರಚಾರ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಸಚಿವರಾದ ಎನ್. ಚಲುವರಾಯಸ್ವಾಮಿ, ಕೆ. ವೆಂಕಟೇಶ್, ಡಾ. ಎಂ.ಸಿ. ಸುಧಾಕರ್, ಬಿ.ಝಡ್. ಜಮೀರ್ ಅಹಮದ್ ಖಾನ್ ಸೇರಿದಂತೆ ಪಕ್ಷದ ಶಾಸಕರು ಹಾಗೂ ಮುಖಂಡರು ಇದ್ದರು

ರಾಜ್ಯದಲ್ಲಿ ಒಕ್ಕಲಿಗ ನಾಯಕತ್ವವೇ ಬೆಳೆಯದಂತೆ ನೋಡಿಕೊಂಡರು. ಇದನ್ನು ಮನಗಂಡ ಚಲುವರಾಯಸ್ವಾಮಿ, ಬಾಲಕೃಷ್ಣ, ಪುಟ್ಟಣ್ಣ ಕಾಂಗ್ರೆಸ್ ಸೇರಿ ಬಚಾವಾದರು' ಎಂದರು.

'ನಾನು ಮತ್ತು ಜಾಲಪ್ಪ ಇಲ್ಲದೇ ಹೋಗಿದ್ದರೆ 1994ರಲ್ಲಿ ದೇವೇಗೌಡರು ಮುಖ್ಯಮಂತ್ರಿ ಆಗುತ್ತಿರಲಿಲ್ಲ. ತಮ್ಮ ಸರ್ಕಾರ ಬೀಳಿಸಿದ ದೇವೇಗೌಡರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಲು ಎಸ್. ಆರ್. ಬೊಮ್ಮಾಯಿ ಸಿದ್ಧರಿರಲಿಲ್ಲ. ಆಗ ನಾನು ದೇವೇಗೌಡರ ಪರ ನಿಂತು ಬೊಮ್ಮಾಯಿ ಅವರನ್ನು ಒಪ್ಪಿಸಿದೆವು. ಇಲ್ಲದಿದ್ದರೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗುತ್ತಿದ್ದರು. ದೇವೇಗೌಡರು ಸುಳ್ಳು ಹೇಳಿದ ಮಾತ್ರಕ್ಕೆ ಚರಿತ್ರೆ ಬದಲಾಗುವುದಿಲ್ಲ' ಎಂದು ಹೇಳಿದರು.

'ಹಿಂದುಳಿದ ವರ್ಗಕ್ಕೆ ಸೇರಿದ ನಾನು ಪೂರ್ಣ ಬಹುಮತದೊಂದಿಗೆ ಎರಡನೇ ಸಲ ಮುಖ್ಯಮಂತ್ರಿಯಾಗಿರುವುದಕ್ಕೆ ದೇವೇಗೌಡರಿಗೆ ಹೊಟ್ಟೆಯುರಿ. ಅವರು ಮತ್ತು ಪುತ್ರ ಕುಮಾರಸ್ವಾಮಿಗೆ ಒಮ್ಮೆಯೂ ಪೂರ್ಣಾವಧಿಯ ಅಧಿಕಾರ ಸಿಗಲಿಲ್ಲವೆಂದು ಕೊರಗು. ಸಿದ್ದರಾಮಯ್ಯನ ಸೊಕ್ಕು ಮುರಿಯಬೇಕು ಹಾಗೂ ಸರ್ಕಾರ ತೆಗೆಯಬೇಕು ಎಂದು ದ್ವೇಷ ಸಾಧಿಸುತ್ತಿದ್ದಾರೆ. ಅವರ ಹೊಟ್ಟೆಯುರಿ ಅವರನ್ನೇ ಸುಡುತ್ತದೆಯೇ ಹೊರತು ನನ್ನನ್ನಲ್ಲ' ಎಂದರು.

'ಪುತ್ರ ಮತ್ತು ಮೊಮ್ಮಗನ ಮೇಲಿನ ವ್ಯಾಮೋಹಕ್ಕಾಗಿ ದೇವೇಗೌಡರು ಚನ್ನಪಟ್ಟಣದಲ್ಲಿ [illegible] ಪ್ರಚಾರ ನಡೆಸುತ್ತಿದ್ದಾರೆ. ಇದೇ ಯೋಗೇಶ್ವರ್ ಏನಾದರೂ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿದ್ದರೆ ದೇವೇಗೌಡರು ಬರುತ್ತಿದ್ರಾ? ತಮಗಾಗುತ್ತಿರುವ ಅನ್ಯಾಯ ಮನಗಂಡೇ ಯೋಗೇಶ್ವರ್ ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಬಂದಿದ್ದಾರೆ. ಅಭಿವೃದ್ಧಿಗೆ ಬದ್ಧವಾಗಿರುವ ಅವರನ್ನು ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

ಹರಕೆ ಕುರಿ ಮಾಡಲು ಮುಂದಾಗಿದ್ರು: ಸಿಪಿವೈ

'ಟಿಕೆಟ್ ವಿಷಯದಲ್ಲಿ ನನ್ನನ್ನು ಅತಂತ್ರ ಮಾಡಿ ರಾಜಕೀಯವಾಗಿ ಮುಗಿಸಲು ಕುಮಾರಸ್ವಾಮಿ ಕುತಂತ್ರ ಮಾಡಿದ್ದರು. ನನ್ನನ್ನು ಹರಕೆ ಕುರಿ ಮಾಡುತ್ತಿರುವುದು ಗೊತ್ತಾಗುತ್ತಿದ್ದಂತೆಯೇ ನನ್ನ ಮೂಲ ಪಕ್ಷ ಕಾಂಗ್ರೆಸ್‌ಗೆ ಬಂದೆ. ಸಂಕಷ್ಟದ ಕಾಲದಲ್ಲಿ ಕೈ ಹಿಡಿದಿರುವ ಪಕ್ಷದ ಋಣವನ್ನು ಎಂದಿಗೂ ಮರೆಯುವುದಿಲ್ಲ' ಎಂದು ಸಿ.ಪಿ. ಯೋಗೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು.

'ಕ್ಷೇತ್ರದಲ್ಲಿ ನಾನು ಮಾಡಿದ ನೀರಾವರಿಯ ಕ್ರೆಡಿಟ್ ಪಡೆಯಲು ದೇವೇಗೌಡರ ಕುಟುಂಬ ಮುಂದಾಗಿದೆ. ಮತಕ್ಕಾಗಿ ಅವರಂತೆ ನಾನು ಅಳುವ ಅಗತ್ಯವಿಲ್ಲ. ನನ್ನ ಜನ ಅದಕ್ಕೆ ಅವಕಾಶ ಕೊಡುವುದಿಲ್ಲ. ಕಣ್ಣೀರು ಯಾರಿಗೆ ಬೇಕಾದರೂ ಬರುತ್ತದೆ. ಆದರೆ, ದುಡಿದವರಿಗೆ ಮಾತ್ರ ಬೆವರು ಬರುತ್ತದೆ. ನಾನು ಕ್ಷೇತ್ರದ ನೀರಾವರಿಗೆ ಬೆವರು ಹರಿಸಿದ್ದೇನೆ. ಹಾಗಾಗಿ, ಜನ ನನ್ನ ಕೈ ಬಿಡುವುದಿಲ್ಲ ಎಂಬ ನಂಬಿಕೆ ಇದೆ' ಎಂದರು.

ಅಳುವುದು ನಮ್ಮ ಪರಂಪರೆ ಅನ್ನುವ ಅವರು, ನಿಖಿಲ್‌ಗೂ ಕಣ್ಣೀರು ಹಾಕುವುದನ್ನು ಕಲಿಸಿದ್ದಾರೆ. ಹಾಸನದಲ್ಲಿ ಇವರ ಮೊಮ್ಮಗನಿಂದ ಅತ್ಯಾಚಾರಕ್ಕೊಳಗಾಗಿರುವ ಹೆಣ್ಣುಮಕ್ಕಳ ಪರವಾಗಿ ಕಣ್ಣೀರು ಹಾಕಲಿ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಯೋಗೇಶ್ವರ್ ಕಾಂಗ್ರೆಸ್‌ಗೆ ಬರದಿದ್ದರೆ ನಾನೇ ಉಪ ಚುನಾವಣೆ ಅಭ್ಯರ್ಥಿಯಾಗುತ್ತಿದ್ದೆ. ಎಚ್‌ಡಿಕೆ ಕೊಡುವ ದುಡ್ಡು ತಗೊಂಡು ಯೋಗೇಶ್ವರ್‌ಗೆ ಮತ ಹಾಕಿ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ರೌಡಿಪಟ್ಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ: ಬಿಜೆಪಿ ಆರೋಪ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಕ್ಷೇತ್ರದ ಉಪಚುನಾವಣೆಗೆ ಸಂಬಂಧಿಸಿದಂತೆ 'ರೌಡಿಪಟ್ಟಿ' ವಿಷಯದಲ್ಲಿ ಬಿಜೆಪಿ–ಕಾಂಗ್ರೆಸ್ ನಡುವೆ ವಾಕ್ಸಮರ ನಡೆದಿದೆ.

'ಕ್ಷೇತ್ರದಲ್ಲಿನ 184 ರೌಡಿಗಳನ್ನು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದು, ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ. ರೌಡಿಪಟ್ಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹಮದ್ ಖಾನ್ ಪಠಾಣ ಹೆಸರು ಇದೆ. ಪರಿಶೀಲಿಸಿ ಮಾಹಿತಿ ನೀಡುವೆ' ಎಂದು ಜಿಲ್ಲಾ ಎಸ್ಪಿ ಅಂಶುಕುಮಾರ್ ಬೆಳಿಗ್ಗೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಇದರ ಬೆನ್ನಲ್ಲೇ ಸುದ್ದಿಗಾರರ ಜೊತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹಮದ್ ಖಾನ್ ಪಠಾಣ ಅವರ ಹೆಸರು ರೌಡಿ ಪಟ್ಟಿಯಲ್ಲಿ ಇರುವುದನ್ನು ಪೊಲೀಸರು ಸ್ಪಷ್ಟಪಡಿಸಿದ್ದಾರೆ' ಎಂದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, 'ಕಳೆದ ಚುನಾವಣೆಯಲ್ಲಿ 16ರಿಂದ 17 ಅಪರಾಧ ಪ್ರಕರಣಗಳಿರುವ ಬಗ್ಗೆ ಯಾಸೀರ್ ಅಹಮದ್ ನಮೂದಿಸಿದ್ದರು. ದರ್ಗಾ ಗುರುಗಳಾದ ಅಜ್ಜಂಪೀರ ಖಾದ್ರಿ ಸಹ 'ರೌಡಿಶೀಟರ್‌ಗೆ ಟಿಕೆಟ್ ಕೊಟ್ಟಿದ್ದಾರೆ' ಎಂದಿದ್ದರು. ಗುರುಗಳು ಯಾವಾಗಲೂ ಸುಳ್ಳು ಹೇಳುವುದಿಲ್ಲ. ಆದರೆ, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಅಫಿಡವಿಟ್‌ನಲ್ಲಿ ಯಾವುದೇ ಪ್ರಕರಣ ನಮೂದಿಸಿಲ್ಲ. ಈ ಸಂಗತಿಯನ್ನು ಚುನಾವಣಾಧಿಕಾರಿಗಳು ಪರಿಶೀಲಿಸಿಲ್ಲ. ಜನರನ್ನು ವಂಚಿಸಲು ಅಪರಾಧ ಪ್ರಕರಣಗಳ ಮಾಹಿತಿ ಮುಚ್ಚಿಟ್ಟಿರುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಲಾಗುವುದು' ಎಂದರು.

ಪೊಲೀಸ್ ಕಡತದಲ್ಲಿರುವ ದಾಖಲೆ ಪರಿಶೀಲಿಸಲಾಗಿದ್ದು, ರೌಡಿಪಟ್ಟಿಯಲ್ಲಿ ಯಾಸೀರ ಅಹಮದ್ ಖಾನ್ ಪಠಾಣ ಹೆಸರು ಇಲ್ಲ
ಅಂಶುಕುಮಾರ್, ಹಾವೇರಿ ಜಿಲ್ಲಾ ಎಸ್ಪಿ (ಸೋಮವಾರ ರಾತ್ರಿ ನೀಡಿದ ಸ್ಪಷ್ಟನೆ)


ಈ ಎಲ್ಲ ಬೆಳವಣಿಗೆ ಹಿನ್ನೆಲೆಯಲ್ಲಿ ದಾಖಲೆಗಳನ್ನು ಬಿಡುಗಡೆ ಮಾಡಿದ ಯಾಸೀರ ಅಹಮದ್ ಖಾನ್ ಪಠಾಣ, 'ನನ್ನ ವಿರುದ್ಧ ಯಾವುದೇ ಪ್ರಕರಣ ಇಲ್ಲ. ರೌಡಿಪಟ್ಟಿಯಲ್ಲೂ ನನ್ನ ಹೆಸರಿಲ್ಲ. 2023ರ ಸೆಪ್ಟೆಂಬರ್‌ನಲ್ಲೇ ರೌಡಿಪಟ್ಟಿಯಿಂದ ನನ್ನ ಹೆಸರು ತೆಗೆಯಲಾಗಿದೆ' ಎಂದರು.

'ಬಿಜೆಪಿಯವರಿಗೆ ಉಪಚುನಾವಣೆಯಲ್ಲಿ ಸೋಲುವ ಭೀತಿ ಕಾಡುತ್ತಿದೆ. ಈ ಮೊದಲು ಆಕ್ಷೇಪಣೆ ಸಲ್ಲಿಸದವರು ಈಗ ಮತದಾನಕ್ಕೆ ಎರಡು ದಿನ ಬಾಕಿ ಇರುವಾಗ ಈ ರೀತಿ ಆರೋಪಿಸಿದ್ದಾರೆ' ಎಂದರು.

ಬಿಜೆಪಿ ಜತೆ ಮೈತ್ರಿ ಇಲ್ಲ: ಎಐಎಡಿಎಂಕೆ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಚೆನ್ನೈ: '2026ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ' ಎಂದು ತಮಿಳುನಾಡಿನ ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ಸ್ಪಷ್ಟಪಡಿಸಿದೆ.



ಜಯಕುಮಾರ್

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು 'ಜನ ವಿರೋಧಿ ಮತ್ತು ಭ್ರಷ್ಟ ಡಿಎಂಕೆ ಸರ್ಕಾರವನ್ನು ಸೋಲಿಸಲು 'ಸಮಾನ ಮನಸ್ಕ' ಪಕ್ಷಗಳೊಂದಿಗೆ ಕೈಜೋಡಿಸಲು ನಾವು ಸಿದ್ಧರಿದ್ದೇವೆ' ಎಂದು ಹೇಳಿದ್ದರು. ಇದು ಬಿಜೆಪಿಯೊಂದಿಗೆ ಪಕ್ಷದ ಮೈತ್ರಿ ಕುರಿತು ಊಹಾಪೋಹಗಳಿಗೆ ಕಾರಣವಾಗಿತ್ತು.

ಈ ಕುರಿತು ಸ್ಪಷ್ಟನೆ ನೀಡಿರುವ ಎಐಎಡಿಎಂಕೆ ಸಂಘಟನಾ ಕಾರ್ಯದರ್ಶಿ ಡಿ ಜಯಕುಮಾರ್ '2026ರ ಚುನಾವಣೆ ಅಥವಾ ಇನ್ನಾವುದೇ ಚುನಾವಣೆಗೂ ಪಕ್ಷವು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ. ಎನ್‌ಡಿಎಯಿಂದ ಹೊರನಡೆದಿರುವ ಹಾಗೂ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳದೇ ಇರುವ ಪಕ್ಷದ ನಿರ್ಧಾರದಲ್ಲಿ ಬದಲಾವಣೆ ಇಲ್ಲ' ಎಂದು ಹೇಳಿದರು.

ಅಭ್ಯರ್ಥಿಗಳ ಪರ ಮತಯಾಚನೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಸೋಮವಾರ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಮತ ಯಾಚಿಸಿದರು. 'ನಮ್ಮ ಅಭ್ಯರ್ಥಿಯ ಪರ ಜನರ ಒಲವು ಇದೆ' ಎಂದು ಎರಡೂ ಪಕ್ಷಗಳ ಮುಖಂಡರು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಇ. ಅನ್ನಪೂರ್ಣಾ ಪರ ಸಚಿವರಾದ ಸಂತೋಷ್ ಲಾಡ್, ಎಸ್.ಎನ್ ಬೋಸರಾಜು, ಸಂಸದೆ ಪ್ರಭಾ ಮಲ್ಲಿಕಾರ್ಜುನ ಸೋಮವಾರ ಮತಯಾಚಿಸಿದರು. ಬಳಿಕ ಸುದ್ದಿಗಾರರ ಜೊತೆ ಲಾಡ್ ಮಾತನಾಡಿ, 'ಬಿಜೆಪಿ ಅಭ್ಯರ್ಥಿ ಈ ತಾಲ್ಲೂಕಿನವರಲ್ಲ. ಅನ್ನಪೂರ್ಣಾ ಸ್ಥಳೀಯರು. ಜನ ಅವರನ್ನು ಬೆಂಬಲಿಸುವರು' ಎಂದರು.

'ಸಂಡೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 17 ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡು, 1.50 ಲಕ್ಷ ಜನರನ್ನು ಭೇಟಿಯಾಗಿದ್ದಾರೆ. ಇದರಿಂದ ನಮಗೆ ಅನುಕೂಲವಾಗಲಿದೆ' ಎಂದು ಅವರು ಹೇಳಿದರು.

ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರವಾಗಿ ಶಾಸಕ ಜನಾರ್ದನ ರೆಡ್ಡಿ ಪ್ರಚಾರ ನಡೆಸಿದರು. ಹನುಮಂತ ಅವರು ಸಂಘ, ಸಂಸ್ಥೆಗಳ ಮುಖಂಡರನ್ನು ಭೇಟಿಯಾಗಿ ಬೆಂಬಲ ಕೋರಿದರು.



ಸಂಡೂರಿನ ಆಟೋ ಚಾಲಕರನ್ನು ಸೋಮವಾರ ಭೇಟಿಯಾಗದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಬಿಜೆಪಿಗೆ ಬೆಂಬಲ ಕೋರಿದರು

ಸುದ್ದಿಗಾರರ ಜೊತೆ ಜನಾರ್ದನ ರೆಡ್ಡಿ ಮಾತನಾಡಿ, 'ನಾನು ಸಂಡೂರನ್ನು ಸಿಂಗಪುರ, ಬೀಜಿಂಗ್ ಮಾಡುವುದಾಗಿ ಹೇಳಿಲ್ಲ. ಆದರೆ, ಚೀನಾಕ್ಕೆ ಬೀಜಿಂಗ್ ಹೇಗೆ ಸ್ಟೀಲ್ ಹಬ್ ಆಗಿದೆಯೋ ಅದೇ ರೀತಿ ಬಳ್ಳಾರಿಯನ್ನು ದೇಶಕ್ಕೆ ಸ್ಟೀಲ್ ಹಬ್ ಮಾಡುವೆ. ಹಿಂದಿನ ಶಾಸಕ ಇ. ತುಕಾರಾಂ ಇಲ್ಲಿ ಕೆಲಸ ಮಾಡಿಲ್ಲ. ಬಂಗಾರು ಹನುಮಂತಗೆ ಬೆಂಬಲ ಸಿಗಲಿದೆ' ಎಂದರು.

ಮತದಾರರ ಚೀಟಿ ವಿಷಯಕ್ಕೆ ಗಲಾಟೆ: ಕುಡುತಿನಿಯ ಬುಡ್ಗಾ ಜಂಗಮ ಕಾಲೊನಿಯಲ್ಲಿ ಮತದಾರರ ಗುರುತಿನ ಚೀಟಿ ಹಂಚುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಗಲಾಟೆಯಾಗಿದ್ದು, ದೂರು ಪ್ರತಿದೂರು ದಾಖಲಾಗಿದೆ. ಎರಡೂ ಪ್ರಕರಣದಲ್ಲಿ ಒಟ್ಟು 27 ಜನರ ವಿರುದ್ಧ ಎಫ್‌ಐಆರ್ ಆಗಿದೆ.

ಮತದಾನ ಬಹಿಷ್ಕಾರದ ಎಚ್ಚರಿಕೆ–ಮನವೊಲಿಕೆ: ಸಂಡೂರು ಕ್ಷೇತ್ರದ ಹೊಸೂರು, ವಿಠಲಾಪುರ ಮತ್ತು ತುಮಟಿ ತಾಂಡಗಳ ಜನರು ಮತದಾನ ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದ್ದರು. ಮಾಹಿತಿ ಪಡೆದ ಅಧಿಕಾರಿಗಳು ಗ್ರಾಮಸ್ಥರ ಸಮಸ್ಯೆ ಆಲಿಸಿ ಆಲಿಸಿ ಪರಿಹಾರ ಸೂಚಿಸಿದ್ದಾರೆ.

'ಸದ್ಯ ಗ್ರಾಮಸ್ಥರು ಮತದಾನಕ್ಕೆ ಒಪ್ಪಿದ್ದಾರೆ. ಈವರೆಗೆ ತಾತ್ಕಾಲಿಕ ಚೆಕ್ ಪೋಸ್ಟ್‌ಗಳಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹28 ಲಕ್ಷ ಹಣ ವಶಪಡಿಸಿಕೊಳ್ಳಲಾಗಿದೆ. ಸುಮಾರು 2,900 ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ' ಎಂದು ಚುನಾವಣಾಧಿಕಾರಿ ರಾಜೇಶ್ ಎಚ್.ಡಿ ತಿಳಿಸಿದ್ದಾರೆ.

'ಕಾಂಗ್ರೆಸ್ ಸರ್ಕಾರ ಹೆಚ್ಚು ದಿನ ಉಳಿಯಲ್ಲ'

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ. ನನ್ನ ಈ ಮಾತು ಭವಿಷ್ಯವಲ್ಲ ವಾಸ್ತವ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

'ಹಾಸನ ಪ್ರಕರಣ ಬಳಸಿಕೊಂಡು ನಮ್ಮ ಕುಟುಂಬವನ್ನು ಮುಗಿಸುವ ಹುನ್ನಾರ ನಡೆದಿತ್ತು. ಉಪ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೊಕ್ಕು ಮುರಿಯಬೇಕು' ಎಂದು ಅವರು ಮತದಾರರಲ್ಲಿ ಮನವಿ ಮಾಡಿದರು.

ಉಪ ಚುನಾವಣೆ ಅಭ್ಯರ್ಥಿಯಾಗಿರುವ ತಮ್ಮ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಪರ ಪಟ್ಟಣದ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಬಹಿರಂಗ ಸಮಾವೇಶದಲ್ಲಿ ಮಾತನಾಡಿದ ಅವರು, ಸರ್ಕಾರ ಹಾಗೂ ಡಿ.ಕೆ ಸಹೋದರರ ವಿರುದ್ಧ ಗುಡುಗಿದರು.

'ಜನವರಿಯೊಳಗೆ ರಾಜ್ಯ ಸರ್ಕಾರ ಬೀಳಲಿದೆ' ಎಂಬ ಕೇಂದ್ರ ಸಚಿವ ವಿ.ಸೋಮಣ್ಣ ಮಾತಿಗೆ ದನಿಗೂಡಿಸಿದ ಗೌಡರು, 'ನನ್ನಂತೆಯೇ ಸೋಮಣ್ಣ ಅವರಿಗೂ ಜ್ಯೋತಿಷ್ಯ ಕೇಳುವ ಅಭ್ಯಾಸ ಇರುವುದೇ ಸೋಜಿಗ. ಆದರೆ ಅವರು ಸತ್ಯ ಹೇಳಿದ್ದಾರೆ' ಎಂದು ಮೆಚ್ಚುಗೆ ಸೂಚಿಸಿದರು.



ಚನ್ನಪಟ್ಟಣ ಉಪ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರವಾಗಿ, ಜೂನಿಯರ್ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಹಿರಂಗ ಪ್ರಚಾರ ಸಮಾವೇಶವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಉದ್ಘಾಟಿಸಿದರು. ಕೇಂದ್ರ ಸಚಿವರಾದ ಎಚ್‌.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಮಾಜಿ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ, ಪ್ರತಿಪಕ್ಷದ ನಾಯಕ ಆರ್‌. ಅಶೋಕ ಸೇರಿದಂತೆ ಮೈತ್ರಿಕೂಟದ ಶಾಸಕರು ಹಾಗೂ ಮುಖಂಡರು ಇದ್ದರು

'ಒಂದು ಕಾಲದಲ್ಲಿ ನಾನು ಮತ್ತು ಯಡಿಯೂರಪ್ಪ ಕಿತ್ತಾಡಿಕೊಂಡಿದ್ದೆವು. ನಾವಿಬ್ಬರು ಈಗ ಒಂದಾಗಿರುವುದೇ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು' ಎಂದು ಪಕ್ಕದಲ್ಲಿ ಕುಳಿತದ್ದ ಯಡಿಯೂರಪ್ಪ ಅವರ ಕೈ ಹಿಡಿದುಕೊಂಡು ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಹಾಗೂ ಕುಮಾರಸ್ವಾಮಿ ಅವರನ್ನು ಅರೆಸ್ಟ್ ಮಾಡಬೇಕು ಎಂದಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಅವರ ಮಾತುಗಳೇ ಮುಳುವಾಗಲಿವೆ' ಎಂದರು.

'ಕಾಂಗ್ರೆಸ್‌ನವರು ಎಂದಿಗೂ ನಂಬಿಕೆಗೆ ಅರ್ಹರಲ್ಲ. ಅವರ ಸಹವಾಸವೇ ಬೇಡ ಎಂದು ಕುಮಾರಸ್ವಾಮಿಗೆ ಕಿವಿಮಾತು ಹೇಳಿದ್ದೆ. ಆದರೆ, ಕಾಂಗ್ರೆಸ್‌ನವರು ಕುಮಾರಸ್ವಾಮಿ ಮೇಲೆ ಒತ್ತಡ ಹಾಕಿ ಸಮ್ಮಿಶ್ರ ಸರ್ಕಾರ ರಚನೆಯಾಗುವಂತೆ ಮಾಡಿದ್ದರು. ನನ್ನ ಮಗ ಮುಖ್ಯಮಂತ್ರಿಯಾಗಿದ್ದರೂ ನೆಮ್ಮದಿಯಾಗಿ ಆಡಳಿತ ನಡೆಸಲು ಬಿಡಲಿಲ್ಲ' ಎಂದು ಆರೋಪಿಸಿದರು.

ಉಪ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನಿಖಿಲ್ ಕುಮಾರಸ್ವಾಮಿ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಿಖಿಲ್ ಕುಮಾರಸ್ವಾಮಿ ಅವರು ಭಾಷಣ ಆರಂಭಿಸುವ ಮುಂಚೆ ತಾತ ದೇವೇಗೌಡರು, ತಂದೆ ಕುಮಾರಸ್ವಾಮಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕಾಲಿಗೆ ದೀರ್ಘದಂಡ ನಮಸ್ಕಾರ ಮಾಡಿದರು. ನಿಖಿಲ್ ಪರ ಪತ್ನಿ ರೇವತಿ ಸಹ ಭಾಷಣ ಮಾಡಿ ಮತ ಯಾಚಿಸಿದರು.

ಜಾರ್ಖಂಡ್: ನಾಳೆ ಮೊದಲ ಹಂತದ ಮತ ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರ್ಖಂಡ್ ವಿಧಾನಸಭೆ ಚುನಾವಣೆಯ ಮೊದಲ ಹಂತ, ವಯನಾಡ್ ಲೋಕಸಭಾ ಹಾಗೂ 33 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಬಹಿರಂಗ ಪ್ರಚಾರ ಸೋಮವಾರ ಕೊನೆಗೊಂಡಿದೆ.

ಜಾರ್ಖಂಡ್ ವಿಧಾನಸಭೆಯ 81 ಕ್ಷೇತ್ರಗಳ ಪೈಕಿ 43 ಸ್ಥಾನಗಳಿಗೆ ನವೆಂಬರ್ 13 ರಂದು ಮತದಾನ ನಡೆಯಲಿದೆ. ಉಳಿದ 38 ಸ್ಥಾನಗಳಿಗೆ ಎರಡನೇ ಹಂತದ ಮತದಾನ ನವೆಂಬರ್ 20ರಂದು ನಡೆಯಲಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನೇತೃತ್ವದ 'ಇಂಡಿಯಾ' ಮೈತ್ರಿಕೂಟದ ನಡುವೆ ತುರುಸಿನ ಪೈಪೋಟಿ ಏರ್ಪಟ್ಟಿದೆ.

2000ರ ನವೆಂಬರ್‌ನಲ್ಲಿ ಬಿಹಾರದಿಂದ ಬೇರ್ಪಟ್ಟು ಜಾರ್ಖಂಡ್ ಹೊಸ ರಾಜ್ಯವಾಗಿ ರೂಪುಗೊಂಡಿತು. ಆ ನಂತರ ನಡೆದ ಚುನಾವಣೆಗಳಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಕ್ಕಿಲ್ಲ. ರಾಜ್ಯದಲ್ಲಿ ಮೈತ್ರಿ ಸರ್ಕಾರಗಳೇ ಆಡಳಿತ ನಡೆಸಿವೆ.

ರಾಜ್ಯದ 24 ಜಿಲ್ಲೆಗಳಲ್ಲಿನ 2.6 ಕೋಟಿ ಮತದಾರರಲ್ಲಿ ಆದಿವಾಸಿಗಳ ಸಂಖ್ಯೆ ಶೇ 26ರಷ್ಟು. ಪರಿಶಿಷ್ಟ ಪಂಗಡದ (ಎಸ್‌ಟಿ) 28 ಮೀಸಲು ಕ್ಷೇತ್ರಗಳಿವೆ. ಕಳೆದ ಚುನಾವಣೆಯಲ್ಲಿ ಜೆಎಂಎಂ 25ರಲ್ಲಿ ಗೆದ್ದರೆ, ಬಿಜೆಪಿ ಕೇವಲ 2 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಮೊದಲ ಹಂತದಲ್ಲಿ 20 ಎಸ್‌ಟಿ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಹೀಗಾಗಿ, ಆದಿವಾಸಿ ಮತದಾರರನ್ನು ಸೆಳೆಯಲು ಎರಡೂ ಮೈತ್ರಿಕೂಟಗಳು ಕಸರತ್ತು ನಡೆಸಿವೆ.



ಪ್ರಣಾಳಿಕೆ ಬಿಡುಗಡೆಗೊಳಿಸಿ ಜೆಎಂಎಂ ಮುಖ್ಯಸ್ಥ ಶಿಬು ಸೊರೇನ್

ರಾಜ್ಯದಲ್ಲಿ ಮುಸ್ಲಿಮರು ಶೇ 20ರಷ್ಟು ಇದ್ದಾರೆ. ಕಳೆದ ಚುನಾವಣೆಯಲ್ಲಿ ಆದಿವಾಸಿಗಳು ಹಾಗೂ ಮುಸ್ಲಿಮರು ಜೆಎಂಎಂ ಮೈತ್ರಿಕೂಟದ ಬೆನ್ನಿಗೆ ನಿಂತಿದ್ದರು. ಹೀಗಾಗಿ, ಮೈತ್ರಿಕೂಟ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಈ ಸಲ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಆದಿವಾಸಿಗಳ ಓಲೈಸಲು ಹಲವು ಘೋಷಣೆಗಳನ್ನು ಮಾಡಿದ್ದಾರೆ.

ಪ್ರಣಾಳಿಕೆ ಬಿಡುಗಡೆ

ರಾಂಚಿ (ಪಿಟಿಐ): ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ವಿಧಾನಸಭೆ ಚುನಾವಣೆಗೆ ಸೋಮವಾರ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು.

ಪಕ್ಷದ ವಕ್ತಾರ ಸುಪ್ರಿಯೊ ಭಟ್ಟಾಚಾರ್ಯ ಅವರು, 'ಪಕ್ಷವು ಅಧಿಕಾರಕ್ಕೆ ಬಂದರೆ ರಾಜ್ಯ ಸರ್ಕಾರದ ಎಲ್ಲಾ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಲಾಗುವುದು' ಎಂದು ಹೇಳಿದರು.

- ಕ್ರೆಡಿಟ್ ಗ್ಯಾರಂಟಿ ಯೋಜನೆ ಅಡಿಯಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಿಗಳಿಗೆ ₹5 ಕೋಟಿವರೆಗೆ ಸಾಲ ಸೌಲಭ್ಯ
- ಸಣ್ಣ ಮತ್ತು ಮಧ್ಯಮ ವರ್ತಕರ ಸಾಲ ಮನ್ನಾ
- ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆ

ಟಿಎಂಸಿ–ಆಯೋಗದ ಮಧ್ಯೆ ವಾಗ್ವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬೀಳುವ ಕೆಲವೇ ಗಂಟೆಗಳ ಮೊದಲು ಸೋಮವಾರ, ಟಿಎಂಸಿ ಮತ್ತು ಚುನಾವಣಾ ಆಯೋಗದ ಮಧ್ಯೆ ವಾಗ್ವಾದ ನಡೆಯಿತು.

ಪಕ್ಷವು ನೀಡಿರುವ ದೂರುಗಳ ಬಗ್ಗೆ ಆಯೋಗವು ಕ್ರಮ ಕೈಗೊಂಡಿಲ್ಲ ಎಂದು ಟಿಎಂಸಿ ಆರೋಪಿಸಿತ್ತು. ಆಯೋಗವು ಈ ಆರೋಪವನ್ನು ಅಲ್ಲಗಳೆದು, ಭೇಟಿಗೆ ಅವಕಾಶ ನೀಡುವಂತೆ ಟಿಎಂಸಿ ಬರೆದಿದ್ದ ಪತ್ರದಲ್ಲಿ ಹೆಚ್ಚಿನ ವಿವರಗಳು ಇರಲಿಲ್ಲ ಎಂದು ಹೇಳಿದೆ.

ಇದಕ್ಕೆ ಪ್ರತಿಯಾಗಿ ಟಿಎಂಸಿ ಹಿರಿಯ ಸಂಸದ ಡೆರಿಕ್ ಒಬ್ರಯಾನ್ ಅವರು ಚುನಾವಣಾ ಆಯೋಗಕ್ಕೆ ಮತ್ತೆ ಪತ್ರ ಬರೆದು, 'ಚುನಾವಣಾ ಆಯೋಗದ ಬಗ್ಗೆ ಅಪಾರ ಗೌರವವಿದೆ. ಆದರೆ ಸಂಸತ್ತಿಗೆ ಮೂರನೇ ಅತಿ ಹೆಚ್ಚು ಸಂಸದರನ್ನು ಕಳುಹಿಸಿರುವ ಪಕ್ಷದ ಬಗ್ಗೆ ಆಯೋಗಕ್ಕೆ ಎಷ್ಟು ಗೌರವ ಇದೆ ಎಂಬುದನ್ನು ಮೂರು ದಿನಗಳಲ್ಲಿ ಕಂಡಿದ್ದೇವೆ' ಎಂದು ಹೇಳಿದ್ದಾರೆ.

'ಮೂರು ದಿನ ನಮ್ಮನ್ನು ಉಪೇಕ್ಷಿಸಿ ಉಪ ಚುನಾವಣೆಯ ಬಹಿರಂಗ ಪ್ರಚಾರ ಅಂತ್ಯಗೊಳ್ಳುವ 90 ನಿಮಿಷ ಮೊದಲು ಭೇಟಿಗೆ ಅವಕಾಶ ನೀಡಲಾಗಿದೆ' ಎಂದು ದೂರಿದ್ದಾರೆ.

ಒಬ್ರಯಾನ್ ಅವರ ಪತ್ರಕ್ಕೆ ಪ್ರತಿಕ್ರಿಯೆ ನೀಡಿರುವ ಆಯೋಗ, 'ಮನವಿ ಸ್ವೀಕರಿಸಿದ 20 ಗಂಟೆಗಳ ಒಳಗಾಗಿ ಕ್ರಮ ಕೈಗೊಂಡಿದ್ದರೂ ಇಂಥ ಹೇಳಿಕೆ ನೀಡುತ್ತಿರುವುದು ಅಚ್ಚರಿ ಮೂಡಿಸಿದೆ' ಎಂದು ಹೇಳಿದೆ.

'ಕ್ರಮ ಕೈಗೊಂಡಿಲ್ಲ ಎಂಬ ಆರೋಪವು ಆಧಾರರಹಿತ. ಹಾಗೆಯೇ ಸೋಮವಾರ ಮಧ್ಯಾಹ್ನ 3.30ಕ್ಕೆ ನಿಯೋಗವು ಭೇಟಿ ಮಾಡಬಹುದು ಎಂದು ನವೆಂಬರ್ 10ರಂದೇ ತಿಳಿಸಲಾಗಿದೆ' ಎಂದು ಹೇಳಿದೆ.

ಹಲವು ವಿಚಾರಗಳ ಬಗ್ಗೆ ವಿವರಣೆ ನೀಡಲು ಶನಿವಾರ ಆಯೋಗದ ಸಮಯವನ್ನು ಕೋರಿದ್ದೆವು. ಆದರೆ ಆ ದಿನ ಸಮಯ ನೀಡಲಿಲ್ಲ ಎಂದು ಟಿಎಂಸಿ ನಾಯಕರು ಹೇಳಿದ್ದಾರೆ.

ಸರ್ಕಾರ ಬದಲಾವಣೆಯ ಅಗತ್ಯವಿದೆ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್



ಶರದ್ ಪವಾರ್

ಜಲಗಾಂವ್ (ಪಿಟಿಐ): ಮಹಾರಾಷ್ಟ್ರದಲ್ಲಿ ರೈತರು, ಮಹಿಳೆಯರು ಮತ್ತು ಯುವಜನರ ಸ್ಥಿತಿ ಸುಧಾರಣೆಗೆ 'ಸರ್ಕಾರ ಬದಲಾವಣೆಯ ಅಗತ್ಯವಿದೆ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದರು.

ಪೈರೋಲ್‌ನಲ್ಲಿ ಮಹಾ ವಿಕಾಸ್ ಆಘಾಡಿ ಅಭ್ಯರ್ಥಿಗಳ ಪರ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಬದ್ಲಾಪುರದಲ್ಲಿ ಶಾಲೆಗೆ ತೆರಳುವ ಬಾಲಕಿ ಮೇಲೆ ದೌರ್ಜನ್ಯ ನಡೆಯಿತು. ಮಹಿಳೆಯ ಮೇಲಿನ ದೌರ್ಜನ್ಯಕ್ಕೆ ಇಂಥ ಎಷ್ಟು ಉದಾಹರಣೆಗಳನ್ನು ಕೊಡಬೇಕು? ಮಹಿಳೆಯರಿಗೆ ರಕ್ಷಣೆ ನೀಡುವ ಬದಲಾಗಿ ಅವರು ನಮ್ಮ ಸಹೋದರಿಯರಿಗೆ ಹಣ ನೀಡುತ್ತೇವೆ ಎಂದು ಘೋಷಿಸುತ್ತಾರೆ (ಲಡಕೀ ಬಹೀಣ)' ಎಂದು ಟೀಕಿಸಿದರು.

'ಲಡಕೀ ಬಹೀಣ ಯೋಜನೆಗೆ ನಾವು ವಿರೋಧ ವ್ಯಕ್ತಪಡಿಸುತ್ತಿಲ್ಲ. ನೀವು ಹಣ ಕೊಡಿ ಆದರೆ ನಮ್ಮ ಸಹೋದರಿಯರ ಸ್ಥಿತಿ ಹೇಗಿದೆ? ಕೇಂದ್ರ ಸರ್ಕಾರ ಹಂಚಿಕೊಂಡ ಅಂಕಿಅಂಶದ ಪ್ರಕಾರ 9,000 ಬಾಲಕಿಯರು ನಾಪತ್ತೆಯಾಗಿದ್ದಾರೆ' ಎಂದು ಹೇಳಿದರು.

'ಸರ್ಕಾರ ಬದಲಾಗದ ಹೊರತು ನಿಮ್ಮ ಸ್ಥಿತಿ ಬದಲಾಗುವುದಿಲ್ಲ. ಅದಕ್ಕಾಗಿ ನಾವು (ಕಾಂಗ್ರೆಸ್, ಎನ್‌ಸಿಪಿ (ಶರದ್ ಪವಾರ್ ಬಣ), ಶಿವಸೇನೆ (ಉದ್ಧವ್ ಬಣ) ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದರು.

ನುಡಿ–ಕಿಡಿ



ರಾಜ್ಯದಲ್ಲಿ ಮತ ಜಿಹಾದ್ ಆರಂಭಗೊಂಡಿದೆ. ಇದನ್ನು ಲೋಕಸಭಾ ಚುನಾವಣೆಯಲ್ಲಿಯೇ ನೋಡಿದೆವು. ಡುಲೆ ವಿಭಾಗದಲ್ಲಿ ನಾವು 1.90 ಲಕ್ಷ ಮತಗಳಿಂದ ಮುನ್ನಡೆ ಸಾಧಿಸಿದ್ದೆವು. ಮಾಲೆಗಾಂವ್ ವಿಭಾಗದ ಮತ ಎಣಿಕೆ ಆರಂಭವಾಗುತ್ತಿದ್ದಂತೆಯೇ 4 ಸಾವಿರ ಮತಗಳಿಂದ ನಾವು ಹಿನ್ನಡೆ ಅನುಭವಿಸಿದೆವು. ಮತ ಜಿಹಾದ್ ಕಾರಣಕ್ಕೆ ನಾವು ಸೋತೆವು ಮತ್ತು ನಾವುಗಳು ಒಗ್ಗಟ್ಟಿನಿಂದಲೂ ಇರಲಿಲ್ಲ. ಮತ ಜಿಹಾದ್ ವಿರುದ್ಧವಾಗಿ 'ಧರ್ಮ ಯುದ್ಧ' ಮಾಡಲು ಸಿದ್ಧರಾಗಿ
ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಉಪಮುಖ್ಯಮಂತ್ರಿ



ನಮ್ಮ ಪೂರ್ವಜರು ಬ್ರಿಟಿಷರ ವಿರುದ್ಧ ಜಿಹಾದ್ ಮಾಡಿದ್ದರೇ ಹೊರತು ನಿಮ್ಮ ಪೂರ್ವಜರಲ್ಲ. ಫಡಣವೀಸ್ ಪೂರ್ವಜರು ಬ್ರಿಟಿಷರಿಗೆ ಪ್ರೇಮ ಪತ್ರ ಬರೆಯುತ್ತಿದ್ದರು. ಇಂಥವರು ನಮಗೆ ಜಿಹಾದ್ ಬಗ್ಗೆ ಪಾಠ ಮಾಡುತ್ತಾರೆಯೇ? ಪ್ರಜಾಪ್ರಭುತ್ವದಲ್ಲಿ ಮತ ಜಿಹಾದ್, ಧರ್ಮ ಯುದ್ಧ ಅಂತೆಲ್ಲಾ ಎಲ್ಲಿಂದ ಬರುತ್ತದೆ? ಮತ ಗಳಿಸಲು ಸಾಧ್ಯವಾಗದಿದ್ದಾಗ ಜಿಹಾದ್ ಅಂತೆಲ್ಲಾ ಮಾತನಾಡುತ್ತಾರೆ. ಶಾಸಕರನ್ನು ಖರೀದಿ ಮಾಡುತ್ತೀರಲ್ಲ, ನಿಮ್ಮನ್ನು ಕಳ್ಳರು ಎಂದು ನಾವು ಕರೆಯಬಹುದೇ?
ಅಸಾಸುದ್ದೀನ್ ಓವೈಸಿ, ಎಐಎಂಐಎಂ ಮುಖ್ಯಸ್ಥ, ಸಂಸದ

ನೋಡಿ, ಅವರು ರಜಾಕಾರ ವಂಶಸ್ಥರು. ರಜಾಕಾರು ಮಹಾರಾಷ್ಟ್ರದ ಜನರನ್ನು ಹಿಂಸಿಸಿದ್ದಾರೆ. ನಮ್ಮ ಜನರ ಭೂಮಿಯನ್ನು ಕೊಳ್ಳೆ ಹೊಡೆದಿದ್ದಾರೆ. ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದಾರೆ, ಕುಟುಂಬಗಳನ್ನು ನಾಶ ಮಾಡಿದ್ದಾರೆ. ಯಾವ ಮುಖ ಇಟ್ಟುಕೊಂಡು ಇವರು ನಮ್ಮ ಬಳಿ ಮಾತನಾಡುತ್ತಾರೆ
ದೇವೇಂದ್ರ ಫಡಣವೀಸ್, ಮಹಾರಾಷ್ಟ್ರ ಉಪಮುಖ್ಯಮಂತ್ರಿ

'ಗ್ಯಾರಂಟಿ' ಸ್ಥಗಿತ ವಿಪಕ್ಷದವರ ಹಣೆಯಲ್ಲಿ ಬರೆದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲು ಬಿಜೆಪಿ, ಜೆಡಿಎಸ್ ಷಡ್ಯಂತ್ರ ರೂಪಿಸುತ್ತಿದೆ. ಆದರೆ, ಈ ಯೋಜನೆಗಳನ್ನು ನಿಲ್ಲಿಸುವುದು ವಿಪಕ್ಷದವರ ಹಣೆಯಲ್ಲಿ ಬರೆದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ಹೇಳಿದರು.

'ಉಪ ಚುನಾವಣೆ ಬಳಿಕ ಗೃಹಲಕ್ಷ್ಮಿ ಯೋಜನೆ ನಿಲ್ಲಲಿದೆ' ಎಂಬ ಎಚ್.ಡಿ. ದೇವೇಗೌಡರ ಹೇಳಿಕೆ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಗ್ಯಾರಂಟಿ ಯೋಜನೆ ನಿಲ್ಲಿಸಲು ಬಿಜೆಪಿ ಷಡ್ಯಂತ್ರ ರೂಪಿಸುತ್ತಿರುವುದರ ಬಗ್ಗೆ ಜನರು ಜಾಗೃತರಾಗಿರಬೇಕೆಂದು ದೇವೇಗೌಡರು ಸಂದೇಶ ನೀಡಿದ್ದಾರೆ' ಎಂದರು.

'ಗ್ಯಾರಂಟಿ ಯೋಜನೆಗಳು ಮತ್ತು ಆಡಳಿತವನ್ನು ರಾಜ್ಯದ ಜನರು ಒಪ್ಪಿದ್ದಾರೆ. ಹೀಗಾಗಿ, ಉಪ ಚುನಾವಣೆ ನಡೆಯಲಿರುವ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಭೇರಿ ಮೊಳಗಿಸಲಿದೆ' ಎಂದರು.

ಜಾರ್ಖಂಡ್: ಪ್ರಚಾರ ಸಭೆಯಲ್ಲಿ ಅಮಿತ್ ಶಾ ಘೋಷಣೆ

ನುಸುಳುಕೋರರ ಗುರುತಿಸಲು ಸಮಿತಿ

ಸರಾಯ್‌ಕೆಲಾ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ನಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ, ನುಸುಳುಕೋರರನ್ನು ಗುರುತಿಸಿ ಅವರನ್ನು ರಾಜ್ಯದಿಂದ ಹೊರಹಾಕಲು ಸಮಿತಿಯನ್ನು ರಚಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ಸರಾಯ್‌ಕೆಲಾದಲ್ಲಿ ಸೋಮವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ನುಸುಳುಕೋರರ ವಶದಲ್ಲಿರುವ ಭೂಮಿಯನ್ನು ಮರಳಿ ಪಡೆಯಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

'ಜಾರ್ಖಂಡ್‌ನಲ್ಲಿ ಬುಡಕಟ್ಟು ಸಮುದಾಯದ ಜನಸಂಖ್ಯೆ ಕಡಿಮೆಯಾಗುತ್ತಿದೆ. ನುಸುಳುಕೋರರು ಇಲ್ಲಿನ ಬುಡಕಟ್ಟು ಸಮುದಾಯದ ಹೆಣ್ಣು ಮಕ್ಕಳನ್ನು ಮದುವೆಯಾಗಿ, ಭೂಮಿ ಕಬಳಿಸುತ್ತಿದ್ದಾರೆ. ಬುಡಕಟ್ಟು ಮಹಿಳೆಯರನ್ನು ಮದುವೆಯಾಗಿರುವ ನುಸುಳುಕೋರರಿಗೆ ಭೂಮಿ ಸಿಗದಂತೆ ಮಾಡಲು ಕಾನೂನು ತರುತ್ತೇವೆ' ಎಂದರು.

'ನುಸುಳುಕೋರರ ವಿಷಯವನ್ನು ಎತ್ತಿದ್ದಕ್ಕೆ ಚಂಪೈ ಸೊರೇನ್ ಅವರಿಗೆ ಅವಮಾನ ಮಾಡಲಾಯಿತು. ಮಾತ್ರವಲ್ಲ, ಮುಖ್ಯಮಂತ್ರಿ ಸ್ಥಾನ ತೊರೆಯುವಂತೆ ಅವರ ಮೇಲೆ ಹೇಮಂತ್ ಸೊರೇನ್ ಒತ್ತಡ ಹೇರಿದರು' ಎಂದು ಆರೋಪಿಸಿದರು.



ಜಮ್ಶೆಡ್‌ಪುರದ ಆದಿತ್ಯಪುರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ, ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಪಾಲ್ಗೊಂಡರು —ಪಿಟಿಐ ಚಿತ್ರ

'ಜಾರ್ಖಂಡ್ ಜನರು ಬದಲಾವಣೆ ಬಯಸಿದ್ದಾರೆ'

ನವದೆಹಲಿ (ಪಿಟಿಐ): ಜೆಎಂಎಂ ಮೈತ್ರಿಕೂಟ ಸರ್ಕಾರದ ದುರಾಡಳಿತದಿಂದ ರೋಸಿಹೋಗಿರುವ ಜಾರ್ಖಂಡ್‌ನ ಜನರು ಬದಲಾವಣೆ ಬಯಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.


ಜಾರ್ಖಂಡ್‌ನಲ್ಲಿ ಬಿಜೆಪಿ ಕೈಗೊಂಡಿರುವ 'ಮೇರಾ ಬೂತ್ ಸಬ್‌ಸೇ ಮಜ್‌ಬೂತ್' ಅಭಿಯಾನದ ಅಂಗವಾಗಿ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು ಕಾಂಗ್ರೆಸ್, ಜೆಎಂಎಂ ಮತ್ತು ಆರ್‌ಜೆಡಿ ವಿರುದ್ಧ ಹರಿಹಾಯ್ದರು.

'ಜೆಎಂಎಂ, ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷಗಳು ಜಾರ್ಖಂಡ್‌ನ ಜನರ ಆಹಾರ, ಭೂಮಿಯನ್ನು ಕಸಿದುಕೊಂಡಿದೆ. ಇಲ್ಲಿನ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆಸಿದೆ. ಆದ್ದರಿಂದ ಈ ಬಾರಿ ಸರ್ಕಾರವನ್ನು ಬದಲಿಸಲು ಜನರು ದೃಢಸಂಕಲ್ಪ ಮಾಡಿದ್ದಾರೆ' ಎಂದರು.

ಜೆಎಂಎಂ, ಕಾಂಗ್ರೆಸ್ ಮತ್ತು ಆರ್‌ಜೆಡಿ ನಾಯಕರು ಬಾಂಗ್ಲಾದೇಶದ ನುಸುಳುಕೋರರ ರಕ್ಷಣೆಗೆ ನಿಂತಿದ್ದಾರೆ. ವೈಯಕ್ತಿಕ ಹಿತಾಸಕ್ತಿ ಕಾಪಾಡುವುದಷ್ಟೇ ಅವರ ಗುರಿ ಎಂದು ಟೀಕಿಸಿದರು.

₹ 1000 ಕೋಟಿ ಮೊತ್ತದ ನರೇಗಾ ಹಗರಣ, ₹ 300 ಕೋಟಿ ಮೊತ್ತದ ಭೂ ಹಗರಣ ಮತ್ತು ಗಣಿಗಾರಿಕೆಗೆ ಸಂಬಂಧಿಸಿದ ₹ 1000 ಕೋಟಿ ಹಗರಣದಲ್ಲಿ ಜೆಎಂಎಂ ನೇತೃತ್ವದ ಮೈತ್ರಿಕೂಟದ ನಾಯಕರು ಭಾಗಿಯಾಗಿದ್ದಾರೆ ಎಂದು ಆಪಾದಿಸಿದರು.

ಖರೀದಿಸಿದ ಶಾಸಕರನ್ನು ಕುರಿಗಳಂತೆ ಇರಿಸಿಕೊಳ್ಳುತ್ತಾರೆ: ಖರ್ಗೆ ಆರೋಪ



ಮಲ್ಲಿಕಾರ್ಜುನ ಖರ್ಗೆ

ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಅವರು 'ಮುಖ ಮೇ ರಾಮ್, ಬಗಲ್ ಮೇ ಚೂರಿ' (ಬಾಯಲ್ಲಿ ರಾಮ, ಬಗಲಲ್ಲಿ ಚೂರಿ) ಎನ್ನುವಂಥ ಮನಃಸ್ಥಿತಿಯವರು. ಪ್ರಧಾನಿ ಮೋದಿ ಅವರು ಚುನಾಯಿತ ಸರ್ಕಾರವನ್ನು ಬೀಳಿಸುವ ಮನಃಸ್ಥಿತಿಯವರು. ಅವರ ಕೆಲಸ ಶಾಸಕರನ್ನು ಖರೀದಿಸುವುದು. ಖರೀದಿಸಿದ ಶಾಸಕರನ್ನು ಕುರಿಗಳ ರೀತಿಯಲ್ಲಿ ತಮ್ಮ ಬಳಿ ಇರಿಸಿಕೊಳ್ಳುತ್ತಾರೆ, ಅವರಿಗೆ ಆಹಾರ ನೀಡಿ ಬೆಳೆಸುತ್ತಾರೆ. ನಂತರ ಅವರನ್ನೇ ಕೊಂದು ತಿನ್ನುತ್ತಾರೆ.

ಮೋದಿಯನ್ನು ಕಳೆದ 25 ವರ್ಷಗಳಿಂದ ನೋಡುತ್ತಿದ್ದೇವೆ. ಹಿಂದುಳಿದ ವರ್ಗದ ಜನರನ್ನು ಮಹಿಳೆಯರನ್ನು ಶೋಷಿಸುವವರನ್ನು ಮೋದಿ ಅವರು ಬೆಂಬಲಿಸುತ್ತಾರೆ. ತಮ್ಮ ಯಾವ ಭರವಸೆಗಳನ್ನೂ ಈಡೇರಿಸದ ಸುಳ್ಳುಗಾರ ಮೋದಿ. ಮೋದಿ, ಅಮಿತ್ ಶಾ, ಅದಾನಿ ಹಾಗೂ ಅಂಬಾನಿ ಈ ದೇಶವನ್ನು ಆಳುತ್ತಿದ್ದಾರೆ. ರಾಹುಲ್ ಗಾಂಧಿ ಮತ್ತು ನಾನು ಸಂವಿಧಾನ ಹಾಗೂ ಪ್ರಜಾಪ್ರಭುತ್ವವನ್ನು ಉಳಿಸಲು ಯತ್ನಿಸುತ್ತಿದ್ದೇವೆ.

ಮಲ್ಲಿಕಾರ್ಜುನ ಖರ್ಗೆ,
ಕಾಂಗ್ರೆಸ್ ಅಧ್ಯಕ್ಷ (ರಾಂಚಿಯಲ್ಲಿ ಪ್ರಚಾರ ಸಭೆಯೊಂದರಲ್ಲಿ ಮಾಡಿದ ಭಾಷಣ)

ಜಾರ್ಖಂಡ್‌ನಲ್ಲಿ ಬಿಜೆಪಿಯು ಅಧಿಕಾರಕ್ಕೆ ಬಂದರೆ ಜೆಎಂಎಂ ನೇತೃತ್ವದ ಮೈತ್ರಿಕೂಟದ ಭ್ರಷ್ಟ ನಾಯಕರನ್ನು ಜೈಲಿಗೆ ಕಳುಹಿಸುತ್ತೇವೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಅಲ್ಲಮಪ್ರಭು ದೇವಸ್ಥಾನ ಪ್ರಾಚೀನ ಸ್ಮಾರಕ ವ್ಯಾಪ್ತಿಗೆ ಒಳಪಡುವ ಬಗ್ಗೆ ಗೊಂದಲ

ಸಮಿತಿ ರಚನೆಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿರುವ ಅಲ್ಲಮಪ್ರಭು ಸ್ವಾಮಿ ದೇವಸ್ಥಾನ, ಅದಕ್ಕೆ ಸಂಬಂಧಿಸಿದ ಶಾಸನ ಹಾಗೂ ಪಳೆಯುಳಿಕೆಗಳು; ಕರ್ನಾಟಕ ಪಾರಂಪರಿಕ ಸ್ಮಾರಕಗಳ ಕಾಯ್ದೆ–1961ರ ಅನ್ವಯ ಪುರಾತನ ಸ್ಮಾರಕಗಳ ವ್ಯಾಪ್ತಿಗೆ ಒಳಪಡುತ್ತವೆಯೋ ಹೇಗೆ ಎಂಬುದನ್ನು ನಿರ್ಧರಿಸಲು ತ್ರಿಸದಸ್ಯ ತಜ್ಞರ ಸಮಿತಿ ರಚಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಮಹಾರಾಷ್ಟ್ರದ ಕೊಲ್ಹಾಪುರದ ಗಡಹಿಂಗ್ಲಜ ನಗರದ ಕಾನೂನು ವಿದ್ಯಾರ್ಥಿ ನಿಖಿಲ್ ವಿಠ್ಠಲ ಪಾಟೀಲ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್, 'ಅಲ್ಲಮ ಪ್ರಭು ದೇವಾಲಯವನ್ನು ರಾಷ್ಟ್ರೀಯ ಮಹತ್ವದ ಸ್ಮಾರಕ ಎಂದು ಘೋಷಿಸಲಾಗಿಲ್ಲ. ಆದರೆ, ಅದು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಪಳೆಯುಳಿಕೆ ಕಾಯ್ದೆ ಅಡಿ ಪ್ರಾಚೀನ ಸ್ಮಾರಕಗಳ ವ್ಯಾಖ್ಯಾನದ ವ್ಯಾಪ್ತಿಗೆ ಒಳಪಡುತ್ತದೆ' ಎಂದು ವಿವರಿಸಿದರು.

ಇದನ್ನು ಆಲಿಸಿದ ನ್ಯಾಯಪೀಠ, 'ಅರ್ಜಿದಾರರ ಮನವಿಗೆ ಅನುಗುಣವಾಗಿ ವಸ್ತುಸ್ಥಿತಿ ಅರಿಯಲು ಭಾರತೀಯ ಪುರಾತತ್ವ ಇಲಾಖೆ ಅಧಿಕಾರಿಯನ್ನು ಒಳಗೊಂಡ ಮೂವರು ಸದಸ್ಯರ ಸಮಿತಿಯನ್ನು ರಚಿಸಬೇಕು. ಈ ಕುರಿತ ಸ್ಥಿತಿಗತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿ, ವಿಚಾರಣೆಯನ್ನು ಡಿಸೆಂಬರ್ 10ಕ್ಕೆ ಮುಂದೂಡಿದೆ.

ಪ್ರಾಚೀನ ಸ್ಮಾರಕ ಎಂದು ಘೋಷಿಸಲು ಮನವಿ: 'ಅಲ್ಲಮ ಪ್ರಭು ಸ್ವಾಮಿ ದೇವಾಲಯವು ಶತಮಾನಕ್ಕೂ ಹಳೆಯದಾಗಿದ್ದು, ಅದನ್ನು ಸಂರಕ್ಷಿತ ಸ್ಮಾರಕ ಎಂದು ಘೋಷಿಸಬೇಕು. ದೇವಾಲಯವು ವರ್ಷದ ಆರು ತಿಂಗಳು ನೀರಿನಲ್ಲಿ ಮುಳುಗುವುದರಿಂದ ಅದನ್ನು ಸ್ಥಳಾಂತರ ಮಾಡಬೇಕು. ದೇವಸ್ಥಾನವನ್ನು 17 ಮತ್ತು 18ನೇ ಶತಮಾನದಲ್ಲಿ ನಿರ್ಮಿಸಲಾಗಿದ್ದು, ಅದು ಪ್ರಾಚೀನ ಸ್ಮಾರಕಗಳ ವ್ಯಾಖ್ಯಾನಕ್ಕೆ ಒಳಪಡುತ್ತದೆ. ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವದ ಹಿನ್ನೆಲೆಯಲ್ಲಿ ದೇವಾಲಯವನ್ನು ಪ್ರಾಚೀನ ಸ್ಮಾರಕ ಎಂದು ಘೋಷಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಮಾಶಾಳ ಶ್ರೀ ವಿರುದ್ಧ ಎಫ್ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): 'ಮಕ್ಕಳ ಕೈಯಲ್ಲಿ ಪೆನ್ನು ಕೊಡುವ ಬದಲು, ತಲ್ವಾರ್ ಕೊಡಿ' ಎಂದು ಪ್ರಚೋದನಾತ್ಮಕ ಹೇಳಿಕೆ ನೀಡಿದ್ದ ಮಾಶಾಳ ಗ್ರಾಮದ ಸಿದ್ದಲಿಂಗೇಶ್ವರ ವಿರಕ್ತಮಠದ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ಪಟ್ಟಣದಲ್ಲಿ ಭಾನುವಾರ ನಡೆದ 'ವಕ್ಫ್ ಹಠಾವೊ ದೇಶ್ ಬಚಾವೊ' ಹೋರಾಟದಲ್ಲಿ ಭಾಷಣ ಮಾಡಿದ್ದ ಸ್ವಾಮೀಜಿ, 'ವಕ್ಫ್ ಬೋರ್ಡ್ ತೆಗೆಯದಿದ್ದರೆ ನಾವು ಜೀವ ಕೊಡುವುದಕ್ಕೂ, ಜೀವ ತೆಗೆಯಲಿಕ್ಕೂ ತಯಾರಾಗಿದ್ದೇವೆ. ನಮ್ಮ ಎಲ್ಲಾ ಯುವಕರ ಮನೆಯಲ್ಲಿ ತಲ್ವಾರ್, ಎಲ್ಲಾನೂ ಇವೆ' ಎಂದಿದ್ದರು ಇದನ್ನು ಆಧರಿಸಿ ಬಿಎಎನ್ಎಸ್ ಕಾಯ್ದೆಯ ಅನುಸಾರ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.



ಮರುಳಾರಾಧ್ಯ ಶಿವಾಚಾರ್ಯ

ಅಫಜಲಪುರ ಪಟ್ಟಣದಲ್ಲಿ ಬಿಜೆಪಿ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಸ್ವಾಮೀಜಿ ಮಾತನಾಡಿದ್ದರು.

ಸ್ವಾಮೀಜಿ ಹೇಳಿಕೆ ಖಂಡಿಸಿರುವ ಅಫಜಲಪುರ ಶಾಸಕ ಎಂ.ವೈ. ಪಾಟೀಲ, 'ನಾವೆಲ್ಲರೂ ಒಟ್ಟಾಗಿ ಬಾಳುವ ಸಮಾಜದಲ್ಲಿ ಪ್ರಚೋದನಕಾರಿ ಭಾಷಣದಿಂದ ಸಮಾಜದಲ್ಲಿ ಹಿಂದೂ ಮುಸ್ಲಿಂ ಭಾವೈಕ್ಯಕ್ಕೆ ಧಕ್ಕೆ ತರುವಂತಾಗಿದೆ. ಸಮಾಜಕ್ಕೆ ದಾರಿ ದೀಪವಾಗಬೇಕಾದ ಮರುಳಾರಾಧ್ಯ ಶ್ರೀಗಳ ಹೇಳಿಕೆ ಖಂಡನೀಯ' ಎಂದು ಹೇಳಿದ್ದಾರೆ.

ಶ್ರೀಗಳ ವಿರುದ್ಧ ಕ್ರಮ– ಪರಮೇಶ್ವರ

ಬೆಂಗಳೂರು: 'ಪ್ರಚೋದನಕಾರಿ ಹೇಳಿಕೆ ನೀಡಿರುವ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಈ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಚಿವರು, 'ಈ ರೀತಿ ಹೇಳಿಕೆ ನೀಡಿರುವ ಶ್ರೀಗಳ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಳ್ಳಲಿದ್ದಾರೆ' ಎಂದರು.

'ಧರ್ಮಗುರುಗಳು ಧರ್ಮದಿಂದ ನಡೆದುಕೊಳ್ಳಬೇಕು. ಧರ್ಮ ಪ್ರಚಾರಕರು ಪ್ರಚೋದನೆ ನೀಡಬಾರದು. ಮಕ್ಕಳ ಕೈಯಲ್ಲಿ ತಲ್ವಾರ್ ಕೊಡಿ ಎನ್ನುವುದು ಸರಿಯಲ್ಲ. ಸ್ವಾಮೀಜಿಗಳು ಯಾರೂ ಪ್ರಚೋದನಕಾರಿ ಹೇಳಿಕೆಗಳನ್ನು ನೀಡಬಾರದು' ಎಂದು ಅವರು ಹೇಳಿದರು.

ಸಿಐಡಿ ತನಿಖೆ ಆರಂಭ: ಇಬ್ಬರ ಅಮಾನತು

ಪ್ರಜಾವಾಣಿ ವಾರ್ತೆ

ಉಡುಪಿ: ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪೊಲೀಸರ ವಶದಲ್ಲಿದ್ದ ವ್ಯಕ್ತಿ ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿ ಸಿಐಡಿ ತನಿಖೆ ಸೋಮವಾರ ಆರಂಭಗೊಂಡಿದೆ.

ಬೆಂಗಳೂರಿನಿಂದ ಬಂದಿರುವ ಸಿಐಡಿ ಪೊಲೀಸರ ತಂಡ ಪ್ರಕರಣದ ತನಿಖೆ ಆರಂಭಿಸಿದೆ ಎಂದು ಎಸ್‌ಪಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

ಆರೋಪಿಗಳನ್ನು ಬಂಧಿಸುವಾಗ ತೆಗೆದುಕೊಳ್ಳಬೇಕಾಗುವ ಕ್ರಮಗಳ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಪಾಲಿಸದ ಕಾರಣಕ್ಕೆ ಬ್ರಹ್ಮಾವರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಧು ಪಿ., ಪ್ರಭಾರ ಠಾಣಾಧಿಕಾರಿ ಸುಜಾತಾ ಅವರನ್ನು ಅಮಾನತು ಮಾಡಲಾಗಿದೆ ಎಂದೂ ಹೇಳಿದ್ದಾರೆ.

ಮೃತ ಬಿಜು ಮೋಹನ್ ಅವರ ಸಂಬಂಧಿ, ಕೇರಳದ ಕೊಲ್ಲಂನ ಅನೀಶ್ ಡೆನಿಲ್ ಅವರು ನೀಡಿದ ದೂರಿನಂತೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ನೀಡಿರುವ ನಿರ್ದೇಶನಗಳಂತೆ ಮೃತ ವ್ಯಕ್ತಿಯ ಶವದ ಪಂಚನಾಮೆಯನ್ನು ಉಡುಪಿಯ ಜೆಎಂಎಫ್‌ಸಿ ನ್ಯಾಯಾಧೀಶರು ನಡೆಸಿದ್ದಾರೆ. ಮರಣೋತ್ತರ ಪರೀಕ್ಷೆಯನ್ನು ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಯಲ್ಲಿ ನಡೆಸಲಾಗಿದೆ. ಬಳಿಕ ಮೃತದೇಹವನ್ನು ಸಂಬಂಧಿಕರಿಗೆ ನೀಡಿದ್ದು, ಅವರು ಕೇರಳಕ್ಕೆ ಒಯ್ದಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಶಿಲ್ಪಿ ಕೃಷ್ಣ ನಾಯ್ಕ ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಕಾರ್ಕಳ: ತಾಲ್ಲೂಕಿನ ಬೈಲೂರು ಉಮಿಕಲ್ ಬೆಟ್ಟದ ಪರಿಶುರಾಮ ಥೀಮ್ ಪಾರ್ಕ್‌ನಲ್ಲಿ ಪರಶುರಾಮ ಮೂರ್ತಿ ನಿರ್ಮಾಣ ಮಾಡಿರುವ ಶಿಲ್ಪಿ, ಬೆಂಗಳೂರಿನ ಕೃಷ್ ಆರ್ಟ್ ವರ್ಲ್ಡ್‌ನ ಕೃಷ್ಣ ನಾಯ್ಕ ಅವರನ್ನು ಕಾರ್ಕಳ ನಗರ ಪೊಲೀಸರು ಸೋಮವಾರ ಕಾರ್ಕಳ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಅವರನ್ನು 7 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಕೃಷ್ಣ ನಾಯ್ಕ ವಿರುದ್ಧ ಕೃಷ್ಣ ಶೆಟ್ಟಿ ಬಜಗೋಳಿ ಎಂಬುವರು ನೀಡಿದ್ದ ದೂರಿಗೆ ಸಂಬಂಧಿಸಿ 4ರಂದು ಕಾರ್ಕಳ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು. ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು ಕೃಷ್ಣ ನಾಯ್ಕ ಅವರ ನಿರೀಕ್ಷಣಾ ಜಾಮೀನು ಆದೇಶವನ್ನು ನ.7ಕ್ಕೆ ಕಾಯ್ದಿರಿಸಿದ್ದರು. ನ.7ರಂದು ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕೃತವಾಗಿತ್ತು.

ಪೊಲೀಸರು ಭಾನುವಾರ ಕೃಷ್ಣ ನಾಯ್ಕ ಅವರನ್ನು ಪುದುಚೇರಿಯ ಮಾಹೆಯಲ್ಲಿ ಬಂಧಿಸಿದ್ದರು.



ಕೃಷ್ಣ ನಾಯ್ಕ ಅವರನ್ನು ಕಾರ್ಕಳ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಯಿತು

ವಾಲ್ಮೀಕಿ ನಿಗಮ– ಸಿಬಿಐ ಕೋರಿಕೆ: ಇಂದು ತೀರ್ಪು

ಬೆಂಗಳೂರು: 'ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಣ ದುರ್ಬಳಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯ ಮೇಲಿನ ತೀರ್ಪನ್ನು ಹೈಕೋರ್ಟ್ ಮಂಗಳವಾರ (ನ.12) ಪ್ರಕಟಿಸಲಿದೆ.

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವರ್ಗಾಯಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ 2024ರ ಸೆಪ್ಟೆಂಬರ್ 30ರಂದು ಮುಕ್ತಾಯಗೊಳಿಸಿ ತೀರ್ಪು ಕಾಯ್ದಿರಿಸಿತ್ತು. ತೀರ್ಪು ಪ್ರಕಟಣೆಯನ್ನು ಮಂಗಳವಾರದ ದೈನಂದಿನ ಸೂಚಿತ ಪಟ್ಟಿಯಲ್ಲಿ ನಮೂದಿಸಲಾಗಿದೆ.

16ಕ್ಕೆ ರಾಜ್ಯ ಮಟ್ಟದ ಸಹಕಾರ ಸಭೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಇದೇ 14ರಿಂದ ನಡೆಯಲಿರುವ ಅಖಿಲ ಭಾರತ 71ನೇ ಸಹಕಾರ ಸಪ್ತಾಹದ ಅಂಗವಾಗಿ ಇಲ್ಲಿನ ಕರಾವಳಿ ಉತ್ಸವ ಮೈದಾನದಲ್ಲಿ ರಾಜ್ಯಮಟ್ಟದ ಕಾರ್ಯಕ್ರಮವನ್ನು ಇದೇ 16ರಂದು ಏರ್ಪಡಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್‌ಸಿಡಿಸಿಸಿ) ಹಾಗೂ ಇತರ ಸಹಕಾರ ಸಂಸ್ಥೆಗಳ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ' ಎಂದು ಎಸ್‌ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಎಂ.ಎನ್.ರಾಜೇಂದ್ರ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ವಿಕಸಿತ ಭಾರತ ನಿರ್ಮಾಣಕ್ಕಾಗಿ ಸಹಕಾರ ಸಂಸ್ಥೆಗಳು' ಎಂಬ ಧ್ಯೇಯದೊಂದಿಗೆ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ ಅಭಿವೃದ್ಧಿ ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ವಿಷಯ ಕುರಿತ ಚರ್ಚೆ ನಡೆಯಲಿದೆ. ಬೆಳಿಗ್ಗೆ 10ಕ್ಕೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಕಾರ್ಯಕ್ರಮವನ್ನು ಉದ್ಘಾಟಿಸುವರು ಎಂದರು.

ವಸ್ತು ಪ್ರದರ್ಶನ ಮಳಿಗೆಗಳನ್ನು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಉದ್ಘಾಟಿಸುವರು. ಉತ್ತಮ ಸಹಕಾರ ಸಂಘಗಳಿಗೆ ಸಚಿವ ದಿನೇಶ್ ಗುಂಡೂರಾವ್ ಪ್ರಶಸ್ತಿ ಪ್ರದಾನ ಮಾಡುವರು. ಶತಮಾನೋತ್ಸವ ಪೂರೈಸಿದ ಸಹಕಾರ ಸಂಘಗಳಿಗೆ ಶಾಸಕ ಲಕ್ಷ್ಮಣ ಸವದಿ, ಉತ್ತಮ ಸ್ವ-ಸಹಾಯ ಸಂಘಗಳಿಗೆ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಪುರಸ್ಕಾರ ಪ್ರದಾನ ಮಾಡುವರು. ಸಂಸದ ಕ್ಯಾ. ಬ್ರಿಜೇಶ್ ಚೌಟ ಧ್ವಜಾರೋಹಣ ನೆರವೇರಿಸುವರು ಎಂದರು.



ಸುಭಾಷಿತ

ಯಾವ ವ್ಯಕ್ತಿ ತನ್ನ ತಪ್ಪನ್ನು ಸರಿಪಡಿಸಿಕೊಳ್ಳಲು ತಾನಾಗಿ ಹೋರಾಟ ಮಾಡುತ್ತಾನೋ ಅವನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ.

–ಚಾಣಕ್ಯ

ಲೈಂಗಿಕ ದೌರ್ಜನ್ಯ: ಉತ್ತರಪ್ರದೇಶ ಮಹಿಳಾ ಆಯೋಗದ ಚಿಂತನೆ ಅಪ್ರಬುದ್ಧ

ಮಹಿಳೆಯರ ಬಟ್ಟೆ ಹೊಲಿಯುವುದರ ಭಾಗವಾಗಿ ಅವರ ದೇಹದ ಅಳತೆ ತೆಗೆದುಕೊಳ್ಳುವ ಕೆಲಸಗಳಿಂದ ಪುರುಷರನ್ನು ದೂರವಿಡಬೇಕು. ಜಿಮ್ ಅಥವಾ ಯೋಗ ಕೇಂದ್ರಗಳಲ್ಲಿ ಮಹಿಳೆಯರಿಗೆ ತರಬೇತಿ ನೀಡುವಂತಹ ಕೆಲಸಗಳನ್ನು ಪುರುಷರ ಬದಲಿಗೆ ಮಹಿಳೆಯರೇ ನಿರ್ವಹಿಸಬೇಕು. ಬ್ಯೂಟಿ ಪಾರ್ಲರ್‌ಗಳಲ್ಲಿ ಮಹಿಳೆಯರ ಕೇಶಾಲಂಕಾರ ಮಾಡುವುದಕ್ಕೆ ಪುರುಷರಿಗೆ ಅವಕಾಶ ಇರಕೂಡದು ಎಂದು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವ ಸಂಬಂಧ ಉತ್ತರಪ್ರದೇಶದ ಮಹಿಳಾ ಆಯೋಗವು ಚಿಂತನೆ ನಡೆಸಿದೆ. ಮಹಿಳೆಯರಿಗೆ ಸಂಬಂಧಿಸಿದ ಹೊಲಿಗೆ, ಬ್ಯೂಟಿ ಪಾರ್ಲರ್, ಜಿಮ್‌ಗಳಿಂದ ಪುರುಷರನ್ನು ದೂರ ಮಾಡುವುದರಿಂದ ಲೈಂಗಿಕ ಕಿರುಕುಳಗಳನ್ನು ತಪ್ಪಿಸಬಹುದು ಎನ್ನುವುದು ಆಯೋಗದ ಅಭಿಪ್ರಾಯ. ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟುವ ಉದ್ದೇಶದಿಂದ ಮಹಿಳಾ ಆಯೋಗ ಸಲ್ಲಿಸಲು ಉದ್ದೇಶಿಸಿರುವ ಪ್ರಸ್ತಾವದಲ್ಲಿನ ಹಲವಾರು ಅಂಶಗಳು ಅಪ್ರಬುದ್ಧವಾಗಿವೆ. ಈ ಚಿಂತನೆಯು ಹೊಲಿಗೆಯಲ್ಲಿ ತೊಡಗಿರುವ ಹಾಗೂ ಪಾರ್ಲರ್‌ಗಳಲ್ಲಿ ಕೆಲಸ ಮಾಡುವ ಗಂಡಸರನ್ನು ಅವಮಾನಿಸುವಂತಹದ್ದು ಹಾಗೂ ಅಲ್ಲಿಗೆ ಹೋಗುವ ಹೆಣ್ಣುಮಕ್ಕಳನ್ನು ಅಳುಕುವಂತೆ ಮಾಡುವಂತಹದ್ದೂ ಆಗಿದೆ. ರಾಜರು ತಮ್ಮ ಅಂತಃಪುರಗಳಿಂದ ಗಂಡಸರನ್ನು ದೂರವಿರಿಸುತ್ತಿದ್ದ ಇತಿಹಾಸವನ್ನು ಆಯೋಗದ ನಡವಳಿಕೆ ನೆನಪಿಸುವಂತಿದೆ. ಉತ್ತರಪ್ರದೇಶದ ಶಹಜಹಾನ್‌ಪುರ ಜಿಲ್ಲೆಯಲ್ಲಿ 14 ವರ್ಷದ ಬಾಲಕಿಯ ಮೇಲೆ ಶಾಲೆಯ ವಾಹನ ಚಾಲಕ ಅತ್ಯಾಚಾರ ಎಸಗಿದ್ದಾನೆ ಎನ್ನಲಾದ ಪ್ರಕರಣ ಇತ್ತೀಚೆಗಷ್ಟೇ ನಡೆದಿತ್ತು. ಜಿಮ್‌ಗೆ ಬರುತ್ತಿದ್ದ ಮಹಿಳೆಯೊಬ್ಬರನ್ನು ಅದೇ ಜಿಮ್‌ನ ತರಬೇತುದಾರ ಹತ್ಯೆ ಮಾಡಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಅಲ್ಲದೆ, ಬಾಲಕಿಯ ಮೇಲೆ ದರ್ಜಿಯೊಬ್ಬ ಅತ್ಯಾಚಾರ ಎಸಗಿದ್ದಾನೆ ಎನ್ನಲಾದ ಪ್ರಕರಣ ವರದಿಯಾಗಿದೆ. ಈ ಪ್ರಕರಣಗಳ ಹಿನ್ನೆಲೆಯಲ್ಲಿ, ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರಕ್ಕೆ ಸಲ್ಲಿಸಲು ಉದ್ದೇಶಿಸಿರುವ ಪ್ರಸ್ತಾವದಲ್ಲಿ ಈ ಅಂಶಗಳನ್ನು ಅಳವಡಿಸಲು ಮಹಿಳಾ ಆಯೋಗವು ಗಂಭೀರವಾಗಿ ಯೋಚಿಸಿದೆ. ಮಹಿಳೆಯರ ಸುರಕ್ಷತೆ ಕುರಿತಂತೆ ಆಯೋಗದ ಕಾಳಜಿ ಸರಿಯಾದುದು. ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಮೆರಾ ಕಣ್ಗಾವಲು ಅಳವಡಿಸುವುದು ಹಾಗೂ ಭದ್ರತಾ ಸಿಬ್ಬಂದಿಯನ್ನು ನೇಮಿಸಬೇಕೆನ್ನುವ ಆಯೋಗದ ಒತ್ತಾಯವೂ ಸರಿಯಾಗಿದೆ. ಆದರೆ, ಅಪರಾಧ ಪ್ರಕರಣಗಳಿಗೂ ಕೆಲವು ವೃತ್ತಿಗಳಿಗೂ ತಳಕು ಹಾಕುವ ಧಾಟಿಯ ಚಿಂತನೆಯಲ್ಲಿ ಲೋಪವಿದೆ. ದೌರ್ಜನ್ಯ ಎಸಗುವ ವ್ಯಕ್ತಿಯ ಅಪರಾಧದೊಂದಿಗೆ ವೃತ್ತಿಗೆ ಸಂಬಂಧ ಕಲ್ಪಿಸುವುದನ್ನು ಒಪ್ಪಲಿಕ್ಕಾಗದು. ಪ್ರತಿ ಅಪರಾಧದ ಹಿನ್ನೆಲೆಯಲ್ಲಿಯೂ ಅಪರಾಧಿಯ ವೃತ್ತಿಯನ್ನು ಗುರುತಿಸುತ್ತಾ ಹೋದರೆ, ಸಮಾಜದಲ್ಲಿನ ಯಾವ ವೃತ್ತಿಯೂ ಗೌರವಯುತವಾಗಿ ಉಳಿಯುವುದು ಸಾಧ್ಯವಿಲ್ಲ ಹಾಗೂ ಹೆಣ್ಣುಮಕ್ಕಳು ಯಾವ ಕ್ಷೇತ್ರದಲ್ಲೂ ಕೆಲಸ ಮಾಡಲಾಗದಂತಹ ಸ್ಥಿತಿ ತಲೆದೋರಬಹುದು. ಕಟ್ಟುನಿಟ್ಟಿನ ಕಾನೂನು ಕ್ರಮಗಳ ಜಾರಿ ಹಾಗೂ ಜನಜಾಗೃತಿ ಕಾರ್ಯಕ್ರಮಗಳ ಮೂಲಕ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟಬೇಕೇ ವಿನಾ ಮಹಿಳೆಯರು ಹಾಗೂ ಪುರುಷರ ನಡುವೆ ಗೋಡೆ ಕಟ್ಟುವ ಮೂಲಕವಲ್ಲ.



ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವ ದಿಸೆಯಲ್ಲಿ ಮಹಿಳಾ ಆಯೋಗವು ಬೌದ್ಧಿಕ ಹಾಗೂ ವೈಜ್ಞಾನಿಕ ನೆಲಗಟ್ಟಿನಲ್ಲಿ ಪರಿಹಾರೋಪಾಯಗಳ ಬಗ್ಗೆ ಯೋಚಿಸಬೇಕು

ಹಾಥರಸ್‌ನ ಅಮಾನುಷ ಘಟನೆಯೂ ಸೇರಿದಂತೆ ಹೆಣ್ಣುಮಕ್ಕಳ ಮೇಲೆ ಲೈಂಗಿಕ ಕ್ರೌರ್ಯವೆಸಗಿದ ಹಲವು ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಉತ್ತರಪ್ರದೇಶದಿಂದ ವರದಿಯಾಗಿವೆ. ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ, ಅಪಹರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಪ್ರದೇಶ ದೇಶದಲ್ಲೇ ಮೊದಲ ಸ್ಥಾನದಲ್ಲಿರುವುದನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಅಂಕಿಅಂಶಗಳು ದೃಢಪಡಿಸಿವೆ. ಮಹಿಳೆಯರ ಮೇಲಿನ 65,743 ದೌರ್ಜನ್ಯ ಪ್ರಕರಣಗಳು 2022ರಲ್ಲಿ ದಾಖಲಾಗಿದ್ದರೆ, 2021ರಲ್ಲಿ 56,083 ಪ್ರಕರಣಗಳು ವರದಿಯಾಗಿವೆ. ಈ ಅಪರಾಧ ಕೃತ್ಯಗಳು ಕಾನೂನು ಸುವ್ಯವಸ್ಥೆಯ ವೈಫಲ್ಯದ ಜೊತೆಗೆ ಹೆಣ್ಣನ್ನು ಸರಕಿನಂತೆ ನೋಡುವ ಗಂಡಿನ ಮನಃಸ್ಥಿತಿಯ ಸಂಕೇತವೂ ಆಗಿವೆ. ಲೈಂಗಿಕ ದೌರ್ಜನ್ಯಗಳ ವಿರುದ್ಧ ದೊಡ್ಡದೊಂದು ಆಂದೋಲನ ರೂಪುಗೊಳ್ಳಬೇಕಾಗಿರುವುದು ಸದ್ಯದ ಅಗತ್ಯ. ಆದರೆ, ಮಹಿಳೆಯರ ಬಟ್ಟೆಗಳನ್ನು ಹೊಲಿಯುವ ಅಥವಾ ಕೇಶಾಲಂಕಾರದಂತಹ ಕೆಲಸಗಳನ್ನು ಗಂಡಸರು ಮಾಡುವುದರಿಂದ ಅತ್ಯಾಚಾರಗಳು ಸಂಭವಿಸುತ್ತಿವೆ ಎಂದು ಆಯೋಗ ಭಾವಿಸಿರುವುದು ಬಾಲಿಶ ಚಿಂತನೆಯಾಗಿದೆ; ಲೈಂಗಿಕ ಕಿರುಕುಳಗಳಂಥ ಗಂಭೀರ ಸಮಸ್ಯೆಗಳನ್ನು ಸರಳೀಕರಿಸುವ ಪ್ರಯತ್ನವೂ ಆಗಿದೆ. ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವ ದಿಸೆಯಲ್ಲಿ ಮಹಿಳಾ ಆಯೋಗವು ಬೌದ್ಧಿಕ ಹಾಗೂ ವೈಜ್ಞಾನಿಕ ನೆಲಗಟ್ಟಿನಲ್ಲಿ ಪರಿಹಾರೋಪಾಯಗಳ ಬಗ್ಗೆ ಯೋಚಿಸಬೇಕು ಹಾಗೂ ಕಾನೂನುಗಳ ಪರಿಣಾಮಕಾರಿ ಜಾರಿಗೆ ಸರ್ಕಾರದ ಮೇಲೆ ಒತ್ತಾಯ ಹೇರಬೇಕು. ಯಾರನ್ನೋ ದೂರುವಂತಹ ಅಥವಾ ದೂರೀಕರಿಸುವಂತಹ ಚಿಂತನೆಗಳನ್ನು ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನವೆಂದೇ ಭಾವಿಸಬೇಕಾಗುತ್ತದೆ.

ಮಹಾರಾಷ್ಟ್ರ ಚುನಾವಣೆ: ಮೈತ್ರಿಕೂಟಗಳ ಹಣಾಹಣಿ, ಬಹುಸಂಖ್ಯೆಯಲ್ಲಿ ಪಕ್ಷೇತರರು

ಮಿತ್ರಗಣದಲ್ಲಿ ಯಾರು ಜನಮಿತ್ರ?



ವಿಶ್ಲೇಷಣೆ

ಬಿ.ಎಸ್. ಅರುಣ್

1995. ಮಹಾರಾಷ್ಟ್ರ ವಿಧಾನಸಭಾ ಚುನಾವಣೆ. ಕಾಂಗ್ರೆಸ್‌ಗಾಗಲಿ, ಬಿಜೆಪಿ-ಶಿವಸೇನಾ ಮೈತ್ರಿಕೂಟಕ್ಕಾಗಲಿ ಬಹುಮತ ಸಿಗಲಿಲ್ಲ. ಪಕ್ಷೇತರರು ರಾಜ್ಯದಲ್ಲಿ ಅಚ್ಚರಿ ಎನ್ನುವಷ್ಟು 45 ಕ್ಷೇತ್ರಗಳಲ್ಲಿ ಜಯ ಗಳಿಸಿದ್ದರು. ಮೈತ್ರಿಕೂಟ ಅಧಿಕಾರಕ್ಕೆ ಬರಲು ಅವರ ಬೆಂಬಲ ಅತ್ಯಗತ್ಯವಾಗಿತ್ತು. ಪಕ್ಷೇತರರ ಸಹಯೋಗದಿಂದ ಮೈತ್ರಿಕೂಟ ಅಧಿಕಾರಕ್ಕೆ ಬಂದಿತು.

29 ವರ್ಷಗಳ ನಂತರ ಈ ಬಾರಿ ಪಕ್ಷೇತರರು ಮತ್ತೆ ನಿರ್ಣಾಯಕ ಪಾತ್ರ ವಹಿಸಿದರೂ ಆಶ್ಚರ್ಯವಿಲ್ಲ. ಇದೇ 20ರಂದು ರಾಜ್ಯದ 288 ಕ್ಷೇತ್ರಗಳಿಗೆ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರರು ಹಾಗೂ ಸಣ್ಣಪುಟ್ಟ ಪಕ್ಷಗಳ ಉಮೇದುವಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇವರಲ್ಲಿ ಅನೇಕರು ಗೆದ್ದರೂ ಆಶ್ಚರ್ಯವಿಲ್ಲ. ಈ ಬಾರಿ ಎರಡು ಮೈತ್ರಿಕೂಟಗಳ 6 ಪಕ್ಷಗಳು ಸ್ಪರ್ಧಿಸಿದ್ದು, ಬಹುಪಾಲು ಆಕಾಂಕ್ಷಿಗಳು ಪಕ್ಷದಿಂದ ಟಿಕೆಟ್ ಸಿಗದಿದ್ದ ಕಾರಣದಿಂದ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ. ಎರಡೂ ಕೂಟಗಳಲ್ಲಿ ಇಲ್ಲದ ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ ಬಹುಜನ ಆಘಾಡಿ, ರಾಜ್ ಠಾಕ್ರೆ ಅವರ ಎಂಎನ್‌ಎಸ್ ಶೇ 5-6ರಷ್ಟು ಮತಗಳನ್ನು ಸೆಳೆದರೂ ಅನೇಕ ಕಡೆ ಫಲಿತಾಂಶ ಹೆಚ್ಚುಕಡಿಮೆಯಾಗುವುದರಲ್ಲಿ ಸಂಶಯವಿಲ್ಲ.

ಎರಡು ವರ್ಷಗಳಿಂದ ಅಧಿಕಾರದಲ್ಲಿರುವ ಮಹಾಯುತಿ (ಮಹಾಮೈತ್ರಿ) ಮೈತ್ರಿಕೂಟ (ಬಿಜೆಪಿ, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ) ಹಾಗೂ ಮಹಾ ವಿಕಾಸ ಆಘಾಡಿ (ಎಂವಿಎ- ಕಾಂಗ್ರೆಸ್, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ, ಶರದ್ ಪವಾರ್ ನೇತೃತ್ವದ ಎನ್‌ಸಿಪಿ)- ಈ ಎರಡೂ ಮೈತ್ರಿಕೂಟಗಳಿಗೆ ಪಕ್ಷೇತರರ ಬಿಸಿ ತಟ್ಟಿದೆ. ಅಕ್ಟೋಬರ್‌ನಲ್ಲಿ ಹರಿಯಾಣ ವಿಧಾನಸಭೆಗೆ ನಡೆದಿದ್ದ ಚುನಾವಣೆಯಲ್ಲಿ, ಗೆಲುವು ನಿಶ್ಚಿತವೆಂದೇ ನಂಬಿದ್ದ ಕಾಂಗ್ರೆಸ್, ಹಲವು ಮಂದಿ ಪಕ್ಷೇತರರು ಮತ್ತು ಬಂಡಾಯ ಅಭ್ಯರ್ಥಿಗಳ ಕಾರಣದಿಂದಾಗಿ ಸೋಲನುಭವಿಸಬೇಕಾಯಿತು.

ಮಹಾರಾಷ್ಟ್ರ ರಾಜಕೀಯವು ಅನೇಕ ವರ್ಷಗಳಿಂದ ನೈತಿಕತೆ ಅಧಃಪತನವನ್ನು ಕಂಡಿದೆ. ಬಹುಶಃ ದೇಶದಲ್ಲೇ ಪ್ರಥಮ ಬಾರಿಗೆ, ಬೆಳಿಗ್ಗೆ 5 ಗಂಟೆಗೆ ಬಿಜೆಪಿಯ ದೇವೇಂದ್ರ ಫಡಣವೀಸ್ ಅವರನ್ನು ತರಾತುರಿಯಲ್ಲಿ ಮುಖ್ಯಮಂತ್ರಿಯನ್ನಾಗಿ ನೇಮಿಸಿ, ರಾಜಭವನದಲ್ಲಿ ಪ್ರಮಾಣವಚನ ಬೋಧಿಸಲಾಯಿತು. ಒಟ್ಟು ಈ 5 ವರ್ಷಗಳಲ್ಲಿ ಮಹಾರಾಷ್ಟ್ರ ಕಂಡಿದ್ದು ಮೂವರು ಮುಖ್ಯಮಂತ್ರಿಗಳು, ಐವರು ಉಪಮುಖ್ಯಮಂತ್ರಿಗಳು, ಮೂವರು ವಿರೋಧ ಪಕ್ಷದ ನಾಯಕರು, ಇಬ್ಬರು ವಿಧಾನಸಭಾ ಅಧ್ಯಕ್ಷರು, ಅಷ್ಟಲ್ಲದೆ ಮೂವರು ರಾಜ್ಯಪಾಲರನ್ನು! ಒಬ್ಬ ನೇತಾರ (ಅಜಿತ್ ಪವಾರ್) ಎರಡು ಬಾರಿ ವಿರೋಧ ಪಕ್ಷದ ನಾಯಕ ಹಾಗೂ ಮೂರು ಬಾರಿ ಉಪಮುಖ್ಯಮಂತ್ರಿಯಾದರೆ, ಇನ್ನೊಬ್ಬ ಮುಖಂಡ (ಫಡಣವೀಸ್) ಮುಖ್ಯಮಂತ್ರಿಯಾದ ನಂತರ ಉಪಮುಖ್ಯಮಂತ್ರಿ ಆದವರು! ಫಡಣವೀಸ್ ಈ ಐದು ವರ್ಷಗಳಲ್ಲಿ ಮೊದಲ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇದ್ದದ್ದು ಬರೀ 80 ಗಂಟೆ! ಇಷ್ಟೇ ಅಲ್ಲ, ಎರಡು ಪ್ರಮುಖ ಪ್ರಾದೇಶಿಕ ಪಕ್ಷಗಳು 2022ರಲ್ಲಿ ಹೋಳಾಗಿ, ಬಿಜೆಪಿ ಜೊತೆ ಸೇರಿ ಸರ್ಕಾರ ರಚನೆ ಮಾಡಿದವು.

ಪಶ್ಚಿಮದ ಈ ರಾಜ್ಯದಲ್ಲಿ 1990ರಿಂದ ಯಾವುದೇ ಒಂದು ಪಕ್ಷ ಬಹುಮತ ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿಲ್ಲ. ರಾಜ್ಯ ಕಂಡಿದ್ದು 14 ಚುನಾವಣೆಗಳು ಹಾಗೂ 20 ಮುಖ್ಯಮಂತ್ರಿಗಳನ್ನು. ಇವರಲ್ಲಿ ಕೆಲವರು ಒಂದಕ್ಕಿಂತ ಹೆಚ್ಚು ಬಾರಿ ಅಧಿಕಾರದ ಚುಕ್ಕಾಣಿ ಹಿಡಿದವರು. ಇಬ್ಬರು ಮಾತ್ರ ಐದು ವರ್ಷದ ಪೂರ್ಣ ಅಧಿಕಾರಾವಧಿ ಪೂರೈಸಿದವರು. ಮಹಾರಾಷ್ಟ್ರ ಚುನಾವಣೆ ಹಲವು ದೃಷ್ಟಿಯಿಂದ ಬಹಳ ಮಹತ್ವದ್ದು. ಉತ್ತರಪ್ರದೇಶದ ನಂತರ ಮಹಾರಾಷ್ಟ್ರವು ಹೆಚ್ಚು ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ರಾಜ್ಯ. ಪ್ರಗತಿಪರ ಹಾಗೂ ಸಂಪನ್ಮೂಲಭರಿತ ರಾಜ್ಯವೆಂದೇ ಇದು ಹೆಗ್ಗಳಿಕೆ ಪಡೆದಿದೆ. ಮುಂಬೈ, ಮಹಾರಾಷ್ಟ್ರದ ರಾಜಧಾನಿಯಾಗಿಯಷ್ಟೇ ಅಲ್ಲ, ದೇಶದ ಹಣಕಾಸು ರಾಜಧಾನಿಯಾಗಿಯೂ ಖ್ಯಾತಿ ಪಡೆದಿದೆ. ಆದರೆ ಇದೀಗ ರಾಜಕೀಯ ಕ್ಷೇತ್ರದಲ್ಲಿ ಹಿಂದಿನ ಕೆಲವು ವರ್ಷಗಳಿಂದ ಆದ ರಾಡಿ, ಕೆಸರೆರಚಾಟ, 'ಆಪರೇಷನ್ ಕಮಲ'ದಂತಹ ಬೆಳವಣಿಗೆಗಳು ರಾಜ್ಯದ ಘನತೆ, ಗೌರವವನ್ನು ಕಾಪಾಡಲು ಅಥವಾ ಮುನ್ನಡೆಸಲು ವಿಫಲವಾಗಿವೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಈ ವರ್ಷದ ಲೋಕಸಭಾ ಚುನಾವಣೆಯು ಮಹಾಯುತಿ ಹಾಗೂ ಎಂವಿಎ ಮೈತ್ರಿಕೂಟ ಎದುರಿಸಿದ ಮೊದಲ ಚುನಾವಣೆ. ಇಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಹಿನ್ನಡೆ ಅನುಭವಿಸಿದವು. ರಾಜ್ಯದ 48 ಕ್ಷೇತ್ರಗಳಲ್ಲಿ ಎಂವಿಎ 30 ಸ್ಥಾನಗಳನ್ನು ಗೆದ್ದರೆ, ಮಹಾಯುತಿ ಬರೀ 17 ಸ್ಥಾನಗಳನ್ನು ಗಳಿಸಿತು. ಆದರೆ ಮತಗಳಿಕೆಯಲ್ಲಿ ಹೆಚ್ಚು ವ್ಯತ್ಯಾಸವೇನೂ ಇರಲಿಲ್ಲ- ಎಂವಿಎ ಶೇ 43.71ರಷ್ಟು ಹಾಗೂ ಮಹಾಯುತಿ ಶೇ 43.55ರಷ್ಟು ಮತಗಳನ್ನು ಗಳಿಸಿದವು. ಪಕ್ಷವಾರು ಮತಗಳಿಕೆ ಪ್ರಮಾಣವನ್ನು ಗಮನಿಸಿದರೆ, ಬಿಜೆಪಿ 28 ಸ್ಥಾನಗಳಲ್ಲಿ ಸ್ಪರ್ಧಿಸಿ, ಎಲ್ಲಾ ಪಕ್ಷಗಳಿಗಿಂತ ಹೆಚ್ಚು ಎನಿಸಿದ ಶೇ 26.20ರಷ್ಟು ಮತಗಳನ್ನು ಗಳಿಸಿತು.

ಹಾಗಾದರೆ, ಈ ಚುನಾವಣೆಯಲ್ಲೂ ಮಹಾಯುತಿ ಸೋಲನುಭವಿಸುತ್ತದೆಯೇ? ಈ ಪ್ರಶ್ನೆಗೆ ಉತ್ತರ ಸುಲಭವಲ್ಲ. ಹರಿಯಾಣ ವಿಧಾನಸಭೆಯ ಅನಿರೀಕ್ಷಿತ ಫಲಿತಾಂಶದ ನಂತರ ಯಾವುದೇ ಲೆಕ್ಕಾಚಾರ ತಲೆಕೆಳಗಾಗಬಹುದು. ಲೋಕಸಭೆ ಚುನಾವಣೆಯ ಸೋಲಿನಿಂದ ಪಾಠ ಕಲಿತಂತಿರುವ ಮಹಾಯುತಿ ಸಾಧ್ಯವಾದಷ್ಟೂ ಎಚ್ಚರಿಕೆಯ ಹೆಜ್ಜೆಯಿಟ್ಟಿದೆ. 288 ಕ್ಷೇತ್ರಗಳಿಗೆ ಲಗ್ಗೆಯಿಟ್ಟಿರುವ ಒಟ್ಟು 4,136 ಉಮೇದುವಾರರು, ರಾಜ್ಯದ 9.7 ಕೋಟಿ ಮತದಾರರ ಆಶೀರ್ವಾದ ಬೇಡುತ್ತಿದ್ದಾರೆ. ಎರಡೂ ಮೈತ್ರಿಕೂಟಗಳಿಗೆ ಸೇರಿದ ಪಕ್ಷಗಳ ನೇರ ಹಣಾಹಣಿ ಮತ್ತು ಅದರ ಪರಿಣಾಮವನ್ನು ಕುತೂಹಲದಿಂದ ನೋಡಲಾಗುತ್ತಿದೆ. 75 ಕ್ಷೇತ್ರಗಳಲ್ಲಿ ಬಿಜೆಪಿ-ಕಾಂಗ್ರೆಸ್, 49 ಕ್ಷೇತ್ರಗಳಲ್ಲಿ ಶಿವಸೇನಾ ಬಣಗಳು ಹಾಗೂ 38 ಕ್ಷೇತ್ರಗಳಲ್ಲಿ ಎನ್‌ಸಿಪಿ ಬಣಗಳು ಪರಸ್ಪರ ನೇರ ಹಣಾಹಣಿಯಲ್ಲಿವೆ. ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಯಾರನ್ನೂ ಘೋಷಿಸಲಾಗಿಲ್ಲ.

ಮಹಾರಾಷ್ಟ್ರದ 5 ಭೌಗೋಳಿಕ ಪ್ರದೇಶಗಳಾದ ಕೊಂಕಣ್ (ಕರಾವಳಿ), ಪಶ್ಚಿಮ ಮಹಾರಾಷ್ಟ್ರ (ಪುಣೆ ವಿಭಾಗ), ಉತ್ತರ ಮಹಾರಾಷ್ಟ್ರ (ನಾಸಿಕ್), ಮರಾಠವಾಡ (ಔರಂಗಾಬಾದ್) ಮತ್ತು ವಿದರ್ಭ (ನಾಗಪುರ ಮತ್ತು ಅಮರಾವತಿ) ರಾಜಕೀಯ, ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ವಿಭಿನ್ನ. ಈ ಐದೂ ಪ್ರದೇಶಗಳು ಒಂದು ರಾಜ್ಯದ ಒಳಗಿರುವ ಬೇರೆ ಬೇರೆ ರಾಜ್ಯಗಳ ರೀತಿಯಲ್ಲಿಯೇ ಇವೆ. 62 ಕ್ಷೇತ್ರಗಳನ್ನು ಹೊಂದಿರುವ ವಿದರ್ಭ ಹಾಗೂ 46 ಕ್ಷೇತ್ರಗಳಿರುವ ಮರಾಠವಾಡ ಬಹಳ ಮಹತ್ವ ಹೊಂದಿವೆ. ಇಲ್ಲಿ ಹೆಚ್ಚು ಕ್ಷೇತ್ರಗಳನ್ನು ಗೆದ್ದವರು ಸರ್ಕಾರ ರಚಿಸುವ ಸಾಧ್ಯತೆ ಜಾಸ್ತಿ.

ಮರಾಠಿಗರ ಮೀಸಲಾತಿ ಆಂದೋಲನಕ್ಕೆ ಮರಾಠವಾಡವೇ ಹೃದಯ ಭಾಗ. ಈ ಆಂದೋಲನದ ನೇತೃತ್ವ ವಹಿಸಿರುವ ಜರಂಗೇ ಪಾಟೀಲ್ ಇಲ್ಲಿಯವರೇ. 2023ರಲ್ಲಿ ಆತ್ಮಹತ್ಯೆ ಮಾಡಿಕೊಂಡ 2,851 ರೈತರಲ್ಲಿ 1,088 ಮಂದಿ ಈ ಬರಪೀಡಿತ ಪ್ರದೇಶದವರು.

ಈ ಚುನಾವಣೆಯಲ್ಲಿ ಪ್ರಸ್ತಾಪಿಸಲಾದ ವಿಷಯಗಳು ಹೆಚ್ಚಾಗಿ ಸ್ಥಳೀಯ ಸಮಸ್ಯೆಗಳು- ಈರುಳ್ಳಿ ಬೆಳೆಗಾರರ ಸಮಸ್ಯೆ, ರೈತರ ಆತ್ಮಹತ್ಯೆ, ಮರಾಠ ಮೀಸಲಾತಿ, ರಾಜ್ಯಕ್ಕೆ ಘೋಷಿಸಲಾಗಿದ್ದ ಯೋಜನೆಗಳನ್ನು ಗುಜರಾತ್‌ಗೆ ವರ್ಗಾಯಿಸಿದಂತಹ ಸಂಗತಿಗಳು ಇದರಲ್ಲಿ ಸೇರಿವೆ. ಹಿಂದುತ್ವ, ಮತಾಂತರ ವಿರೋಧಿ ಕಾಯ್ದೆ, ಗ್ಯಾರಂಟಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಹಣಕಾಸಿನ ಮುಗ್ಗಟ್ಟು, ಕರ್ನಾಟಕದ ವಕ್ಫ್ ಗೊಂದಲದಂತಹ ವಿಷಯಗಳು ಕೂಡ ಸದ್ದು ಮಾಡಿವೆ.

ಶಿಂದೆ ನೇತೃತ್ವದ ಸರ್ಕಾರ ಮಹಿಳೆಯರಿಗಾಗಿ ಜಾರಿ ಮಾಡಿರುವ 'ಲಡ್ಕಿ ಬಹೀಣ್ ಯೋಜನ' (ಪ್ರತಿ ಮಹಿಳೆಗೆ ತಿಂಗಳಿಗೆ ₹ 1,500) ಈಗಾಗಲೇ 2.5 ಕೋಟಿ ಫಲಾನುಭವಿಗಳನ್ನು ಹೊಂದಿದೆ. ಈ ಯೋಜನೆ ಮತ್ತು ಚುನಾವಣೆಯಲ್ಲಿ ಆರ್‌ಎಸ್‌ಎಸ್ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಮಹಾಯುತಿಗೆ ಬಲ ತಂದಿವೆ ಎನ್ನಲಾಗಿದೆ. ಮೈತ್ರಿಕೂಟಗಳು ಭರಪೂರ ಭರವಸೆಗಳನ್ನು ನೀಡಿವೆ. ಸುಮಾರು ಶೇ 28ರಷ್ಟಿರುವ ಮರಾಠ ಮತಗಳು, ಶೇ 52ರಷ್ಟಿರುವ ಹಿಂದುಳಿದ ವರ್ಗಗಳ ಮತಗಳು, ಶೇ 15ರಷ್ಟಿರುವ ದಲಿತ ಮತಗಳು ಚುನಾವಣೆ ಮೇಲೆ ನಿರ್ಣಾಯಕ ಪರಿಣಾಮ ಬೀರಬಹುದು.

ಒಂದುವೇಳೆ ವಿಧಾನಸಭೆ ಅತಂತ್ರವಾದರೆ? ಆಗ ಏನು ಬೇಕಾದರೂ ಆಗಬಹುದು. ಪಕ್ಷೇತರರ ಪಾತ್ರದ ಜೊತೆಗೆ, ಹೋಳಾದ ಎರಡು ಪಕ್ಷಗಳ ನಾಲ್ಕು ಗುಂಪುಗಳು ಯಾವುದೇ ಪಕ್ಷದ ಜೊತೆ ಕೈಜೋಡಿಸಿ ಅಧಿಕಾರ ಹಿಡಿಯಬಹುದು. ಪಕ್ಷಗಳು ಒಡೆದು ಶಾಸಕರು ಗೆದ್ದೆತ್ತಿನ ಬಾಲ ಹಿಡಿಯಬಹುದು.

ಲೇಖಕ: ಹಿರಿಯ ಪತ್ರಕರ್ತ



ಚುರುಮುರಿ



ಕಣ್ಣೀರಧಾರೆ

• ಡಿ.ಎಸ್.ಲಿಂಗರಾಜು

'**ನೋಡು** ಅಣ್ತಮ್ಮ, ಭೂಮಂಡಲದೇಲಿ ಏನೇನು ಕೆಟ್ಟವು ಅದಾವೋ ಅವೆಲ್ಲಾ ಮಾಡದಿದ್ರೂ ಮಟ್ಟದಿದ್ರೂ ಬಂದೂ ಬಂದೂ ನಮಗೇ ತಲೆಗೆ ಹೊಡಿತವಲ್ಲೋ. ರಾಜಕಾರಣಿಗಳಿಗೆ ಇವ್ಯಾವುದೂ ತಟ್ಟಕುಲ್ವಾ?' ಅಂದ ನಮ್ಮೂರ ಗಾಬರಿ. 'ಅದೇನು ಅಣ್ತಮ್ಮ, ನಿನಗೆ ಗಾಬರಿ ತಂದಿರೋ ನೋವು?' ಅಂತ ಕೇಳಿದೆ.

'ರೈತರ ಜಮೀನೆಲ್ಲಾ ಅವರದ್ದಂತೆ. ನಾವು ದಾಕಲ್ಮೆಂಟು ತಕ್ಕಂದು ಅವರತಕ್ಕೋಗಿ ಮೆಹನತ್ತು ಮಾಡಬೇಕಂತೆ. ಅವರು ಯಾಕೆ ಯಾವುದೇ ರಾಜಕಾರಣಿಗಳ ಜಮೀನಿಗೆ ಪಹಣಿ ಬರೆಸಿಕ್ಯಂದುಲ್ಲ? ರೈತರು ಸಾಲ-ಸೋಲ ಅಂತ ಸಾಯ್ತಲೇ ಇರತರೆ. ರಾಜಕೀಯದೋರು ಎಲೆಕ್ಷನ್ನಿಗೆ ಅಪಿಡವಿಟ್ಟು ಕೊಡುವಾಗ ಕೋಟಿಗಟ್ಲೆ ಸಾಲ ಅದೆ ಅಂತ ಲೆಕ್ಕ ತೋರಿಸ್ತರೆ. ಇಲ್ಲೀಗಂಟ ಯಾಕೆ ಯಾವ ರಾಜಕಾರಣೀನೂ ಸಾಲ ತೀರಿಸಕ್ಕಾಗಲಿಲ್ಲ ಅಂತ ಆತ್ಮಹತ್ಯೆ ಮಾಡಿಕ್ಯಂದುಲ್ಲ?'

'ದಿಟ ಕಪ್ಪಾ'.

'ಸರ್ಕಾರದ್ದು ಐದೂವರೆ ಲಕ್ಷ ಕೋಟಿ ಸಾಲ ನಮ್ಮ ತಲೆ ಮ್ಯಾಲೆ ಕೂತದೆ. ಮನೇಲಿ ಒಂದು ಚಮಚ ಕಾಣದೇ ಹೋದ್ರೂ ಹೆಂಡ್ರಿಗೆ ಗೊತ್ತಾತದೆ. ಬೇಲೆಕೇರೀಲಿ ಲಕ್ಷಗಟ್ಟಲೇ ಟನ್ ಅದಿರು ಹೊತ್ತುಕೋದ್ರೂ ಯಾಕೆ ಯಾರಿಗೂ ಗೊತ್ತಾಗನಿಲ್ಲ?' ಅಂತ ಪ್ರಶ್ನೆಗಳ ಮಳೆ ಸುರಿಸಿದ.

'ಅಮೇಲೆ?' ಅಂದೆ.

'ನಿನಗೇನ್ಲಾ ಯಾಸೆಟ್ಗ ಆಮೇಲೆ ಅಂದು ಬುಡ್ತೀಯ. ರಾಜಕಾರಣಿಗಳಿಗೆ ತಿಮಿರು ಜಾಸ್ತಿ ಯಾದಾಗ ಒಂದ್ಕಡೆ ರಾಜೀನಾಮೆ ಕೊಟ್ಟು ಇನ್ನೊಂದ್ಕಡೆ ಎಲೆಕ್ಷನ್ನಿಗೆ ನಿಂತುಗತ್ತರೆ. ಎರಡೂ ಎಲೆಕ್ಷನ್ ಕಾಸು ಜನರದ್ದೇ ತಾನೆ?'.

'ಸೋತರೆ ರಾಜೀನಾಮೆ ಕೊಡ್ತೀರಾ ಅಂತ ಕೇಳ್ತವ್ರೆ. ಇಲ್ಲೀಗಂಟ ಯಾವ ರಾಜಕಾರಣಿ ನೈತಿಕ ಹೊಣೆ ಹೊತಗಂದು ರಾಜೀನಾಮೆ ಕೊಟ್ಟವ್ನೆ?'

'ಅಲ್ಲ ಕಲಾ, ನಿಂದೊಳ್ಳೆ ರಾಮಾಣ್ಯಾತಲ್ಲೋ. ಸರ್ಕಾರಕ್ಕೆ ಸರ್ಕಾರವೇ ಚಂಪಟ್ನದೇಲಿ ಮೊಕ್ಕಾಂ ಹಾಕಿ ಪೋಟಾಪೋಟಿಗೆ ಬಿದ್ದದೆ. ಗೌಡಗೋಳ ಕಣ್ಣಗೆ ನೀರು ತುಂಬಿ ಕೋಡಿ ಬೀಳ್ತಾದೆ'.

'ದಿಟ ಅಣ್ತಮ್ಮ, ಈವತ್ತು ರಾತ್ರಿ ಯಾವ್ಯಾವ ಬೂತಚೇಷ್ಟೆ ನಡಿತದೋ ನಮ್ಮವ್ವ ಮುಳಕಟ್ಟಮ್ಮನಿಗೇ ಗೊತ್ತು' ಅಂತ ನನಗೇ ಸಮಾಧಾನಿಸಿದ.

ದಿನದ ಟ್ವೀಟ್

ವೈಜ್ಞಾನಿಕ ತಳಹದಿಯ ನಿಯಮ ಜಾರಿಯಾಗಲಿ

ಇದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಅದು ಅವರ ಆಯ್ಕೆ ಮತ್ತು ಅವರಿಗೆ ಹೇಗೆ ಬದುಕಲು ಇಷ್ಟವೋ ಹಾಗೆ ಬದುಕಬಹುದು. ಆದರೆ ಈ ವ್ಯಕ್ತಿಯನ್ನು ಮಹಿಳಾ ಕ್ರಿಕೆಟ್ ತಂಡದಲ್ಲಿ ಆಡಲು ಮಾತ್ರ ಎಂದಿಗೂ ಬಿಡಬಾರದು. ಏಕೆಂದರೆ ಅವರ ಮೂಳೆಯ ಸಾಂದ್ರತೆ ಮತ್ತು ಶಕ್ತಿಯು ಯಾವುದೇ ಮಹಿಳಾ ಕ್ರಿಕೆಟಿಗರಿಗಿಂತ ಉತ್ತಮವಾಗಿಯೇ ಇರುತ್ತದೆ. ಹಾಗೇನಾದರೂ ಆಡಲು ಅವಕಾಶ ಕಲ್ಪಿಸಿದರೆ ಅದು ವಂಚನೆಯಾಗುತ್ತದೆ.

(ಕ್ರಿಕೆಟ್ ವೀಕ್ಷಕ ವಿವರಣೆಗಾರ ಸಂಜಯ್ ಬಂಗಾರ್ ಅವರ ಪುತ್ರ, ಕ್ರಿಕೆಟ್ ಆಟಗಾರ ಆರ್ಯನ್ ಲಿಂಗಪರಿವರ್ತನೆ ಮಾಡಿಸಿಕೊಂಡು ಯುವತಿಯಾಗಿರುವುದಕ್ಕೆ ಪ್ರತಿಕ್ರಿಯೆ)

ಸ್ವಾವಿಯೊ

ಕಿಡಿನುಡಿ

ಜಾತಿ- ಧರ್ಮದಿಂದ ವಿಭಜನೆಗೊಂಡಿರುವ ದೇಶದಲ್ಲಿ ಇದು ಅಚ್ಚರಿ ಹುಟ್ಟಿಸುವ ಸಂಗತಿಯೇ ಅಲ್ಲ.

(ಮಂಡ್ಯ ತಾಲ್ಲೂಕಿನ ಹನಕೆರೆ ಗ್ರಾಮದಲ್ಲಿ ದಲಿತರು ದೇವಾಲಯ ಪ್ರವೇಶಿಸಿದ್ದನ್ನು ವಿರೋಧಿಸಿ ಗ್ರಾಮಸ್ಥರು ಉತ್ಸವಮೂರ್ತಿಯನ್ನು ಸ್ಥಳಾಂತರಿಸಿರುವುದಕ್ಕೆ ಪ್ರತಿಕ್ರಿಯೆ)

ಅಭಿಷೇಕ್

25 ವರ್ಷಗಳ ಹಿಂದೆ

ಶುಕ್ರವಾರ, 12-11-1999

• ಸಾಮಾನ್ಯ ವರ್ಗಾವಣೆ ಮಾರ್ಚ್‌ವರೆಗೆ ಇಲ್ಲ

ಬೆಂಗಳೂರು, ನ. 11– ಬರುವ ಫೆಬ್ರುವರಿ- ಮಾರ್ಚ್ ತಿಂಗಳವರೆಗೆ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆಯನ್ನು ಮಾಡದಿರಲು ಹಾಗೂ ವರ್ಗಾವಣೆ ನೀತಿಗೆ ಕೆಲವು ಬದಲಾವಣೆ ತರಲು ಇಂದು ರಾತ್ರಿ ನಡೆದ ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಸರ್ಕಾರ ಬದಲಾವಣೆಯಾಗಿರುವ ಸಂದರ್ಭದಲ್ಲಿ ಕೂಡಲೇ ಸರ್ಕಾರಿ ನೌಕರರನ್ನು ಸಾರಾಸಗಟಾಗಿ ವರ್ಗಾವಣೆ ಮಾಡಬೇಕೆಂಬ ತೀವ್ರ ಒತ್ತಡ ಆಡಳಿತ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರಿಂದ ಇದ್ದರೂ ಸಾಮಾನ್ಯ ವರ್ಗಾವಣೆಯನ್ನು ಫೆಬ್ರುವರಿ- ಮಾರ್ಚ್ ತಿಂಗಳವರೆಗೆ ಮುಂದೂಡಲು ಸಂಪುಟ ನಿರ್ಧರಿಸಿದೆ.

• ಸಿವಿಲ್ ನ್ಯಾಯಾಧೀಶರಿಗೆ ಏಕರೂಪ ವೇತನ

ನವದೆಹಲಿ, ನ. 11– ರಾಜ್ಯ ನ್ಯಾಯಾಂಗ ಸೇವೆಯ ವ್ಯಾಪ್ತಿಯಲ್ಲಿ ಬರುವ ಸಿವಿಲ್ ನ್ಯಾಯಾಧೀಶರಿಗೆ ರಾಷ್ಟ್ರೀಯ ಮಟ್ಟದಲ್ಲಿ ಏಕರೂಪ ವೇತನ, ನಿವೃತ್ತಿ ವಯಸ್ಸು 60ರಿಂದ 62ಕ್ಕೆ ನಿಗದಿ ಮತ್ತು ರಜೆಯಲ್ಲಿ ಕಡಿತ ಹಾಗೂ ಆರು ದಿನ ಕಾರ್ಯನಿರ್ವಹಿಸುವುದನ್ನು ರಾಷ್ಟ್ರೀಯ ನ್ಯಾಯಾಧೀಶರ ವೇತನ ಆಯೋಗ ಶಿಫಾರಸು ಮಾಡಿದೆ.

50 ವರ್ಷಗಳ ಹಿಂದೆ

ಮಂಗಳವಾರ, 12-11-1974

• 'ಸುಗ್ರೀವಾಜ್ಞೆ' ಮಂಡನೆ ತಡೆಗೆ ವಿರೋಧ ಪಕ್ಷದ ವಿಫಲ ಯತ್ನ

ನವದೆಹಲಿ, ನ. 11– ಚುನಾವಣೆ ವೆಚ್ಚ ಕುರಿತ ಸುಗ್ರೀವಾಜ್ಞೆಯ ಪ್ರತಿಯೊಂದನ್ನು ಸರ್ಕಾರವು ರಾಜ್ಯಸಭೆಯಲ್ಲಿ ಮಂಡಿಸುವುದನ್ನು ತಡೆಯಲು ವಿರೋಧ ಪಕ್ಷದ ಸದಸ್ಯರು ಇಂದು ವಿಫಲ ಯತ್ನ ನಡೆಸಿದರು.

ಈ ಸುಗ್ರೀವಾಜ್ಞೆಯು 'ಪ್ರಜಾಪ್ರಭುತ್ವ ವಿರೋಧಿ, ದುರುದ್ದೇಶದಿಂದ ಕೂಡಿದ್ದು ಮತ್ತು ನ್ಯಾಯಾಂಗ ನಿಂದನೆ ಮಾಡಿದಂತೆ' ಎಂದು ಬಣ್ಣಿಸಿದ ಜನಸಂಘದ ಎಲ್.ಕೆ. ಅಡ್ವಾಣಿ ಅವರು 'ಭಾರತದ ಪ್ರಜಾಪ್ರಭುತ್ವದ ಮೇಲೆ ಮಸಿ'ಯಂತಿರುವ ಈ ಸುಗ್ರೀವಾಜ್ಞೆಯನ್ನು ವಾಪಸು ಪಡೆಯುವಂತೆ ಒತ್ತಾಯಪಡಿಸಿದರು.

ಮೂಲತಃ ಸುಗ್ರೀವಾಜ್ಞೆಯೇ ಒಳ್ಳೆಯದಲ್ಲ. ಅದರಲ್ಲೂ ಇಂತಹ ವಿನಾಶಕಾರಿಯಾದ ಸುಗ್ರೀವಾಜ್ಞೆಯನ್ನು ಯಾರೂ ಬೆಂಬಲಿಸಬಾರದು ಎಂದರು.

• ಭಕ್ತಿಭಾವಗಳ ಸಂಗಮದಲ್ಲಿ ಶಿಷ್ಯ ಸ್ವೀಕಾರ

ಶೃಂಗೇರಿ, ನ. 11– ನಿಸರ್ಗ ಸೌಂದರ್ಯಮಯ ವಾತಾವರಣದಲ್ಲಿ ಮೇಲಿಂದ ಮೇಲೆ ಭಕ್ತಿ ಭಾವಗಳ ಅಲೆ, ನಡುನೀರಿನಲ್ಲಿ ನಿಂತಿದ್ದ ಇಪ್ಪತ್ತಮೂರು ವರ್ಷ ವಯಸ್ಸಿನ ಬ್ರಹ್ಮಚಾರಿ ಸೀತಾರಾಮಾಂಜನೇಯಲು ಅವರು ಜುಟ್ಟು ಕಿತ್ತು, ಜನಿವಾರ ತೆಗೆದು ಪವಿತ್ರ ತುಂಗೆಗೆ ಅರ್ಪಣೆ. ಕೌಪೀನ ವಿಸರ್ಜನೆ, ನೀರಿನಲ್ಲೇ ಮುಂದಿನ ಹೆಜ್ಜೆ.

ದಡದಲ್ಲಿ ಸ್ವೀಕರಿಸಲು ನಿಂತಿದ್ದ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ಶಿಷ್ಯನನ್ನು ಕರೆದರು. ಸರ್ವಸಂಗ ಪರಿತ್ಯಾಗ ಮಾಡಿ ಹೊರಟಿದ್ದ ಸನ್ಯಾಸಿ ನಿರ್ವಾಣದಲ್ಲಿ ಮೇಲಕ್ಕೆ ಬಂದರು.

ನೂತನ ಸನ್ಯಾಸಿಗೆ ಜಗದ್ಗುರುಗಳಿಂದ 'ಶ್ರೀ ಭಾರತೀತೀರ್ಥ' ನಾಮಕರಣ. ಶ್ರೀ ಶಂಕರ ಭಗವತ್ಪಾದರ ನಾಲ್ಕು ಪೀಠಗಳಲ್ಲಿ ಒಂದಾದ ಪ್ರಸಿದ್ಧ- ಪವಿತ್ರ ಶೃಂಗೇರಿ ಮಠಾಧೀಶ ಅಭಿನವ ವಿದ್ಯಾತೀರ್ಥ ಸ್ವಾಮಿಗಳಿಂದ ಶಿಷ್ಯ ಸ್ವೀಕಾರವಾಯಿತು.

ಸಂಗತ

ಆಧುನಿಕರು ನಾವು, ಯಂತ್ರಬಂದಿಗಳು

ಅತಿಯಾದ ಯಂತ್ರಾವಲಂಬನೆಯ ಮೇಲೆ ಸ್ವಯಂ ನಿಯಂತ್ರಣ ಹಾಕಿಕೊಂಡು ಸುಸ್ಥಿರ ಬೆಳವಣಿಗೆಯತ್ತ ನಾವು ಗಮನ ಹರಿಸಬೇಕಾಗಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ


ಇದು ತಂತ್ರಜ್ಞಾನ ಯುಗ. ಆಧುನಿಕತೆಯ ಕುರುಹಾಗಿ, ಕೊಡುಗೆಯಾಗಿ ಬಂದೊದಗಿದ ಯಂತ್ರೋಪಕರಣಗಳೊಟ್ಟಿಗೆ ಬದುಕನ್ನು ಗಾಢವಾಗಿ ಬೆಸೆದುಕೊಂಡಿರುವ ಸಂದರ್ಭವಿದು. ಅತ್ಯಾಧುನಿಕ ಸೌಕರ್ಯಗಳೊಂದಿಗೆ ಆರಾಮದಾಯಕ ಜೀವನಶೈಲಿಗೆ ಆತುಕೊಂಡ ಪ್ರತಿಯೊಬ್ಬರೂ ಯಂತ್ರರಾಹಿತ್ಯ ಸನ್ನಿವೇಶವನ್ನು ಖಂಡಿತ ಊಹಿಸಲಾರರು. 'ಅರ್ಧಗಂಟೆ ಕರೆಂಟು ಹೋದರೆ ಬದುಕಲಾರೆವು' ಎಂಬಷ್ಟು ಯಾಂತ್ರಿಕಗೊಂಡ ಕಾಲಮಾನ ಎಂಬುದಂತೂ ಸತ್ಯ.

ಪ್ರಸ್ತುತ ಯಂತ್ರನಾಗರಿಕತೆಯಲ್ಲಿ ನಮ್ಮ ದಿನಚರಿ ಸರಾಗವಾಗಿದ್ದು, ಇಡೀ ದಿನದ ಕೆಲಸವನ್ನು ಯಂತ್ರಗಳು ಅರೆಗಳಿಗೆಯಲ್ಲಿ ಮಾಡಿ ಮುಗಿಸುತ್ತಿವೆ. ಸೌಲಭ್ಯಗಳು ಹೆಚ್ಚಿವೆ, ಬದುಕು ಬದಲಾಗಿದೆ. ಇದೀಗ ಯಾವ ಕ್ಷೇತ್ರಗಳನ್ನೂ ಬಾಕಿಬಿಡದೆ ದಾಂಗುಡಿ ಇಟ್ಟಿರುವ ಕಂಪ್ಯೂಟರೀಕೃತ ಸಾಧನಗಳು ಹತ್ತಾರು ಜನ ವಾರಗಟ್ಟಲೆ ಮಾಡಬಹುದಾದ ಕೆಲಸವನ್ನು ಒಪ್ಪತ್ತಿನಲ್ಲಿ ಚುಕ್ತಾ ಮಾಡುತ್ತಲಿವೆ.

ಆದರೆ ಮೊನ್ನೆ ತಮ್ಮ ಗತಕಾಲವನ್ನು ಇವತ್ತಿನ ಸಂದರ್ಭದಲ್ಲಿ ಮೆಲುಕುತ್ತಿದ್ದ ಹಳ್ಳಿಯ ಹಿರಿಜೀವವೊಂದರ ದಿಗಿಲಿಗೆ ಕಿವಿಯಾಗುತ್ತಿದ್ದಂತೆ ಒಳಗೊಂದು ಗೊಂದಲಭಾವ ಆವರಿಸಿತು. ಅವರೆಂದಿದ್ದು 'ನಮ್ಮ ಕಾಲದಲ್ಲಿ ಹೀಗಿರಲಿಲ್ಲ, ಕೈಯಲ್ಲಿ ಗುದ್ದಲಿ, ಹಾರೆ, ಕತ್ತಿ, ಕೊಡಲಿಗಳಷ್ಟೇ ಇದ್ದವು. ಹತ್ತಾರು ಜನ ಸೇರಿ ಬಯಲಿಗೆ ಬಂದು ನೆಲೆ ನಿಲ್ಲುವುದು, ಸಣ್ಣಭೂಮಿಯಲ್ಲಿ ಕೃಷಿಕಾರ್ಯ ಕೈಗೊಳ್ಳುವುದು ಮಹಾ ಸಾಧನೆ- ಸಾಹಸ ಅನಿಸಿಕೊಳ್ಳುತ್ತಿದ್ದವು. ಪ್ರಕೃತಿಯನ್ನು ನೆನೆದೇ ನಮ್ಮ ದಿನಚರಿ ಆರಂಭಗೊಳ್ಳುತ್ತಿತ್ತು. 'ವೃಕ್ಷ ಕಡಿದವನು ಭಿಕ್ಷೆ ಬೇಡುತ್ತಾನೆ' ಅಂತ ನಂಬಿಕೊಂಡವರು. ಈಗ ಹಾಗಿಲ್ಲ. ಜೆಸಿಬಿ ಯಂತ್ರ, ಬುಲ್ಡೋಜರ್‌ನಂತಹ ದೈತ್ಯ ರಾಕ್ಷಸರ ರಣಹಸಿವು ರಾತ್ರಿ ಬೆಳಗಾಗುವುದರೊಳಗೆ ಎಕರೆಗಟ್ಟಲೆ ಕಾಡುಗುಡ್ಡಗಳನ್ನು ಮಂಗಮಾಯ ಮಾಡಿದೆ, ಕೆರೆಕಟ್ಟೆಗಳನ್ನೂ ಹೇಳಹೆಸರಿಲ್ಲದಂತೆ ನುಂಗಿಹಾಕಿದೆ. ದೇವರ ನಿಜಸ್ವರೂಪವಾದ ಪ್ರಕೃತಿಯನ್ನು ಧ್ವಂಸ ಮಾಡುತ್ತಿರುವ ಬಗ್ಗೆ ಯಾರಲ್ಲೂ ಬೇಸರವಿಲ್ಲ!'

ತೀವ್ರಗತಿಯಲ್ಲಿ ಅರಣ್ಯನಾಶ ಮತ್ತು ಪರಿಸರ ಮಾಲಿನ್ಯಗೊಳ್ಳುತ್ತಿರುವ ಬಗ್ಗೆ ಹಿರಿಯರ ಮಾತುಗಳು ಹೊಮ್ಮಿಸಿದ ಆತಂಕವು ಚೀನೀ ಕತೆಯೊಂದನ್ನು ನೆನಪಿಗೆ ತಂತು. ಒಮ್ಮೆ ಹಾನ್ ನದಿದಂಡೆಯಲ್ಲಿ ಪ್ರಯಾಣ ಬೆಳೆಸಿದ್ದ ಸಂತ ತ್ಸು-ತುಂಗ್, ಮುದುಕನೊಬ್ಬ ಹೊಲದಲ್ಲಿ ತರಕಾರಿ ಏರಿಗಳಿಗೆ ನೀರುಣಿಸುತ್ತಿದ್ದುದನ್ನು ನಿಂತು ನೋಡಿದರು. ಬಾವಿಯಲ್ಲಿ ಇಳಿದು ಕೊಡದಲ್ಲಿ ನೀರು ತುಂಬಿಸಿ ಹೊತ್ತುತಂದು ಕಾಲುವೆಗೆ ಸುರಿಯುತ್ತಿದ್ದ ಮುದುಕನ ಶ್ರಮದ ಬಗ್ಗೆ ತ್ಸು-ತುಂಗ್ ಅವರಿಗೆ ಮೆಚ್ಚುಗೆಯಾಯಿತಾದರೂ ಪ್ರತಿಫಲ ತೀರಾ ಕಮ್ಮಿ ಅಂತ ಮರುಕವಾಯಿತು. ಹತ್ತಿರಹೋಗಿ 'ಮರದ ಏತ ಮಾಡಿಕೊ. ಕಡಿಮೆ ಶ್ರಮದಲ್ಲಿ ಸರಾಗವಾಗಿ ನೀರೆತ್ತಬಹುದು. ಇಲ್ಲವಾದರೆ ಗಾಲಿ ತಿರುಗಿಸಿ ನೀರೆತ್ತುವ ವಿಧಾನವನ್ನಾದರೂ ಅಳವಡಿಸಿಕೊ. ವಿದ್ಯುತ್ ಪಂಪ್ ವ್ಯವಸ್ಥೆ ಮತ್ತೂ ಸುಲಭ. ಸ್ವಿಚ್ ಒತ್ತಿ ಕುಳಿತರಾಯ್ತು' ಅಂತೆಲ್ಲಾ ಸಲಹೆಗಳನ್ನಿತ್ತರು. ಮುದುಕನ ಮುಖ ಕೆಂಪೇರಿ '... ನನಗೇನು ಆ ಯಂತ್ರದ ಬಗ್ಗೆ ಗೊತ್ತಿಲ್ಲವೆಂದಲ್ಲ. ಬಳಸಲು ನಾಚಿಕೆಯಷ್ಟೇ!', ಮುಂದುವರಿದು ಹೇಳಿದ 'ಯಾರು ಯಂತ್ರವನ್ನು ಬಳಸುತ್ತಾರೋ ಅವರು ಎಲ್ಲಾ ಕೆಲಸಗಳನ್ನು ಯಂತ್ರದಂತೆ ಮಾಡುತ್ತಾರೆ. ದೈಹಿಕ ಶ್ರಮವಿಲ್ಲದೆ ಯಂತ್ರದೊಟ್ಟಿಗೆ ಹೊಯ್ದಾಡುವವರ ಮೈಮನಸ್ಸುಗಳೂ ಯಾಂತ್ರಿಕವಾಗುತ್ತವೆ. ಎದೆಯಲ್ಲಿ ಯಾಂತ್ರಿಕತೆ ತುಂಬಿಕೊಂಡರೆ ನಾವು ನಮಗರಿವಿಲ್ಲದಂತೆ ಸರಳ ಬದುಕನ್ನು ಕಳೆದುಕೊಳ್ಳುತ್ತೇವೆ. ಹಾಗಾದಾಗ ಆತ್ಮಕ್ಕೆ ಗುರಿ ಮತ್ತು ದಾರಿಯ ಬಗ್ಗೆ ಗೊಂದಲವಿರುತ್ತದೆ. ಆತ್ಮದ ಗೊಂದಲವು ಪ್ರಾಮಾಣಿಕ ಮನಸ್ಸಿಗೆ ಒಗ್ಗದ ವಿಚಾರ. ಆದ್ದರಿಂದ ನಮ್ಮಂತಹವರು ಹೀಗೆಯೇ ಸರಳವಾಗಿ ಉಳಿಯಬಯಸುತ್ತೇವೆ!'

ನಿಜ, ಈಗೆಲ್ಲಾ ಯಾಂತ್ರೀಕರಣ ಅತಿಯಾದಷ್ಟೂ ಬದುಕು ಕೃತಕವೆನಿಸುತ್ತಿದೆ, ಅಪಾಯಕ್ಕೀಡಾಗುತ್ತಿದೆ. ಪರಿಸರ ವಿಷಮಯಗೊಂಡಿದೆ, ಬಾಂಧವ್ಯದ ತಂತುಗಳು ಸಡಿಲಗೊಳ್ಳುತ್ತಿವೆ. ಪರಸ್ಪರರಲ್ಲಿ ಅವಲಂಬನೆ, ನಂಬುಗೆ ಮಾಯವಾಗಿ ಮಾನವನಿರ್ಮಿತ ಯಂತ್ರಗಳನ್ನಷ್ಟೇ ನಂಬುವಂತಹ ಕಾಲ ಎದುರಾಗಿದೆ. ಮಕ್ಕಳಲ್ಲಿ ಹೆಚ್ಚುತ್ತಿರುವ ಮೊಬೈಲ್ ಫೋನ್ ಸಂಸ್ಕೃತಿ, ಕಂಪ್ಯೂಟರ್ ಸಂಸ್ಕೃತಿಯು ಅವರು ಪುಸ್ತಕ ನೋಡಿ ಗಾಬರಿ ಬೀಳುವಂತೆ ಮಾಡುತ್ತಿವೆ. ಮೂರು ಹೊತ್ತೂ ಕಣ್ಣೆಗೆರಗುವ ಇಂದ್ರಿಯ ಪ್ರಚೋದಿತ ವಿಡಿಯೊ ತುಣುಕುಗಳ ಹಾವಳಿಯಲ್ಲಿ ತರಗತಿಯ ಪಾಠಗಳು ಸಪ್ಪೆಸಪ್ಪೆ. ಭವಿಷ್ಯದ ಕುರಿತೂ ಕಾಳಜಿ ಕಡಿಮೆ!



ಎಲ್ಲೆಡೆಯೂ ಸ್ವಯಂಚಾಲಿತ ಮತ್ತು ರೋಬೊಟಿಕ್ ಯಂತ್ರಗಳ ಬಳಕೆಯು ವ್ಯಾಪಕಗೊಳ್ಳುತ್ತಿದೆ. ದೈಹಿಕ ಶ್ರಮ ಕಡಿಮೆಯಾಗಿ ಜನರ ಆರೋಗ್ಯ ಕ್ಷೀಣಿಸುತ್ತಿದೆ. ಮನುಷ್ಯನ ಬೌದ್ಧಿಕ ಮತ್ತು ತಾರ್ಕಿಕ ಸಾಮರ್ಥ್ಯಗಳನ್ನು ಅನುಸರಿಸಿ ಬೆಳೆಯುತ್ತಿರುವ ಕೃತಕ ಬುದ್ಧಿಮತ್ತೆಯಂತೂ ಬಹೂಪಯೋಗಿಯಾಗಿ, ಅತ್ಯಂತ ವೇಗವಾಗಿ ಜನಪ್ರಿಯಗೊಳ್ಳುತ್ತಲೇ ಮನುಷ್ಯನ ಉಪಸ್ಥಿತಿ ಅನಿವಾರ್ಯವಾದ ಕ್ಷೇತ್ರಗಳಲ್ಲೂ ಮನುಷ್ಯನ ಪ್ರಸ್ತುತತೆಗೆ ಸವಾಲೆಸೆಯುತ್ತಲಿದೆ.

ಹಾಗಾಗಿ, ಆಧುನಿಕತೆಯ ಆವೇಗಕ್ಕೆ ಕಡಿವಾಣ ಹಾಕಿ ತಂತ್ರಜ್ಞಾನ ಮತ್ತು ಯಂತ್ರಸಾಧನಗಳನ್ನು ಅಗತ್ಯಕ್ಕೆ ತಕ್ಕಂತೆ ಹಿತಮಿತವಾಗಿ, ಇತಿಮಿತಿಯಲ್ಲಿ ಬಳಸಿಕೊಳ್ಳುವುದು ಒಳಿತು. ಅಂಧಾಭಿವೃದ್ಧಿ ಮತ್ತು ಅತಿಯಾದ ಯಂತ್ರಾವಲಂಬನೆಯ ನಾಗಾಲೋಟಕ್ಕೆ ಸ್ವಯಂನಿಯಂತ್ರಣವನ್ನು ಅಳವಡಿಸಿಕೊಂಡು ಸಂಯಮದಿಂದ ಸುಸ್ಥಿರ ಬೆಳವಣಿಗೆಯತ್ತ ಎಲ್ಲರ ಚಿತ್ತ ಹರಿಯಬೇಕಾಗಿದೆ.

ವಾಚಕರ ವಾಣಿ

ಪ್ರಜಾಪ್ರಭುತ್ವಕ್ಕೆ ಹಿನ್ನಡೆಯಾದ ಪ್ರಚಾರ ವೈಖರಿ

ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆ ಮತ್ತು ನಮ್ಮ ರಾಜ್ಯದಲ್ಲಿ ನಿಗದಿಯಾಗಿರುವ ಉಪಚುನಾವಣೆಯಲ್ಲಿನ ಪ್ರಚಾರದ ವೈಖರಿಯು ನಮ್ಮ ಪ್ರಜಾಪ್ರಭುತ್ವ ಮತ್ತಷ್ಟು ಅಧೋಗತಿಗೆ ಇಳಿಯುತ್ತಿರುವುದರ ದ್ಯೋತಕದಂತಿದೆ. ಪ್ರಜಾಪ್ರಭುತ್ವದ ಆಶಯಗಳು ಚುನಾವಣೆಯಿಂದ ಚುನಾವಣೆಗೆ ಮಣ್ಣುಗೂಡುತ್ತಿವೆ. ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ನೇತಾರರ ಪ್ರಚಾರದ ಪರಿ, ಮತದಾರರಿಗೆ ಪಕ್ಷಗಳು ಘೋಷಿಸುತ್ತಿರುವ 'ಉಚಿತ' ಕೊಡುಗೆಗಳು, ಜಾತಿ, ಕೋಮುವಾದದ ವೈಭವೀಕರಣ, ಪಕ್ಷಾತೀತವಾಗಿ ಮುಂದುವರಿಯುತ್ತಿರುವ ಕುಟುಂಬ ರಾಜಕಾರಣ, ಹಣದ ಹರಿವು... ಒಂದೊಂದೂ ಪ್ರಜಾಪ್ರಭುತ್ವವನ್ನು ಒಂದೊಂದು ಹೆಜ್ಜೆ ಹಿಂದಕ್ಕೆ ತಳ್ಳುತ್ತಿವೆ.

ರಾಜಕೀಯ ಪಕ್ಷಗಳ ಪ್ರಮುಖ ನಾಯಕರು ಎನಿಸಿಕೊಳ್ಳುವವರು ರಾಜಕೀಯ ವಿರೋಧಿಗಳ ಕುರಿತು ಬಳಸುವ ಭಾಷೆ, ಅಧಿಕಾರದಾಹದ ಮಾತುಗಳು ಸಭ್ಯತೆಯ ಗಡಿಯನ್ನು ಮೀರಿವೆ. ಚುನಾವಣಾ ಆಯೋಗ ಇದ್ದೂ ಇಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ. ತಾವು, ತಮ್ಮವರು ಆರಿಸಿ ಬರದಿದ್ದರೆ ದೇಶ, ರಾಜ್ಯವೇ ಮುಳುಗಿಹೋಗುತ್ತದೆ ಎಂಬಂತೆ ಮತದಾರರ ಮುಂದೆ ನಿಂತು ಅಂಗಲಾಚುವುದನ್ನು ನೋಡಿದರೆ ಕನಿಕರ ಮೂಡುತ್ತದೆ. ಬರಬರುತ್ತಾ ನಮ್ಮ ಪ್ರಜಾಪ್ರಭುತ್ವವು ಪ್ರಜಾಪ್ರಭುತ್ವವಾಗಿ ಉಳಿಯದೆ ಕೌಟುಂಬಿಕ, ವಂಶಪಾರಂಪರ್ಯ, ಜಾತಿ, ಕೋಮು, ಹಣಬಲ, ತೋಳ್ಬಲದ ಅಧಿಕಾರಕೇಂದ್ರವಾಗಿ ಬದಲಾಗುವ ಎಲ್ಲ ಲಕ್ಷಣಗಳು ತೋರತೊಡಗಿವೆ. ಮತದಾರರು ಮತದಾನ ಮಾಡುವ ಮೊದಲು ಸ್ವಲ್ಪ ಯೋಚಿಸಿ ಮತ ನೀಡಲಿ ಎಂದಷ್ಟೇ ನಾವು ಅಪೇಕ್ಷಿಸಬಹುದು.

ವೆಂಕಟೇಶ ಮಾಚಕನೂರ, ಧಾರವಾಡ

ಕೃಪಾಪೋಷಿತ ನೆರವು ಅನಗತ್ಯ

'ಸಿದ್ದರಾಮಯ್ಯ ಅವರು ಅಧಿಕಾರದಲ್ಲಿ ಇರುವತನಕ ಮಾತ್ರ ಮುಸ್ಲಿಮರಿಗೆ ಭವಿಷ್ಯ...' ಎಂದು ಇಕ್ಬಾಲ್ ಅನ್ಸಾರಿ ಅವರು ಹೇಳಿರುವುದನ್ನು ಓದಿ (ಪ್ರ.ವಾ., ನ. 11) ನಗು ಬಂತು. ಅವರವರ ಭವಿಷ್ಯ ಅವರವರ ಕೈಯಲ್ಲಿ ಇರುತ್ತದೆ. ಯಾವ ಒಬ್ಬ ನಾಯಕ ಅಥವಾ ಸಚಿವ ತಮ್ಮ ಭವಿಷ್ಯ ರೂಪಿಸುತ್ತಾನೆಂದು ಯಾವ ಸಮುದಾಯದ ಜನರೂ ಕಾಯುತ್ತಾ ತಮ್ಮ ಜೀವನ ನಡೆಸುವುದಿಲ್ಲ. ತಮ್ಮ ಬೇಳೆ ಬೇಯಿಸಿಕೊಳ್ಳಲು ಇವರು ಇಡೀ ಒಂದು ಸಮುದಾಯವನ್ನು ತಪ್ಪುದಾರಿಗೆ ಎಳೆಯುವುದು ಎಷ್ಟು ಸರಿ?

ಮುಸ್ಲಿಮರಿಗೆ ಈ ಹಿಂದೆಯೂ ಭವಿಷ್ಯ ಇತ್ತು, ಈಗಲೂ ಇದೆ, ಹಾಗೆಯೇ ಮುಂದೆಯೂ ಇರುತ್ತದೆ. ಅವರ ಅನ್ನವನ್ನು ಅವರೇ ಸಂಪಾದಿಸಿ ಉಣ್ಣುವವರಿಗೆ ಯಾರ ಕೃಪಾಪೋಷಿತ ನೆರವೂ ಬೇಕಾಗದು. ಇಂತಹ ಅಪ್ರಬುದ್ಧ ಹೇಳಿಕೆ ಬಿಟ್ಟು, ಸರ್ವ ಜನಾಂಗಕ್ಕೂ ಒಳಿತು ಬಯಸುವ ಮಾತು, ಕೃತಿಯ ಮೂಲಕ ಅವರು ಮಾದರಿಯಾಗಲಿ.

ಸಂತೆಬೆನ್ನೂರು ಫೈಜ್ನಟ್ರಾಜ್, ತಳಕು, ಚಳ್ಳಕೆರೆ

ಸಮ್ಮೇಳನದ ಸರ್ವಾಧ್ಯಕ್ಷತೆ: ಸ್ವಾಮೀಜಿ ಪ್ರಬುದ್ಧ ನಡೆ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಚಿತ್ರದುರ್ಗ ಜಿಲ್ಲಾ ಘಟಕವು ತಮ್ಮ ಹೆಸರು ಶಿಫಾರಸು ಮಾಡಿರುವುದಕ್ಕೆ, ಅಂತಹ ಸ್ಥಾನವನ್ನು ತಾವು ಬಯಸುವುದಿಲ್ಲ ಎಂದು ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪ್ರತಿಕ್ರಿಯಿಸಿರುವುದು ಗಮನಾರ್ಹ. ಅವರ ಅಂತರಂಗದಿಂದ ಆವಿರ್ಭವಿಸಿದ ಈ ಹೇಳಿಕೆ ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳಿಗೆ ಸದಾಕಾಲ ಮನ್ನಣೆ ದೊರೆಯಬೇಕು ಎಂದು ಅವರು ಅಭಿಪ್ರಾಯಪಟ್ಟಿರುವುದು ಔಚಿತ್ಯಪೂರ್ಣ ನಡೆಯಾಗಿದೆ. ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳಾದವರು ಮಾತ್ರ ವಿಜೃಂಭಿಸಬೇಕು. ಸಾಹಿತ್ಯೇತರ ವ್ಯಕ್ತಿಗಳು ಸಮ್ಮೇಳನದ ಸರ್ವಾಧ್ಯಕ್ಷರಾಗುವುದು ತರವಲ್ಲ. ಸಾಹಿತಿಯನ್ನು ಮಾತ್ರ ಸರ್ವಾಧ್ಯಕ್ಷರನ್ನಾಗಿ ಮಾಡಬೇಕೆಂದು ಸಾರಸ್ವತ ಲೋಕದ ಹಲವು ಚಿಂತನಶೀಲ ಸಾಹಿತಿಗಳಿಂದ ಇತ್ತೀಚೆಗೆ ಒಕ್ಕೊರಲ ಕೂಗು ಕೇಳಿಬಂದಿತ್ತು. ಇದಕ್ಕೆ ಪುಷ್ಟಿ ನೀಡಿದಂತೆ ಇರುವ ತರಳಬಾಳು ಶ್ರೀಗಳ ಈ ಹೇಳಿಕೆ ಬಹಳ ಮಹತ್ವ ಪಡೆದುಕೊಂಡಿದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಇದೆಂಥಾ ಪ್ರಸ್ತಾವ? ಇದೆಂಥಾ ಮನೋಭಾವ?

ಮಹಿಳೆಯರ ಕೂದಲನ್ನು ಪುರುಷರು ಕತ್ತರಿಸಬಾರದು ಹಾಗೂ ಮಹಿಳೆಯರ ಬಟ್ಟೆಗಳನ್ನು ಹೊಲಿಯಲು ಪುರುಷರು ಅಳತೆ ತೆಗೆದುಕೊಳ್ಳಬಾರದು ಎಂಬ ಪ್ರಸ್ತಾವವನ್ನು ಉತ್ತರಪ್ರದೇಶದ ಮಹಿಳಾ ಆಯೋಗವು ಅಲ್ಲಿನ ರಾಜ್ಯ ಸರ್ಕಾರದ ಮುಂದಿರಿಸಲು ನಿರ್ಧರಿಸಿರುವುದು ಅತ್ಯಂತ ಸೋಜಿಗದ ಸಂಗತಿಯಾಗಿದೆ. ಇಂತಹ ವೃತ್ತಿಗಳಲ್ಲಿ ಗಂಡಸರು ಕೆಲಸ ಮಾಡುವುದರಿಂದಲೇ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಪ್ರಕರಣಗಳು ನಡೆಯುತ್ತಿವೆ ಎಂದು ಆಯೋಗದ ಸಭೆಯಲ್ಲಿ ಸದಸ್ಯೆಯೊಬ್ಬರು ಅಭಿಪ್ರಾಯಪಟ್ಟಿರುವುದು ಹಾಸ್ಯಾಸ್ಪದವಾಗಿದೆ. ಮಹಿಳಾ ಆಯೋಗದ ಸದಸ್ಯರು ಈ ರೀತಿಯೆಲ್ಲ ಯೋಚಿಸುವವರಾದರೆ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ ವಿರುದ್ಧದ ಹೋರಾಟದ ಗತಿ ಏನಾಗಬಹುದು?

ಮಹಿಳೆಯರ ರಕ್ಷಣೆ ಸಾಧ್ಯವಾಗುವುದು ನಮ್ಮ ಸಾಮಾಜಿಕ ಆಲೋಚನೆಗಳನ್ನು ತಿದ್ದುವುದರಲ್ಲಿ ಹಾಗೂ ಮಹಿಳೆಯನ್ನು ಒಂದು ಭೋಗದ ವಸ್ತುವನ್ನಾಗಿ ವೈಭವೀಕರಿಸುವ ದುರಾಲೋಚನೆಯನ್ನು ತಹಬಂದಿಗೆ ತರುವುದರಲ್ಲಿ. ನಮ್ಮ ಪುರುಷಪ್ರಧಾನ ಮನಃಸ್ಥಿತಿಯಲ್ಲಿ ಹೇಳಿಕೊಳ್ಳುವಂಥ ಸುಧಾರಣೆ ಇನ್ನೂ ಆಗಿಲ್ಲ. ಎಲ್ಲ ನಕಾರಾತ್ಮಕ ಬೆಳವಣಿಗೆಗಳಿಗೆ ಹೆಣ್ಣನ್ನೇ ಕಾರಣಕರ್ತೆ ಎನ್ನುತ್ತಿದ್ದೇವೆ. ಇಂತಹ ಸ್ಥಿತಿಯಲ್ಲಿ, ಕಾಯಿಲೆಯ ಮೂಲಕ್ಕೆ ಮದ್ದು ಕೊಡದೆ ಇನ್ನೆಲ್ಲೋ ಕ್ರಮ ತೆಗೆದುಕೊಳ್ಳುವುದರಿಂದ ಕಾಯಿಲೆ ವಾಸಿ ಆಗುವುದಿಲ್ಲ. ಬದಲಿಗೆ ಇನ್ನಷ್ಟು ಉಲ್ಬಣವಾಗುತ್ತದೆ. ಹೆಣ್ಣನ್ನು ಭೋಗದ ವಸ್ತುವನ್ನಾಗಿ ನೋಡದೆ, ಆಕೆಯನ್ನು ಮನುಷ್ಯಳಂತೆ ಗೌರವಪೂರ್ವಕವಾಗಿ ನೋಡುವ ದೃಷ್ಟಿಕೋನ ಬೆಳೆಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವತ್ತ ಯೋಚಿಸಬೇಕಿದೆ.

ಎ.ಜೆ.ಜಾವೀದ್, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

• ರಾಜೇಂದ್ರ ಚೆನ್ನಿ

ಸಂಘರ್ಷ, ವಿರೋಧಾಭಾಸಗಳ ನಡುವೆಯೂ ಗಣನೀಯ ಸಾಧನೆ

ಶಿಕ್ಷಣ ವ್ಯವಸ್ಥೆ: ರಾಜ್ಯದಲ್ಲಿ ಅತಿ ಹೆಚ್ಚು ಖಾಸಗೀಕರಣ; ಈಡೇರದ ಸಂವಿಧಾನ, ಸಮಾನತೆ, ಸಾಮಾಜಿಕ ನ್ಯಾಯದ ಆಶಯ

ಕರ್ನಾಟಕದಲ್ಲಿ ಶಿಕ್ಷಣ ವ್ಯವಸ್ಥೆಯು ಸಂಘರ್ಷದ ನೆಲೆಯಾಗಿಯೇ ಬೆಳೆದಿದ್ದರೂ ಗಣನೀಯವಾದ ಸಾಧನೆಯನ್ನು ಮಾಡಿದೆ. ಅನೇಕ ಸಂಸ್ಥೆಗಳು, ದೇಶದ ಏಕಮೇವ ಸಂಸ್ಥೆಗಳು ಇಲ್ಲಿ ನೆಲೆಗೊಂಡು ಉನ್ನತವಾಗಿ ಬೆಳೆದಿವೆ. ಉದಾಹರಣೆಗೆ ಐಐಎಸ್‌ಸಿ, ಐಐಎಂ ಇತ್ಯಾದಿ. ಇವುಗಳ ಪ್ರಗತಿಯಲ್ಲಿ ಕರ್ನಾಟಕದ ಪಾಲುಗಾರಿಕೆ ದೊಡ್ಡದು. ಆಶಾದಾಯಕ ವಿದ್ಯಮಾನವೆಂದರೆ, ಇಂದಿನ ತಲೆಮಾರಿನ ಅನೇಕರು ಶಿಕ್ಷಣದ ಪಡಿಯಚ್ಚುಗಳಿಂದ ಮುಕ್ತವಾಗಿ ಕನ್ನಡದ ಮೂಲಕವೇ ಹೊಸ ಕಲಿಕೆಯ ಸೃಜನಶೀಲ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇವು ಸರ್ಕಾರದ ಅಧಿಕೃತ ಶಿಕ್ಷಣ ನೀತಿಯ ಭಾಗವಾಗಬೇಕಿದೆ



1956ರ ಏಕೀಕರಣದ ನಂತರ 29 ಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡದ ಪ್ರಾಂತ್ಯಗಳ ಒಂದುಗೂಡಿ ಕರ್ನಾಟಕವು ಭಾರತ ರಾಷ್ಟ್ರದ ಭಾಷಾವಾರು ರಾಜ್ಯವೊಂದಾಗಿ ಅಸ್ತಿತ್ವವನ್ನು ಪಡೆದುಕೊಂಡಿತು. ಈ ಹಿಂದೆ ಎರಡು ಬ್ರಿಟಿಷ್ ಪ್ರೆಸಿಡೆನ್ಸಿಗಳು, ಮೈಸೂರು ಸಂಸ್ಥಾನ ಮತ್ತು ಅನೇಕ ಸಂಸ್ಥಾನಗಳಲ್ಲಿ ವಿವಿಧ ಮಾದರಿಯ ಶಿಕ್ಷಣ ವ್ಯವಸ್ಥೆಗಳಿದ್ದವು. ಅವುಗಳಲ್ಲಿ ಏಕರೂಪತೆಯನ್ನು ತರಲು ಒಂದು ದಶಕವೇ ಬೇಕಾಯಿತು. ಅಲ್ಲದೇ, ಆಗ ರಾಷ್ಟ್ರೀಯ ಶಿಕ್ಷಣ ನೀತಿಯ ಚೌಕಟ್ಟುಗಳಲ್ಲಿ ಆಗಿದ್ದ ಮುಖ್ಯ ಬದಲಾವಣೆಗಳನ್ನು ಅಳವಡಿಸುವ ಕೆಲಸವೂ ಆಗಬೇಕಾಗಿತ್ತು.

1960ರ ದಶಕದ ಕೊನೆಗೆ ರಾಜ್ಯದ ಶಿಕ್ಷಣ ವ್ಯವಸ್ಥೆಯು ಬಹುಮಟ್ಟಿಗೆ ಒಂದು ಕೇಂದ್ರೀಕೃತವಾದ ವ್ಯವಸ್ಥೆಯ ಅಡಿಯಲ್ಲಿ ಬಂದಿತು. ಬ್ರಿಟಿಷ್ ವಸಾಹತುಶಾಹಿ ಕಾಲದಿಂದ ಈ ಪ್ರದೇಶದಲ್ಲಿ ಶಿಕ್ಷಣದಲ್ಲಾದ ಬದಲಾವಣೆಗಳಿಂದಾಗಿ ಆಧುನಿಕ ಶಿಕ್ಷಣವು ಅಭಿಪ್ರಾಯವನ್ನು ಮತ್ತು ತನ್ನದೇ ಆದ ಚಹರೆಯನ್ನು ಪಡೆಯತೊಡಗಿತ್ತು. ಇದರ ವಾರಸುದಾರಿಕೆ ವಿವಿಧ ರೀತಿಯಲ್ಲಿ ತನ್ನ ಪ್ರಭಾವವನ್ನು ಬೀರಿತು. ಉಚ್ಚ ಜಾತಿಯ ಪ್ರತಿಷ್ಠಿತ ವರ್ಗವು ಆಧುನಿಕ ಶಿಕ್ಷಣದ ಪ್ರಯೋಜನವನ್ನು ಪಡೆದುಕೊಂಡು ಉದ್ಯೋಗದ ಅವಕಾಶಗಳನ್ನು, ಸಾಂಸ್ಕೃತಿಕ ಅಧಿಕಾರವನ್ನು ಪಡೆದಿತ್ತು. 1970ರ ದಶಕದ ನಂತರವೂ ಇದು ಮುಂದುವರಿದಿದೆ.

ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕಡ್ಡಾಯವಾಗಿ ಸಮಾಜದ ಎಲ್ಲಾ ವರ್ಗಗಳಿಗೂ ನೀಡಬೇಕೆನ್ನುವ ಸಂವಿಧಾನದ ಅಪೇಕ್ಷೆಯು ಈಡೇರದಿದ್ದರೂ ಸಾಕ್ಷರತೆಯಲ್ಲಿ ಆಗಿರುವ ಸತತವಾದ ಏರಿಕೆಯಿಂದ ದೀರ್ಘಕಾಲೀನ ಪರಿಣಾಮಗಳು ಉಂಟಾದವು. ಹಿಂದುಳಿದ ವರ್ಗಗಳು ಪ್ರಬಲ ಶೂದ್ರ ಜಾತಿಗಳು ಸಾಕ್ಷರತೆ, ಶಿಕ್ಷಣದಿಂದಾಗಿ ಹೊಸ ಪ್ರಜ್ಞೆಯನ್ನು ಬೆಳೆಸಿಕೊಂಡವು. ಅಲ್ಲದೇ ಇದರಿಂದಾಗಿ ನಗರೀಕರಣ, ಆಧುನಿಕತೆಗೆ ಪ್ರವೇಶ ಇವುಗಳಿಗೆ ಸಾಧ್ಯವಾದವು. ಅನೇಕ ವಿದ್ವಾಂಸರ ಪ್ರಕಾರ, ಈ ಚಲನೆಗಳ ಒಟ್ಟು ಪರಿಣಾಮವೆಂದರೆ ಎರಡು ಪ್ರಬಲ ಜಾತಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಾಬಲ್ಯ ಪಡೆದುಕೊಂಡವು. ಶಿಕ್ಷಣವು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಅಸ್ತ್ರವಾಗಬೇಕೆನ್ನುವ ಆಶಯವು ಈಡೇರಲಿಲ್ಲ. ಹೀಗಾಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆಯಲ್ಲಿ ಅಪಾರವಾದ ಹೆಚ್ಚಳ, ಗ್ರಾಮೀಣ ಪ್ರದೇಶದಲ್ಲಿಯೂ ಪ್ರಾಥಮಿಕ ಹಾಗೂ ಹೈಸ್ಕೂಲು ಶಿಕ್ಷಣದ ಲಭ್ಯತೆ, ಎಷ್ಟೇ ದುರ್ಬಲವಾದರೂ ಕನಿಷ್ಠ ಮೂಲಸೌಕರ್ಯ ಇರುವ ಶಾಲೆಗಳು, ಸರ್ಕಾರಿ ಕಾಲೇಜುಗಳು, ಸರ್ಕಾರಿ ವಿಶ್ವವಿದ್ಯಾಲಯಗಳು ಇವುಗಳ ನಿರ್ಮಾಣ ಸಾಮಾನ್ಯ ವಿಷಯವೇನಲ್ಲ. ಕನಿಷ್ಠ ಪಕ್ಷ ಶೇಕಡ 50 ಸೂಕ್ತ ವಯೋಮಾನದ ಮಕ್ಕಳು, ಯುವಜನರು ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಹೊಂದಿರಬೇಕೆನ್ನುವುದು ಈಗಲೂ ಆದರ್ಶವಾಗಿಯೇ ಉಳಿದಿದೆ. ಆದರೆ, ಸಾವಿರಾರು ವರ್ಷಗಳವರೆಗೆ ಅಕ್ಷರಜ್ಞಾನದಿಂದಲೂ ವಂಚಿತರಾದ ವರ್ಗಗಳಿಗೆ ಉನ್ನತ ಶಿಕ್ಷಣವು ದೊರೆಯುವಂತಾಗಿರುವುದು ಇತ್ಯಾತ್ಮಕವೇ ಆಗಿದೆ. ಆದರೂ ವಾಸ್ತವವೆಂದರೆ ಹೋರಾಟ, ಜನಚಳವಳಿಗಳು ಇವುಗಳ ಬೆಂಬಲವಿಲ್ಲದೆ ಮತ್ತು ರಾಜಕೀಯ ಶಕ್ತಿಯಿಲ್ಲದೆ ಕರ್ನಾಟಕದ ಶಿಕ್ಷಣ ವ್ಯವಸ್ಥೆಯು ಅಸಮಾನತೆಯ ವ್ಯವಸ್ಥೆಯಾಗಿಯೇ ಉಳಿಯುತ್ತದೆ.

ಸ್ತ್ರೀ ಶಿಕ್ಷಣ ಹಿಂದಕ್ಕೆ ತಳ್ಳುವ ಪ್ರಯತ್ನ ಒಪ್ಪಲಾಗದು

ರಾಜ್ಯದ ಶಿಕ್ಷಣ ವ್ಯವಸ್ಥೆಯ ಮುಖ್ಯ ಸಾಧನೆಯೆಂದರೆ ಸಂಪ್ರದಾಯವಾದಿ ಶಕ್ತಿಗಳ ವಿರೋಧದ ನಡುವೆಯೂ ವಿದ್ಯಾರ್ಥಿನಿಯರು, ಮಹಿಳೆಯರು ಇಂದು ಶಿಕ್ಷಣದ ಬಹುಸಂಖ್ಯಾತ ಫಲಾನುಭವಿಗಳಾಗಿರುತ್ತಿರುವುದು. ಭಾರತದಲ್ಲಿ ಸ್ತ್ರೀ ಶಿಕ್ಷಣದ ಚರಿತ್ರೆಯೇ ಅತ್ಯಂತ ಕುತೂಹಲಕಾರಿಯಾಗಿದೆ. ಸಾವಿತ್ರಿಬಾಯಿ ಫುಲೆ, ಪಂಡಿತಾ ರಮಾಬಾಯಿ ಅವರು ಆರಂಭಿಸಿದ ಚಳವಳಿಯು ತಂದ ಹೊಸ ಚಿಂತನೆಯು ನೇರ ಪ್ರಭಾವವಿಲ್ಲದೆಯೂ ಮೈಸೂರು ಸಂಸ್ಥಾನದಲ್ಲಿ ಅಂಬಳೆ ನರಸಿಂಹ ಅಯ್ಯಂಗಾರ್ ಹಾಗೂ ರಾಮಮಾನವಾನ ಬೆಂಬಲದಿಂದಾಗಿ ಸ್ತ್ರೀ ಶಿಕ್ಷಣ ರಾಜ್ಯದಲ್ಲಿ ಆರಂಭವಾಯಿತು. ಬ್ರಿಟಿಷ್ ಆಳ್ವಿಕೆಯು ಇದಕ್ಕೆ ಸ್ವಲ್ಪಮಟ್ಟಿಗೆ ಪೂರಕವಾಗಿತ್ತು. ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ಮಹಿಳಾ ವಿರೋಧಿಯಾದ ಬಲಪಂಥೀಯ ರಾಜಕೀಯ ಹಾಗೂ ಅದರ ಪರಿವಾರದ ಸಂಸ್ಥೆಗಳು ಸ್ತ್ರೀ ಶಿಕ್ಷಣವನ್ನು ಒಂದು ನೂರು ವರ್ಷ ಹಿಂದಕ್ಕೆ ತಳ್ಳಲು ಪ್ರಯತ್ನಿಸುತ್ತಿವೆ. ಅವುಗಳ ಮೂಲ ಬುನಾದಿಯೇ ಸ್ತ್ರೀದ್ವೇಷವಾಗಿದೆ. ಅವುಗಳ ಒತ್ತಡದಲ್ಲಿ ಸರ್ಕಾರವು ಖಚಿತವಾದ ನೀತಿಯಾಗಲೀ ಇಲ್ಲದೇ ಸೈದ್ಧಾಂತಿಕ ಬಲವೇ ಇಲ್ಲದೇ ಹೋರಾಟ ಮಾಡಲಾರದು. ಹೀಗಾಗಿ, ಈ ವಿಷಯದಲ್ಲಿ ಈವರೆಗೆ ಆಗಿರುವ ಪ್ರಗತಿಯನ್ನು ಹಿಂದಕ್ಕೆ ತಳ್ಳುವ ಯಾವುದೇ ಕ್ರಮವನ್ನು ಒಪ್ಪಬಾರದು. ಸಾಂಸ್ಕೃತಿಕವಾಗಿ ಈ ಕನ್ನಡ ಸಂಸ್ಕೃತಿಯಲ್ಲಿ ಮಹಿಳೆಯರೇ ಮುಂಚೂಣಿಯಲ್ಲಿರುವುದು ಸೂಕ್ತವಾಗಿದೆ. ಅಂಗನವಾಡಿ ಕಾರ್ಯಕರ್ತೆಯರ ಹೋರಾಟವನ್ನು ರೂಪಿಸುತ್ತಿರುವ ಮಹಿಳೆಯರು ಚಿಂತಕರೂ ಆಗಿದ್ದಾರೆ. ಇದನ್ನು ಗಟ್ಟಿಯಾಗಿ ಹೇಳಲು ಕಾರಣವೆಂದರೆ, ಸ್ತ್ರೀಪರವಾದ ಶಿಕ್ಷಣ ನೀತಿಗಳನ್ನು ಧಿಕ್ಕರಿಸಲು ಪ್ರಯತ್ನಿಸಿದ ಕರ್ನಾಟಕದ ಬಲಪಂಥೀಯ ರಾಜಕೀಯ ಹಾಗೂ ಈ ರಾಜಕೀಯವನ್ನು ಬೆಂಬಲಿಸಿದ ಪಕ್ಷಗಳು ಸುಪ್ರೀಂ ಕೋರ್ಟ್‌ನಿಂದ ಸರಿಯಾದ ತಪರಾಕಿ ಪಡೆದಿವೆ. ಆದರೆ, ಈ ರಾಜಕೀಯದ ಹಿಂದೆ ಗಂಡಾಳ್ವಿಕೆ, ಪುರುಷ ಪ್ರಾಧಾನ್ಯದ ಬಹು ಅಪಾಯಕಾರಿ ಸುಳಿಗಳಿವೆ. ರಾಜ್ಯಮಟ್ಟದಲ್ಲಿ ನ್ಯಾಯಾಂಗವು ಶಿಕ್ಷಣ ವ್ಯವಸ್ಥೆಯ ಮೂಲ ಸಾಂವಿಧಾನಿಕ ಆಶಯಗಳನ್ನು ಸಮರ್ಥಿಸುತ್ತಿಲ್ಲ ಎನ್ನುವುದು ಆತಂಕದ ವಿಷಯವಾಗಿದೆ.

ಕರ್ನಾಟಕ ಚಿನ್ನದ ಹೊಳಪು

ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶವು ಕರ್ನಾಟಕದಲ್ಲಿ ಸಾಮಾನ್ಯ ಪರೀಕ್ಷೆ (ಸಿಇಟಿ) ಮೂಲಕ ಆರಂಭವಾದದ್ದು ಶಿಕ್ಷಿತ ಮಧ್ಯಮ ವರ್ಗದ ಕುಟುಂಬಗಳಿಗೆ ಅಪಾರವಾದ ಅವಕಾಶಗಳನ್ನು ತಂದಿತು. ಸಂಪೂರ್ಣ ಖಾಸಗೀಕರಣವಾಗಬಹುದಾಗಿದ್ದ ಕ್ಷೇತ್ರದಲ್ಲಿ ಪ್ರವೇಶ ದೊರೆಯಿತು. ಹೀಗಾಗಿ ಮುಂದೆ ಉದಾರೀಕರಣ, ಜಾಗತೀಕರಣದ ವಿದ್ಯಮಾನಗಳಿಂದ ಬದಲಾದ ಸಂದರ್ಭದಲ್ಲಿ ಅದಕ್ಕೆ ಬೇಕಾದ ಕೌಶಲ, ಸಿದ್ಧತೆ ಇರುವ ಯುವ ವರ್ಗವು ಸನ್ನದ್ಧವಾಯಿತು. ಇಂದು ಅತ್ಯಂತ ಪ್ರಭಾವಿಯಾದ ಭಾರತೀಯ ಮಧ್ಯಮ ವರ್ಗವು ವಿಸ್ತಾರಗೊಂಡಿತು. ದುರಂತವೆಂದರೆ, ತಮ್ಮ ಹತೋಟಿಯಲ್ಲಿದ್ದ ವೈದ್ಯಕೀಯ, ತಾಂತ್ರಿಕ ಶಿಕ್ಷಣದಲ್ಲಿನ ಈ ಬದಲಾವಣೆಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ದುರ್ಬಲಗೊಳಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಲೇ ಬಂದಿವೆ. ಹಾಗೂ ಈ ವರ್ಗದ ನೇತಾರರು ಕರ್ನಾಟಕದಲ್ಲಿ ಪಕ್ಷಾತೀತವಾಗಿ ರಾಜಕೀಯ ವ್ಯಕ್ತಿಗಳೇ ಆಗಿದ್ದಾರೆ. ಹೀಗಾಗಿ ದೇಶದ ಶಿಕ್ಷಣದ ಮುನ್ನೆಲೆಯ ರಾಜ್ಯವೆಂದು ಈಗಲೂ ಹೆಸರಾಗಿರುವ ಕರ್ನಾಟಕವು ಶಿಕ್ಷಣ ಕ್ಷೇತ್ರದಲ್ಲಿ ಅತಿ ಹೆಚ್ಚು ಖಾಸಗೀಕರಣಗೊಂಡ ರಾಜ್ಯವೂ ಆಗಿದೆ.

ಇದರ ಇನ್ನೊಂದು ಪರಿಣಾಮವೆಂದರೆ, ರಾಜ್ಯದಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಶ್ರೇಷ್ಠ ಉನ್ನತ ಶಿಕ್ಷಣ ಸಂಸ್ಥೆಗಳು ರಾಜ್ಯದಲ್ಲಿ ಇವೆಯೇ ಹೊರತು ರಾಜ್ಯದ ವಿದ್ಯಾರ್ಥಿಗಳು ಅವುಗಳಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಒಂದು ಕಡೆಗೆ ದುರ್ಬಲ ವರ್ಗಗಳಿಗೆ ಮೀಸಲಾತಿ, ಆರ್ಥಿಕ ನೆರವು, ಶಿಷ್ಯವೇತನ ಇವುಗಳನ್ನು ನೀಡಬೇಕೆನ್ನುವ ನೀತಿಗಳು ಇರುವುದರ ಜೊತೆಗೆ ಶಿಕ್ಷಣವನ್ನು ಜಾಗತಿಕ ಮಾರುಕಟ್ಟೆಯ ಸರಕನ್ನಾಗಿಸುವ ಯಶಸ್ವಿ ಪ್ರಯತ್ನಗಳು ಕರ್ನಾಟಕದ ಕೊಡುಗೆಗಳಾಗಿವೆ. ಈ ವಿರೋಧಾಭಾಸದ ನಡುವೆ ನಾವು ಇದ್ದೇವೆ. ಇದೇ ವಿದ್ಯಮಾನಗಳ ಪರಿಣಾಮವಾಗಿ ಕನ್ನಡ ಮಾಧ್ಯಮದಿಂದ ಇಂಗ್ಲಿಷ್ ಮಾಧ್ಯಮದ ಕಡೆಗೆ ಪಾಲಕರ ಮತ್ತು ವಿದ್ಯಾರ್ಥಿಗಳ ಒಲವು ಗಂಭೀರ ಪ್ರಮಾಣದಲ್ಲಿ ಜಾಸ್ತಿಯಾಗಿದೆ. ಈ ಬಿಕ್ಕಟ್ಟಿಗೆ ಸರಳವಾದ ಪರಿಹಾರಗಳಿಲ್ಲ. ಹಾಗೆಯೇ ಮಾನವಿಕ ವಿಷಯಗಳು ಮತ್ತು ಸಾಮಾಜಿಕ ವಿಜ್ಞಾನ ವಿಷಯಗಳು ಅನುತ್ಪಾದಕವೆನ್ನುವ ನಂಬಿಕೆ ಬಲವಾಗಿ ಬೇರೂರಿದ್ದರಿಂದ ಉನ್ನತ ಶಿಕ್ಷಣದಲ್ಲಿ ಏರುಪೇರಾಗಿದೆ. ಜ್ಞಾನಶಿಸ್ತುಗಳಲ್ಲಿಯೂ ಅಸಮಾನತೆಯು ಗಂಭೀರ ಸಮಸ್ಯೆಯಾಗಿದೆ. ಸಮಗ್ರ ಶಿಕ್ಷಣ, ವ್ಯಕ್ತಿತ್ವ ವಿಕಸನದ ಬದಲು ಜಾಗತಿಕ ಬಂಡವಾಳದ ಬೇಡಿಕೆಗಳನ್ನು ಪೂರೈಸುವುದೇ ಶಿಕ್ಷಣ ವ್ಯವಸ್ಥೆಯ ಉದ್ದೇಶವಾಗಿ ಬಿಟ್ಟಿದೆ. ವಿಸ್ತರಣೆ ಹಾಗೂ ಗುಣಮಟ್ಟದಲ್ಲಿ ಸುಧಾರಣೆ ಮತ್ತು ಸಾಮಾಜಿಕ ಮೌಲ್ಯದ ದೃಷ್ಟಿಯಿಂದ ಸಂಕುಚಿತತೆಗಳು ಏಕಕಾಲಕ್ಕೆ ಶಿಕ್ಷಣ ವ್ಯವಸ್ಥೆಯ ವಾಸ್ತವಗಳಾಗಿವೆ.

ಯಾವುದೇ ಮರುಹಂಬಲವಿಲ್ಲದೆ ಹೊರಳಿ ನೋಡಿದರೆ ಕರ್ನಾಟಕದಲ್ಲಿ ಶಿಕ್ಷಣ ವ್ಯವಸ್ಥೆಯು ಸಂಘರ್ಷದ ನೆಲೆಯಾಗಿಯೇ ಬೆಳೆದಿದ್ದರೂ ಗಣನೀಯವಾದ ಸಾಧನೆಯನ್ನು ಮಾಡಿದ್ದು ಕಾಣುತ್ತದೆ. ಅನೇಕ ಸಂಸ್ಥೆಗಳು, ದೇಶದ ಏಕಮೇವ ಸಂಸ್ಥೆಗಳು ಇಲ್ಲಿ ನೆಲೆಗೊಂಡು ಉನ್ನತವಾಗಿ ಬೆಳೆದಿವೆ. ಉದಾಹರಣೆಗೆ ಐಐಎಸ್‌ಸಿ, ಐಐಎಂ ಇತ್ಯಾದಿ. ಇವುಗಳ ಪ್ರಗತಿಯಲ್ಲಿ ಕರ್ನಾಟಕದ ಪಾಲುಗಾರಿಕೆ ದೊಡ್ಡದು. ರಾಜ್ಯದ ವಿಶ್ವವಿದ್ಯಾಲಯಗಳು ಜಾಗತಿಕ ಮಟ್ಟದ ವಿದ್ವಾಂಸರನ್ನು, ಸಂಶೋಧಕರನ್ನು ಒಂದು ಕಾಲದಲ್ಲಿ ಸೃಷ್ಟಿಸಿದವು. ಕನ್ನಡದ ಬಹುಪಾಲು ಆತ್ಮಕತೆಗಳು ಶಿಕ್ಷಣದಿಂದಾಗಿ ಬದುಕು ಪರಿವರ್ತನೆಗೊಂಡುದರ ನಿರೂಪಣೆಗಳಾಗಿವೆ. ಅನೇಕ ತಲೆಮಾರುಗಳಿಗೆ ದಂತಕತೆಗಳಾಗಿರುವ ಶ್ರೇಷ್ಠ ಶಿಕ್ಷಕರ ಪರಂಪರೆ ಇದೆ. ಇಷ್ಟೇ ಮುಖ್ಯವೆಂದರೆ 70, 80ರ ದಶಕಗಳಿಂದ ಹುಟ್ಟಿಕೊಂಡ ಜನಪರ ಚಳವಳಿಗಳಿಗೆ ಶಿಕ್ಷಣ ಸಂಸ್ಥೆಗಳು ಚಳವಳಿಗಾರರನ್ನು ನೀಡಿವೆ. ಅಲ್ಲದೆ ಈ ಚಳವಳಿಗಳ ಉಗಮ ಸ್ಥಾನಗಳೂ ಆಗಿವೆ.

ವಿದ್ವಾಂಸರು ಒಪ್ಪದೇ ಇದ್ದರೂ ಕರ್ನಾಟಕದ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆಗೂ ಸಾಮಾಜಿಕ, ಸಾಂಸ್ಕೃತಿಕ ಚಳವಳಿಗಳಿಗೂ ಅವಿನಾ ಸಂಬಂಧವಿದೆ. ಲಂಕೇಶ್, ಅನಂತಮೂರ್ತಿ, ಎಂ.ಡಿ.ನಂಜುಂಡಸ್ವಾಮಿ ಇವರೆಲ್ಲ ಶಿಕ್ಷಣ ವ್ಯವಸ್ಥೆಯ ಭಾಗವೇ ಆಗಿದ್ದರು. ದಲಿತ ಕವಿ ಸಿದ್ಧಲಿಂಗಯ್ಯ ಮತ್ತು ಡಿ.ಎಸ್.ಎಸ್. ಸಂಸ್ಥಾಪಕರಲ್ಲಿ ಒಬ್ಬರಾದ ಬಿ.ಕೃಷ್ಣಪ್ಪ ಕೂಡ ಈ ವ್ಯವಸ್ಥೆಯ ಭಾಗವೇ ಆಗಿದ್ದರು; ಬಹುಮುಖ್ಯವಾಗಿ ಕುವೆಂಪು ಕೂಡ. ನನ್ನ ದೃಷ್ಟಿಯಲ್ಲಿ ತಮ್ಮ ಚಿಂತನೆಗಳಿಂದ ರಾಜ್ಯದ ಶಿಕ್ಷಣ ನೀತಿಗಳ ಮೇಲೆ ಅತ್ಯಂತ ಆಳವಾದ ಪ್ರಭಾವ ಬೀರಿದವರು ಕುವೆಂಪು ಅವರೇ. ಶಿವರಾಮ ಕಾರಂತರು ಪರ್ಯಾಯ ಶಿಕ್ಷಣ ಕಲಿಕೆಗಳಲ್ಲಿ ಮಾಡಿದ ಪ್ರಯೋಗಗಳು ಅತ್ಯಂತ ಸೃಜನಶೀಲವಾಗಿವೆ.

ಶಿಕ್ಷಣ ವ್ಯವಸ್ಥೆಯು ಜಡವಾದ ಅಧಿಕಾರಶಾಹಿ ವ್ಯವಸ್ಥೆಯಾಗಿ ರಾಜ್ಯದಲ್ಲಿ ಬೆಳೆಯದೆ ಇದ್ದಿದ್ದರೆ ಇವು ನಮ್ಮ ರಾಜ್ಯದ ಶಿಕ್ಷಣ ನೀತಿಯ ಅವಿಭಾಜ್ಯ ಅಂಗಗಳಾಗಿರುತ್ತಿದ್ದವು. ಆಶಾದಾಯಕ ವಿದ್ಯಮಾನವೆಂದರೆ, ಇಂದಿನ ತಲೆಮಾರಿನ ಅನೇಕರು ಶಿಕ್ಷಣದ ಪಡಿಯಚ್ಚುಗಳಿಂದ ಮುಕ್ತವಾಗಿ ಕನ್ನಡದ ಮೂಲಕವೇ ಹೊಸ ಕಲಿಕೆಯ ಸೃಜನಶೀಲ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇವು ಸರ್ಕಾರದ ಅಧಿಕೃತ ಶಿಕ್ಷಣ ನೀತಿಯ ಭಾಗವಾಗಬೇಕಿದೆ. ಶಿಕ್ಷಣವು ಮೂಲಭೂತವಾಗಿ ಸಮಾಜದ ಹಾಸು-ಹೊಕ್ಕು ಆಗಿರುತ್ತದೆ. ಅದರ ಸಾಂಸ್ಥೀಕರಣವು ಮುಖ್ಯವಲ್ಲ. ಇದನ್ನು ಇಂದಿನ ಸರ್ಕಾರವು ಅರ್ಥಮಾಡಿಕೊಳ್ಳಬೇಕು. ಜಗತ್ತಿನಾದ್ಯಂತ ಶಿಕ್ಷಣ ವ್ಯವಸ್ಥೆಯ ಕುರಿತು ಬಹುಮುಖ್ಯ ಒಳನೋಟಗಳು ಆ ವ್ಯವಸ್ಥೆಯ ಆಚೆಯಿಂದಲೇ ಬಂದಿವೆ. ಉದಾಹರಣೆಗೆ ಬುದ್ಧ, ಗಾಂಧಿ, ಪಾವ್ಲೋಲೋ ಫ್ರೇರೆ (Paulo Freire) ಇವರಿಂದ; ಮುಖ್ಯವಾಗಿ ಅಂಬೇಡ್ಕರ್ ಅವರಿಂದ, ಅವರ ಗುರುಗಳಾದ ಜಾನ್ ಡೇವೇ ಅವರಿಂದ.

ಕೊನೆಯದಾಗಿ, ಶಿಕ್ಷಣ ಹಾಗೂ ಉದ್ಯೋಗಗಳ ಬಗ್ಗೆ ಇರುವ ಗೊಂದಲಗಳ ಬಗ್ಗೆ; ಕೆಲವು ದಶಕಗಳಿಂದ ಶಿಕ್ಷಣದ ಸಮರ್ಥನೆಯಿರುವುದು ಅದು ಇಂದಿನ ಉದ್ಯೋಗಗಳಿಗೆ ಅವಶ್ಯಕವಾದ ಕೌಶಲಗಳನ್ನು ಕಲಿಸಿಕೊಡುತ್ತದೆ ಎನ್ನುವುದರಲ್ಲಿ. ಯಾವ ಉದ್ಯೋಗಗಳು ಲಭ್ಯವಿವೆ, ಅವು ನಿರ್ದಿಷ್ಟವಾಗಿ ಏನನ್ನು ಬಯಸುತ್ತವೆ ಎನ್ನುವುದರಿಂದ ಈ ಚರ್ಚೆ ಆರಂಭವಾಗಬೇಕು. ಅದರ ಬದಲಾಗಿ, ಈಗ ಶಿಕ್ಷಣ ವ್ಯವಸ್ಥೆಯು ತಾನೇ ಈ ತೀರ್ಮಾನಗಳನ್ನು ಮಾಡಿ ಕಲಿಕೆಯ ಮಾದರಿಗಳನ್ನು ಸೃಷ್ಟಿಸುತ್ತಿದೆ. ತಾರ್ಕಿಕವಾಗಿ ಶಿಕ್ಷಣದಲ್ಲಿ ಉದ್ಯೋಗಕ್ಕೆ ಬೇಕಾದ ಬದಲಾವಣೆಗಳನ್ನು ತರುವುದಾದರೆ ಈ ಉದ್ಯೋಗಗಳು ಯಾವುವು ಎನ್ನುವುದರ ನಿಖರವಾದ ಮಾಹಿತಿ ಬೇಕಿದೆ. ಏಕೆಂದರೆ, ಈ ಬಗೆಯ ವ್ಯಾಖ್ಯಾನಗಳನ್ನು ನಂಬಿ ಶಿಕ್ಷಣ ಸಂಬಂಧಿ ಆಯ್ಕೆಗಳನ್ನು ಮಾಡಿದ ಲಕ್ಷಾಂತರ ಯುವಜನರು ಯಾಕೆ ಇಂದು ನಿರುದ್ಯೋಗಿಗಳಾಗಿದ್ದಾರೆ? ಯಾಕೆ ಇಂದಿಗೂ ಒಂದು ಕಾಲದಲ್ಲಿ ಅತ್ಯಂತ ಕೀಳು ಅಥವಾ ಕಳಂಕಿತವೆನ್ನುತ್ತಿದ್ದ ನೌಕರಿಗಳಿಗೆ ಪಿಎಚ್.ಡಿ. ಮಾಡಿದ ಸಾವಿರಾರು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಿದ್ದಾರೆ. ಈ ಭ್ರಮಾತ್ಮಕ ಸಂದರ್ಭದಲ್ಲಿ ಬಲಿಪಶುಗಳಾಗುತ್ತಿರುವ ಯುವ ಜನರ ಬಗ್ಗೆ ನಾನು ಆತಂಕಿತನಾಗಿದ್ದೇನೆ.

ಲೇಖಕ: ನಿವೃತ್ತ ಪ್ರಾಧ್ಯಾಪಕ, ವಿಮರ್ಶಕ



ಕನ್ನಡದ ಹೆಮ್ಮೆ

ದೇವರಾಜ ಅರಸು



(ಆ.20, 1915– ಜೂ.06, 1982)

ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಸಾಮಾಜಿಕ ಕ್ರಾಂತಿಯ ಬೀಜ ಬಿತ್ತಿ, ಅದರ ಫಸಲನ್ನು ತಳ ಸಮುದಾಯದವರಿಗೆ ತಲುಪಿಸಿದ ಕೀರ್ತಿವಂತ ಡಿ. ದೇವರಾಜ ಅರಸು. ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯ 'ಅರಸು' ನಾಡಿನ ಹಿಂದುಳಿದವರು, ದಲಿತರ ಪಾಲಿಗೆ ನಿಜವಾದ 'ಅರಸ'. ನಾಡಿಗೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ಹೆಗ್ಗಳಿಕೆಯೂ ಇವರದ್ದು. ಅಲ್ಲಿಯವರೆಗೂ ಹೆಸರನ್ನೇ ಕೇಳದಿದ್ದ ಅಲಕ್ಷಿತ ಸಮುದಾಯಗಳಲ್ಲಿನ ನಾಯಕತ್ವ ಗುಣ ಹೊಂದಿದವರನ್ನು ಗುರುತಿಸಿ, ಅವರನ್ನು ರಾಜಕಾರಣದ ಮುನ್ನೆಲೆಗೆ ತಂದವರು. ಪ್ರಬಲ ಜಾತಿಗಳವರೇ ಮೆರೆದಾಡುತ್ತಿದ್ದ ರಾಜಕೀಯ ಆಡುಂಬೊಲದಲ್ಲಿ ಅವಕಾಶ ವಂಚಿತರನ್ನು ಕರೆತಂದು, ಕರ್ನಾಟಕದ ಮಟ್ಟಿಗೆ ದೊಡ್ಡ ಮಟ್ಟದ ಸುಧಾರಣೆಗೆ ಕಾರಣರಾದವರು.

'ಉಳುವವನೇ ಹೊಲದೊಡೆಯ' ಆಶಯದ ಭೂಸುಧಾರಣೆ ಕಾಯ್ದೆ, ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಲು ಲಕ್ಷ್ಮಣ ಜಿ. ಹಾವನೂರು ಆಯೋಗ ರಚನೆ ಮತ್ತು ಅದರ ಶಿಫಾರಸುಗಳ ಅನುಷ್ಠಾನ, ಜೀತ ಪದ್ಧತಿ ನಿಷೇಧದಂತಹ ದಿಟ್ಟ ಕ್ರಮಗಳನ್ನು ಕೈಗೊಂಡು ಆದರ್ಶ ರಾಜಕಾರಣ ಹೇಗಿರಬೇಕೆಂದು ತೋರಿಸಿಕೊಟ್ಟವರು. ಹಿಂದುಳಿದವರು, ದಲಿತರು ಇಂದು ತಲೆ ಎತ್ತಿ ನಡೆಯುತ್ತಿದ್ದರೆ ಅದು ಅರಸರ ದೂರದೃಷ್ಟಿಯ ಫಲ.

ಗಂಗೂಬಾಯಿ ಹಾನಗಲ್

(ಮಾರ್ಚ್ 5, 1913 - ಜುಲೈ 21, 2009)

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಮೇರು ಕಲಾವಿದೆಯಾಗಿದ್ದ ವಿದುಷಿ ಗಂಗೂಬಾಯಿ ಹಾನಗಲ್ (ಗಂಗಜ್ಜಿ) ಅವರು ಉತ್ತರ ಭಾರತ ಹಾಗೂ ಕರ್ನಾಟಕದ ನಡುವೆ ಸಂಗೀತ ಸೇತುವೆಯಂತಿದ್ದರು. ಮಹಿಳೆಯರು ಹಾಡಲು, ನೃತ್ಯ ಮಾಡಲು ಮುಜುಗರ ಪಡುತ್ತಿದ್ದ ಕಾಲದಲ್ಲಿ ಗಂಗಜ್ಜಿ ದೇಶ ವಿದೇಶಗಳಲ್ಲಿ ಪ್ರವಾಸ ಮಾಡುತ್ತಿದ್ದರು. ಹಿಂದಿ, ಮರಾಠಿ, ಉರ್ದು ಹಾಡುಗಳನ್ನು ಹಾಡುತ್ತಿದ್ದರೂ ಅವರು ಕನ್ನಡವನ್ನೇ ಉಸಿರಾಡುತ್ತಿದ್ದರು. 1924ರಲ್ಲಿ ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿ ಅವರ ಮುಂದೆ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಗೀತೆಗೆ ಜೀವತುಂಬಿ ಹಾಡಿದ್ದ ಬಾಲಕಿ ಗಂಗೂಬಾಯಿ, ಅಲ್ಲಿ ಸೇರಿದ್ದವರನ್ನು ಬೆರಗುಗೊಳಿಸಿದ್ದರು. ಸಾಹಿತ್ಯವನ್ನೇ ಬಿತ್ತಿ ಬೆಳೆಯುವ ಧಾರವಾಡ ನೆಲದಲ್ಲಿ ಇದ್ದ ಕಾರಣಕ್ಕೆ ಗಂಗಜ್ಜಿ ಸಾಹಿತ್ಯ ಸಾಂಗತ್ಯವನ್ನು ಬೆಳೆಸಿಕೊಂಡಿದ್ದರು. ಪಾಟೀಲ ಪುಟ್ಟಪ್ಪ ಅವರ ಜೊತೆಗೂಡಿ ಸಾಹಿತ್ಯ ಸಂಬಂಧಿ ಚಟುವಟಿಕೆಗಳಲ್ಲಿ, ಗೋಕಾಕ್ ಚಳವಳಿಯಲ್ಲಿ ಪಾಲ್ಗೊಂಡಿದ್ದರು.




ಅಜೀಂ ಪ್ರೇಮ್‌ಜಿ

(ಜನನ: ಜುಲೈ 24, 1945)

ವಿಶ್ವದ ಸಾಫ್ಟ್‌ವೇರ್ ಉದ್ಯಮ ಕ್ಷೇತ್ರದ ನಕಾಶೆಯಲ್ಲಿ ಎದ್ದುಕಾಣುವ ಭಾರತದ ಪ್ರಮುಖ ಹೆಸರುಗಳಲ್ಲಿ ಅಜೀಂ ಪ್ರೇಮ್‌ಜಿ ಅವರದ್ದೂ ಒಂದು. ವಿಪ್ರೊ ಲಿಮಿಟೆಡ್ ಅಧ್ಯಕ್ಷರಾಗಿ ಅವರು ನಾಲ್ಕು ದಶಕಗಳಲ್ಲಿ ಮೂಡಿಸಿರುವ ಛಾಪಿನಲ್ಲಿ ಮಾನವೀಯ ಮೌಲ್ಯಗಳ ಕಥನಗಳು ಮಿಳಿತಗೊಂಡಿವೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ ಎಂಬ ಲಾಭರಹಿತ ಸಂಸ್ಥೆ ಸಮಾಜಕ್ಕೆ ದೊಡ್ಡ ಕಾಣಿಕೆ ಸಲ್ಲಿಸಿದೆ.

ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಪದವಿ ಕಲಿಯುತ್ತಿದ್ದಾಗ (1966) ಅಜೀಂ ಅವರ ತಂದೆ ಹಾಶಿಮ್ ಪ್ರೇಮ್‌ಜಿ ತೀರಿಕೊಂಡರು. ಅವರು ನಡೆಸುತ್ತಿದ್ದ 'ವೆಸ್ಟರ್ನ್ ಇಂಡಿಯನ್ ವೆಜಿಟೆಬಲ್ ಪ್ರಾಡಕ್ಟ್ಸ್ ಲಿಮಿಟೆಡ್' ಹೊಣೆಯನ್ನು ಆಗ ಅಜೀಂ ವಹಿಸಿಕೊಂಡರು. 1977ರಲ್ಲಿಯೇ ತಮ್ಮ ಕಂಪನಿಗೆ 'ವಿಪ್ರೊ' ಎಂದು ಮರುನಾಮಕರಣ ಮಾಡಿದರು. ವಿದೇಶಿ ಮಾರುಕಟ್ಟೆಯಲ್ಲಿ ಸಾಫ್ಟ್‌ವೇರ್ ಸೇವೆ ಒದಗಿಸಿ, ಕಂಪನಿಯನ್ನು ವಿಸ್ತರಿಸಿದರು. ಸೋಪು, ಬಲ್ಬ್ ಮತ್ತಿತರ ಉತ್ಪನ್ನಗಳ ತಯಾರಿಕೆಯಲ್ಲಿಯೂ ತೊಡಗಿಸಿಕೊಂಡರು.

2001ರಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ಸ್ಥಾಪಿತವಾಯಿತು. ದೇಶದ ಏಳು ರಾಜ್ಯಗಳ 3.5 ಲಕ್ಷಕ್ಕೂ ಹೆಚ್ಚಿನ ಪ್ರಾಥಮಿಕ ಶಾಲೆಗಳಲ್ಲಿ ಈ ಫೌಂಡೇಷನ್ ತಂತ್ರಜ್ಞಾನ ಆಧರಿತ ಶಿಕ್ಷಣವನ್ನು ಉಚಿತವಾಗಿ ಒದಗಿಸಲು ಸಹಾಯಹಸ್ತ ಚಾಚಿದೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕೂಡ ಸ್ಥಾಪಿತವಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಘನತೆವೆತ್ತ ಸಂಸ್ಥೆಯಾಗಿ ಗುರುತಾಗಿದೆ.




ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಳಿಕ ಡೊನಾಲ್ಡ್ ಟ್ರಂಪ್ ಅವರು ಭಾಷಣ ಮಾಡಿದ ಸಂದರ್ಭದಲ್ಲಿ ಅವರ ಬೆಂಬಲಿಗರು 'ಮೋದಿ... ಮೋದಿ...' ಎಂದು ಘೋಷಣೆ ಕೂಗಿದ್ದಾರೆ ಎಂದು ಹೇಳಿಕೊಳ್ಳುತ್ತಾ ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ವಿಡಿಯೊವೊಂದನ್ನು ಹಂಚಿಕೊಳ್ಳುತ್ತಿದ್ದಾರೆ. ಇದನ್ನು ರಾಜ್ಯಸಭಾ ಸದಸ್ಯ, ಪಶ್ಚಿಮ ಬಂಗಾಳದ ಬಿಜೆಪಿ ಮುಖ್ಯ ವಕ್ತಾರ ಸಮೀಕ್ ಭಟ್ಟಾಚಾರ್ಯ ಅವರು ಕೂಡ ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊವನ್ನು ಇನ್‌ವಿಡ್ ಟೂಲ್‌ನಲ್ಲಿ ಹಾಕಿದಾಗ ಹಲವು ಕೀಫ್ರೇಮ್‌ಗಳು ಕಂಡು ಬಂದವು. ಅವುಗಳಲ್ಲಿ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಟ ನಡೆಸಿದಾಗ ನವೆಂಬರ್ 6ರಂದು ಯುಟ್ಯೂಬ್‌ನಲ್ಲಿ 'ಫಾಕ್ಸ್ 9 ಮಿನ್ನಿಪೊಲಿಸ್-ಸೇಂಟ್‌ಪಾಲ್' ಎಂಬ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾದ ವಿಡಿಯೊ ಸಿಕ್ಕಿತು. ಭಾಷಣದಲ್ಲಿ ಟ್ರಂಪ್ ಅವರು ರಾಬರ್ಟ್ ಕೆನಡಿ ಜ್ಯೂನಿಯರ್ ಅವರ ಹೆಸರು ಪ್ರಸ್ತಾಪಿಸುತ್ತಾರೆ. ಆಗ ಅಲ್ಲಿ ಸೇರಿದ್ದ ಜನರು ಬಾಬಿ... ಬಾಬಿ... (bobby.. bobby) ಎಂದು ಘೋಷಣೆ ಕೂಗುತ್ತಾರೆ. ರಾಬರ್ಟ್ ಕೆನಡಿ ಜ್ಯೂನಿಯರ್ ಅವರು ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದರು. ಅವರು ನಂತರ ಟ್ರಂಪ್ ಅವರನ್ನು ಬೆಂಬಲಿಸಿದ್ದರು. ತಮ್ಮ ಭಾಷಣದಲ್ಲಿ ಕೆನಡಿ ಅವರನ್ನು 'ಬಾಬಿ' ಎಂದು ಕರೆದಿದ್ದರು. ಟ್ರಂಪ್ ಭಾಷಣದ ಪೂರ್ಣ ಪಾಠ ದಿ ನೈಟ್ಲ ವೆಬ್‌ಸೈಟ್‌ನಲ್ಲಿದ್ದು, ಅದರಲ್ಲಿ ಜನರು 'ಬಾಬಿ.. ಬಾಬಿ..' ಎಂದು ಘೋಷಣೆ ಕೂಗಿರುವುದರ ಪ್ರಸ್ತಾಪವೂ ಇದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ತಾಪ ಕೊಡುವ ಕೋಪ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 64

ಸಣ್ಣ ಕೋಪವೂ ಮನುಷ್ಯನಿಗೆ ಸಾಕಷ್ಟು ತಾಪ ಕೊಡುತ್ತೈತಿ. ಇತಿಹಾಸದಲ್ಲಿ ಒಂದು ಅದ್ಭುತ ಘಟನೆ ನಡೆಯಿತು. ಒಂದು ಸಣ್ಣ ಕೋಪ ಬದುಕನ್ನು ಎಷ್ಟು ಹೀನಾಯ ಮಾಡತೈತಿ ಅನ್ನೋದಕ್ಕೆ ಅದು ಉದಾಹರಣೆ. ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಪ್ರತಿಪಾದಕರು. ಯುವ ಸನ್ಯಾಸಿಗಳು. ಮಂಡನಮಿಶ್ರ ಅಂತಾ ಒಬ್ಬರು ಪೂರ್ವ ಮೀಮಾಂಸಕರಿದ್ದರು. ಅಂದರೆ ಕರ್ಮ ಸಿದ್ಧಾಂತ ಹೇಳುವವರು. ಮುಕ್ತಿಗೆ ಜ್ಞಾನ ಮೂಲ ಅಂತ ಶಂಕರರು ಪ್ರತಿಪಾದಿಸಿದರೆ ಕರ್ಮ ಮೂಲ ಅಂತ ಮಂಡನಮಿಶ್ರ ಪ್ರತಿಪಾದಿಸುತ್ತಿದ್ದರು. ಒಮ್ಮೆ ಇಬ್ಬರಿಗೂ ಚರ್ಚಾಕೂಟ ನಡೆಯಿತು. ಅದಕ್ಕೊಂದು ಷರತ್ತು ಇತ್ತು. ಶಂಕರರು ಸೋತರೆ ಸನ್ಯಾಸ ತ್ಯಜಿಸಿ ಸಂಸಾರಿಯಾಗಬೇಕು. ಮಂಡನಮಿಶ್ರ ಸೋತರೆ ಸಂಸಾರ ತ್ಯಜಿಸಿ ಸನ್ಯಾಸ ಸ್ವೀಕರಿಸಬೇಕು. ಚರ್ಚಾಕೂಟಕ್ಕೆ ಒಬ್ಬರು ನಿರ್ಣಾಯಕರು ಬೇಕಲ್ಲ. ನಿರ್ಣಾಯಕರನ್ನು ನೀವೇ ಆರಿಸಿಕೊಳ್ಳಿ ಎಂದು ಮಂಡನಮಿಶ್ರ ಶಂಕರರಿಗೆ ಹೇಳಿದರು. ಶಂಕರರು ಮಂಡನಮಿಶ್ರ ಅವರ ಪತ್ನಿ ಉಭಯಭಾರತಿ ಅವರನ್ನೇ ನಿರ್ಣಾಯಕರನ್ನಾಗಿ ಆರಿಸಿಕೊಂಡರು. ಉಭಯಭಾರತಿ ಎರಡೂ ಸಿದ್ಧಾಂತದಲ್ಲಿ ಪ್ರಾಜ್ಞರಾಗಿದ್ದರು.

ಚರ್ಚೆ ಶುರುವಾಯಿತು. ಚರ್ಚೆ ಆರಂಭಕ್ಕೂ ಮುನ್ನ ಉಭಯಭಾರತಿ ಇಬ್ಬರ ಕೊರಳಿಗೂ ಹೂಮಾಲೆ ಹಾಕಿದ್ದರು. ಇಬ್ಬರೂ ಜ್ಞಾನಿಗಳು. ಒಬ್ಬರಿಗಿಂತ ಒಬ್ಬರು ಅತ್ಯುತ್ತಮವಾಗಿ ವಾದ ಮಂಡಿಸುತ್ತಿದ್ದರು. ಒಬ್ಬರು 10 ಶ್ಲೋಕ ಹೇಳಿದರೆ ಇನ್ನೊಬ್ಬರು 20 ಶ್ಲೋಕ ಹೇಳುತ್ತಿದ್ದರು. ಸುಮಾರು ಹೊತ್ತಿನ ಮೇಲೆ ಉಭಯಭಾರತಿ 'ನಿಲ್ಲಿಸಿ' ಎಂದಳು. ಗಂಡನಿಗೆ 'ಚರ್ಚಾಕೂಟದಲ್ಲಿ ನೀವು ಸೋತಿರಿ' ಎಂದಳು. ಎಲ್ಲರಿಗೂ ಆಶ್ಚರ್ಯವಾಯಿತು. 'ನಾನು ಸೋತೆ ಎಂದು ಹೇಗೆ ನಿರ್ಣಯ ಮಾಡಿದಿ' ಎಂದು ಗಂಡ ಕೇಳಿದ. ಅದಕ್ಕೆ ಉಭಯಭಾರತಿ 'ಚರ್ಚೆ ಶುರುವಾಗುವುದಕ್ಕೆ ಮೊದಲು ನಿಮ್ಮಿಬ್ಬರ ಕೊರಳಿನಲ್ಲಿಯೂ ಹೂವಿನ ಹಾರ ಹಾಕಿದ್ದೆ. ನೀವಿಬ್ಬರೂ ಜ್ಞಾನಿಗಳು. ಅದರಲ್ಲಿ ಅನುಮಾನವಿಲ್ಲ. ಆದರೆ ಶಂಕರರ ವಾದಕ್ಕೆ ನಿಮ್ಮ ಮನದಲ್ಲಿ ಕೋಪಬಂದು ಅದರಿಂದ ನಿಮ್ಮ ದೇಹ ತಾಪಗೊಂಡು ನಿಮ್ಮ ಕೊರಳಿಗೆ ಹಾಕಿದ ಹೂವಿನ ಹಾರ ಬಾಡಿತು. ಕೋಪ ಬಂದಿದ್ದರಿಂದ ನೀವು ಸೋತಿರಿ' ಅಂದಳು.

ಕೋಪ ನಮ್ಮನ್ನು ಸೋಲಿಸುತ್ತದೆ. ಮನುಷ್ಯನಿಗೆ ಕೋಪ ಇರಬೇಕು. ಆದರ ನಿಯಂತ್ರಣದಲ್ಲಿರಬೇಕು. ಸಂಸಾರ ಅಂದ ಮೇಲೆ ಕೋಪ ತಾಪ ಎಲ್ಲಾ ಇರ್ತಾವ. ಹೆಂಡತಿ ಕೋಪ ಮಾಡಿಕೊಂಡಿರಬೇಕು. ಆದರೆ ಅಡುಗೆ ಮಾಡೋದನ್ನು ಬಿಟ್ಟಿರಬಾರದು, ಗಂಡ ಕೋಪ ಮಾಡಿಕೊಂಡಿರಬೇಕು. ಆದರ, ಮಕ್ಕಳಿಗೆ 'ಅಮ್ಮ ಕೋಪ ಮಾಡಿಕೊಂಡಾಳ. ಮೊದಲು ಆಕಿಗೆ ಉಣ್ಣಾಕ ಹೇಳು' ಅಂತಿರಬೇಕು. ಕೋಪ ಇರಬೇಕು ಆದರ ಪ್ರೀತಿ ಬಿಟ್ಟಿರಬಾರದು. ಕೋಪ ಮಗುವಿನ ಪ್ರೇಮದಂತೆ ಇರಬೇಕು.

ಮನೆಯಲ್ಲಿ ತಿಜೋರಿ ಐತಿ. ಅದರೊಳಗೆ ಬಂಗಾರ, ಬೆಳ್ಳಿ, ರೇಷ್ಮೆ ಸೀರೆ ಇಟ್ಟೀರಿ ಅಲ್ಲವೇನು? ಯಾರೂ ಅದರೊಳಗೆ ಕಸಬರಗಿ ಇಡೋದಿಲ್ಲ. ಮನಸ್ಸು ಅನ್ನೋದು ಒಂದು ತಿಜೋರಿ ಇದ್ದಂಗ. ಅದರೊಳಗೆ ಕಾಯಕ, ದಾಸೋಹ, ಪ್ರೇಮ, ಕರುಣೆ ಮುಂತಾದವುಗಳನ್ನು ಇಡಬೇಕು. ಕಿಮ್ಮತ್ತಿನ ತಿಜೋರಿಯೊಳಗೆ ಕಿಮ್ಮತ್ತಿನ ವಸ್ತುಗಳನ್ನು ಇಟ್ಟ ಹಾಗೆ. ಕೋಪ, ದ್ವೇಷ, ಅಸೂಯೆ ಮುಂತಾದವುಗಳನ್ನು ಇಟ್ಟರೆ ತಿಜೋರಿಯೊಳಗೆ ಕಸಬರಿಗೆ ಇಟ್ಟಂಗೆ. ದೇಹ ಪ್ರಸನ್ನವಾಗಿರಬೇಕು. ಮನಸ್ಸು ಪ್ರಸನ್ನವಾಗಿರಬೇಕು. ಆತ್ಮವೂ ಪ್ರಸ್ನವಾಗಿರಬೇಕು. ಹಣತೆ, ಬತ್ತಿ, ಎಣ್ಣೆ ಈ ಮೂರೂ ಇದ್ದರೆ ಬೆಳಕು. ದೇಹ ಪ್ರಸನ್ನತೆ, ಮನಸ್ಸು ಪ್ರಸನ್ನತೆ, ಆತ್ಮ ಪ್ರಸನ್ನತೆ ಈ ಮೂರೂ ಇದ್ದರೆ ಬದುಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ನವೆಂಬರ್ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಏಕಾದಶಿ ಗಂ. 16-05 ನಕ್ಷತ್ರ: ಪೂರ್ವಾಭಾದ್ರ ಗಂ. 07-52 ನಂತರ ಉತ್ತರಾಭಾದ್ರ ಗಂ. 29-40 ಯೋಗ: ಹರ್ಷಣ ಗಂ. 19-09 ಕರಣ: ವಿಷ್ಟಿ ಗಂ. 16-05, ತುಲಾ ಮಾಸದ 26 ನೇ ದಿನ, ಮಳೆನಕ್ಷತ್ರ: ವಿಶಾಖ 2. ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-32 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 09 ಜುಮಾದುಲ್ಲಾವಲ್. ಅದೃಷ್ಟ ಸಂಖ್ಯೆ : 5, 7,
ದಿನ ವಿಶೇಷ : ತುಳಸಿ ವಿವಾಹ, ಉತ್ಥಾನ ಅಥವಾ ದೇವ ಪ್ರಬೋಧಿನಿ ಏಕಾದಶಿ

ಮೇಷ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ಭವಿಷ್ಯದ ಭದ್ರತೆ ಕುರಿತು ಕಾಳಜಿ ಸಂತೃಪ್ತಿ ತಂದು ಕೊಡುವುದು.

ವೃಷಭ: ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ಆಲೋಚನೆಗೆ ಇತರರ ದುರ್ಬುದ್ಧಿಯಿಂದ ಭಂಗ. ಕುಟುಂಬದ ಸದಸ್ಯರ ಜತೆ ಅಧಿಕ ಸಮಯ ಕಳೆಯುವಂತಾಗುವುದು.

ಮಿಥುನ: ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟರಿಗೆ ಲಾಭದ ನಿರೀಕ್ಷೆಯಲ್ಲಿ ಅಲ್ಪಮಟ್ಟದ ವ್ಯತ್ಯಾಸಗಳಾಗುವುದು. ವೆಂಕಟೇಶ್ವರನ ಆರಾಧನೆಯಿಂದ ಕಾರ್ಯಗಳಲ್ಲಿ ಯಶಸ್ಸು ಪಡೆದುಕೊಳ್ಳುವಿರಿ.

ಕರ್ಕಾಟಕ: ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ. ಶಾರೀರಿಕವಾಗಿ ಆರೋಗ್ಯದ ಬಗ್ಗೆ ಆಲಸ್ಯ ಮಾಡುವುದು ಸರಿಯಲ್ಲ. ದೇಹದಲ್ಲಿ ಪಿತ್ತ ಅಧಿಕವಾಗಬಹುದು.

ಸಿಂಹ: ಆರ್ಥಿಕವಾಗಿ ಉತ್ತಮ ಪ್ರಗತಿ ಇದ್ದರೂ ಧನವ್ಯಯದಲ್ಲಿ ಆಗುತ್ತಿರುವ ಅನವಶ್ಯಕ ಖರ್ಚುಗಳನ್ನು ತಡೆಗಟ್ಟುವ ಪ್ರಯತ್ನ ಮಾಡುವುದರಿಂದ ಲಾಭ ಗಳಿಸಬಹುದು. ಶೀತ ರೋಗ ಬಾಧೆ ಇರಬಹುದು.

ಕನ್ಯಾ: ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನ ಲಭಿಸಲಿದೆ. ಸಂತಾನ ಅಪೇಕ್ಷಿಗಳಿಗೆ ಸಂತಸದ ವಾತಾವರಣ ಅನುಗ್ರಹವಾಗಲಿದೆ. ನೆರೆಯವರ ಸಹಕಾರ ದೊರಕಲಿದೆ.

ತುಲಾ: ಆಹಾರದ ಪದ್ಧತಿಯನ್ನು ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸೂಕ್ತ ಕಾಲ. ಬಿಳಿ ಬಣ್ಣವು ಅದೃಷ್ಟವನ್ನು ತರುವುದು.

ವೃಶ್ಚಿಕ: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜತೆಗೆ ಉನ್ನತ ಜವಾಬ್ದಾರಿ ಸಿಗಲಿದೆ. ಹಂತ ಹಂತವಾಗಿ ದುಃಖಗಳ ತೀವ್ರತೆಯು ಕಡಿಮೆಯಾಗಲಿದೆ. ಧರ್ಮ ಕಾರ್ಯಗಳಿಗಾಗಿ ಧನ ವಿನಿಯೋಗವಾಗುತ್ತದೆ.

ಧನು: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ರೀತಿಯನ್ನು ತಿಳಿದುಕೊಳ್ಳಿರಿ. ತೂಕದ ವ್ಯಕ್ತಿಯಾಗಿರುವ ನಿಮಗೆ ಅನುಯಾಯಿಗಳು ವೃದ್ಧಿಯಾಗುವರು. ಈಶ್ವರ ಆರಾಧನೆ ಶುಭ ಉಂಟುಮಾಡುತ್ತದೆ.

ಮಕರ: ಜೀವನದಲ್ಲಿ ಮಹತ್ತರ ಬದಲಾವಣೆಯಾಗುವ ಸೂಚನೆಗಳು ಗಮನಕ್ಕೆ ಬರಲಿವೆ. ಬಹಳ ದಿನಗಳ ನಂತರದಲ್ಲಿ ವ್ಯವಹಾರಗಳು ತೃಪ್ತಿಕರವಾಗಿರಲಿದೆ. ಅವಿವಾಹಿತರಿಗೆ ವಿವಾಹ ಯೋಗವಿದೆ.

ಕುಂಭ: ವ್ಯಾಪಾರದ ಅಭಿವೃದ್ಧಿಗೆ ಆರ್ಥಿಕ ಬಲದ ಜತೆಯಲ್ಲಿ ಕೆಲವು ವ್ಯಾಪಾರದ ಉಪಾಯಗಳನ್ನು ಬಳಸುವುದು ಒಳ್ಳೆಯದು. ವಾದಗಳು ಕಾರ್ಯಕ್ಕೆ ಅಡ್ಡಿ ಮಾಡದಂತೆ ಗಮನಹರಿಸಿ. ಒಳಿತಿಗಾಗಿ ಸುಬ್ರಹ್ಮಣ್ಯನನ್ನು ಆರಾಧಿಸಿ.


ಮೀನ: ಮಕ್ಕಳೊಂದಿಗೆ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಭೇಟಿ ಕೊಡುವಂತಾಗಬಹುದು. ಆಧ್ಯಾತ್ಮಿಕ ಚಿಂತನೆಯು ಜೀವನ ಧೈರ್ಯವನ್ನು ವೃದ್ಧಿಸುತ್ತದೆ. ಬದುಕನ್ನು ಅರ್ಥಪೂರ್ಣವಾಗಿ ನಡೆಸಬಹುದು.

ಪದಬಂಧ 5859

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಆಗ ತಾನೇ ತೆಗೆದ ಬೆಣ್ಣೆ (5)
4.ರಾಜನ ಹತ್ತಿರವಿರುವ ಶ್ರೇಷ್ಠಗಿಳಿ (4)
7.ಯಾವುದೇ ಕಳಂಕ ಇಲ್ಲದ್ದು (4)
8.ಅಕ್ಕಿ ತೊಳೆದ ನೀರು (4)
10.ನೇಯ್ಗೆಯ ಯಂತ್ರ (2)
11.ಗುಣಿಸುವಾಗ ಕಾಣಿಸಿದ ಹಳ್ಳ (2)
12.ಅದೇ ತಾನೆ ಹುಟ್ಟಿದುದು (4)
14.ಕರದಲ್ಲಿರುವ ಶರೀರ! (4)
17.ನೀರಿನಲ್ಲಿ ವಾಸಿಸುವ ಪ್ರಾಣಿಗಳು (4)
18.ಕುದುರೆಯ ಮುಖ (5)

ಮೇಲಿಂದ ಕೆಳಕ್ಕೆ
1.ಬಿಡುವು ಈ ರೀತಿ ಬಂದಿದೆ (3)
2.ಹತ್ತಿರದಲ್ಲೇ ಪ್ರತ್ಯಕ್ಷನಾಗಿರುವ ಶಿವ! (2)
3.ನೋಡುಗ ಇಲ್ಲಿದ್ದಾನೆ (3)
5.ವಿರಾಟರಾಜನ ಸೇನಾಪತಿ (3)
6.ಅಂಕಣದಲ್ಲಿ ಕಾಣಿಸಿರುವ ರಿಕಾಪು (4)
7.ಎರಕ ಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ (2)
9.ಗಡಕ್ಕನೆ ಬಂದೆರಗಿದ ಕೋತಿ (3)
10.ಹೆಣ್ಣು ದುಂಬಿಯಿದು (4)
12.ನಗರದಲ್ಲಿರುವ ಮನುಷ್ಯ (2)
13.ಹೊಂಗೆ ಮರ ಇಲ್ಲಿದೆ (3)
15.ವರ್ತುಲಾಕಾರವಾಗಿರುವುದು ಅಥವಾ ಪ್ರದೇಶ (3)
16.ಮುದುಕರ ಹತ್ತಿರವಿರುವ ಕೊಳಲು (3)
17.ಜವಾನನ ಸುತ್ತಲಿರುವ ಮಂದಿ (2)



5858ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲಾಯನ 3.ವರ್ಣಮಾಲೆ
5.ಕಕವ 7.ಸಮಗಾರ
9.ಶೋಕ 10.ಕ್ಷಭ
11.ರವಿಚಂದ್ರ 14.ಭವನ
17.ದಿಗಂಬರ 18.ಹಸುಗೂಸು

ಮೇಲಿಂದ ಕೆಳಕ್ಕೆ:
1.ಪದಕ 2.ನನ್ನಿ
3.ವನಸುಮ 4.ಲೆಕ್ಕಣಿ
6.ಕನಿಕರ 7.ಸಮುದ್ರ
8.ರಕ್ತಸ್ರಾವ 12.ಚಂದಾದಾರ
13.ಬುನಾದಿ 15.ನನಸು
16.ದೇಹ

ಸುಡೊಕು 6244


7		5	9	4				
					2		9	
2		9	3	7		5		4
9		4						2
			4	6	9	1		
	3					9		6
4					8		7	
		1	7			2		3
8		2		5			1	9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6243 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5


ಷೇರುಪೇಟೆ ವಹಿವಾಟು 10



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,148
ಇಂದಿನ ಅಂತ್ಯ	24,141
▼	7
ದಿನದ ಕನಿಷ್ಠ	24,004

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹411-580
ದ್ವಿತಳಿ (ಬಿ.ವಿ) ₹311-680

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹179
ಆರ್‌ಎಸ್‌ಎಸ್-5 ₹173
ಗುಡ್ ಲಾಟ್ ₹169
(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹17500
ಎಸಿ	₹10530
ಆರ್‌ಪಿ	₹17500
ಆರ್‌ಸಿ	₹10270

ನೇರ ತೆರಿಗೆ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಏಪ್ರಿಲ್‌ನಿಂದ ನವೆಂಬರ್ 10ರ ವರೆಗೆ ₹12.11 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹವಾಗಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ₹10.49 ಲಕ್ಷ ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಶೇ 15ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಕಾರ್ಪೊರೇಟ್ ತೆರಿಗೆ ಸಂಗ್ರಹ ₹5.10 ಲಕ್ಷ ಕೋಟಿ ಆಗಿದೆ. ಕಾರ್ಪೊರೇಟ್ ಅಲ್ಲದ ತೆರಿಗೆಗಳು ₹6.62 ಲಕ್ಷ ಕೋಟಿಯಾಗಿದೆ. ₹35,923 ಕೋಟಿ ಇತರೆ ತೆರಿಗೆ ಸಂಗ್ರಹವಾಗಿದೆ. ಒಟ್ಟಾರೆ ₹2.92 ಲಕ್ಷ ಕೋಟಿ ತೆರಿಗೆ ಮರುಪಾವತಿ ಮಾಡಲಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮರುಪಾವತಿಯಲ್ಲಿ ಶೇ 53ರಷ್ಟು ಹೆಚ್ಚಳವಾಗಿದೆ.

2024–25ನೇ ಆರ್ಥಿಕ ಸಾಲಿನ ಬಜೆಟ್ ನಲ್ಲಿ ₹22.12 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹದ ಗುರಿ ಹೊಂದಲಾಗಿದೆ(ವೈಯಕ್ತಿಕ ಆದಾಯ ತೆರಿಗೆ, ಕಾರ್ಪೊರೇಟ್ ಮತ್ತು ಇತರೆ ತೆರಿಗೆ). ಕಳೆದ ವರ್ಷಕ್ಕಿಂತ ಶೇ 13ರಷ್ಟು ಹೆಚ್ಚು ಗುರಿ ನಿಗದಿಪಡಿಸಲಾಗಿದೆ.

ಹೆಚ್ಚಿದ ಹೂಡಿಕೆಯಿಂದ ಒಳಹರಿವು ಪ್ರಮಾಣ ಏರಿಕೆ: ಎಎಂಎಫ್‌ಐ

ಈಕ್ವಿಟಿ ಎಂ.ಎಫ್: ಶೇ 21ರಷ್ಟು ಹೆಚ್ಚಳ

ನವೆಂಬರ್ (ಪಿಟಿಐ): ಅಕ್ಟೋಬರ್ ತಿಂಗಳಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್ (ಎಂ.ಎಫ್) ಮಾರುಕಟ್ಟೆಯಲ್ಲಿ ₹41,887 ಕೋಟಿ ಬಂಡವಾಳ ಹೂಡಿಕೆಯಾಗಿದೆ.

ಸೆಪ್ಟೆಂಬರ್‌ನಲ್ಲಿ ₹34,419 ಕೋಟಿ ಹೂಡಿಕೆಯಾಗಿತ್ತು. ಈ ಹೂಡಿಕೆಗೆ ಹೋಲಿಸಿದರೆ ಶೇ 21ರಷ್ಟು ಏರಿಕೆಯಾಗಿದೆ. ಲಾರ್ಜ್‌ಕ್ಯಾಪ್ ಫಂಡ್‌ಗಳಲ್ಲಿ ಹೆಚ್ಚಿದ ಹೂಡಿಕೆಯಿಂದ ಒಳಹರಿವು ಪ್ರಮಾಣ ಏರಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಸೋಮವಾರ ತಿಳಿಸಿದೆ. ಜೂನ್‌ನಲ್ಲಿ ₹40,608 ಕೋಟಿ ಹೂಡಿಕೆಯಾಗಿತ್ತು.

ಎಸ್‌ಐಪಿ ಪ್ರಮಾಣ ಏರಿಕೆ: ಅಕ್ಟೋಬರ್‌ನಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆಯಡಿ (ಎಸ್‌ಐಪಿ) ₹25,323 ಕೋಟಿ ಹೂಡಿಕೆಯಾಗಿದ್ದು, ಇದು



ಸಾರ್ವಕಾಲಿಕ ಗರಿಷ್ಠ ಮೊತ್ತವಾಗಿದೆ. ಸೆಪ್ಟೆಂಬರ್‌ನಲ್ಲಿ ₹24,509 ಕೋಟಿ ಹೂಡಿಕೆಯಾಗಿತ್ತು. ಹೂಡಿಕೆದಾರರಲ್ಲಿ ಎಸ್‌ಐಪಿಯತ್ತ ಒಲವು ಹೆಚ್ಚಿದೆ ಎಂದು ತಿಳಿಸಿದೆ.

‘ಇದು ಶಿಸ್ತುಬದ್ಧ ಮತ್ತು ದೀರ್ಘಾವಧಿಯ ಸಂಪತ್ತು ಕ್ರೋಡೀಕರಣದತ್ತ ಹೂಡಿಕೆದಾರರ ಮನೋಭಾವ ಬದಲಾಗುತ್ತಿರುವುದನ್ನು ತೋರಿಸುತ್ತದೆ’ ಎಂದು ಎಎಂಎಫ್‌ಐನ ಮುಖ್ಯ ಕಾರ್ಯನಿರ್ವಾಹಕ ವೆಂಕಟ್ ಚಲಸಾನಿ ಹೇಳಿದ್ದಾರೆ.

ಒಟ್ಟಾರೆ ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ₹2.4 ಲಕ್ಷ ಕೋಟಿ ಬಂಡವಾಳ ಒಳಹರಿವು ಆಗಿದೆ. ಸೆಪ್ಟೆಂಬರ್‌ನಲ್ಲಿ ₹71,114 ಕೋಟಿ ಹೊರಹರಿವಾಗಿತ್ತು. ಇದೇ ಅವಧಿಯಲ್ಲಿ ಸಾಲಪತ್ರದ ಮಾರುಕಟ್ಟೆಗಳಲ್ಲಿ ₹1.57 ಲಕ್ಷ ಕೋಟಿ ಹೂಡಿಕೆಯಾಗಿದೆ.

ಅಕ್ಟೋಬರ್‌ನಲ್ಲಿ ಈ ಉದ್ಯಮದ ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹67.25 ಲಕ್ಷ ಕೋಟಿಯಷ್ಟಿದೆ. ಸೆಪ್ಟೆಂಬರ್‌ನಲ್ಲಿ ₹67 ಲಕ್ಷ ಕೋಟಿ ಇತ್ತು ಎಂದು ತಿಳಿಸಿದೆ.

‘ಈಕ್ವಿಟಿ ಮಾರುಕಟ್ಟೆಗಳಲ್ಲಿ ಹೂಡಿಕೆಗೆ ಯುವಜನರ ಒಲವು’

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಬದಲು, ಈಕ್ವಿಟಿ ಮಾರುಕಟ್ಟೆಗಳಲ್ಲಿ ನೇರವಾಗಿ ಹೂಡಿಕೆ ಮಾಡಲು ಯುವಜನರು ಆದ್ಯತೆ ನೀಡುತ್ತಿದ್ದಾರೆ ಎಂದು ಎಂದು ಬ್ರೋಕರೇಜ್ ಕಂಪನಿ ಏಂಜೆಲ್ ಒನ್‌ನ ಫಿನ್ ಒನ್ ವರದಿ ಸೋಮವಾರ ತಿಳಿಸಿದೆ.

ಶೇ 93ರಷ್ಟು ಯುವಜನರು ಉಳಿತಾಯ ಮಾಡುತ್ತಿದ್ದು, ಇವರಲ್ಲಿ ಹೆಚ್ಚಿನವರು ತಮ್ಮ ತಿಂಗಳ ವೇತನದ ಶೇ 20ರಿಂದ ಶೇ 30ರಷ್ಟು ಉಳಿತಾಯ ಮಾಡುತ್ತಿದ್ದಾರೆ ಎಂದು ತಿಳಿಸಿದೆ. ಸಮೀಕ್ಷೆಯಲ್ಲಿ ಪ್ರತಿಕ್ರಿಯಿಸಿದವರಲ್ಲಿ ಶೇ 45ರಷ್ಟು ಜನ ನಿಶ್ಚಿತ ಠೇವಣಿ (ಎಫ್.ಡಿ) ಅಥವಾ ಚಿನ್ನದಲ್ಲಿ ಹೂಡಿಕೆ ಮಾಡಲು ಒಲವು ತೋರುತ್ತಿದ್ದಾರೆ.

ಶೇ 58ರಷ್ಟು ಯುವಜನರು ಷೇರುಗಳಲ್ಲಿ ಹೂಡಿಕೆ ಮಾಡಿದರೆ, ಶೇ 39ರಷ್ಟು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಸುರಕ್ಷತೆಯ ಆಯ್ಕೆಗಳಾದ ನಿಶ್ಚಿತ ಠೇವಣಿ ಶೇ 22 ಮತ್ತು ಆರ್.ಡಿ ಶೇ 26ರಷ್ಟಿದೆ ಎಂದು ವರದಿಯಲ್ಲಿ ತಿಳಿಸಿದೆ.

ಸಮೀಕ್ಷೆಯು ದೇಶದ 13ಕ್ಕೂ ಹೆಚ್ಚು ನಗರಗಳಲ್ಲಿ 1,600 ಯುವಜನರಿಂದ ಮಾಹಿತಿ ಸಂಗ್ರಹಿಸಿ, ವರದಿ ಸಿದ್ಧಪಡಿಸಿದೆ.

ಆಹಾರ, ಸಾರಿಗೆಯಂತಹ ಪ್ರಮುಖ ಅಂಶಗಳ ವೆಚ್ಚದಲ್ಲಿನ ಏರಿಕೆಯು ಉಳಿತಾಯಕ್ಕೆ ಅಡ್ಡಿಯಾಗಿದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ 85ರಷ್ಟು ಯುವಜನರು ತಿಳಿಸಿದ್ದಾರೆ. ಹೆಚ್ಚುತ್ತಿರುವ ಜೀವನ ವೆಚ್ಚವು ದೇಶದ ಯುವಜನರಿಗೆ ಪ್ರಮುಖ ಸವಾಲಾಗಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಮಾಸಾಂತ್ಯಕ್ಕೆ ಅಮೂಲ್ ಯುರೋಪ್ ಪ್ರವೇಶ

ನವದೆಹಲಿ: ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್) ಅಮೂಲ್ ಹೈನು ಉತ್ಪನ್ನಗಳು ನವೆಂಬರ್ ಮಾಸಾಂತ್ಯಕ್ಕೆ ಐರೋಪ್ಯ ರಾಷ್ಟ್ರಗಳನ್ನು ಪ್ರವೇಶಿಸಲಿವೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜಯನ್ ಎಸ್. ಮೆಹ್ತಾ ಸೋಮವಾರ ತಿಳಿಸಿದ್ದಾರೆ.

‘ತಾಜಾ ಹೈನು ಉತ್ಪನ್ನಗಳನ್ನು ಯುರೋಪ್ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದ್ದೇವೆ. ಸ್ಪೇನ್‌ನಿಂದ ಆರಂಭಗೊಂಡು ನಂತರ ಇಡೀ ಯುರೋಪ್‌ಗೆ ಉತ್ಪನ್ನಗಳನ್ನು ಪೂರೈಕೆ ಮಾಡುವ ಯೋಜನೆ ಹೊಂದಲಾಗಿದೆ’ ಎಂದು ಹೇಳಿದ್ದಾರೆ.

‘ವಿದೇಶಿ ಮಾರುಕಟ್ಟೆಯಲ್ಲಿ ಭಾರತದ ಡೇರಿ ಉದ್ಯಮವು ಹಲವು ನಿರ್ಬಂಧಗಳನ್ನು ಎದುರಿಸುತ್ತಿದೆ. ಇದರಿಂದಾಗಿ ಭಾರತೀಯ ಡೇರಿ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡುವುದು ಕಷ್ಟವಾಗಿದೆ. ಇದನ್ನು ತೆಗೆದು ಹಾಕಿದಲ್ಲಿ ಹೈನು ಉತ್ಪನ್ನಗಳ ರಫ್ತಿಗೆ ಹೆಚ್ಚಿನ ಅನುಕೂಲವಾಗಲಿದೆ. ಭಾರತದಲ್ಲಿ 10 ಕೋಟಿ ಕುಟುಂಬಗಳು ಹೈನು ಉದ್ಯಮವನ್ನು ಅವಲಂಬಿಸಿವೆ. ಬಹಳಷ್ಟು ಜನ ಸಣ್ಣ ಹಾಗೂ ಮಧ್ಯಮ ಹೈನು ಉತ್ಪಾದಕರಾಗಿದ್ದಾರೆ. ಭಾರತವು ಶೇ 30ರ ಸುಂಕದೊಂದಿಗೆ ಹೈನು ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುತ್ತಿದೆ’ ಎಂದಿದ್ದಾರೆ.

‘ಅಮೂಲ್ ವಾರ್ಷಿಕ ವಹಿವಾಟು ₹80 ಸಾವಿರ ಕೋಟಿ ದಾಟಿದೆ. ಆ ಮೂಲಕ ಡೇರಿ ಮಾರುಕಟ್ಟೆಯಲ್ಲಿ ಉತ್ತಮ ಹಿಡಿತ ಹೊಂದಿದೆ’ ಎಂದು ಮೆಹ್ತಾ ಹೇಳಿದ್ದಾರೆ. ಒಕ್ಕೂಟದ ವ್ಯಾಪ್ತಿಯಲ್ಲಿ 36 ಲಕ್ಷ ರೈತರು ಇದ್ದಾರೆ.



ಭಾರತೀಯರು ಹಾಗೂ ಏಷ್ಯಾದವರಿಗಾಗಿಯೇ ಕಳೆದ ಮಾರ್ಚ್‌ನಲ್ಲಿ ನಾಲ್ಕು ವಿಧಗಳ ಹಾಲನ್ನು ಅಮೆರಿಕದಲ್ಲಿ ಅಮೂಲ್ ಬಿಡುಗಡೆ ಮಾಡಿತ್ತು.

ಸ್ಟಾರ್ ಇಂಡಿಯಾ ತೆಕ್ಕೆಗೆ ಆರ್‌ಬಿಐ ವೆಬ್ ಸರಣಿ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) 90 ವರ್ಷಗಳ ಸುದೀರ್ಘ ಪಯಣದ ಕುರಿತು ವೆಬ್ ಸರಣಿಯನ್ನು ಮಾಡುವ ಬಿಡ್ ಅನ್ನು ಸ್ಟಾರ್ ಇಂಡಿಯಾ ತನ್ನದಾಗಿಸಿಕೊಂಡಿದೆ.

ದೇಶದ ಆರ್ಥಿಕ ಬೆಳವಣಿಗೆಯಲ್ಲಿ ರಿಸರ್ವ್ ಬ್ಯಾಂಕ್‌ನ ಮಹತ್ವದ ಪಾತ್ರವನ್ನು ಜನರಿಗೆ ತಿಳಿಸಲು ಈ ವೆಬ್ ಸರಣಿ ಸಹಾಯಕವಾಗಲಿದೆ. ಆರ್‌ಬಿಐ 1935ರಲ್ಲಿ ಸ್ಥಾಪನೆಯಾಗಿದ್ದು, ಈ ವರ್ಷದ ಏಪ್ರಿಲ್‌ನಲ್ಲಿ 90 ವರ್ಷ ಪೂರೈಸಿತ್ತು.

ಆರ್‌ಬಿಐ, ಪ್ರೊಡಕ್ಷನ್ ಹೌಸ್‌ಗಳು, ಟಿವಿ ಚಾನೆಲ್‌ಗಳು ಮತ್ತು ಒಟಿಟಿ ವೇದಿಕೆಗಳಿಂದ ಪ್ರಸ್ತಾವಗಳನ್ನು ಆಹ್ವಾನಿಸಿತ್ತು. ಸ್ಟಾರ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ವಯಾಕಾಮ್ 18, ಜೀ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ ಲಿಮಿಟೆಡ್ ಮತ್ತು ಡಿಸ್ಕವರಿ ಕಮ್ಯುನಿಕೇಷನ್ಸ್ ಇಂಡಿಯಾ ಬಿಡ್ ಸಲ್ಲಿಸಿದ್ದವು. ಕೊನೆಗೆ ಸ್ಟಾರ್ ಇಂಡಿಯಾ ಇದನ್ನು ಪಡೆದುಕೊಂಡಿದೆ. ಆರ್‌ಬಿಐ ಪ್ರಕಾರ, ವೆಬ್ ಸರಣಿ ಮಾಡಲು ಸ್ಟಾರ್ ಇಂಡಿಯಾಗೆ ₹6.5 ಕೋಟಿಗೆ ಟೆಂಡರ್ ನೀಡಲಾಗಿದೆ.

ದೇಶದ ಟಿವಿ ಚಾನೆಲ್‌ಗಳು ಮತ್ತು ಒಟಿಟಿ ವೇದಿಕೆಗಳಲ್ಲಿ ವೆಬ್ ಸರಣಿ ಪ್ರಸಾರವಾಗಲಿದೆ. ಒಟ್ಟು ಐದು ಸಂಚಿಕೆಗಳನ್ನು (ಎಪಿಸೋಡ್) ಒಳಗೊಂಡಿದ್ದು, ಪ್ರತಿ ಸಂಚಿಕೆಯ ಅವಧಿ 25–30 ನಿಮಿಷ ಇರಲಿದೆ.

ಸಂಕ್ಷಿಪ್ತ ಸುದ್ದಿ

ಬಿಒಐಗೆ ಲಾಭ ₹2,374 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾ (ಬಿಒಐ) 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹2,374 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಇದೇ ಅವಧಿಯಲ್ಲಿ ₹1,458 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 63ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಸೋಮವಾರ ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ₹16,659 ಕೋಟಿಯಾಗಿತ್ತು. ಈ ಬಾರಿ ₹19,872 ಕೋಟಿಯಷ್ಟಾಗಿದೆ. ನಿವ್ವಳ ಬಡ್ಡಿ ವರಮಾನವು ಶೇ 4ರಷ್ಟು ಏರಿಕೆಯಾಗಿದ್ದು, ₹5,986 ಕೋಟಿಯಾಗಿದೆ.

ಬಡ್ಡಿಯಲ್ಲದ ವರಮಾನವು ಶೇ 49ರಷ್ಟು ಹೆಚ್ಚಳವಾಗಿದ್ದು, ₹2,518 ಕೋಟಿಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹1,688 ಕೋಟಿ ಯಷ್ಟಿತ್ತು ಎಂದು ಬ್ಯಾಂಕ್ ತಿಳಿಸಿದೆ.

ಎನ್‌ಎಂಡಿಸಿ ಲಾಭ ಶೇ 16ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ) 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇ 16.6ರಷ್ಟು ಏರಿಕೆಯಾಗಿದೆ.

2023–24ರ ಇದೇ ಅವಧಿಯಲ್ಲಿ ₹1,024 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹1,195 ಕೋಟಿ ಆಗಿದೆ. ಹೆಚ್ಚಿನ ವರಮಾನದಿಂದ ಲಾಭದ ಪ್ರಮಾಣ ಏರಿಕೆಯಾಗಿದೆ ಎಂದು ನಿಗಮವು ಸೋಮವಾರ ಷೇರುಪೇಟೆಗೆ ತಿಳಿಸಿದೆ.

ವರಮಾನವು ಶೇ 22ರಷ್ಟು ಏರಿಕೆಯಾಗಿದ್ದು, ₹5,279 ಕೋಟಿ ಗಳಿಸಿದೆ. ಆಡಳಿತ ಮಂಡಳಿಯು 2:1 ಬೋನಸ್ ಷೇರು ನೀಡಲು ಅನುಮೋದನೆ ನೀಡಿದೆ.

ರೂಪಾಯಿ ಮೌಲ್ಯ ಶೇ 10ರಷ್ಟು ಇಳಿಕೆ: ಎಸ್‌ಬಿಐ ವರದಿ ಅಂದಾಜು



ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಡೊನಾಲ್ಡ್ ಟ್ರಂಪ್ 2ನೇ ಆಡಳಿತದ ಅವಧಿಯಲ್ಲಿ ರೂಪಾಯಿ ಮೌಲ್ಯ ಶೇ 8ರಿಂದ ಶೇ 10ರಷ್ಟು ಕುಸಿಯಬಹುದು ಎಂದು ಎಸ್‌ಬಿಐ ಸಂಶೋಧನಾ ವರದಿ ಹೇಳಿದೆ.

‘ಅಮೆರಿಕದ ಅಧ್ಯಕ್ಷೀಯ ಚುನಾವಣೆ 2024: ಟ್ರಂಪ್ 2.0 ಭಾರತ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ’ ಎಂಬ ವರದಿಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಾಗಲಿದೆ. ನಂತರ ಏರಿಕೆಯಾಗಬಹುದು ಎಂದು ಹೇಳಲಾಗಿದೆ. ವರದಿಯು ಸೋಮವಾರ ಬಿಡುಗಡೆಯಾಗಿದೆ.

ಟ್ರಂಪ್ ಗೆಲುವು ಭಾರತಕ್ಕೆ ಸವಾಲುಗಳು ಮತ್ತು ಅವಕಾಶಗಳನ್ನು ಪರಿಚಯಿಸುತ್ತದೆ. ವಿದೇಶಿ ನೇರ ಹೂಡಿಕೆಗಳಲ್ಲಿ ಬದಲಾವಣೆ, ಸುಂಕದ ಹೆಚ್ಚಳ, ಎಚ್–1ಬಿ ನಿರ್ಬಂಧ, ದೃಢವಾದ ಡಾಲರ್ ಮೌಲ್ಯ ಅಲ್ಪಾವಧಿ ಚಂಚಲತೆಯನ್ನು ಸೃಷ್ಟಿಸಲಿದೆ ಎಂದು ಹೇಳಿದೆ.

ಟ್ರಂಪ್ ಮೊದಲ ಅವಧಿಯ ಆಡಳಿತದಲ್ಲಿ ರೂಪಾಯಿ ಮೌಲ್ಯ ಶೇ 11ರಷ್ಟು ಇಳಿಕೆಯಾಗಿತ್ತು. ರೂಪಾಯಿ ಮೌಲ್ಯದ ಇಳಿಕೆಯಿಂದ ತೈಲ ಮತ್ತು ಇತರೆ ಸರಕುಗಳ ಆಮದು ವೆಚ್ಚ ಹೆಚ್ಚಳವಾಗಲಿದೆ. ಅಂದಾಜಿನ ಪ್ರಕಾರ ಶೇ 5ರಷ್ಟು ಮೌಲ್ಯ ಇಳಿಕೆಯಾದರೂ ಹಣದುಬ್ಬರವು ಶೇ 0.25 ರಿಂದ ಶೇ 0.30ರಷ್ಟು (25ರಿಂದ 30 ಬಿಪಿಎಸ್) ಹೆಚ್ಚಳವಾಗಲಿದೆ. ಆದರೆ ಇದು ಹಣದುಬ್ಬರದ ಮೇಲೆ ಕಡಿಮೆ ಪರಿಣಾಮ ಬೀರಲಿದೆ ಎಂದು ತಿಳಿಸಿದೆ.

ಭಾರತವು ತನ್ನ ಎಫ್‌ಡಿಐ ಮೂಲಗಳನ್ನು ಕ್ರಮೇಣವಾಗಿ ವೈವಿಧ್ಯಗೊಳಿಸುತ್ತಿದೆ. ದಶಕದ ಹಿಂದೆ, ಹೆಚ್ಚಿನ ಎಫ್‌ಡಿಐ ಒಳಹರಿವು ಸಾಂಪ್ರದಾಯಿಕ ಕ್ಷೇತ್ರಗಳಿಂದ ಬರುತ್ತಿತ್ತು. ಭಾರತವು ಈಗ ನವೀಕರಿಸಬಹುದಾದ ಇಂಧನ ಸೇರಿದಂತೆ ಹಲವು ವಲಯಗಳಿಂದ ಹೂಡಿಕೆಯನ್ನು ಆಕರ್ಷಿಸುತ್ತಿದೆ. ಇದರಿಂದ ರೂಪಾಯಿ ಮೌಲ್ಯ ವೃದ್ಧಿಯಾಗಲಿದೆ ಎಂದು ವರದಿ ಹೇಳಿದೆ.

ವಿದೇಶಿ ಬಂಡವಾಳದ ಹೊರಹರಿವು ಮತ್ತು ಷೇರು ಸೂಚ್ಯಂಕಗಳ ಇಳಿಕೆಯಿಂದ ಸೋಮವಾರ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 1 ಪೈಸೆ ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹84.38 ಆಗಿದೆ.

ಚಾಡ್: 17 ಸೈನಿಕರು ಹುತಾತ್ಮ

ಚಾಡ್ (ಎಪಿ): ಬೊಕೊ ಹರಾಮ್ ಒಳನುಸುಳುಕೋರರು ಸೇನಾ ನೆಲೆ ಮೇಲೆ ನಡೆಸಿದ ದಾಳಿಯಲ್ಲಿ 17 ಸೈನಿಕರು ಹುತಾತ್ಮರಾಗಿದ್ದಾರೆ ಮತ್ತು 96 ಮಂದಿ ಆಕ್ರಮಣಕಾರರು ಮೃತಪಟ್ಟಿದ್ದಾರೆ ಎಂದು ಚಾಡ್ ಸೇನೆ ತಿಳಿಸಿದೆ.

ಲೇಕ್ ಚಾಡ್ ಪ್ರದೇಶದಲ್ಲಿ ಶನಿವಾರ ಈ ದಾಳಿ ನಡೆದಿದೆ ಎಂದು ಸೇನಾ ವಕ್ತಾರ ಜನರಲ್ ಐಸಾಕ್ ಅಚ್ಕೈಖ್ ರಾಷ್ಟ್ರೀಯ ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ. ಈ ಬಗ್ಗೆ ಅವರು ಹೆಚ್ಚಿನ ಮಾಹಿತಿ ನೀಡಿಲ್ಲ.

ಕಳೆದ ತಿಂಗಳು ದೇಶದ ಪಶ್ಚಿಮದಲ್ಲಿರುವ ಸೇನಾ ನೆಲೆಯ ಮೇಲೆ ನಡೆದ ದಾಳಿಯಲ್ಲಿ 40 ಯೋಧರು ಹುತಾತ್ಮರಾಗಿದ್ದರು.

‘ಪೇಜರ್ ದಾಳಿ ಹಿಂದೆ ಇಸ್ರೇಲ್’

ಜರುಸಲೇಂ (ಎಪಿ): ಹಿಜ್ಬುಲ್ಲಾ ಮೇಲೆ ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಪೇಜರ್ ಮತ್ತು ವಾಕಿ–ಟಾಕಿ ದಾಳಿಯ ಹಿಂದೆ ಇಸ್ರೇಲ್ ಕೈವಾಡ ಇತ್ತು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಇದೇ ಮೊದಲ ಬಾರಿಗೆ ಒಪ್ಪಿಕೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿಗಳು ಹೇಳಿವೆ.



ಬೆಂಜಮಿನ್ ನೆತನ್ಯಾಹು

‘ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿಗಳ ವಿರೋಧದ ನಡುವೆಯೂ ಪೇಜರ್ ಕಾರ್ಯಾಚರಣೆ ಮತ್ತು ಹಿಜ್ಬುಲ್ಲಾ ನಾಯಕ ಹಸನ್ ನಸ್ರುಲ್ಲಾ ಹತ್ಯೆಗೆ ಆದೇಶ ನೀಡಿದ್ದೆ’ ಎಂದು ನೆತನ್ಯಾಹು ಅವರು ಹೇಳಿರುವುದಾಗಿ ‘ದಿ ಟೈಮ್ಸ್ ಆಫ್ ಇಸ್ರೇಲ್’ ವರದಿ ಮಾಡಿದೆ.

ಭಾನುವಾರ ನಡೆದ ಸಚಿವ ಸಂಪುಟ ಸಭೆ ಸಂದರ್ಭ ದಲ್ಲಿ ನೆತನ್ಯಾಹು ಅವರು ಈ ಹೇಳಿಕೆ ನೀಡಿದ್ದಾರೆ ಎಂದು ‘ಹೀಬ್ರೂ’ ಮಾಧ್ಯಮ ವರದಿ ಹೇಳಿದೆ. ದಾಳಿಯಲ್ಲಿ ಇಸ್ರೇಲ್ ಕೈವಾಡ ಇರಬಹುದೆಂದು ಶಂಕಿಸಲಾಗಿತ್ತು. ಆದರೆ ಇಸ್ರೇಲ್ ಎಂದೂ ಬಹಿರಂಗವಾಗಿ ಹೊಣೆಹೊತ್ತುಕೊಂಡಿರಲಿಲ್ಲ.

ಸೆಪ್ಟೆಂಬರ್ 16ರಂದು ಲೆಬನಾನ್ ಮತ್ತು ಸಿರಿಯಾದಲ್ಲಿ ಸ್ಫೋಟಕಗಳನ್ನು ತುಂಬಿದ್ದ ಸಾವಿರಾರು ಪೇಜರ್‌ಗಳು ಸ್ಫೋಟಗೊಂಡಿದ್ದವು. ಇದರ ಪರಿಣಾಮ ಕನಿಷ್ಠ 39 ಮಂದಿ ಮೃತಪಟ್ಟು, 3,000ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಗಾಜಾ ಮೇಲೆ ಇಸ್ರೇಲ್ ದಾಳಿ: ಮೂವರು ಸಾವು

ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಅವಳಿ ಮಕ್ಕಳ ಪೋಷಕರು ಸೇರಿದಂತೆ ಕನಿಷ್ಠ ಮೂವರು ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ರಾತ್ರಿ ನಿರಾಶ್ರಿತರ ಶಿಬಿರದ ಮೇಲೆ ದಾಳಿ ನಡೆದಿದ್ದು, ಇಬ್ಬರು ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಇಸ್ರೇಲ್ ಸೇನೆಯು, ‘ಭಯೋತ್ಪಾದಕರನ್ನು ಮಾತ್ರ ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ. ಅವರು ನಾಗರಿಕರ ಮಧ್ಯೆ ಅಡಗಿಕೊಂಡಿದ್ದಾರೆ’ ಎಂದು ಹೇಳಿದೆ.

ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ: ಹೌತಿ (ದುಬೈ): ಇಸ್ರೇಲ್ ಗುರಿಯಾಗಿಸಿಕೊಂಡು ಕ್ಷಿಪಣಿ ದಾಳಿ ನಡೆಸಿರುವುದಾಗಿ ಯೆಮನ್‌ನ ಹೌತಿ ಬಂಡುಕೋರರು ಸೋಮವಾರ ಹೇಳಿದ್ದಾರೆ.

ಹೌತಿ ಸೇನಾ ವಕ್ತಾರ ಬ್ರಿಗ್ ಜೆನ್ ಯಹ್ಯಾ ಸರೇ ಅವರು ವಿಡಿಯೊ ಮೂಲಕ, ‘ಪ್ಯಾಲೆಸ್ಟೀನ್–2 ಖಂಡಾಂತರ ಕ್ಷಿಪಣಿ ದಾಳಿ ನಡೆಸಿದ್ದೇವೆ’ ಎಂದು ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಇಸ್ರೇಲ್ ಸೇನೆ, ‘ಯೆಮನ್‌ನಿಂದ ಇಸ್ರೇಲ್‌ನತ್ತ ಬರುತ್ತಿದ್ದ ಒಂದು ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ’ ಎಂದು ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	42000-50000
ಚಿತ್ರದುರ್ಗ	
ಅಪಿ	48609-49059
ಬೆಟ್ಟೆ	30629-31099
ಕೆಂಪುಗೋಟು	24619-25010
ರಾಶಿ	48139-48569
ಕಾರ್ಕಳ	
ಹಳತು	30000-50000
ಕುಮಟ	
ಚಿಪ್ಪು	23069-26019
ಕೋಕ	6109-22229
ಫ್ಯಾಕ್ಟರಿ	3099-18411
ಹಳೆಚಾಲಿ	36969-39799
ಹೊಸಚಾಲಿ	31019-34509
ಸಾಗರ	
ಬಿಳಿಗೋಟು	15039-24199
ಚಾಲಿ	21099-32760
ಕೋಕ	10119-21699
ಕೆಂಪುಗೋಟು	18989-31089
ರಾಶಿ	24899-31089
ಸಿಪ್ಪೆಗೋಟು	8099-16225
ಶಿವಮೊಗ್ಗ	
ಬೆಟ್ಟೆ	43009-56760
ಗೊರಬಲು	17500-31319
ರಾಶಿ	40069-49899
ಸರಕು	48199-87500
ಸಿದ್ದಾಪುರ	
ಬಿಳಿಗೋಟು	23699-28199
ಚಾಲಿ	31000-34719
ಕೋಕ	18899-22699
ರಾಶಿ	40899-45769
ತಟ್ಟಿಬೆಟ್ಟೆ	32599-38999
ಶಿರಸಿ	
ಬೆಟ್ಟೆ	26599-38708
ಬಿಳಿಗೋಟು	23199-29369
ಚಾಲಿ	33018-36062
ರಾಶಿ	41099-44109
ಯಲ್ಲಾಪುರ	
ಬಿಳಿಗೋಟು	15699-27616
ಚಾಲಿ	28010-35769
ಕೋಕ	6309-16012
ಕೆಂಪುಗೋಟು	16899-24055
ರಾಶಿ	39799-55555
ತಟ್ಟಿಬೆಟ್ಟೆ	26499-35199

ವಿನಿಮಯ ದರ

$ ಡಾಲರ್	84.38
£ ಪೌಂಡ್	108.86
€ ಯುರೊ	90.20
¥ ಯೆನ್ (100ಕ್ಕೆ)	55

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1540)
ಸೋಯಾ (ರಿಫೈನ್ಡ್)	₹1390 (1370)
ಸೂರ್ಯಕಾಂತಿ (ರಿಫೈನ್ಡ್)	₹1420 (1385)
ಪಾಮೋಲಿನ್	₹1415 (1385)

ದೇಣಿಗೆ ಸಂಗ್ರಾಹಕನಿಗೆ ಜನಾಂಗೀಯ ನಿಂದನೆ

ವಾಷಿಂಗ್ಟನ್ (ಪಿಟಿಐ): ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಪರ ದೇಣಿಗೆ ಸಂಗ್ರಹಿಸಿದ್ದ ಭಾರತೀಯ ಅಮೆರಿಕನ್ ವ್ಯಕ್ತಿಗೆ, ‘ಅಮೆರಿಕ ತೊರೆದು ಭಾರತಕ್ಕೆ ಹೋಗಿ’ ಎನ್ನುವುದರ ಜೊತೆಗೆ ಜನಾಂಗೀಯ ನಿಂದನೆ ಹಾಗೂ ಬೆದರಿಕೆ ಸಂದೇಶ ಕಳುಹಿಸಲಾಗಿದೆ.

‘ಅಮೆರಿಕನ್ನರಿಗಾಗಿ ಉತ್ತಮವಾದುದ್ದನ್ನು ಮಾಡುತ್ತಿದ್ದೀವಿ ಎಂದು ನೀವು ಹೇಳಿಕೊಳ್ಳುತ್ತೀರಿ. ಆದರೆ ಏನನ್ನೂ ಮಾಡುತ್ತಿಲ್ಲ. ಕಾಳಜಿ ವಹಿಸುತ್ತಿಲ್ಲ. ನೀವು ಭಾರತೀಯರು. ಭಾರತೀಯರ ಬಗ್ಗೆ ಮಾತ್ರ ಕಾಳಜಿ ವಹಿಸುತ್ತೀರಿ. ಭಾರತಕ್ಕಾಗಿ ಉತ್ತಮವಾದುದ್ದನ್ನು ಮಾಡುತ್ತೀರಿ. ನೀವೇಕೆ ಇಲ್ಲಿದ್ದೀರಿ? ಅಮೆರಿಕದಲ್ಲಿ ಭಿಕ್ಷುಕನಾಗುವುದನ್ನು ನಿಲ್ಲಿಸಿ. ಭಾರತದಲ್ಲಿ ನಾಯಕರಾಗಿರಿ’ ಎಂಬ ಒಕ್ಕಣೆಯುಳ್ಳ ಸಂದೇಶವನ್ನು ಅಪರಿಚಿತ ಸಂಖ್ಯೆಯಿಂದ ಅಜಯ್ ಜೈನ್ ಭುಟೋರಿಯಾ ಅವರಿಗೆ ಭಾನುವಾರ ಕಳಿಸಲಾಗಿದೆ.

ಕಮಲಾ ಹ್ಯಾರಿಸ್ ಪರ ದೇಣಿಗೆ ಸಂಗ್ರಹಿಸುವ ಜೊತೆಗೆ ಗೆಲುವಿಗಾಗಿ ಚುನಾವಣಾ ಪ್ರಚಾರದ ಅಭಿಯಾನ ನಡೆಸಿದವರಲ್ಲಿ ಅಜಯ್ ಭುಟೋರಿಯಾ ಸಹ ಒಬ್ಬರು.

‘ಗ್ರೀನ್ ಕಾರ್ಡ್ ಬ್ಯಾಕ್‌ಲಾಗ್ ವಿಷಯದಲ್ಲಿ ಹೋರಾಟ ನಡೆಸಲು ಭಾರತಕ್ಕೆ ಹಿಂತಿರುಗುವಂತೆ ಟ್ರಂಪ್ ಬೆಂಬಲಿಗರು ನನ್ನನ್ನು ಒತ್ತಾಯಿಸುತ್ತಿದ್ದಾರೆ’ ಎಂದು ಭುಟೋರಿಯಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ತಮಗೆ ಬಂದಿರುವ ಸಂದೇಶದ ಕೆಲ ತುಣುಕುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

‘ಉಕ್ರೇನ್ ಯುದ್ಧ ಅಂತ್ಯಕ್ಕೆ ಪುಟಿನ್ ಜತೆ ಟ್ರಂಪ್ ಮಾತುಕತೆ’

ವಾಷಿಂಗ್ಟನ್: ‘ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ಅವರು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜೊತೆಗೆ ದೂರವಾಣಿ ಮಾತುಕತೆ ನಡೆಸಿದ್ದಾರೆ’ ಎಂದು ಮಾಧ್ಯಮವೊಂದು ವರದಿ ಮಾಡಿದೆ. ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧ ಕೊನೆಗೊಳಿಸುವ ಸಂಬಂಧ ಈ ಮಾತುಕತೆ ನಡೆದಿದೆ ಎಂದು ವರದಿ ಹೇಳಿದೆ.



ವ್ಲಾದಿಮಿರ್ ಪುಟಿನ್



ಡೊನಾಲ್ಡ್ ಟ್ರಂಪ್

ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯ ಗಳಿಸಿದ ಬಳಿಕ ಟ್ರಂಪ್ ಅವರು 70 ದೇಶಗಳ ಮುಖ್ಯಸ್ಥರ ಜತೆ ಮಾತುಕತೆ ನಡೆಸಿದ್ದರು. ಪ್ರಧಾನಿ ನರೇಂದ್ರ ಮೋದಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಟ್ಟಿಗೆ ಮೊದಲು ದೂರವಾಣಿ ಕರೆ ಮಾಡಿ ಮಾತನಾಡಿದ್ದರು.

‘ಯುರೋಪ್ ಖಂಡದಲ್ಲಿ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಪುಟಿನ್ ಹಾಗೂ ಟ್ರಂಪ್ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಉಕ್ರೇನ್–ರಷ್ಯಾ ಯುದ್ಧವನ್ನು ಶೀಘ್ರದಲ್ಲಿಯೇ ಕೊನೆಗೊಳಿಸುವ ಆಸಕ್ತಿ ತೋರಿದ ಬೆನ್ನಲ್ಲೇ, ಈ ಬೆಳವಣಿಗೆ ನಡೆದಿದೆ’ ಎಂದು ‘ವಾಷಿಂಗ್ಟನ್ ಪೋಸ್ಟ್’ ವರದಿ ಮಾಡಿದೆ.

‘ರಷ್ಯಾದ ಜೊತೆಗೆ ಉಕ್ರೇನ್ ಸಂಘರ್ಷ ಮತ್ತಷ್ಟು ತೀವ್ರ ಸ್ವರೂಪ ಪಡೆಯುವುದನ್ನು ಟ್ರಂಪ್ ಇಷ್ಟಪಡುತ್ತಿಲ್ಲ, ಅಧ್ಯಕ್ಷರಾಗಿ ಜವಾಬ್ದಾರಿ ವಹಿಸುವ ಮುನ್ನವೇ, ಸಂಘರ್ಷ ಕೊನೆಗೊಳಿಸಲು ಆಸಕ್ತಿ ಹೊಂದಿದ್ದಾರೆ ಎಂದು ಅಮೆರಿಕದ ಮಾಜಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ’ ಎಂದೂ ಪತ್ರಿಕೆ ವರದಿ ಮಾಡಿದೆ.

ಅಮೆರಿಕದ 47ನೇ ಅಧ್ಯಕ್ಷರಾಗಿ 2025ರ ಜ.20ರಂದು ಡೊನಾಲ್ಡ್ ಟ್ರಂಪ್ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ದೂರವಾಣಿ ಮಾತುಕತೆ ನಡೆದಿರುವುದನ್ನು ರಷ್ಯಾದ ಅಧ್ಯಕ್ಷರ ನಿವಾಸದ ವಕ್ತಾರ ಡಿಮಿಟ್ರಿ ಪೆಸ್ಕೋವ್ ತಳ್ಳಿಹಾಕಿದ್ದಾರೆ.

‘ಯಾವುದೇ ಸಂಭಾಷಣೆ ನಡೆದಿಲ್ಲ. ಇದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ವಿಷಯ. ಸುದ್ದಿಯು ಶುದ್ಧ ಕಾಲ್ಪನಿಕ’ ಎಂದು ರಷ್ಯಾದ ‘ಟಾಸ್’ ಸುದ್ದಿಸಂಸ್ಥೆಗೆ ಪೆಸ್ಕೋವ್ ತಿಳಿಸಿದ್ದಾರೆ.

‘ತಾಪಮಾನ ನಿಯಂತ್ರಣ: ದೃಢವಾದ ಕ್ರಮ ಅಗತ್ಯ’

ಬಾಕು (ಪಿಟಿಐ): ‘ಜಾಗತಿಕ ತಾಪಮಾನ ನಿಯಂತ್ರಿಸುವ ನಿಟ್ಟಿನಲ್ಲಿ ಮಹತ್ವಾಕಾಂಕ್ಷಿ ಕ್ರಮಗಳನ್ನು ಜಾರಿಗೊಳಿಸಬೇಕು. ಅದಕ್ಕಾಗಿ ಹಣಕಾಸು ವಿನಿಯೋಗಿಸಲು ಪರಿಷ್ಕೃತ ಗುರಿ ನಿಗದಿಪಡಿಸಬೇಕಾದ ಅಗತ್ಯವಿದ್ದು, ಪ್ರತಿ ರಾಷ್ಟ್ರದ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳಬೇಕು’ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಸೈಮನ್ ಸ್ಟಿಯಲ್ ಪ್ರತಿಪಾದಿಸಿದರು.

ಅಜರ್‌ಬೈಜಾನ್‌ನಲ್ಲಿ ಸೋಮವಾರ ಆರಂಭಗೊಂಡ ‘ಸಿಒಪಿ29’ ಹವಾಮಾನ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದರು.

‘ಹವಾಮಾನ ಬದಲಾವಣೆ ವಿಚಾರದಲ್ಲಿ ಜಾಗತಿಕ ನಾಯಕರು ತುರ್ತಾಗಿ ಸಂಘಟಿತರಾಗಿ ಕಾರ್ಯಪ್ರವೃತ್ತರಾಗಬೇಕು. ಹೆಚ್ಚಿನ ಪ್ರಗತಿಯ ಹೊರತಾಗಿಯೂ, ವಿಶ್ವದಲ್ಲಿ ತಾಪಮಾನ ಹೆಚ್ಚಳಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ’ ಎಂದರು.

‘ಹವಾಮಾನ ವೈಪರೀತ್ಯದ ಬಿಕ್ಕಟ್ಟು ನಿವಾರಿಸಲು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಸಮಾವೇಶವು ಪ್ರಮುಖ ವೇದಿಕೆಯಾಗಿದ್ದು, ಪ್ರತಿ ರಾಷ್ಟ್ರವೂ ಇದರ ಹೊಣೆಗಾರಿಕೆ ಹೊರಬೇಕು’ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮದರಸಾದಲ್ಲಿ 14 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ

ಮೀರತ್ (ಉತ್ತರಪ್ರದೇಶ) (ಪಿಟಿಐ): 14 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಉತ್ತರ ಪ್ರದೇಶದ ಮೀರತ್‌ನಲ್ಲಿ ಮದರಸಾದ ವ್ಯವಸ್ಥಾಪಕ ಮಕ್ಸೂದ್ ಹಾಗೂ ಶಿಕ್ಷಕ ಆದಿಲ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.


ಈ ಇಬ್ಬರೂ ಮದರಸಾದಲ್ಲಿ 8ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಆಕೆಯ ಕುಟುಂಬಸ್ಥರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇಬ್ಬರೂ ಆರೋಪಿಗಳನ್ನು ಭಾನುವಾರ ಬಂಧಿಸಿದ್ದಾರೆ.

'ಅ.29ರಂದು ಬಾಲಕಿಗೆ ಕಿರುಕುಳ ನೀಡಲಾಗಿದೆ. ಆಕೆಯನ್ನು ಕೊಲೆ ಮಾಡುವುದಾಗಿಯೂ ಆರೋಪಿಗಳು ಬೆದರಿಕೆ ಹಾಕಿದ್ದಾರೆ. ಇದಾದ ಬಳಿಕ ಹೆದರಿದ್ದ ಬಾಲಕಿ ಮದರಸಾಕ್ಕೆ ಹೋಗುವುದನ್ನು ನಿಲ್ಲಿಸಿದ್ದಳು' ಎಂದು ಆಕೆಯ ತಂದೆ ಪೊಲೀಸರಿಗೆ ತಿಳಿಸಿದ್ದಾರೆ.

ಆರೋಪಿಗಳನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅವರನ್ನು ನ್ಯಾಯಾಂಗ ವಶಕ್ಕೆ ನೀಡಿ ನ್ಯಾಯಾಧೀಶರು ಆದೇಶಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಮಿಸ್ರಿ ಅಧಿಕಾರ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರ ಅಧಿಕಾರ ಅವಧಿಯನ್ನು 2026ರ ಜುಲೈ 14ರವರೆಗೆ ವಿಸ್ತರಣೆ ಮಾಡಿದೆ.



ಸಂಪುಟದ ನೇಮಕಾತಿ ಸಮಿತಿಯು ಮಿಸ್ರಿ ಅವರ ಸೇವಾ ಅವಧಿಯನ್ನು ವಿಸ್ತರಿಸಲು ಅನುಮೋದನೆ ನೀಡಿದೆ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯವು ಸೋಮವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ. 1989ನೇ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿಯಾಗಿರುವ ಮಿಸ್ರಿ, ವಿದೇಶಾಂಗ ಕಾರ್ಯದರ್ಶಿಯಾಗಿ ಈ ವರ್ಷದ ಜುಲೈ 15ರಂದು ಅಧಿಕಾರ ಸ್ವೀಕರಿಸಿದ್ದರು. ಅವರು ಈ ತಿಂಗಳ 30ರಂದು ವಯೋನಿವೃತ್ತಿ ಹೊಂದಬೇಕಿತ್ತು.

ಟೈಟ್ಲರ್ ವಿಚಾರಣೆ ಮುಂದುವರಿಸಲು ಅನುಮತಿ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆ ಸಂದರ್ಭದಲ್ಲಿ ನಡೆದ ಹತ್ಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ದಾಖಲಾಗಿರುವ ಕೊಲೆ ಪ್ರಕರಣದ ವಿಚಾರಣೆ ಮುಂದುವರಿಸಲು ದೆಹಲಿ ಹೈಕೋರ್ಟ್ ಸಮ್ಮತಿಸಿದೆ.

ಪ್ರಕರಣದ ವಿಚಾರಣೆಗೆ ತಡೆಯಾಜ್ಞೆ ಕೋರಿ ಟೈಟ್ಲರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮನೋಜ್ ಕುಮಾರ್ ಓಹ್ರಿ, 'ನ.29ರಂದು ದೆಹಲಿ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರಿಸಬಹುದು' ಎಂದು ಸ್ಪಷ್ಟಪಡಿಸಿದರು.

'ವಿಚಾರಣೆ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಲಾಗಿದೆ. ಆದರೆ, ಇದು ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ' ಎಂದು ನ್ಯಾಯಮೂರ್ತಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2023ರ ಆಗಸ್ಟ್‌ನಲ್ಲಿ ದೆಹಲಿ ನ್ಯಾಯಾಲಯವು ಟೈಟ್ಲರ್‌ಗೆ ನಿರೀಕ್ಷಣಾ ಜಾಮೀನು ನೀಡಿದೆ.

ಕೈಕೊಟ್ಟ ನಬಾರ್ಡ್: ಸಾಲಕ್ಕೆ ಕುತ್ತು

ಒಂದನೇ ಪುಟದಿಂದ...

ಡಿಸಿಸಿ ಬ್ಯಾಂಕುಗಳ ಪರವಾಗಿ ಅಪೆಕ್ಸ್ ಬ್ಯಾಂಕಿಗೆ ರಿಯಾಯಿತಿ ಬಡ್ಡಿ ದರದಲ್ಲಿ (ಶೇ 4.50) ₹2,340 ಕೋಟಿ ಹಂಚಿಕೆ ಮಾಡಿದೆ. ಆ ಮೂಲಕ, ₹6,822 ಕೋಟಿ ಕಡಿಮೆ ಮಂಜೂರು ಮಾಡಿದೆ. ಇದರಿಂದಾಗಿ ಕೃಷಿ ಸಾಲ ನೀಡಲು ಹಣದ ಕೊರತೆಯಾಗಲಿದೆ.

'2023–24ನೇ ಸಾಲಿನಲ್ಲಿ ನಬಾರ್ಡ್ ರಿಯಾಯಿತಿ ಬಡ್ಡಿ ದರದಲ್ಲಿ ₹5,600 ಕೋಟಿ ಮಂಜೂರು ಮಾಡಿತ್ತು. ಪ್ರಸಕ್ತ ಸಾಲಿನಲ್ಲಿ ₹2,340 ಕೋಟಿ ಮಾತ್ರ ಮಂಜೂರು ಮಾಡಿದೆ. ಈ ಮಿತಿಯು ಹಿಂದಿನ ವರ್ಷದ ಮಂಜೂರಾತಿಯ ಶೇ 42ರಷ್ಟಿದ್ದು, ಪ್ರಸಕ್ತ ಸಾಲಿನ ಬೇಡಿಕೆಯ ಶೇ 58ರಷ್ಟು ಇಳಿಕೆಯಾಗಿದೆ. ಬ್ಯಾಂಕುಗಳ ಆರ್ಥಿಕ ಸ್ಥಿತಿಗತಿಯ ಮೇಲೆ ವ್ಯತಿರಿಕ್ತ ಪರಿಣಾಮದ ಜತೆಗೆ, ಈಗಾಗಲೇ ಪಡೆದಿರುವ ಸಾಲಗಳನ್ನು ಮರುಪಾವತಿಸಲು ಕೂಡಾ ಕಷ್ಟವಾಗಲಿದೆ' ಎಂದು ಅಪೆಕ್ಸ್ ಬ್ಯಾಂಕಿನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ರಾಜ್ಯದಲ್ಲಿ ವ್ಯವಸಾಯ ಚಟುವಟಿಕೆ ಈಗಾಗಲೇ ಚುರುಕುಗೊಂಡಿದ್ದು, ರೈತರಿಗೆ ಸಂಬಂಧಿಸಿದ ಬೀಜ, ಗೊಬ್ಬರ ಮತ್ತು ಇತರ ಅವಶ್ಯಗಳಿಗೆ ಹಣಕಾಸಿನ ಅಗತ್ಯವಿದೆ. ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿ ದರದ ಕೃಷಿ ಸಾಲ ಮಿತಿ ಗಣನೀಯವಾಗಿ ಕಡಿಮೆ ಆಗಿರುವುದರಿಂದ ರೈತರಿಗೆ ಅವಶ್ಯವಾದ ಸಾಲ ಸೌಲಭ್ಯಕ್ಕೆ ಸಂಪನ್ಮೂಲದ ಕೊರತೆ ಉಂಟಾಗಲಿದೆ' ಎಂದೂ ಅವರು ಹೇಳಿದರು.

ರಾಷ್ಟ್ರ ವಿರೋಧಿ ಶಕ್ತಿಗಳನ್ನು ಸೋಲಿಸಲು ಒಂದಾಗಬೇಕು: ಪ್ರಧಾನಿ ಕರೆ

ಸಮಾಜ ವಿಭಜನೆಗೆ ಯತ್ನ: ಮೋದಿ

ಅಹಮದಾಬಾದ್ (ಪಿಟಿಐ): ಕೆಲವು ದೇಶ ವಿರೋಧಿ ಶಕ್ತಿಗಳು ತಮ್ಮ ಪಟ್ಟಭದ್ರ ಹಿತಾಸಕ್ತಿಗಳಿಗಾಗಿ ಸಮಾಜವನ್ನು ವಿಭಜಿಸಲು ಪ್ರಯತ್ನಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಆರೋಪಿಸಿದ್ದಾರೆ.

ಗುಜರಾತ್‌ನ ಖೇಡಾ ಜಿಲ್ಲೆಯ ವಡತಾಲ್‌ನಲ್ಲಿರುವ ಸ್ವಾಮಿನಾರಾಯಣ ದೇವಸ್ಥಾನವು 200 ವರ್ಷ ಪೂರೈಸಿರುವ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಭಕ್ತರನ್ನು ಉದ್ದೇಶಿಸಿ ಅವರು ವರ್ಚುವಲ್ ಆಗಿ ಮಾತನಾಡಿದರು.

'2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಜನರ ನಡುವಿನ ಒಗ್ಗಟ್ಟು ಮತ್ತು ರಾಷ್ಟ್ರದ ಸಮಗ್ರತೆ ಮುಖ್ಯವಾಗಿದೆ. ಆದರೆ, ದುರದೃಷ್ಟವಶಾತ್ ಕೆಲವರು ಜಾತಿ, ಧರ್ಮ, ಭಾಷೆ, ಲಿಂಗ, ಗ್ರಾಮ–ನಗರದ ಆಧಾರದಲ್ಲಿ ನಮ್ಮ ಸಮಾಜವನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ದೂರಿದರು.



ಗುಜರಾತ್‌ನ ಸ್ವಾಮಿನಾರಾಯಣ ದೇವಸ್ಥಾನದ ದ್ವಿಶತಮಾನೋತ್ಸವ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಧಾನಿ ಮೋದಿ ಅವರು ವರ್ಚುವಲ್ ಆಗಿ ಮಾತನಾಡಿದರು —ಪಿಟಿಐ ಚಿತ್ರ

'ನಾವು ದೇಶ ವಿರೋಧಿಗಳ ದುರುದ್ದೇಶವನ್ನು ಅರ್ಥಮಾಡಿಕೊಂಡು ಅವರನ್ನು ಸೋಲಿಸಲು ಒಂದಾಗಬೇಕು' ಎಂದು ಕರೆ ನೀಡಿದರು. ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಮೊದಲ ಪ್ರಮುಖ ಹೆಜ್ಜೆ 'ಆತ್ಮನಿರ್ಭರತೆ' ಎಂದು ಹೇಳಿದರು.

ದೇಶವನ್ನು ಅಭಿವೃದ್ಧಿಯ ಪಥದತ್ತ ಮುನ್ನಡೆಸಲು ಪಣತೊಟ್ಟಿರುವ ನಾಗರಿಕರ ಜತೆ ಸ್ವಾಮಿನಾರಾಯಣ ಪಂಥದ ಎಲ್ಲ ಸಂತರು ಕೈಜೋಡಿಸಬೇಕು ಎಂದು ವಿನಂತಿಸಿದರು.

ವಡತಾಲ್ ಸ್ವಾಮಿ ನಾರಾಯಣ ದೇವಸ್ಥಾನದೊಂದಿಗಿನ ತಮ್ಮ ನಂಟು, ಗುಜರಾತ್ ಮುಖ್ಯಮಂತ್ರಿಯಾಗಿದ್ದ ದಿನಗಳಿಂದಲೂ ಇದೆ ಎಂದು ಹೇಳಿದರು. ಸ್ವಾಮಿನಾರಾಯಣ ದೇವಸ್ಥಾನವು ಎರಡು ಶತಮಾನಗಳನ್ನು ಪೂರೈಸಿರುವ ನೆನಪಿಗಾಗಿ ಕೇಂದ್ರ ಸರ್ಕಾರವು ಈಚೆಗೆ ನಾಣ್ಯವನ್ನು ಬಿಡುಗಡೆ ಮಾಡಿದೆ ಎಂದರು.


'ಕುಂಭಮೇಳ; ಪ್ರಚಾರ ಮಾಡಿ'

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮುಂದಿನ ವರ್ಷದ ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಆಯೋಜನೆಯಾಗಿರುವ ಕುಂಭಮೇಳವು 12 ವರ್ಷಗಳ ಬಳಿಕ ನಡೆಯುತ್ತಿರುವ ಕಾರಣ 'ಪೂರ್ಣಕುಂಭ' ಆಗಿರಲಿದೆ ಎಂದು ಪ್ರಧಾನಿ ಹೇಳಿದರು.

'ಭಾರತ ಮಾತ್ರವಲ್ಲದೆ, ವಿಶ್ವದ ವಿವಿಧ ದೇಶಗಳಲ್ಲಿ ದೇವಾಲಯಗಳು ಇವೆ. ನಿಮ್ಮ ಸಮೀಪದ ದೇವಾಲಯಗಳ ಮೂಲಕ ಈ ಕುಂಭಮೇಳದ ಬಗ್ಗೆ ಪ್ರಚಾರ ಮಾಡುವಂತೆ ಮನವಿ ಮಾಡುತ್ತೇನೆ. ಕುಂಭಮೇಳದ ಮಹತ್ವ ಮತ್ತು ಅದನ್ನು ಏಕೆ ಆಚರಿಸಲಾಗುತ್ತಿದೆ ಎಂಬ ಬಗ್ಗೆ ವಿದೇಶಿಯರಿಗೂ ಮಾಹಿತಿ ನೀಡಬೇಕು. ವಿದೇಶಗಳಲ್ಲಿರುವ ಪ್ರತಿಯೊಂದು ದೇವಾಲಯವು ಕನಿಷ್ಠ 100 ವಿದೇಶಿಯರನ್ನು ಕುಂಭಮೇಳಕ್ಕೆ ಕರೆತರಲು ಪ್ರಯತ್ನಿಸಬೇಕು' ಎಂದು ತಿಳಿಸಿದರು.

ರಾತ್ರಿ ಪಾಳಿ: ಯಕೃತ್ತು-ಮಿದುಳಿನ ಸಂವಹನಕ್ಕೆ ಅಡ್ಡಿ – ಅಧ್ಯಯನ

ನವದೆಹಲಿ (ಪಿಟಿಐ): ಅನಿಯಮಿತ ಅಥವಾ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವುದರಿಂದ ಯಕೃತ್ತು–ಮಿದುಳಿನ ನಡುವಣ ಸಂವಹನಕ್ಕೆ ಅಡ್ಡಿ ಉಂಟಾಗುತ್ತದೆ ಎಂಬುದು ಹೊಸ ಅಧ್ಯಯನದಲ್ಲಿ ಕಂಡುಬಂದಿದೆ.



ಹೊತ್ತಲ್ಲದ ಹೊತ್ತಲ್ಲಿ ಮತ್ತು ಅತಿಯಾಗಿ ತಿನ್ನುವುದರಿಂದ ಆರೋಗ್ಯದ ಮೇಲೆ ಉಂಟಾಗುವ ಕೆಟ್ಟ ಪರಿಣಾಮಗಳನ್ನು ತಪ್ಪಿಸುವುದಕ್ಕೆ ಈ ಅಧ್ಯಯನ ವರದಿ ನೆರವಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ.

ರೂಢಿಯಲ್ಲದ ಹೊತ್ತಲ್ಲಿ ಕೆಲಸ ಮಾಡುವುದರಿಂದ ಯಕೃತ್ತಿನ ಚಟುವಟಿಕೆ ಮತ್ತು ಅದು ಮಿದುಳಿಗೆ ಸಂದೇಶ ರವಾನಿಸುವ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಸಂಶೋಧಕರು ಕಂಡುಕೊಂಡಿದ್ದಾರೆ.

ಯಕೃತ್ ಕಳುಹಿಸುವ ಸಂದೇಶದಲ್ಲಿ ಏರುಪೇರು ಉಂಟಾದಾಗ ಮಿದುಳು ಇನ್ನಷ್ಟು ತಿನ್ನುವಂತೆ ಪ್ರಚೋದಿಸುತ್ತದೆ. ಇದರಿಂದ ಆ ವ್ಯಕ್ತಿಗೆ ಹೊತ್ತಲ್ಲದ ಹೊತ್ತಲ್ಲಿ ತಿನ್ನಬೇಕು ಎನಿಸುತ್ತದೆ.

ಯಕೃತ್ತು, ಮಿದುಳಿಗೆ ಸಂದೇಶ ರವಾನಿಸುವ ನರಗಳನ್ನು ಗುರಿಯಾಗಿಸಿಕೊಂಡು ಚಿಕಿತ್ಸೆ ನೀಡಿದರೆ, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಜನರಲ್ಲಿ ಅತಿಯಾಗಿ ತಿನ್ನುವ ಸಮಸ್ಯೆ ಕಂಡು ಬರುವುದನ್ನು ತಪ್ಪಿಸಲು ಸಾಧ್ಯವಾಗಲಿದೆ ಎಂದು ಅಧ್ಯಯನ ತಂಡ ಹೇಳಿದೆ.

ಅಧ್ಯಯನ ತಂಡವು ಇದಕ್ಕಾಗಿ ಇಲಿಗಳ ಮೇಲೆ ಪ್ರಯೋಗ ನಡೆಸಿದೆ. ಸಂಶೋಧಕರು ಇಲಿಗಳ ಆರ್‌ಇವಿ–ಇಆರ್‌ಬಿ ಜೀನುಗಳನ್ನು ಆಯ್ಕೆಮಾಡಿಕೊಂಡಿದ್ದರು. ಈ ಜೀನುಗಳು ಮನುಷ್ಯರ ಜೀನುಗಳಲ್ಲಿರುವ ಆನುವಂಶಿಕ ಲಕ್ಷಣ ಮತ್ತು ಜೈವಿಕ ಪ್ರಕ್ರಿಯೆಯನ್ನು ಹೊಂದಿವೆ. ಈ ಜೀನುಗಳನ್ನು ನಿಷ್ಕ್ರಿಯಗೊಳಿಸಿದಾಗ ಇಲಿಗಳ ಯಕೃತ್ತಿನ ಕೆಲಸದಲ್ಲಿ ಏರುಪೇರು ಉಂಟಾಗಿದೆ. ಇದರಿಂದ ಆಹಾರ ಸೇವನೆ ಕ್ರಮದಲ್ಲಿ ನಾಟಕೀಯ ಬದಲಾವಣೆಗಳು ಕಂಡುಬಂದವು ಎಂದು ಅಧ್ಯಯನ ವರದಿ ತಿಳಿಸಿದೆ.


ನನ್ನನ್ನು ಕಮಲ್ ಹಾಸನ್ ಎಂದೇ ಕರೆಯಿರಿ: ಮನವಿ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: 'ಕಲಾವಿದ ಕಲೆಗಿಂತ ಮಿಗಿಲಲ್ಲ. ಕಲಾವಿದನನ್ನು ಕಲೆಗಿಂತ ಎತ್ತರಕ್ಕೆ ಏರಿಸಬಾರದು ಎನ್ನುವುದು ನನ್ನ ವಿನಮ್ರ ನಂಬಿಕೆ. ಸಿನಿಮಾ ಎಂಬ ಕಲೆಯು ವ್ಯಕ್ತಿಗಿಂತ ಬಹಳ ಎತ್ತರದಲ್ಲಿದೆ. ನಾನು ಈ ಕಲೆಯ ವಿದ್ಯಾರ್ಥಿಯಷ್ಟೇ. ನನ್ನ ಅಪೂರ್ಣತೆ ಕುರಿತು ನನಗೆ ಅರಿವಿದೆ. ಇನ್ನಷ್ಟು ತಿದ್ದಿಕೊಳ್ಳಬೇಕಾದ ಕರ್ತವ್ಯವೂ ನನ್ನ ಮೇಲಿದೆ...'

ಹೀಗೆಂದು ಹೇಳುತ್ತಾ ನಟ ಕಮಲ್ ಹಾಸನ್, ಅಭಿಮಾನಿಗಳು ತಮಗೆ ನೀಡಿರುವ ಎಲ್ಲ ಬಿರುದಾವಳಿಗಳನ್ನು ತ್ಯಜಿಸುವುದಾಗಿ ಘೋಷಣೆ ಮಾಡಿದ್ದಾರೆ. ಅವರ ನಟನಾ ಕೌಶಲಕ್ಕಾಗಿ ಅಭಿಮಾನಿಗಳು ಕಮಲ್ ಹಾಸನ್ ಅವರನ್ನು 'ಉಲಗ ನಾಯಗನ್' (ವಿಶ್ವಕ್ಕೆ ಹೀರೊ) ಎಂದೂ 'ಕಲೈ ಜ್ಞಾನಿ' ಎಂದೂ 'ಸಕಲಕಲಾ ವಲ್ಲಭ' ಎಂದೂ ಎಂಎನ್‌ಎಂ ಕಾರ್ಯಕರ್ತರು 'ನಮ್ಮವರ್' ಎಂದೂ ಕರೆಯುತ್ತಾರೆ.

'ನನ್ನೆಲ್ಲ ಅಭಿಮಾನಿಗಳೇ, ಮಾಧ್ಯಮದವರೆ, ಸಿನಿಮಾ ರಂಗದ ಗೆಳೆಯರೇ, ಪಕ್ಷದ ಕಾರ್ಯಕರ್ತರೇ ಮತ್ತು ಭಾರತೀಯರೇ ಇನ್ನು ಮುಂದೆ ನನ್ನನ್ನು ಕಮಲ್ ಹಾಸನ್ ಅಥವಾ ಕಮಲ್ ಅಥವಾ ಕೆಎಚ್ ಎಂದು ಮಾತ್ರವೇ ಸಂಬೋಧಿಸಿ' ಎಂದು ಕಮಲ ಹಾಸನ್ ಅವರು ಪತ್ರ ಬರೆದಿದ್ದಾರೆ. ಈ ಪತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.



ನನ್ನ ಬೇರುಗಳಿಗೆ ಮತ್ತು ಬದುಕಿನ ಗುರಿಗೆ ಬದ್ಧವಾಗಿರಬೇಕು ಎಂಬ ಕಾರಣಕ್ಕೆ ಅತ್ಯಂತ ವಿನಯಪೂರ್ವಕವಾಗಿ ತೆಗೆದುಕೊಂಡ ನಿರ್ಧಾರ ಇದಾಗಿದೆ

ಕಮಲ್ ಹಾಸನ್, ನಟ

'ಬೇರೆ ಎಲ್ಲ ಕಲೆಗಳಂತೆಯೇ ಸಿನಿಮಾ ಕೂಡ ಸೃಜನಶೀಲ ಅಭಿವ್ಯಕ್ತಿ, ಇದು ಎಲ್ಲರಿಗೂ ಸೇರಿದ್ದು. ಅಸಂಖ್ಯಾತ ಕಲಾವಿದರು, ತಂತ್ರಜ್ಞರು ಹಾಗೂ ಪ್ರೇಕ್ಷಕರಿಂದ ಈ ಕಲಾಪ್ರಕಾರವು ರೂಪುಗೊಂಡಿದೆ. ಸಿನಿಮಾ ಕ್ಷೇತ್ರ, ಮಾನವನ ವೈವಿಧ್ಯಮಯ, ಶ್ರೀಮಂತ, ನಿರಂತರವಾಗಿ ವಿಕಾಸಗೊಳ್ಳುತ್ತಾ ಹೋಗುವ ಕಥೆಗಳ ಸಾಕಾರ ಮೂರ್ತಿಯಾಗಿ ನಿಂತಿದೆ' ಎಂದು ಪತ್ರದಲ್ಲಿ ಬರೆದುಕೊಂಡಿದ್ದಾರೆ.


ಖನ್ನಾ ಅವರಿಗೆ ಸುಪ್ರೀಂ ಕೋರ್ಟ್‌ಗೆ ಬಡ್ತಿ ನೀಡಿದಾಗ ವಿವಾದ ಸೃಷ್ಟಿಯಾಗಿತ್ತು

51ನೆಯ ಸಿಜೆಐ ಆಗಿ ನ್ಯಾ. ಖನ್ನಾ ಪ್ರಮಾಣ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ 51ನೆಯ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿ ಸಂಜೀವ್ ಖನ್ನಾ ಅವರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾಯಮೂರ್ತಿ ಖನ್ನಾ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ನ್ಯಾಯಮೂರ್ತಿ ಖನ್ನಾ ಅವರು ಇಂಗ್ಲಿಷ್ ಭಾಷೆಯಲ್ಲಿ, ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನ್ಯಾಯಮೂರ್ತಿ ಖನ್ನಾ ಅವರು 2025ರ ಮೇ 13ರಂದು ಸಿಜೆಐ ಹುದ್ದೆಯಿಂದ ನಿವೃತ್ತರಾಗಲಿದ್ದಾರೆ.

ಬಡ್ತಿ ಸಂದರ್ಭದ ವಿವಾದ: ಖನ್ನಾ ಅವರಿಗೆ 2019ರ ಜನವರಿಯಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಬಡ್ತಿ ನೀಡುವ ಸಂದರ್ಭದಲ್ಲಿ ಭಾರಿ ವಿವಾದ ಸೃಷ್ಟಿಯಾಗಿತ್ತು. ನ್ಯಾಯಮೂರ್ತಿ ಖನ್ನಾ ಅವರಿಗೆ ಬಡ್ತಿ ನೀಡುವಾಗ ಇತರ ಹಲವು ನ್ಯಾಯಮೂರ್ತಿಗಳ ಸೇವಾ ಹಿರಿತನವನ್ನು ಕಡೆಗಣಿಸಲಾಗಿದೆ ಎಂಬುದು ವಿವಾದದ ಮೂಲವಾಗಿತ್ತು. ಆದರೆ ಈ ವಿವಾದಕ್ಕೆ ಸೊಪ್ಪು ಹಾಕದ ಕೇಂದ್ರವು, ಸುಪ್ರೀಂ ಕೋರ್ಟ್‌ನ ಕೊಲಿಜಿಯಂ (ಹಿರಿಯ ನ್ಯಾಯಮೂರ್ತಿಗಳ ಸಮಿತಿ) ಶಿಫಾರಸಿಗೆ ಅನುಗುಣವಾಗಿ ನ್ಯಾಯಮೂರ್ತಿ ಖನ್ನಾ ಅವರಿಗೆ ಬಡ್ತಿ ನೀಡಿತು.



ಸಿಜೆಐ ಆಗಿ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಪ್ರಮಾಣ ವಚನ ಸ್ವೀಕರಿಸಿದರು. —ಪಿಟಿಐ ಚಿತ್ರ

ಆ ಸಂದರ್ಭದಲ್ಲಿ ಭಾರತೀಯ ವಕೀಲರ ಪರಿಷತ್ತು (ಬಿಸಿಐ) ನ್ಯಾಯಮೂರ್ತಿ ಖನ್ನಾ ಅವರನ್ನು ಸುಪ್ರೀಂ ಕೋರ್ಟ್‌ಗೆ ನೇಮಕ ಮಾಡಿದ್ದನ್ನು 'ಸ್ವೇಚ್ಛೆಯ ಕ್ರಮ' ಎಂದು ಟೀಕಿಸಿತ್ತು. ಈ ನೇಮಕದಿಂದಾಗಿ, ಸೇವಾ ಹಿರಿತನ ಕಡೆಗಣನೆಗೆ ಒಳಗಾದ ನ್ಯಾಯಮೂರ್ತಿಗಳಿಗೆ ಅವಮಾನ ಆಗುತ್ತದೆ, ಅವರ ನೈತಿಕ ಸ್ಥೈರ್ಯ ಕುಸಿಯುತ್ತದೆ ಎಂದು ಕೂಡ ಅದು ಹೇಳಿತ್ತು.

ಕೊಲಿಜಿಯಂ ತೀರ್ಮಾನವನ್ನು ವಕೀಲರು ಹಾಗೂ ದೇಶದ ಜನಸಾಮಾನ್ಯರು 'ನ್ಯಾಯಸಮ್ಮತವಲ್ಲದ, ಸೂಕ್ತವಲ್ಲದ' ಕ್ರಮ ಎಂಬುದಾಗಿ ಪರಿಗಣಿಸುತ್ತಾರೆ ಎಂದು ಬಿಸಿಐ ಅಭಿಪ್ರಾಯ ವ್ಯಕ್ತಪಡಿಸಿತ್ತು. ಹಲವು ಹಿರಿಯ ನ್ಯಾಯಮೂರ್ತಿಗಳ ಹಾಗೂ ಮುಖ್ಯ ನ್ಯಾಯಮೂರ್ತಿಗಳ ಸೇವಾ ಹಿರಿತನ ಬದಿಗೆ ಸರಿಸುವುದನ್ನು ಜನರು ಸಹಿಸುವುದಿಲ್ಲ ಎಂದು ಬಿಸಿಐ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಅವರು ಆಗ ಹೇಳಿದ್ದರು.

'ನಮಗೆ ನ್ಯಾಯಮೂರ್ತಿ ಖನ್ನಾ ಅವರ ಬಗ್ಗೆ ದೂರು ಇಲ್ಲ. ಅವರು ತಮ್ಮ ಸರದಿ ಬರುವವರೆಗೆ ಕಾಯಬಹುದು. ಆದರೆ, ಹಲವು ಮುಖ್ಯ ನ್ಯಾಯಮೂರ್ತಿಗಳು ಹಾಗೂ ನ್ಯಾಯಮೂರ್ತಿಗಳ ಅರ್ಹತೆ ಮತ್ತು ಹಿರಿತನವನ್ನು ಕಡೆಗಿಸಿ, ಇವರಿಗೆ ಬಡ್ತಿ ನೀಡುವ ಅವಸರದ ಅಗತ್ಯವಿಲ್ಲ' ಎಂದು ಬಿಸಿಐ ಹೇಳಿತ್ತು.

ರಾಜಸ್ಥಾನ ಮತ್ತು ದೆಹಲಿ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಹಿರಿತನವನ್ನು ಕಡೆಗಣಿಸಿದ್ದಕ್ಕಾಗಿ ಆಗ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಆಗಿದ್ದ ಎಸ್.ಕೆ. ಕೌಲ್ ಅವರು ಆಗಿನ ಸಿಜೆಐ ರಂಜನ್ ಗೊಗೊಯಿ ಹಾಗೂ ಕೊಲಿಜಿಯಂ ಸದಸ್ಯರಿಗೆ ಪತ್ರವೊಂದನ್ನು ಬರೆದಿದ್ದರು.

ನ್ಯಾಯಮೂರ್ತಿ ಖನ್ನಾ ಅವರಿಗಿಂತ ಹೆಚ್ಚಿನ ಸೇವಾ ಹಿರಿತನ ಹೊಂದಿರುವ ಈ ಇಬ್ಬರು ಮುಖ್ಯ ನ್ಯಾಯಮೂರ್ತಿಗಳಿಗೆ ಸುಪ್ರೀಂ ಕೋರ್ಟ್‌ಗೆ ಬಡ್ತಿ ನೀಡದೆ ಇದ್ದರೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬ ಅಭಿಪ್ರಾಯ ನ್ಯಾಯಮೂರ್ತಿ ಕೌಲ್ ಅವರದ್ದಾಗಿತ್ತು ಎಂದು ಆಗ ಮೂಲಗಳು ಹೇಳಿದ್ದವು.

ಮೋದಿ, ಖರ್ಗೆ ಅಭಿನಂದನೆ

ಸಿಜೆಐ ಆಗಿ ಪ್ರಮಾಣ ವಚನ ಸ್ವೀಕರಿಸಿದ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರನ್ನು ಪ್ರಧಾನಿ ನರೇಂದ್ರ ಮೋದಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಇತರ ಹಲವು ಪ್ರಮುಖರು ಅಭಿನಂದಿದ್ದಾರೆ.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮೋದಿ ಅವರೂ ಹಾಜರಿದ್ದರು. ಸಿಜೆಐ ಆಗಿ ಅಧಿಕಾರ ವಹಿಸಿಕೊಂಡ ಖನ್ನಾ ಅವರು ಸೋಮವಾರ ಮಧ್ಯಾಹ್ನದ ಕಲಾಪದಲ್ಲಿ ಭಾಗಿಯಾದರು. ಕಲಾಪದ ಸಂದರ್ಭದಲ್ಲಿ ಹಾಜರಿದ್ದ ವಕೀಲರಿಗೆ ಅವರು ಧನ್ಯವಾದ ಅರ್ಪಿಸಿದರು.

'ಪ್ರಕರಣಗಳ ಸಂಖ್ಯೆ ತಗ್ಗಿಸಲು ಆದ್ಯತೆ'

ಸಿಜೆಐ ಆಗಿ ಅಧಿಕಾರ ವಹಿಸಿಕೊಂಡ ನಂತರ ತಮ್ಮ ಆದ್ಯತೆಗಳ ಬಗ್ಗೆ ವಿವರ ನೀಡಿದ ಸಂಜೀವ್ ಖನ್ನಾ ಅವರು, ಬಾಕಿ ಇರುವ ಪ್ರಕರಣಗಳ ಸಂಖ್ಯೆಯನ್ನು ತಗ್ಗಿಸುವ ಅಗತ್ಯ ಇದೆ ಎಂದು ಹೇಳಿದ್ದಾರೆ.

ನ್ಯಾಯ ಕೋರಿ ಅರ್ಜಿ ಸಲ್ಲಿಸುವುದು ಎಲ್ಲರಿಗೂ ಸಾಧ್ಯವಾಗುವಂತೆ ಆಗಬೇಕು, ಅದು ಎಲ್ಲರಿಗೂ ಕೈಗೆಟಕುವಂತೆ ಇರಬೇಕು, ಸಂಕೀರ್ಣವಾದ ಕಾನೂನು ಪ್ರಕ್ರಿಯೆಗಳು ಸರಳವಾಗಬೇಕು ಎಂಬುದು ಕೂಡ ಆದ್ಯತೆಗಳ ಸಾಲಿನಲ್ಲಿ ಇದೆ ಎಂದು ಪ್ರಕಟಣೆ ಹೇಳಿದೆ.

ಅಂತರರಾಜ್ಯ ಮಂಡಳಿ ಪುನರ್‌ರಚನೆ

ನವದೆಹಲಿ (ಪಿಟಿಐ): ಕೇಂದ್ರ–ರಾಜ್ಯ ಮತ್ತು ಅಂತರರಾಜ್ಯಗಳ ನಡುವೆ ಸಹಕಾರ ಮತ್ತು ಸಮನ್ವಯದಿಂದ ಕೆಲಸ ಮಾಡುವ ಅಂತರರಾಜ್ಯ ಮಂಡಳಿಯನ್ನು ಪುನರ್‌ರಚಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ಮತ್ತು ಎಲ್ಲಾ ಮುಖ್ಯಮಂತ್ರಿಗಳು ಹಾಗೂ 9 ಕೇಂದ್ರ ಸಚಿವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. 13 ಕೇಂದ್ರ ಸಚಿವರನ್ನು ಕಾಯಂ ಆಹ್ವಾನಿತರನ್ನಾಗಿ ನೇಮಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ಪ್ರಕಾರ, ಎನ್‌ಡಿಎ ಮಿತ್ರ ಪಕ್ಷಗಳಾದ ಸಂಯುಕ್ತ ಜನತಾ ದಳ, ಜಾತ್ಯತೀತ ಜನತಾ ದಳ, ತೆಲುಗು ದೇಶಂ ಪಕ್ಷ ಮತ್ತು ಲೋಕ ಜನಶಕ್ತಿ ಪಕ್ಷದ ಕೇಂದ್ರ ಸಚಿವರೂ ಪುನರ್‌ರಚನೆಯಾದ ಮಂಡಳಿಯ ಭಾಗವಾಗಿದ್ದಾರೆ.

ಮಂಡಳಿಯ ಸದಸ್ಯರ ಪೈಕಿ ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಅಮಿತ್ ಶಾ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್, ನಿರ್ಮಲಾ ಸೀತಾರಾಮನ್, ಮನೋಹರ್ ಲಾಲ್ ಖಟ್ಟರ್, ರಾಜೀವ್ ರಂಜನ್ ಸಿಂಗ್ ಅಲಿಯಾಸ್ ಲಲನ್ ಸಿಂಗ್, ವೀರೇಂದ್ರ ಕುಮಾರ್ ಮತ್ತು ಕಿಂಜರಾಪು ರಾಮಮೋಹನ್ ನಾಯ್ಡು ಅವರು ಸೇರಿದ್ದಾರೆ.

ಕಾಯಂ ಆಹ್ವಾನಿತರು

ಎಚ್.ಡಿ.ಕುಮಾರಸ್ವಾಮಿ, ನಿತಿನ್ ಗಡ್ಕರಿ, ಎಸ್.ಜೈಶಂಕರ್, ಪೀಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್, ಜಿತನ್ ರಾಮ್ ಮಾಂಝಿ, ಜೌಲ್ ಓರಾಮ್, ಅಶ್ವಿನಿ ವೈಷ್ಣವ್, ಭೂಪೇಂದ್ರ ಯಾದವ್, ಕಿರಣ್ ರಿಜಿಜು, ಜಿ.ಕಿಶನ್ ರೆಡ್ಡಿ, ಚಿರಾಗ್ ಪಾಸ್ವಾನ್ ಮತ್ತು ಸಿ.ಆರ್. ಪಾಟಿಲ್ ಅವರು ಮಂಡಳಿ ಕಾಯಂ ಆಹ್ವಾನಿತರಾಗಿದ್ದಾರೆ.

ಎನ್‌ಜಿಒಗಳಿಗೆ ದೇಣಿಗೆ: ಸಚಿವಾಲಯ ವಿವರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಭಿವೃದ್ಧಿ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿರುವ, ಬಲವಂತದ ಮತಾಂತರ ಚಟುವಟಿಕೆಗಳಲ್ಲಿ ತೊಡಗಿರುವ ಹಾಗೂ ಭಯೋತ್ಪಾದಕ ಅಥವಾ ತೀವ್ರಗಾಮಿ ಸಂಘಟನೆಗಳ ಜೊತೆ ನಂಟು ಹೊಂದಿರುವ ಎನ್‌ಜಿಒಗಳು ವಿದೇಶಿ ದೇಣಿಗೆ ಸಂಗ್ರಹಿಸುವುದನ್ನು ತಡೆಯಲು ಅವಕಾಶ ಇದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ವಿದೇಶಗಳಿಂದ ದೇಣಿಗೆ ಸಂಗ್ರಹಿಸುವುದಕ್ಕೆ ಅನುಮತಿ ನಿರಾಕರಿಸಲು ನೀಡುವ ಕಾರಣಗಳು ಸ್ಪಷ್ಟವಾಗಿಲ್ಲ ಎಂಬ ಆರೋಪಗಳ ನಡುವೆ ಸಚಿವಾಲಯವು ಈ ವಿವರಣೆ ನೀಡಿದೆ.

ನವೆಂಬರ್ 8ರಂದು ಹೊರಡಿಸಿರುವ ವಿವರಣೆಯಲ್ಲಿ ಸಚಿವಾಲಯವು, ಕೆಟ್ಟ ಉದ್ದೇಶದಿಂದ ಪ್ರತಿಭಟನೆಗಳಿಗೆ ಪ್ರಚೋದನೆ ನೀಡುವ ಕೆಲಸದಲ್ಲಿ ತೊಡಗಿರುವ ಎನ್‌ಜಿಒಗಳು, ನಿಗದಿತ ಗುರಿ ಹಾಗೂ ಉದ್ದೇಶಗಳಿಗೆ ಅನುಗುಣವಾಗಿ ವಿದೇಶಿ ದೇಣಿಗೆಯನ್ನು ಬಳಕೆ ಮಾಡುತ್ತಿಲ್ಲದ ಎನ್‌ಜಿಒಗಳು, ಸತತ ಆರು ಹಣಕಾಸಿನ ವರ್ಷಗಳವರೆಗೆ ಲೆಕ್ಕ ನೀಡದ ಎನ್‌ಜಿಒಗಳ ಎಫ್‌ಸಿಆರ್‌ಎ ನೋಂದಣಿಯನ್ನು ರದ್ದುಮಾಡಬಹುದು ಎಂದು ಹೇಳಿದೆ.

ವಿದೇಶಗಳಿಂದ ದೇಣಿಗೆ ಪಡೆಯಬೇಕು ಎಂದಾದರೆ ಎನ್‌ಜಿಒಗಳು ಎಫ್‌ಸಿಆರ್‌ಎ ಅಡಿ ನೋಂದಣಿ ಮಾಡಿಕೊಳ್ಳಲೇಬೇಕು. ಸ್ವೀಕರಿಸುವ ವಿದೇಶಿ ದೇಣಿಗೆಯು ಸಾಮಾಜಿಕ ಹಾಗೂ ಧಾರ್ಮಿಕ ಸೌಹಾರ್ದಕ್ಕೆ ಧಕ್ಕೆ ತರಬಹುದು ಎಂಬ ಮಾಹಿತಿ ಅಧಿಕಾರಿಗಳಿಗೆ ಇದ್ದರೆ, ಅಂತಹ ಎನ್‌ಜಿಒಗಳು ಕ್ರಮ ಎದುರಿಸಬೇಕಾಗಬಹುದು ಎಂದು ಸಚಿವಾಲಯ ಹೇಳಿದೆ.

ಮದ್ಯ ಕುಡಿತಕ್ಕೆ ವಯಸ್ಸಿನ ಪರಿಶೀಲನೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ ಎಲ್ಲ ಮದ್ಯ ಮಾರಾಟ ಕೇಂದ್ರಗಳಲ್ಲಿ ಖರೀದಿದಾರರ ವಯಸ್ಸಿನ ಕಡ್ಡಾಯ ಪರಿಶೀಲನೆಗೆ ದೃಢವಾದ ನೀತಿಯನ್ನು ಜಾರಿಗೊಳಿಸುವಂತೆ ಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿಐಎಲ್) ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ.

ಮದ್ಯ ಕುಡಿದು ಚಾಲನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದು ಕೊಳ್ಳಲು ಮತ್ತು ಈ ರೀತಿಯ ಪ್ರಕರಣಗಳ ಸಂಖ್ಯೆಯನ್ನು ತಗ್ಗಿಸಲು ದೇಶದಾದ್ಯಂತ ಏಕರೂಪ ಮದ್ಯ ನಿಯಮ ರೂಪಿಸುವ ಅಗತ್ಯವಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

ದೆಹಲಿ ಮೂಲದ ಸರ್ಕಾರೇತರ ಸಂಘಟನೆ 'ಕಮ್ಯುನಿಟಿ ಎಗೆನೆಸ್ಟ್ ಡ್ರಂಕನ್ ಡ್ರೈವಿಂಗ್' (ಸಿಎಡಿಡಿ) ಈ ಪಿಐಎಲ್ ಸಲ್ಲಿಸಿದೆ. ಮದ್ಯ ಕುಡಿತ ಸಂಬಂಧಿ ಅವಘಡಗಳ ತಡೆಗೆ ಸಂಬಂಧಿಸಿದಂತೆ ಈ ಸಂಘಟನೆ 23 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿಶ್ವನಾಥನ್ ಅವರ ಪೀಠ ಈ ಅರ್ಜಿಯ ವಿಚಾರಣೆ ನಡೆಸಿತು.



ಬಣ್ಣದ ಸೀರೆ... ಯಮುನಾ ನದಿಗೆ ಸೀರೆ ತೊಡಿಸುವ 'ಚುನರೀ ಮನೋರಥ್' ಉತ್ಸವ ಸೋಮವಾರ ನಡೆಯಿತು. ಉತ್ಸವದ ಅಂಗವಾಗಿ ಭಕ್ತರು ಮಥುರಾ ಬಳಿ ಯಮುನಾ ನದಿಯಲ್ಲಿ ಸೀರೆಗಳನ್ನು ಹಿಡಿದು ದೋಣಿಗಳಲ್ಲಿ ಸಾಗಿದರು —ಪಿಟಿಐ ಚಿತ್ರ

ಯುಪಿಪಿಎಸ್‌ಸಿ ಕಚೇರಿಗೆ ಮುತ್ತಿಗೆ, ಪ್ರತಿಭಟನೆ

ಪ್ರಯಾಗರಾಜ್/ ಲಖನೌ (ಪಿಟಿಐ): 'ರಿವ್ಯೂ ಅಧಿಕಾರಿ' ಮತ್ತು 'ಸಹಾಯಕ ರಿವ್ಯೂ ಅಧಿಕಾರಿ' (ಆರ್‌ಒ–ಎಆರ್‌ಒ) ಹಾಗೂ ನಾಗರಿಕ ಸೇವೆಯ (ಪಿಸಿಎಸ್) ಪೂರ್ವಭಾವಿ ಪರೀಕ್ಷೆಗಳನ್ನು ಬೇರೆ ಬೇರೆ ದಿನಗಳಂದು, ಎರಡು, ಮೂರು ಪಾಳಿಗಳಲ್ಲಿ ನಡೆಸುವ ಉತ್ತರ ಪ್ರದೇಶ ಲೋಕಸೇವಾ ಆಯೋಗದ (ಯುಪಿಪಿಎಸ್‌ಸಿ) ನಿರ್ಧಾರವನ್ನು ವಿರೋಧಿಸಿ ಪರೀಕ್ಷಾ ಆಕಾಂಕ್ಷಿಗಳು ಸೋಮವಾರ ಪ್ರಯಾಗರಾಜ್‌ನಲ್ಲಿರುವ ಆಯೋಗದ ಪ್ರಧಾನ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಆಯೋಗದ ಪ್ರವೇಶ ದ್ವಾರದಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಹರಸಾಹಸಪಟ್ಟರು. ಪ್ರತಿಭಟನಕಾರರು ಪ್ರವೇಶ ದ್ವಾರ ಸಂಖ್ಯೆ 2ರ ಬಳಿ ಬಾರದಂತೆ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಬಂದ ಪರೀಕ್ಷಾ ಆಕಾಂಕ್ಷಿಗಳು ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಬ್ಯಾರಿಕೇಡ್‌ಗಳನ್ನು ತಳ್ಳಿ ನುಗ್ಗಿದರು.

ವಿವಿಧ ಪಾಳಿಗಳಲ್ಲಿ ಪರೀಕ್ಷೆ: ಆರ್‌ಒ–ಎಆರ್‌ಒ ಪೂರ್ವಭಾವಿ ಪರೀಕ್ಷೆಗೆ ಡಿಸೆಂಬರ್ 22 ಮತ್ತು 23ರಂದು ಮೂರು ಪಾಳಿಗಳಲ್ಲಿ ಹಾಗೂ ಪಿಸಿಎಸ್ ಪೂರ್ವಭಾವಿ ಪರೀಕ್ಷೆಗೆ ಡಿಸೆಂಬರ್ 7 ಮತ್ತು 8ರಂದು ಎರಡು ಪಾಳಿಗಳಲ್ಲಿ ಪರೀಕ್ಷೆ ನಡೆಸುವುದಾಗಿ ಆಯೋಗ ನವೆಂಬರ್ 5ರಂದು ಪ್ರಕಟಿಸಿತ್ತು. ಇದಕ್ಕೆ ರಾಜ್ಯದಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿದೆ.

ಕಿಶ್ತವಾಡ: ಉಗ್ರರಿಗಾಗಿ ಶೋಧ

ಜಮ್ಮು (ಪಿಟಿಐ): ಭಯೋತ್ಪಾದಕರ ದಾಳಿಯಲ್ಲಿ ಭಾನುವಾರ ಸೇನಾಧಿಕಾರಿಯೊಬ್ಬರು ಮೃತಪಟ್ಟ ಬೆನ್ನಲ್ಲೇ, ಉಗ್ರರ ನಿರ್ಮೂಲನೆಗಾಗಿ ಭದ್ರತಾ ಪಡೆಗಳು ಜಮ್ಮು– ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಕೇಶ್ವಾನ್ ದಟ್ಟ ಅಡವಿಯಲ್ಲಿ ಸೋಮವಾರ ಶೋಧ ನಡೆಸಿದವು.

ಗ್ರಾಮ ರಕ್ಷಣಾ ಕಾವಲುಗಾರರಿಬ್ಬರನ್ನು ಕಳೆದ ಗುರುವಾರ ಅಪಹರಿಸಿ ಹತ್ಯೆ ಮಾಡಿದ ಭಯೋತ್ಪಾದಕರಿಗಾಗಿ ಭದ್ರತಾ ಸಿಬ್ಬಂದಿಯು ನಾಲ್ಕು ದಿನಗಳಿಂದ ಅರಣ್ಯದಲ್ಲಿ ಶೋಧ ನಡೆಸುತ್ತಿದ್ದಾರೆ.

ಕೇಶ್ವಾನ್ ಅರಣ್ಯ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ಶೋಧ ನಡೆಸುವಾಗ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಜೂನಿಯರ್ ಕಮಿಷನ್ಡ್ ಆಫೀಸರ್ (ಜೆಸಿಒ) ನಾಯಬ್ ಸುಬೇದಾರ್ ರಾಕೇಶ್ ಕುಮಾರ್ ಹುತಾತ್ಮರಾಗಿದ್ದು ಮೂವರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾಧಿಕಾರಿಯನ್ನು ಕೊಂದ ಮೂರ್ನಾಲ್ಕು ಉಗ್ರರು ಅರಣ್ಯದೊಳಗೆ ಅವಿತಿದ್ದು, ಅವರನ್ನು ಸದೆಬಡಿಯಲು ಕಾರ್ಯಾಚರಣೆ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ.



ಜಮ್ಮು– ಕಾಶ್ಮೀರದ ಕಿಶ್ತವಾಡ ಜಿಲ್ಲೆಯಲ್ಲಿ ಭಯೋತ್ಪಾದಕರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾದ ನಾಯಬ್ ಸುಬೇದಾರ್ ರಾಕೇಶ್ ಕುಮಾರ್ ಅವರಿಗೆ ಭದ್ರತಾ ಸಿಬ್ಬಂದಿಯು ಸೋಮವಾರ ಜಮ್ಮುವಿನಲ್ಲಿ ಅಂತಿಮ ನಮನ ಸಲ್ಲಿಸಿದರು —ಪಿಟಿಐ ಚಿತ್ರ

ಭಯೋತ್ಪಾದಕ ಕೃತ್ಯ: ಈ ವರ್ಷ 44 ಸಾವು

ಗಡಿ ಜಿಲ್ಲೆಗಳಾದ ರಜೌರಿ, ಪೂಂಛ್‌ನಿಂದ ಆರು ಜಿಲ್ಲೆಗಳಿಗೆ ಭಯೋತ್ಪಾದಕರ ದುಷ್ಕೃತ್ಯಗಳು ವಿಸ್ತರಿಸಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಜಮ್ಮುವಿನಲ್ಲಿ ಈ ವರ್ಷ ನಡೆದ ಭಯೋತ್ಪಾದಕ ಕೃತ್ಯಗಳಲ್ಲಿ 18 ಭದ್ರತಾ ಸಿಬ್ಬಂದಿಯೂ ಸೇರಿದಂತೆ 44 ಜನರು ಮೃತಪಟ್ಟಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ರಸ್ತೆಯಲ್ಲಿ ಜಗಳ: ಆರೋಪಿಯ ಗುರುತು ಪತ್ತೆಯಾಗಿಲ್ಲ

ವಿದ್ಯಾರ್ಥಿಯ ಹತ್ಯೆಗೈದ ಕಾರು ಚಾಲಕ

ಅಹಮದಾಬಾದ್ (ಪಿಟಿಐ): ಅತಿ ವೇಗದ ಚಾಲನೆ ಕುರಿತು ಆರಂಭವಾದ ವಾಗ್ವಾದವು 23 ವರ್ಷದ ವಿದ್ಯಾರ್ಥಿಯೊಬ್ಬರ ಕೊಲೆಯಲ್ಲಿ ಅಂತ್ಯ ಕಂಡಿದೆ. ಕಾರಿನ ಚಾಲಕರೊಬ್ಬರು ವಿದ್ಯಾರ್ಥಿಯನ್ನು ಚಾಕುವಿನಿಂದ ಹಲವು ಬಾರಿ ಚುಚ್ಚಿ ಹತ್ಯೆ ಮಾಡಿದ್ದಾರೆ.

ಮುದ್ರಾ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ (ಎಂಐಸಿಎ) ಕಾಲೇಜಿನಲ್ಲಿ ಎರಡನೇ ವರ್ಷದ ಎಂಬಿಎ ಓದುತ್ತಿದ್ದ ಪ್ರಿಯಾಂಶು ಜೈನ್ ಮೃತ ವಿದ್ಯಾರ್ಥಿ. ಅಹಮದಾಬಾದ್‌ನ ಹೊರವಲಯದ ದಕ್ಷಿಣ ಭೋಪಾಲ್ ಪ್ರದೇಶದಲ್ಲಿ ಭಾನುವಾರ ರಾತ್ರಿ 11.30ರ ಸುಮಾರಿಗೆ ಈ ಘಟನೆ ನಡೆದಿದೆ.

'ಸಂದರ್ಶನವೊಂದಕ್ಕಾಗಿ ಬಟ್ಟೆಗಳನ್ನು ಹೊಲಿಸಲು ಅಳತೆ ಕೊಟ್ಟು ಹಾಸ್ಟೆಲ್‌ಗೆ ವಾಪಸಾಗುತ್ತಿದ್ದ ವೇಳೆ, ವೇಗವಾಗಿ ಕಾರು ಚಲಾಯಿಸುತ್ತಿದ್ದ ಚಾಲಕನೊಂದಿಗೆ ಮಾತಿನ ಚಕಮಕಿ ನಡೆದಿದೆ. ಪ್ರಿಯಾಂಶು ಹಾಗೂ ಪೃಥ್ವಿರಾಜ್ ಮಹಾಪಾತ್ರ ಅವರು ಬೈಕ್‌ನಲ್ಲಿ ಹೋಗುತ್ತಿದ್ದರು. ಪ್ರಿಯಾಂಶು ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದರು' ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

'ಕಾರು ಚಾಲಕನ ವಿರುದ್ಧ ಭೋಪಾಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಕಾರು ಚಾಲಕನ ಗುರುತು ಇನ್ನುವರೆಗೂ ಪತ್ತೆಯಾಗಿಲ್ಲ. ಕಾರು ಚಾಲಕನ ಗುರುತು ಪತ್ತೆಗೆ ಘಟನೆ ನಡೆದ ಸುತ್ತಮುತ್ತಲ ಪ್ರದೇಶಗಳ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಕಲೆ ಹಾಕಲಾಗುತ್ತಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಮುದ್ರಾ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ (ಎಂಐಸಿಎ) ಕಾಲೇಜು ಹೇಳಿದೆ. ಪ್ರಿಯಾಂಶು ಉತ್ತರ ಪ್ರದೇಶದ ಮೀರತ್‌ನವರು.

ಘಟನೆ ನಡೆದದ್ದು ಹೇಗೆ?

'ರಸ್ತೆಯ ತಿರುವೊಂದರಲ್ಲಿ ತೀರಾ 'ಅಪಾಯಕಾರಿ' ರೀತಿಯಲ್ಲಿ ಕಾರು ಚಾಲಕ ವಿದ್ಯಾರ್ಥಿಗಳಿದ್ದ ಬೈಕ್‌ನ ಸಮೀಪಕ್ಕೆ ಬಂದಿದ್ದಾರೆ. ಪ್ರಿಯಾಂಶು ಅವರು ಕಾರಿನ ಚಾಲಕನನ್ನು ಉದ್ದೇಶಿಸಿ ಬೈದಿದ್ದಾರೆ. ಈ ಬಳಿಕ, ವಿದ್ಯಾರ್ಥಿಗಳು ಕಾರಿನಿಂದ 100 ಮೀಟರ್ ಮುಂದೆ ಸಾಗಿದ್ದಾರೆ. ಆದರೆ, ಕಾರು ಚಾಲಕ ಹಿಂಬಾಲಿಸಿಕೊಂಡು ಬಂದು 'ನೀನು ಏನೆಂದು ಕೂಗಿದೆ' ಎಂದು ಪ್ರಿಯಾಂಶು ಅವರನ್ನು ಕೇಳಿದ್ದಾರೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ರಾಂಗ್ ಸೈಡ್‌ನಲ್ಲಿ ನೀವು ಬೈಕ್ ಚಲಾಯಿಸುತ್ತಿದ್ದೀರಿ' ಎಂದು ಕಾರು ಚಾಲಕ ಗದರಿದರು. ವಾಗ್ವಾದ ಆರಂಭಗೊಂಡ ಬಳಿಕ, ಕಾರು ಚಾಲಕನು ಪ್ರಿಯಾಂಶು ಅವರನ್ನು ತಳ್ಳಿದರು. ಇದರಿಂದ ಪ್ರಿಯಾಂಶು ರಸ್ತೆ ಮೇಲೆ ಬಿದ್ದರು. ನಂತರ ಇಬ್ಬರ ನಡುವೆ ಹೊಡೆದಾಟ ಆರಂಭವಾಯಿತು. ಕಾರು ಚಾಲಕ ತನ್ನ ಕಾರಿನಿಂದ ಎರಡು ಚಾಕು ತಂದು, ಪ್ರಿಯಾಂಶು ಮೇಲೆ ಹಲ್ಲೆ ಮಾಡತೊಡಗಿದ. ಆತನನ್ನು ಕೊಲೆ ಮಾಡಬೇಕು ಎಂದೇ ಆತ ಹಲ್ಲೆ ನಡೆಸಿದ' ಎಂದು ಪೃಥಿರಾಜ್ ಮಹಾಪಾತ್ರ ಘಟನೆಯನ್ನು ವಿವರಿಸಿದರು.

'ಪ್ರಿಯಾಂಶು ಅವರ ದೇಹದಿಂದ ರಕ್ತಸ್ರಾವ ಆಗುತ್ತಿದ್ದಂತೆಯೇ ಕಾರು ಚಾಲಕ ಅಲ್ಲಿಂದ ಓಡಿ ಹೋಗಿದ್ದಾರೆ. ದಾರಿಹೋಕರ ಸಹಕಾರದಿಂದ ಪೃಥ್ವಿರಾಜ್ ಅವರು ಪ್ರಿಯಾಂಶು ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಂತರ ಅವರನ್ನು ಜೈಡಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಚಿಸಲಾಯಿತು. ಅಲ್ಲಿ ಪ್ರಿಯಾಂಶು ಮೃತಪಟ್ಟರು' ಎಂದು ಅಹಮದಾಬಾದ್ ಎಸ್‌ಪಿ ಓಂ ಪ್ರಕಾಶ್ ಜಾಟ್ ವಿವರಿಸಿದರು.

ಆತಿಥೇಯರ ಶುಭಾರಂಭ: ಯುವ ಆಟಗಾರ್ತಿ ಸಂಗೀತಾ ಕುಮಾರಿ ಮಿಂಚು

ಭಾರತ ತಂಡಕ್ಕೆ ಮಣಿದ ಮಲೇಷ್ಯಾ



ಗೋಲು ದಾಖಲಿಸಿದ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರ್ತಿಯರು

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಇಂದಿನ ಪಂದ್ಯಗಳು

ಥಾಯ್ಲೆಂಡ್-ಜಪಾನ್	Vs	ಮಧ್ಯಾಹ್ನ 12.15
ಚೀನಾ-ಮಲೇಷ್ಯಾ	Vs	ಮಧ್ಯಾಹ್ನ 2.30
ಭಾರತ-ದಕ್ಷಿಣ ಕೊರಿಯಾ	Vs	ಸಂಜೆ 4.45

ಲೈವ್ ಸೋನಿ ಸ್ಪೋರ್ಟ್ಸ್

ರಾಜಗೀರ್ (ಬಿಹಾರ), (ಪಿಟಿಐ): ಮುಂಚೂಣಿ ಪಡೆಯ ಯುವ ಆಟಗಾರ್ತಿ ಸಂಗೀತಾ ಕುಮಾರಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಹಾಲಿ ಚಾಂಪಿಯನ್ ಭಾರತ ತಂಡ, ಮಹಿಳಾ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಸೋಮವಾರ ಮಲೇಷ್ಯಾ ತಂಡದ ಮೇಲೆ 4-0 ಯಿಂದ ಜಯಗಳಿಸಿ ಅಭಿಯಾನವನ್ನು ಆತ್ಮವಿಶ್ವಾಸದಿಂದ ಆರಂಭಿಸಿತು.

ಪಂದ್ಯದ ಎಂಟು ಮತ್ತು 55ನೇ ನಿಮಿಷ ಸಂಗೀತಾ ಈ ಗೋಲುಗಳನ್ನು ಗಳಿಸಿದರು. ಪ್ರೀತಿ ದುಬೆ 43ನೇ ನಿಮಿಷ ಮತ್ತು ಉದಿತಾ 44ನೇ ನಿಮಿಷ ಆತಿಥೇಯ ತಂಡದ ಇತರ ಎರಡು ಗೋಲುಗಳನ್ನು ದಾಖಲಿಸಿದರು.

ಸಲೀಮಾ ಟೆಟೆ ನೇತೃತ್ವದ ಭಾರತ ತಂಡ ತನ್ನ ಮುಂದಿನ ಪಂದ್ಯವನ್ನು ಮಂಗಳವಾರ ದಕ್ಷಿಣ ಕೊರಿಯಾ ವಿರುದ್ಧ ಆಡಲಿದೆ.

ಭಾರತ ತಂಡ ಮೊದಲ ಕ್ವಾರ್ಟರ್‌ನಲ್ಲಿ ಆರಂಭದಿಂದಲೇ ಪ್ರಾಬಲ್ಯ ಮೆರೆಯಿತು. ಇದರ ಮಧ್ಯೆಯೂ, ಐದನೇ ನಿಮಿಷ ಮಲೇಷ್ಯಾ ತಂಡಕ್ಕೆ ಪೆನಾಲ್ಟಿ ಕಾರ್ನರ್ ದೊರೆತರೂ ಅದು ವ್ಯರ್ಥವಾಯಿತು.

ಭಾರತ, ಒಂದರ ಮೇಲೆ ಒಂದರಂತೆ ದಾಳಿಗಳನ್ನು ನಡೆಸಿ ಮಲೇಷ್ಯಾ ರಕ್ಷಣಾ ವಿಭಾಗದ ಮೇಲೆ ಒತ್ತಡ ಹೆಚ್ಚಿಸಿತು.

ಎಂಟನೇ ನಿಮಿಷ ಭಾರತಕ್ಕೆ ಸತತವಾಗಿ ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳು ದೊರೆತವು. ಇದರಲ್ಲಿ ಎರಡನೇ ಅವಕಾಶವನ್ನು ಸಂಗೀತಾ ಅವರು ಗೋಲಾಗಿ ಪರಿವರ್ತಿಸಿದರು.

ಮೊದಲ ಕ್ವಾರ್ಟರ್‌ನಲ್ಲಿ ಮತ್ತೆರಡು ಅವಕಾಶಗಳು ಒದಗಿದರೂ, ಪ್ರೀತಿ ಅವರ ಒಂದು ಯತ್ನವನ್ನು ಮಲೇಷ್ಯಾ ಗೋಲ್‌ಕೀಪರ್ ತಡೆದರು.

ಮತ್ತೊಂದು ಯತ್ನದಲ್ಲಿ ಚೆಂಡು ಗೋಲುಗಂಬಕ್ಕೆ ಬಡಿದು ಆಚೆಹೋಯಿತು. ಎರಡನೇ ಕ್ವಾರ್ಟರ್‌ನಲ್ಲೂ ಭಾರತದ ಹಿಡಿತ ಮುಂದುವರಿಯಿತು. ಆದರೆ 'ಫಿನಿಷಿಂಗ್' ಕೊರತೆ ಕಾಡಿತು. ಈ ಅವಧಿಯಲ್ಲಿ ಭಾರತಕ್ಕೆ ನಾಲ್ಕು ಪೆನಾಲ್ಟಿ ಕಾರ್ನರ್ ಅವಕಾಶಗಳು ದೊರೆತವು. ಒಂದೂ ಗೋಲಾಗಲಿಲ್ಲ. ವಿರಾಮದ ವೇಳೆ 1-0 ಮುನ್ನಡೆ ಉಳಿದಿತ್ತು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ (43ನೇ ನಿಮಿಷ) ಪ್ರೀತಿ ಅವರ ಮೂಲಕ ಭಾರತ ಮುನ್ನಡೆ ಹೆಚ್ಚಿಸಿಕೊಂಡಿತು. ನವನೀತ್ ಕೌರ್ ಫ್ಲಿಕ್ ಮಾಡಿದ ಚೆಂಡನ್ನು ಪಡೆದ ಪ್ರೀತಿ ಅದನ್ನು ಗೋಲಿನೊಳಕ್ಕೆ ನಿರ್ದೇಶಿಸಿದರು. ಒಂದೇ ನಿಮಿಷ ನಂತರ ಉದಿತಾ ಮತ್ತೊಂದು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು.

ಪಂದ್ಯ ಮುಕ್ತಾಯಕ್ಕೆ ಐದು ನಿಮಿಷಗಳು ಉಳಿದಿರುವಾಗ ಸಂಗೀತಾ ಅಮೋಘವಾಗಿ ಫೀಲ್ಡ್ ಗೋಲು ಗಳಿಸಿದರು. ದೂರದಿಂದ ಪಡೆದ ಪಾಸ್ ಒಂದರಲ್ಲಿ ಚೆಂಡನ್ನು ಮುನ್ನಡೆಸಿದ ಅವರು, ಎದುರಾಳಿ ರಕ್ಷಣೆ ಆಟಗಾರ್ತಿಯರನ್ನು ವಂಚಿಸಿದರು; ರಿವರ್ಸ್ ಹೊಡೆತದಿಂದ ಚೆಂಡನ್ನು ಗೋಲಿನೊಳಗೆ ಕಳುಹಿಸಿದರು.

ಚೀನಾದಿಂದ ಗೋಲು ಮಳೆ

ಸೋಮವಾರ ನಡೆದ ಇನ್ನೊಂದು ಪಂದ್ಯದಲ್ಲಿ ಪ್ಯಾರಿಸ್ ಒಲಿಂಪಿಕ್ ಬೆಳ್ಳಿ ವಿಜೇತ ಚೀನಾ ವನಿತೆಯರ ತಂಡ 15-0 ಗೋಲುಗಳಿಂದ ಥಾಯ್ಲೆಂಡ್ ತಂಡವನ್ನು ಸದೆಬಡಿಯಿತು. ಜಪಾನ್ ಮತ್ತು ದಕ್ಷಿಣ ಕೊರಿಯಾ ತಂಡಗಳ ನಡುವಣ ಪಂದ್ಯ 2-2 ಡ್ರಾ ಆಯಿತು.

ಅರವಿಂದ್ ಮುಡಿಗೆ ಕಿರೀಟ

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಅರೋನಿಯನ್‌ಗೆ ನಿರಾಸೆ



ಅರವಿಂದ್ ಚಿದಂಬರಮ್

ಚೆನ್ನೈ (ಪಿಟಿಐ): ಕಡೆಯ ಎರಡು ಸುತ್ತುಗಳಲ್ಲಿ ಅಮೋಘ ರೀತಿ ಪುಟಿದೆದ್ದ ಗ್ರ್ಯಾಂಡ್‌ಮಾಸ್ಟರ್ ಅರವಿಂದ ಚಿದಂಬರಮ್ ನಂತರ ಬ್ಲಿಟ್ಜ್‌ನಲ್ಲೂ ಮಿಂಚಿ, ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಸೋಮವಾರ ಚಾಂಪಿಯನ್ ಮುಕುಟ ಧರಿಸಿದರು. ಚಾಲೆಂಜರ್ಸ್ ವಿಭಾಗದಲ್ಲಿ ವಿ.ಪ್ರಣವ್ ಅರ್ಹವಾಗಿ ಪ್ರಶಸ್ತಿ ಗೆದ್ದುಕೊಂಡರು.

ಮಾಸ್ಟರ್ಸ್ ವಿಭಾಗದಲ್ಲಿ ಏಳನೇ (ಕೊನೆಯ) ಸುತ್ತಿನ ನಂತರ ಮೂವರು ಅಗ್ರಸ್ಥಾನ ಹಂಚಿಕೊಂಡಿದ್ದರು. ಅರವಿಂದ ಚಿದಂಬರಮ್, ಅಮೆರಿಕದ ಲೆವೊನ್ ಅರೋನಿಯನ್ ಮತ್ತು ಅರ್ಜುನ್ ಇರಿಗೇಶಿ ಅವರು ತಲಾ 4.5 ಪಾಯಿಂಟ್ಸ್ ಗಳಿಸಿದ್ದರು.

ಅರವಿಂದ ಉತ್ತಮ ಟೈಬ್ರೇಕ್ ಹೊಂದಿದ್ದು ನೇರವಾಗಿ ಪ್ರಶಸ್ತಿ ಸುತ್ತಿಗೆ ತಲುಪಿದರು. ಹೀಗಾಗಿ ಅರೋನಿಯನ್ ಮತ್ತು ಅರ್ಜುನ್ ನಡುವಣ ಎರಡು ಪಂದ್ಯಗಳ ಬ್ಲಿಟ್ಜ್ ಸ್ಪರ್ಧೆ ನಡೆದವು. ಇದರಲ್ಲಿ ಇಬ್ಬರೂ ತಲಾ ಒಂದು ಗೆದ್ದ ಕಾರಣ 'ಸಡನ್ ಡೆತ್' ಅಳವಡಿಸಲಾಯಿತು. ಇದರಲ್ಲಿ ಕಪ್ಪು ಕಾಯಿಗಳಲ್ಲಿ ಆಡಿ ಡ್ರಾ ಮಾಡಿದ ಅರೋನಿಯನ್ ಗೆದ್ದರು.

ನಂತರ ಪ್ರಶಸ್ತಿಗೆ ನಡೆದ ಹಣಾಹಣಿಯಲ್ಲಿ ಅರವಿಂದ್ ಪ್ಲೇ ಆಫ್‌ನ ಮೊದಲ ಪಂದ್ಯ ಗೆದ್ದುಕೊಂಡರು. ನಂತರ ಕಪ್ಪು ಕಾಯಿಗಳಲ್ಲಿ ಆಡಿ ಎರಡನೇ ಪಂದ್ಯ ಡ್ರಾ ಮಾಡಿಕೊಂಡು ಫೈನಲ್‌ನ ವಿಜೇತರಾದರು.

ಕ್ಲಾಸಿಕಲ್ ಸುತ್ತಿನಲ್ಲಿ ಮೂವರು ಆಟಗಾರರು ಸಮಾನ ಅಂಕ (4.5) ಗಳಿಸಿದ್ದ ಕಾರಣ ಅವರಿಗೆ ತಲಾ ₹11 ಲಕ್ಷ ಬಹುಮಾನ ನೀಡಲಾಯಿತು.

ಆರನೇ ಸುತ್ತಿನಲ್ಲಿ ಇರಿಗೇಶಿ ಅವರನ್ನು ಸೋಲಿಸಿದ್ದ ಅರವಿಂದ್, ಅಂತಿಮ ಸುತ್ತಿನಲ್ಲಿ ಇರಾನಿನ ಪರ್ಹಾಮ್ ಮಘಸೂಡ್ಲು ವಿರುದ್ಧ ಕಪ್ಪು ಕಾಯಿಗಳಲ್ಲಿ ಆಡಿ ಸುಲಭ ಗೆಲುವು ಸಾಧಿಸಿದರು.

ಇತರ ಪಂದ್ಯಗಳಲ್ಲಿ ಅರೋನಿಯನ್, ಇರಾನ್‌ನ ಅಮಿನ್ ತಬಾತಬೇಯಿ ಜೊತೆ ಬೇಗನೇ ಡ್ರಾ ಮಾಡಿಕೊಂಡರೆ, ಅರ್ಜುನ್, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರ ರಕ್ಷಣೆ ಭೇದಿಸಲಾಗದೇ 38 ನಡೆಗಳಲ್ಲಿ ಡ್ರಾಕ್ಕೆ ಒಪ್ಪಿಕೊಂಡರು.

ಚಾಲೆಂಜರ್ಸ್ ವಿಭಾಗ: ಪ್ರಣವ್‌ಗೆ ಪ್ರಶಸ್ತಿ

ತಮಿಳುನಾಡಿನ ಪ್ರಣವ್ ಕೊನೆಯ ಸುತ್ತಿನಲ್ಲಿ ಗೋವಾದ ಲ್ಯೂಕ್ ಮೆಂಡೋನ್ಸಾ ಜೊತೆ ಡ್ರಾ ಮಾಡಿಕೊಂಡು ಅರ್ಹವಾಗಿ ಚಾಂಪಿಯನ್ ಆದರು. ಅವರು ನಾಲ್ಕು ಪಂದ್ಯ ಗೆದ್ದು, ಮೂರು ಡ್ರಾ ಮಾಡಿಕೊಂಡರು. ₹6 ಲಕ್ಷ ಬಹುಮಾನ ಹಣ ಅವರ ಜೇಬಿಗಿಳಿಯಿತು.

ಮುಂದಿನ ವರ್ಷ ಮಾಸ್ಟರ್ಸ್ ವಿಭಾಗದಲ್ಲಿ ನೇರ ಪ್ರವೇಶದ ಅವಕಾಶವೂ ಅವರದಾಯಿತು. ದಿನದ ಇತರ ಪಂದ್ಯಗಳಲ್ಲಿ ಮುರಳಿ ಕಾರ್ತಿಕೇಯನ್, ಆರ್.ವೈಶಾಲಿ ವಿರುದ್ಧ ಜಯಗಳಿಸಿದರೆ, ಅಭಿಮನ್ಯು ಪುರಾಣಿಕ್, ರೌನಕ್ ಸಾಧ್ವಾನಿ ಜೊತೆ ಡ್ರಾ ಮಾಡಿಕೊಂಡರು. ಹಾರಿಕಾ ಗೆಲುವಿಗೆ ಪ್ರಯತ್ನಿಸಿದರೂ, ಅಂತಿಮವಾಗಿ ಎಂ. ಪ್ರಾಣೇಶ್ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು.

ಹೈಬ್ರಿಡ್ ಮಾದರಿ: ಪಾಕ್ ಪ್ರತಿಕ್ರಿಯೆ ಬಯಸಿದ ಐಸಿಸಿ



ಕರಾಚಿ (ಪಿಟಿಐ): ಭಾರತ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವುದಕ್ಕೆ ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸಿದ ಬೆನ್ನಲ್ಲೇ, ಟೂರ್ನಿಯ ಆತಿಥ್ಯವನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸುವುದಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ), ಪಾಕಿಸ್ತಾನ ಕ್ರಿಕೆಟ್ ಮಂಡಳಿಯಿಂದ ಪ್ರತಿಕ್ರಿಯೆ ಬಯಸಿದೆ.

ಭಾರತ ತಂಡವು ನೆರೆಯ ರಾಷ್ಟ್ರಕ್ಕೆ ಹೋಗಿ ಆಡಲು ನಿರಾಕರಿಸಿರುವ ಬಗ್ಗೆ ಐಸಿಸಿಯಿಂದ ಇ-ಮೇಲ್ ಬಂದಿರುವುದಾಗಿ ಪಾಕ್ ಕ್ರಿಕೆಟ್ ಮಂಡಳಿ (ಪಿಸಿಬಿ) ಭಾನುವಾರ ಖಚಿತಪಡಿಸಿತ್ತು.

'ಪಿಸಿಬಿಯು ಟೂರ್ನಿಯ ಆತಿಥ್ಯದಿಂದ ಹಿಂದೆ ಸರಿಯದೇ ಹೋದಲ್ಲಿ, ಹೊಸ ಯೋಜನೆಯ ಪ್ರಕಾರ ಭಾರತದ ಪಂದ್ಯಗಳನ್ನು ಯುಎಇಯಲ್ಲಿ ಆಡಬೇಕಾಗುತ್ತದೆ' ಎಂದು ಮೂಲವೊಂದು ಸೋಮವಾರ ಪಿಟಿಐಗೆ ತಿಳಿಸಿದೆ.

ಫೈನಲ್ ಪಂದ್ಯವನ್ನೂ ಪಾಕ್‌ನಲ್ಲಿ ನಡೆಸದೇ ದುಬೈನಲ್ಲೇ ನಡೆಸುವುದಾದರೆ ಮಾತ್ರ ಹೈಬ್ರಿಡ್ ಮಾದರಿಗೆ ಸಮ್ಮತಿಸುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಐಸಿಸಿಗೆ ತಿಳಿಸಿದೆ ಎಂದು ಈ ಮೂಲ ಖಚಿತಪಡಿಸಿದೆ.

ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲು ಭಾರತವು ಪಾಕಿಸ್ತಾನಕ್ಕೆ ತಂಡವನ್ನು ಕಳುಹಿಸುವುದಿಲ್ಲ ಎಂದು ಬಿಸಿಸಿಐ, ಐಸಿಸಿಗೆ ತಿಳಿಸಿರುವುದಕ್ಕೆ ಸಂಬಂಧಿಸಿ ಪಿಸಿಬಿ ಮೌನವಾಗಿದ್ದು, ಸೋಮವಾರವೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.


ಆದರೆ ದುಬೈನಲ್ಲಿ ಭಾರತದ ಪಂದ್ಯಗಳನ್ನು ಮತ್ತು ಫೈನಲ್ ನಡೆಸುವುದು ಸೇರಿದಂತೆ ಹೈಬ್ರಿಡ್ ಮಾದರಿ ಸ್ವೀಕಾರಾರ್ಹವೇ ಎಂಬುದನ್ನು ತಿಳಿಸುವಂತೆ ಐಸಿಸಿಯು ಪಿಸಿಬಿಗೆ ಕೇಳಿದೆ ಎಂದು ಮೂಲಗಳು ತಿಳಿಸಿವೆ.

ಈ ಏರ್ಪಾಡು ಪ್ರಕಾರ, ಟೂರ್ನಿಯ ಪೂರ್ಣ ಆತಿಥ್ಯ ಶುಲ್ಕವನ್ನು ಮತ್ತು ಹೆಚ್ಚಿನ ಪಂದ್ಯಗಳನ್ನು ನಡೆಸುವ ಅವಕಾಶವನ್ನು ಪಾಕಿಸ್ತಾನಕ್ಕೆ ನೀಡಲಾಗುವುದು ಎಂದು ಐಸಿಸಿಯು ಪಾಕ್ ಮಂಡಳಿಗೆ ಭರವಸೆ ನೀಡಿದೆ.

2008ರಲ್ಲಿ ಮುಂಬೈನಲ್ಲಿ ಉಗ್ರರ ದಾಳಿ ನಡೆದ ನಂತರ ಭಾರತ ತಂಡವು ಪಾಕಿಸ್ತಾನದಲ್ಲಿ ಕ್ರಿಕೆಟ್ ಪಂದ್ಯಗಳನ್ನು ಆಡಿಲ್ಲ. ಐಸಿಸಿ ಟೂರ್ನಿಗಳಲ್ಲಿ ಮಾತ್ರ ಉಭಯ ತಂಡಗಳು ಮುಖಾಮುಖಿಯಾಗಿವೆ.

ರಾಹುಲ್‌ಗೆ ಇನಿಂಗ್ಸ್ ಆರಂಭಿಸುವ ಹೊಣೆ: ಗಂಭೀರ್ ಸುಳಿವು

'ರೋಹಿತ್ ಗೈರಿನಲ್ಲಿ ಬೂಮ್ರಾಗೆ ನಾಯಕತ್ವ'



ಗೌತಮ್ ಗಂಭೀರ್ ಪಿಟಿಐ ಚಿತ್ರ

ಮುಂಬೈ (ಪಿಟಿಐ): ರೋಹಿತ್ ಶರ್ಮಾ ಅವರು ಪರ್ತ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಆರಂಭವಾಗುವ ಟೆಸ್ಟ್ ಸರಣಿಯ ಮೊದಲ ಪಂದ್ಯಕ್ಕೆ ಅಲಭ್ಯರಾದಲ್ಲಿ ಉಪನಾಯಕರಾಗಿರುವ ಜಸ್‌ಪ್ರೀತ್ ಬೂಮ್ರಾ ಭಾರತ ತಂಡದ ನಾಯಕತ್ವ ವಹಿಸಲಿದ್ದಾರೆ ಎಂದು ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಸೋಮವಾರ ಇಲ್ಲಿ ತಿಳಿಸಿದರು.

ರೋಹಿತ್ ಆರಂಭ ಆಟಗಾರನೂ ಆಗಿರುವ ಕಾರಣ, ಆ ಸ್ಥಾನ ತೆರವಾದಲ್ಲಿ ಕೆ.ಎಲ್.ರಾಹುಲ್ ಅವರಿಗೆ ಇನಿಂಗ್ಸ್ ಆರಂಭಿಸುವ ಹೊಣೆ ವಹಿಸುವ ಸಾಧ್ಯತೆಯಿದೆ. ವೈಯಕ್ತಿಕ ಕಾರಣ ನೀಡಿರುವ ರೋಹಿತ್ ಮೊದಲ ಟೆಸ್ಟ್‌ನಲ್ಲಿ ಆಡುವುದು ಇನ್ನೂ ಖಚಿತವಾಗಿಲ್ಲ.

ಗಂಭೀರ್ ಒಳಗೊಂಡಂತೆ ಭಾರತದ ಕ್ರಿಕೆಟ್ ತಂಡದ ಎರಡನೇ ಬ್ಯಾಚ್ ಸೋಮವಾರ ಪರ್ತ್‌ಗೆ ಪ್ರಯಾಣ ಬೆಳೆಸಿತು. ಆದರೆ ರೋಹಿತ್ ಇಲ್ಲಿಯೇ ಉಳಿದಿದ್ದಾರೆ. ಮೊದಲ ಟೆಸ್ಟ್ ಇದೇ 22ರಂದು ಆರಂಭವಾಗಲಿದೆ.

'ರೋಹಿತ್ ಲಭ್ಯರಾಗುವುದು ಇನ್ನೂ ಖಚಿತವಾಗಿಲ್ಲ. ಪರಿಸ್ಥಿತಿ ಏನೆಂಬುದನ್ನು ನಿಮಗೆ ತಿಳಿಸಲಿದ್ದೇವೆ. ಅವರು ಲಭ್ಯರಾಗುವ ವಿಶ್ವಾಸವಿದೆ. ಸರಣಿಯ ಆರಂಭಕ್ಕೆ ಮೊದಲು ಎಲ್ಲವೂ ತಿಳಿದುಬರಲಿದೆ' ಎಂದಿದ್ದಾರೆ.

ರಾಹುಲ್‌ಗೆ ಅವಕಾಶ?: ರೋಹಿತ್ ಅವರ ಸಂಭವನೀಯ ಗೈರುಹಾಜರಿಯಲ್ಲಿ ಅನುಭವಿ ಕೆ.ಎಲ್.ರಾಹುಲ್ ಅಥವಾ ಅಭಿಮನ್ಯು ಈಶ್ವರನ್ ಇವರಲ್ಲೊಬ್ಬರಿಗೆ ಅವಕಾಶ ದೊರೆಯಲಿದೆ. ಅಭಿಮನ್ಯು ಇನ್ನೂ ಟೆಸ್ಟ್ ಆಡಿಲ್ಲ. ಇವರಿಬ್ಬರೂ ಆಸ್ಟ್ರೇಲಿಯಾ 'ಎ' ವಿರುದ್ಧ ಇತ್ತೀಚೆಗೆ ಎರಡನೇ 'ಟೆಸ್ಟ್' ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ್ದರು.

'ಆರಂಭ ಆಟಗಾರನ ಸ್ಥಾನಕ್ಕೆ ನಮ್ಮ ಮುಂದೆ ಆಯ್ಕೆಗಳಿವೆ. ಈಶ್ವರನ್ ಇದ್ದಾರೆ. ಕೆ.ಎಲ್. (ರಾಹುಲ್) ಕೂಡ ಲಭ್ಯರಿದ್ದಾರೆ' ಎಂದರು.

ಅಭಿಮನ್ಯು ಅವರ ಈಗಿನ ಫಾರ್ಮ್‌ಗಿಂತ, ರಾಹುಲ್ ಅವರ ಅನುಭವಕ್ಕೆ ಆದ್ಯತೆ ನೀಡುವ ಸುಳಿವನ್ನು ಗಂಭೀರ್ ನೀಡಿದರು. 'ಕೆಲವೊಮ್ಮೆ ಅನುಭವಕ್ಕೆ ಮಣೆಹಾಕುವುದು ಅಗತ್ಯವಾಗುತ್ತದೆ. ರಾಹುಲ್ ಇನಿಂಗ್ಸ್ ಆರಂಭಿಸಬಲ್ಲರು. ಮೂರನೇ ಕ್ರಮಾಂಕ ಅಥವಾ ಆರನೇ ಕ್ರಮಾಂಕದಲ್ಲಿ ಬೇಕಾದರೂ ಆಡಬಲ್ಲರು' ಎಂದು ಮಾಜಿ ಎಡಗೈ ಆಟಗಾರ ಸೂಚ್ಯವಾಗಿ ರಾಹುಲ್ ಆಡುವ ಸಾಧ್ಯತೆಯನ್ನು ಹೊರಗೆಡಹಿದರು.

'ವಿವಿಧ ಹೊಣೆ ನಿಭಾಯಿಸಬೇಕಾದರೆ ಸಾಕಷ್ಟು ಪ್ರತಿಭೆ ಬೇಕಾಗುತ್ತದೆ. ಅಗತ್ಯ ಬಿದ್ದಲ್ಲಿ ರಾಹುಲ್ ಈ ಹೊಣೆಗಳನ್ನು ಹೊರಬಲ್ಲರು. ಏಕದಿನ ಮಾದರಿಯಲ್ಲಿ ಅವರು ವಿಕೆಟ್ ಕೀಪಿಂಗ್ ಕೂಡ ಮಾಡಿದ್ದಾರೆ. ಅವರು ನಮಗೆ ಬೇಕಾದ ಕೆಲಸ ಮಾಡಿಕೊಡಬಲ್ಲರು' ಎಂದರು.

ಅನುಭವಿ ವೇಗದ ಬೌಲಿಂಗ್ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಬದಲು ಆಲ್‌ರೌಂಡರ್ ನಿತೀಶ್ ರೆಡ್ಡಿ ಅವರಿಗೆ ಅವಕಾಶ ನೀಡುವ ಸಾಧ್ಯತೆಯೂ ಗಂಭೀರ್ ಮಾತುಗಳಲ್ಲಿ ವ್ಯಕ್ತವಾಯಿತು. ನಿತೀಶ್ ರೆಡ್ಡಿ ಇನ್ನೂ ಟೆಸ್ಟ್ ಪದಾರ್ಪಣೆ ಮಾಡಿಲ್ಲ.

'ನಾವು ಭವಿಷ್ಯ ದೃಷ್ಟಿಯಲ್ಲಿಟ್ಟುಕೊಂಡು ಯೋಜನೆ ರೂಪಿಸಬೇಕಾಗಿದೆ. ನಮ್ಮಲ್ಲಿ ಲಭ್ಯವಿರುವ ಉತ್ತಮ ಆಟಗಾರರ ಸಂಯೋಜನೆಯೊಡನೆ ತಂಡ ಕಟ್ಟಬೇಕಾಗುತ್ತದೆ' ಎನ್ನುವ ಮೂಲಕ ಶಾರ್ದೂಲ್ ಅವರಿಗೆ ಸದ್ಯ ಬಾಗಿಲು ಮುಚ್ಚಿದೆ ಎಂಬ ಸಂದೇಶ ರವಾನಿಸಿದರು.

ವೇಗದ ಬೌಲರ್ ಹರ್ಷಿತ್ ರಾಣಾ ಅವರನ್ನು 'ಎ' ತಂಡದ ಜೊತೆಗೆ ಆಸ್ಟ್ರೇಲಿಯಾಕ್ಕೆ ಕಳುಹಿಸಿರಲಿಲ್ಲ. ಬಾರ್ಡರ್-ಗಾವಸ್ಕರ್ ಟ್ರೋಫಿಗೆ ಸಜ್ಜಾಗುವ ನಿಟ್ಟಿನಲ್ಲಿ ಅವರಿಗೆ ಹೆಚ್ಚಿನ ಕಾರ್ಯಭಾರ ವಹಿಸಲು ತಂಡದ ಚಿಂತಕರ ಚಾವಡಿ ಬಯಸಿರಲಿಲ್ಲ ಎಂದರು.

'ಅವರು (ಹರ್ಷಿತ್) ಅಸ್ಸಾಂ ವಿರುದ್ಧ ಮೊದಲ ದರ್ಜೆ ಪಂದ್ಯ ಆಡಿದ್ದರು. ಐದು ವಿಕೆಟ್‌ಗಳನ್ನು ಗಳಿಸಿದ್ದರು. ಅರ್ಧ ಶತಕವನ್ನೂ ಗಳಿಸಿದ್ದರು. ಅವರಿಗೆ ಸಾಕಷ್ಟು ಬೌಲಿಂಗ್ ಅಭ್ಯಾಸ ಸಿಕ್ಕಿರುವ ಕಾರಣ ಮತ್ತೊಂದು ಪಂದ್ಯ ಆಡಲು ಕಳುಹಿಸುವ ಯೋಜನೆ ನಮಗಿರಲಿಲ್ಲ ಎಂದು ವಿವರಿಸಿದರು.

ಬೌಲಿಂಗ್ ಸಶಕ್ತ: 'ಮೊಹಮ್ಮದ್ ಶಮಿ ಗೈರಿನಲ್ಲಿ ಬೂಮ್ರಾ ಮೇಲೆ ಹೆಚ್ಚಿನ ಒತ್ತಡವಿದೆ. ರಾಣಾ, ಪ್ರಸಿದ್ಧ ಕೃಷ್ಣ ಮತ್ತು ಆಕಾಶ್ ದೀಪ್ ಅನನುಭವಿಗಳಾಗಿದ್ದರೂ ತಂಡದ ವೇಗದ ದಾಳಿ ಸಾಕಷ್ಟು ಬಲವಾಗಿದೆ' ಎಂದು ಗಂಭೀರ್ ಹೇಳಿದರು. 'ನಮ್ಮಲ್ಲಿ ಗುಣಮಟ್ಟವಿದೆ. ಪ್ರಸಿದ್ಧ, ಹರ್ಷಿತ್ ಅವರಂತೆ ನೀಳಕಾಯದ ಬೌಲರ್‌ಗಳಿದ್ದು, ಚೆಂಡನ್ನು ಕುಕ್ಕಬಲ್ಲರು. ಅವರ ಕೌಶಲಗಳು ವಿಭಿನ್ನವಾಗಿವೆ. ಹೀಗಾಗಿ ನಮ್ಮ ಬೌಲಿಂಗ್ ದಾಳಿ ಸಶಕ್ತವಾಗಿದೆ' ಎಂದರು.

ಆಸ್ಟ್ರೇಲಿಯಾ ಪರಿಸ್ಥಿತಿಗೆ ಮುಂದಿನ 10 ದಿನಗಳಲ್ಲಿ ಹೊಂದಿಕೊಳ್ಳುವುದು ತಂಡದ ಪಾಲಿಗೆ ಮಹತ್ವದ್ದಾಗುತ್ತದೆ ಎಂದು ಗಂಭೀರ್ ಹೇಳಿದರು.

'ನಮ್ಮಲ್ಲಿ ಈ ಹಿಂದೆ ಆಸ್ಟ್ರೇಲಿಯಾದಲ್ಲಿ ಆಡಿ ಅನುಭವವಿರುವ ಸಾಕಷ್ಟು ಆಟಗಾರರಿದ್ದಾರೆ. ಅವರ ಅನುಭವ ತಂಡದ ಯುವ ಆಟಗಾರರ ನೆರವಿಗೆ ಬರಲಿದೆ. ಮುಂದಿನ 10 ದಿನಗಳು ತಂಡದ ಪಾಲಿಗೆ ನಿರ್ಣಾಯಕ' ಎಂದು ಹೇಳಿದರು.

ಮಾಧ್ಯಮಗೋಷ್ಠಿಯಿಂದ ಗಂಭೀರ್ ದೂರವಿಡಿ: ಮಾಂಜ್ರೇಕರ್ ಆಕ್ರೋಶ



ನವದೆಹಲಿ (ಪಿಟಿಐ): ಭಾರತ ತಂಡದ ಕೋಚ್ ಗೌತಮ್ ಗಂಭೀರ್ ಅವರ ಮೇಲೆ ಹಠಾತ್ ವಾಗ್ದಾಳಿ ನಡೆಸಿರುವ ಮಾಜಿ ಕ್ರಿಕೆಟಿಗ ಸಂಜಯ್ ಮಾಂಜ್ರೇಕರ್ ಅವರು, ಮಾಧ್ಯಮಗಳ ಜೊತೆ ಮಾತನಾಡುವಾಗ ಅವರಲ್ಲಿ 'ಒಳ್ಳೆಯ ನಡವಳಿಕೆ ಮತ್ತು ಸಂವಹನದ ಕೊರತೆ ಕಾಣುತ್ತಿದೆ. ಅವರನ್ನು ಮಾಧ್ಯಮಗಳಿಂದ ದೂರವಿಡಬೇಕು' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು ಒತ್ತಾಯಿಸಿದ್ದಾರೆ.

ಖಡಕ್ ಮಾತಿಗೆ ಹೆಸರಾಗಿರುವ ಗಂಭೀರ್ ಅವರು ಬಾರ್ಡರ್-ಗಾವಸ್ಕರ್ ಟ್ರೋಫಿ ಸರಣಿಗೆ ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳುವ ಮೊದಲು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ್ದರು. ಇದಾಗಿ ಕೆಲವೇ ಗಂಟೆಗಳ ನಂತರ ಮಾಂಜ್ರೇಕರ್ ಈ ರೀತಿ ಟೀಕಿಸಿದ್ದಾರೆ.

'ಈಗಷ್ಟೇ ಗಂಭೀರ್ ಪತ್ರಿಕಾಗೋಷ್ಠಿ ವೀಕ್ಷಿಸಿದೆ. ಇಂಥ ಕೆಲಸಗಳಿಂದ ಅವರನ್ನು ದೂರವಿಡುವುದು ಬಿಸಿಸಿಐಗೆ ಒಳಿತು. ಅವರು ತೆರೆಮರೆಯ ಹಿಂದೆ ಕೆಲಸ ಮಾಡಲಿ' ಎಂದು ಮಾಂಜ್ರೇಕರ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ನಾಯಕ ರೋಹಿತ್ ಶರ್ಮಾ ಮತ್ತು ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಅವರು ಮಾಧ್ಯಮಗಳನ್ನು ನಿಭಾಯಿಸುವಲ್ಲಿ ಹೆಚ್ಚು ಸೂಕ್ತವಾಗುತ್ತಾರೆ ಎಂದು ಮಾಂಜ್ರೇಕರ್ ಸಲಹೆ ನೀಡಿದರು.

ಬ್ಯಾಸ್ಕೆಟ್‌ಬಾಲ್: ಬೀಗಲ್ಸ್ ಶುಭಾರಂಭ

ಬೆಂಗಳೂರು: ಸತ್ಯಜಿತ್ ಮತ್ತು ಅರ್ಪಣ್ ಅವರ ಆಟದ ಬಲದಿಂದ ಬೀಗಲ್ಸ್ ಬಿ.ಸಿ ತಂಡವು, ಎಸ್‌ಎಸಿ ಕಪ್‌ಗಾಗಿ ರಾಜ್ಯ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ಪಂದ್ಯದಲ್ಲಿ 82-72 ರಿಂದ ವಿವೇಕ್ಸ್ ತಂಡವನ್ನು ಮಣಿಸಿತು.

ಜಾಲಹಳ್ಳಿಯ ಸೇಂಟ್ ಕ್ಲಾರೆಟ್ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆ 48-43ರಿಂದ ಮುನ್ನಡೆ ಪಡೆದಿದ್ದ ಬೀಗಲ್ಸ್, ಉತ್ತರಾರ್ಧದಲ್ಲೂ ಪಾರಮ್ಯ ಮೆರೆಯಿತು. ಬೀಗಲ್ಸ್‌ನ ಸತ್ಯಜಿತ್ ಮತ್ತು ಅರ್ಪಣ್ ತಲಾ 22 ಅಂಕ ಗಳಿಸಿದರೆ, ವಿವೇಕ್ಸ್‌ನ ಸಂಜಯ್ ಮತ್ತು ಮರ್ಕೇಶ್ ಕ್ರಮವಾಗಿ 23 ಮತ್ತು 19 ಅಂಕ ಕಲೆಹಾಕಿದರು.

ದಿನದ ಮತ್ತೊಂದು ಪಂದ್ಯದಲ್ಲಿ ವಿಮಾನಪುರ ತಂಡವು 75-48ರಿಂದ ಎಂಸಿಎಚ್‌ಎಸ್ ತಂಡವನ್ನು ಸೋಲಿಸಿತು.

ಮಹಿಳೆಯರ ಪಂದ್ಯಗಳ ಫಲಿತಾಂಶ: ಸದರ್ನ್ ಬ್ಲ್ಯೂಸ್ 39-33ರಿಂದ ಭಾರತ್ ಸ್ಪೋರ್ಟ್ಸ್ ಕ್ಲಬ್ ವಿರುದ್ಧ; ರಾಜ್‌ಮಹಲ್ 41-16ರಿಂದ ವಿವೇಕ್ಸ್ ವಿರುದ್ಧ; ಬೆಂಗಳೂರು ವ್ಯಾನ್ಗಾರ್ಡ್ಸ್ 62-52ರಿಂದ ಜೆಎಸ್‌ಸಿ ವಿರುದ್ಧ ಗೆಲುವು ಸಾಧಿಸಿದವು.

ಶೂಟಿಂಗ್: ಮೊರಾಡಿಯಾಗೆ ಬೆಳ್ಳಿ



ನವದೆಹಲಿ (ಪಿಟಿಐ): ಭಾರತದ ಶೂಟರ್ ಸ್ಮಿತ್ ರಮೇಶಭಾಯ್ ಮೊರಾಡಿಯಾ, ಇಲ್ಲಿ ನಡೆಯುತ್ತಿರುವ ವಿಶ್ವ ಯುನಿವರ್ಸಿಟಿ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು.

ಪದಕದ ನಿರೀಕ್ಷೆ ಮೂಡಿಸಿದ್ದ ಅನುಭವಿ ರೈಫಲ್ ಶೂಟರ್‌ಗಳಾದ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಮತ್ತು ಸಿಫ್ಟ್ ಕೌರ್ ಸಾಮ್ರಾ ಅವರು ಸೋಮವಾರ ನಡೆದ ಸ್ಪರ್ಧೆಯಲ್ಲಿ ನಿರಾಸೆ ಮೂಡಿಸಿದರು. ಒಲಿಂಪಿಯನ್‌ಗಳಾದ ಸಾಮ್ರಾ, ಮಹಿಳೆಯರ 50 ಮೀಟರ್ ರೈಫಲ್‌ನ ತ್ರಿ ಪೊಸಿಷನ್ ಸ್ಪರ್ಧೆ ಯಲ್ಲಿ ನಾಲ್ಕನೇ ಸ್ಥಾನ ಪಡೆದರೆ, ಪುರುಷರ ವಿಭಾಗದಲ್ಲಿ ತೋಮರ್ ಐದನೇ ಸ್ಥಾನ ಗಳಿಸಿದರು.

ಅಷ್ಟೇನೂ ಖ್ಯಾತಿ ಹೊಂದಿರದ ರಮೇಶ್‌ಭಾಯ್ (252.1) ಫೈನಲ್ ಸ್ಪರ್ಧೆಯಲ್ಲಿ ಕೇವಲ 0.1 ಪಾಯಿಂಟ್ ಅಂತರದಲ್ಲಿ ಸೋತು, ಎರಡನೇ ಸ್ಥಾನ ಪಡೆದರು. ಝೆಕ್ ರಿಪಬ್ಲಿಕ್‌ನ ಜಿರಿ ಪ್ರಿವ್ರಾಟ್‌ಸ್ಕಿ (252.2) ಚಿನ್ನದ ಪದಕ ಜಯಿಸಿದರು. ಜಿರಿ ಅವರಿಗೆ ಇದು ಎರಡನೇ ಚಿನ್ನವಾಗಿದೆ. ಅವರು ಭಾನುವಾರ ಪುರುಷರ 50 ಮೀಟರ್ ರೈಫಲ್‌ನಲ್ಲೂ ಚಾಂಪಿಯನ್ ಆಗಿದ್ದರು.

ಭಾರತದ ಪಲಕ್ ಗುಲಿಯಾ ಮತ್ತು ಅಮಿತ್ ಶರ್ಮಾ ಅವರನ್ನು ಒಳಗೊಂಡ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಭಾನುವಾರ ಚಿನ್ನದ ಸಾಧನೆ ಮಾಡಿತ್ತು. ಭಾರತ ಇದುವರೆಗೆ ಒಟ್ಟು ಒಂಬತ್ತು ಪದಕಗಳನ್ನು ಗೆದ್ದಿದೆ.

ಸಿ.ಕೆ. ನಾಯ್ದು ಟ್ರೋಫಿ ಕ್ರಿಕೆಟ್ ಕರ್ನಾಟಕಕ್ಕೆ 9 ವಿಕೆಟ್ ಜಯ

ಪ್ರಜಾವಾಣಿ ವಾರ್ತೆ



ಪ್ರಖರ್ ಚತುರ್ವೇದಿ

ಬೆಂಗಳೂರು: ಕರ್ನಾಟಕ ತಂಡವು ಬೋಲಂಗೀರ್‌ನಲ್ಲಿ ನಡೆದ 23 ವರ್ಷದೊಳಗಿನವರ ಕರ್ನಲ್ ಸಿ.ಕೆ. ನಾಯ್ದು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಒಡಿಶಾ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿತು.

ಮೊದಲ ಇನಿಂಗ್ಸ್‌ನಲ್ಲಿ 204 ರನ್ ಹಿನ್ನಡೆ ಕಂಡು, ಫಾಲೊ ಆನ್‌ಗೆ ಒಳಗಾದ ಒಡಿಶಾ ತಂಡವು ಸೋಮವಾರ ಎರಡನೇ ಇನಿಂಗ್ಸ್‌ನಲ್ಲಿ 99.2 ಓವರ್‌ಗಳಲ್ಲಿ 346 ರನ್ (ಭಾನುವಾರ 6ಕ್ಕೆ274) ಗಳಿಸಿತು. ಹಿಂದಿನ ದಿನ ಔಟಾಗದೇ ಉಳಿದಿದ್ದ ಸಾವನ್ ಪೆಹಾರಿಯಾ 121 ರನ್ (229ಎ) ಮತ್ತು ಸುಜಲ್ ಸಿಂಗ್ 84 ರನ್ ಹೊಡೆದು ಕೊಂಚ ಪ್ರತಿರೋಧ ತೋರಿದರು. ಕರ್ನಾಟಕದ ಮನ್ವಂತ್ ಕುಮಾರ್ ಎಲ್. ಮತ್ತು ಪಾರಸ್ ಗುರುಭಕ್ಷ ಆರ್ಯ ತಲಾ ಮೂರು ವಿಕೆಟ್ ಪಡೆದರೆ, ಶಶಿಕುಮಾರ್ ಕೆ. ಎರಡು ವಿಕೆಟ್ ಕಬಳಿಸಿದರು.

ಗೆಲುವಿಗೆ 143 ರನ್‌ಗಳ ಸುಲಭ ಗುರಿ ಪಡೆದ ಕರ್ನಾಟಕ ತಂಡವು ಪ್ರಖರ್ ಚತುರ್ವೇದಿ (ಔಟಾಗದೇ 72; 96ಎ) ಮತ್ತು ಹರ್ಷಿಲ್ ಧರ್ಮಾನಿ (ಔಟಾಗದೇ 54; 45ಎ) ಅವರ ಬ್ಯಾಟಿಂಗ್ ಬಲದಿಂದ 29 ಓವರ್‌ಗಳಲ್ಲಿ ದಡ ಸೇರಿತು. ಅವರಿಬ್ಬರು ಎರಡನೇ ವಿಕೆಟ್‌ಗೆ ಮುರಿಯದ 105 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ 389. ಒಡಿಶಾ 62.3 ಓವರ್‌ಗಳಲ್ಲಿ 185. ಎರಡನೇ ಇನಿಂಗ್ಸ್: ಒಡಿಶಾ 99.2 ಓವರ್‌ಗಳಲ್ಲಿ 346 (ಸಾವನ್ ಪೆಹಾರಿಯಾ 121, ಸುಜಲ್ ಸಿಂಗ್ 84, ಮನ್ವಂತ್ ಕುಮಾರ್ ಎಲ್. 53ಕ್ಕೆ 3, ಪಾರಸ್ ಗುರುಭಕ್ಷ ಆರ್ಯ 77ಕ್ಕೆ 3, ಶಶಿಕುಮಾರ್ ಕೆ. 49ಕ್ಕೆ 2). ಕರ್ನಾಟಕ: 29 ಓವರ್‌ಗಳಲ್ಲಿ 1ಕ್ಕೆ 143 (ಪ್ರಖರ್ ಚತುರ್ವೇದಿ ಔಟಾಗದೇ 72, ಹರ್ಷಿಲ್ ಧರ್ಮಾನಿ ಔಟಾಗದೇ 54). **ಫಲಿತಾಂಶ:** ಕರ್ನಾಟಕಕ್ಕೆ 9 ವಿಕೆಟ್ ಜಯ

ಲಯದ ನಿರೀಕ್ಷೆಯಲ್ಲಿ ಸಿಂಧು, ಸೇನ್



ಪಿ.ವಿ.ಸಿಂಧು

ಕುಮಮೊಟೊ (ಜಾಪನ್) (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಮಂಗಳವಾರ ಆರಂಭವಾಗುವ ಕುಮಮೊಟೊ ಮಾಸ್ಟರ್ಸ್ ಜಪಾನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿದ್ದ ಸಿಂಧು ಅವರು ತಮ್ಮ ಸಹಜ ಆಟ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಸಿಂಧು, ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಲಕ್ಷ್ಯ ಸೇನ್ ಆರ್ಕ್ಟಿಕ್ ಸೂಪರ್ 500 ಮತ್ತು ಡೆನ್ಮಾರ್ಕ್ ಓಪನ್ ಟೂರ್ನಿಗಳಲ್ಲಿ ಬೇಗನೇ ಹೊರಬಿದ್ದಿದ್ದರು.

ಫಿನ್ಲೆಂಡ್‌ನಲ್ಲಿ ನಡೆದ ಆರ್ಕ್ಟಿಕ್ ಓಪನ್‌ನಲ್ಲಿ ಹೈದರಾಬಾದ್‌ನ ಆಟಗಾರ್ತಿ, ಕೆನಡಾದ ಮಿಚೆಲ್ ಲೀ ವಿರುದ್ಧ ಮೊದಲ ಸುತ್ತಿನಲ್ಲೇ ಸೋತು ಆಘಾತ ಅನುಭವಿಸಿದ್ದರು. ಒಡೆನ್ಸ್‌ನಲ್ಲಿ ನಡೆದ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದರು. ಆದರೆ, ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಗ್ರೆಗೋರಿಯಾ ಮರಿಸ್ಕಾ ತಾಂಜುಂಗ್ (ಇಂಡೊನೇಷ್ಯಾ) ಎದುರು ನಿರ್ಣಾಯಕ ಗೇಮ್‌ನಲ್ಲಿ ಭಾರತೀಯ ಆಟಗಾರ್ತಿ ಎಡವಿದ್ದರು.

ಈ ಹಿನ್ನಡೆಗಳ ಹೊರತಾಗಿಯೂ ಸಿಂಧು ತಮ್ಮ ತಯಾರಿ ಬಗ್ಗೆ ಆತ್ಮವಿಶ್ವಾಸ ಹೊಂದಿದ್ದಾರೆ. ನೂತನ ಕೋಚ್‌ಗಳಾದ ಅನೂಪ್ ಶ್ರೀಧರ್ ಮತ್ತು ಕೊರಿಯಾದ ದಿಗ್ಗಜ ಲೀ ಸೀಯುನ್ ಮಾರ್ಗದರ್ಶನದಲ್ಲಿ ಕಠಿಣ ಅಭ್ಯಾಸದಲ್ಲಿ ತೊಡಗಿದ್ದಾರೆ.

ಸಿಂಧು, ಮೊದಲ ಸುತ್ತಿನಲ್ಲಿ ಎಂಟನೇ ಶ್ರೇಯಾಂಕದ ಬುಸಾನನ್ ಒಂಗ್ಬಾಮ್‌ರುಂಗ್‌ಫನ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ. 23 ವರ್ಷ ವಯಸ್ಸಿನ ಲಕ್ಷ್ಯ, ಮೊದಲ ಸುತ್ತಿನಲ್ಲಿ ಮಲೇಷ್ಯಾದ ಲಿಯಾಂಗ್ ಜುನ್ ಹಾವೊ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಡಬಲ್ಸ್ ವಿಭಾಗದಲ್ಲಿ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಕಣಕ್ಕಿಳಿಯಲಿದ್ದಾರೆ.

ಪೈರೇಟ್ಸ್ ಅಬ್ಬರ: ಜೈಂಟ್ಸ್ ತತ್ತರ



ಗುಜರಾತ್ ಟೈಟನ್ಸ್ ತಂಡದ ಅಂಕಣದಲ್ಲಿ ದಾಳಿ ನಡೆಸಿದ ಪಟ್ನಾ ಪೈರೇಟ್ಸ್ ರೇಡರ್

PRO KABADDI

ನೊಯಿಡಾ (ಪಿಟಿಐ): ರೇಡರ್ ಆಯಾನ್ ಅವರ ಸೂಪರ್ ಟೆನ್ ಸಾಹಸದ ಜತೆಗೆ ದ್ವಿತೀಯಾರ್ಧದಲ್ಲಿ ಅಬ್ಬರಿಸಿದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 13 ಅಂಕಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿ ಪೂರ್ಣ ಐದು ಅಂಕಗಳನ್ನು ಸಂಪಾದಿಸಿತು.

ನೊಯಿಡಾ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡ 40-27 ಅಂಕಗಳಿಂದ ಗೆದ್ದಿತು. ಇದು ಆ ತಂಡಕ್ಕೆ ಟೂರ್ನಿಯಲ್ಲಿ ಐದನೇ ಜಯ. ಅತ್ತ ಗುಜರಾತ್ ಏಳನೇ ಸೋಲಿಗೆ ಗುರಿಯಾಗಿ ತಳದಲ್ಲೇ ಉಳಿಯಿತು.

ಆರಂಭಿಕ ಮುನ್ನಡೆಯ ಜತೆಗೆ ದ್ವಿತೀಯಾರ್ಧದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ಪೈರೇಟ್ಸ್ ಅರ್ಹವಾಗಿ ಜಯ ಗಳಿಸಿತು. ಎಡ ಬದಿಯ ರೇಡರ್ ಆಯಾನ್ (10 ಅಂಕ), ದೇವಾಂಕ್ (6 ಅಂಕ), ಬಲಬದಿ ರೇಡರ್ ಸಂದೀಪ್ (5 ಅಂಕ) ಪೈರೇಟ್ಸ್ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಗುಜರಾತ್ ಜೈಂಟ್ಸ್ ಪರ ಪ್ರತೀಕ್ ದಹಿಯಾ ಮತ್ತು ಗುಮಾನ್ ಸಿಂಗ್ ತಲಾ 5 ಅಂಕಗಳನ್ನಷ್ಟೇ ಗಳಿಸಿದರು.

ಪಟ್ನಾ ಪೈರೇಟ್ಸ್, ಟ್ಯಾಕಲ್ ಮತ್ತು ದಾಳಿಯಲ್ಲಿ ಮಿಂಚಿತು. ಗುಜರಾತ್ ಆಟಗಾರರು ಎದುರಾಳಿಯ ರಕ್ಷಣಾ ವ್ಯೂಹದಲ್ಲಿ ಪದೇ ಪದೇ ಬಂದಿಯಾದರು. 30 ನಿಮಿಷಗಳ ಆಟದ ಬಳಿಕ 21-29ರಲ್ಲಿ ಹಿನ್ನಡೆ ಅನುಭವಿಸಿತು. 31ನೇ ನಿಮಿಷದಲ್ಲಿ ಪ್ರತೀಕ್ ದಹಿಯಾ ಅವರನ್ನು ಟ್ಯಾಕಲ್ ಮಾಡಿದ ಆಯಾನ್, ಜೈಂಟ್ಸ್ ತಂಡವನ್ನು ಎರಡನೇ ಬಾರಿ ಆಲೌಟ್‌ಗೆ ಗುರಿಪಡಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 48-39ರಿಂದ ಯು ಮುಂಬಾ ತಂಡವನ್ನು ಮಣಿಸಿತು.